ಬುಧವಾರ, ಜುಲೈ 26, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 206 | ಪುಟ 14
● www.prajavani.net
prajavani.net | prajavani | prajavani | prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	₹/$
66,355	19,680	81.88

ಶಾಸಕರು ಸಿ.ಎಂಗೆ ಬರೆದಿದ್ದಾರೆ ಎನ್ನಲಾದ ಪತ್ರ ● 'ಸಚಿವರಿಂದ ಹಣಕ್ಕಾಗಿ ಬೇಡಿಕೆ' ಪ್ರಸ್ತಾಪ

'ಕೈ' ಸರ್ಕಾರದಲ್ಲಿ 'ಪತ್ರ' ತಲ್ಲಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನುದಾನ ಬಿಡುಗಡೆ ಮಾಡಲು ಮೂರನೇ ವ್ಯಕ್ತಿ ಮೂಲಕ ಹಣಕ್ಕಾಗಿ ಸಚಿವರು ಬೇಡಿಕೆ ಇಡುತ್ತಿದ್ದಾರೆ. ತಕ್ಷಣವೇ ಮಧ್ಯಪ್ರವೇಶಿಸಬೇಕು' ಎಂದು ಆಳಂದ ಶಾಸಕ ಬಿ.ಆರ್.ಪಾಟೀಲ, ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಸೇರಿ 10ಕ್ಕೂ ಹೆಚ್ಚು ಕಾಂಗ್ರೆಸ್ ಶಾಸಕರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸೋಮವಾರ (ಜುಲೈ 24) ಬರೆದಿದ್ದಾರೆ ಎನ್ನಲಾದ ಪತ್ರ ಬಹಿರಂಗವಾಗಿದ್ದು, ರಾಜಕೀಯ ವಲಯದಲ್ಲಿ ತಲ್ಲಣ ಸೃಷ್ಟಿಸಿದೆ.

ಸಚಿವರ ನಡೆಯಿಂದ ಬೇಸತ್ತಿರುವ ಕೆಲವು ಶಾಸಕರು ಇದೇ 27ರಂದು ನಡೆಯಲಿರುವ ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆಯಲ್ಲಿ ತಮ್ಮ ಆಕ್ರೋಶ ಹೊರಹಾಕಲು ಸಜ್ಜಾಗಿರುವ ಬೆನ್ನಲ್ಲೆ, ಈ ಪತ್ರ ಹೊರಬಂದಿದೆ.

ಸಾಮಾಜಿಕ ಜಾಲತಾಣಗಳಲ್ಲಿ ಪತ್ರ ಹರಿದಾಡುತ್ತಿದ್ದಂತೆ ಸ್ಪಷ್ಟೀಕರಣ ನೀಡಿರುವ ಬಿ.ಆರ್. ಪಾಟೀಲ, 'ಶಾಸಕರ ಕುಂದುಕೊರತೆಗಳನ್ನು ಆಲಿಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಮುಖ್ಯಮಂತ್ರಿಗೆ ಬರೆದ ಮನವಿಪತ್ರ ತಿರುಚಿ ನಕಲಿ ಪತ್ರ ಸೃಷ್ಟಿಸಿದ್ದಾರೆ. ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರ ಮೇಲೆ ಕೆಲವು ಆರೋಪಗಳನ್ನು ಮಾಡುತ್ತಿರುವಂತೆ ಕುತಂತ್ರದಿಂದ ಸುಳ್ಳು ಹರಿಬಿಡಲಾಗಿದೆ' ಎಂದೂ ಹೇಳಿದ್ದಾರೆ.

'ನಕಲಿ' ಎನ್ನಲಾದ ಪತ್ರದಲ್ಲಿ ಮಳವಳ್ಳಿ ಶಾಸಕ ಪಿ.ಎಂ. ನರೇಂದ್ರಸ್ವಾಮಿ, ಮುದ್ದೇಬಿಹಾಳ ಶಾಸಕ ಸಿ.ಎಸ್. ನಾಡಗೌಡ, ಬೈಲಹೊಂಗಲ ಶಾಸಕ ಮಹಾಂತೇಶ ಕೌಜಲಗಿ ಅವರ ಸಹಿಯೂ ಇದೆ. 'ಪ್ರಜಾವಾಣಿ'ಗೆ ಈ ಬಗ್ಗೆ ಪ್ರತಿಕ್ರಿಯಿಸಿದ ಸಿ.ಎಸ್. ನಾಡಗೌಡ, 'ಮುಖ್ಯಮಂತ್ರಿಗೆ ಬರೆದ ಮೂಲ ಪತ್ರಕ್ಕೆ 33 ಶಾಸಕರು ಸಹಿ ಹಾಕಿದ್ದಾರೆ. ನಕಲಿ ಪತ್ರದಲ್ಲಿ 7 ರಿಂದ 8 ಶಾಸಕರ ಸಹಿಯಿದೆ. ಅಲ್ಲದೆ, ಮೂಲ ಪತ್ರದಲ್ಲಿ ಎಲ್ಲಿಯೂ ಸಚಿವರ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿಲ್ಲ' ಎಂದು ಹೇಳಿದ್ದಾರೆ.

'ಅನುದಾನ ಬೇಡಿಕೆ, ವರ್ಗಾವಣೆ ಶಿಫಾರಸನ್ನು ಮಾನ್ಯ ಮಾಡುವುದು ಸೇರಿದಂತೆ ಶಾಸಕರ ಬೇಡಿಕೆಗಳಿಗೆ ಸಚಿವರು ಸ್ಪಂದಿಸದಿರುವ ವಿಚಾರ ಸಚಿವಸಂಪುಟ ಸಭೆಯಲ್ಲಿಯೇ ಪ್ರಸ್ತಾಪ ಆಗಬಹುದು. ನಂತರ ಸಿಎಲ್‌ಪಿ ಸಭೆಯಲ್ಲಿ ಕೆಲವು ಶಾಸಕರು ತಮ್ಮ ಅಸಮಾಧಾನ ತೋಡಿಕೊಳ್ಳುವುದು ಖಚಿತ. ಕೆಲವರು ಈಗಾಗಲೇ ಈ ಸುಳಿವು ನೀಡಿದ್ದಾರೆ' ಎಂದು ಕಾಂಗ್ರೆಸ್‌ನ ನಾಯಕರೊಬ್ಬರು ಹೇಳಿದರು.

ಇದೇ 28 ರಂದು ರಾಜ್ಯಕ್ಕೆ ಬರಲಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿ ಈ ವಿಚಾರಗಳ ಬಗ್ಗೆ ಚರ್ಚಿಸಲು ಕೂಡಾ ಕೆಲವು ಶಾಸಕರು ಸಮಯ ಕೇಳಿದ್ದಾರೆ ಎಂಬ ಮಾಹಿತಿಯೂ ಇದೆ.

5ನೇ ಪುಟ ನೋಡಿ

ಪತ್ರದಲ್ಲಿ ಏನಿದೆ?



ನಮ್ಮ ಕ್ಷೇತ್ರಕ್ಕೆ ಅನುದಾನ ನೀಡುವಂತೆ ವಿವಿಧ ಇಲಾಖೆಗಳಿಗೆ ಸಂಬಂಧಿಸಿದ 20ಕ್ಕೂ ಹೆಚ್ಚು ಸಚಿವರಿಗೆ ಮನವಿ ಮಾಡಿದ್ದರೂ ಸ್ಪಂದಿಸುತ್ತಿಲ್ಲ. ಇದರಿಂದ ಜನರ ಆಶೋತ್ತರ ಈಡೇರಿಸಲು ಸಾಧ್ಯವಾಗುತ್ತಿಲ್ಲ. ನಾವು ಸ್ಥಳೀಯ ಶಾಸಕರಾಗಿದ್ದರೂ ಅನುದಾನಕ್ಕಾಗಿ ಮೂರನೇ ವ್ಯಕ್ತಿಯ ಮೊರೆ ಹೋಗಬೇಕಾಗಿರುವುದು ಅತ್ಯಂತ ಬೇಸರದ ಸಂಗತಿ. ಅಲ್ಲದೆ, ತಮಗೆ ಬೇಕಾದ ಅಧಿಕಾರಿಗಳಿಗೆ ಮಣೆ ಹಾಕಿ, ಸಚಿವರು ಸ್ವಜನ ಪಕ್ಷಪಾತ ಮಾಡುತ್ತಿದ್ದಾರೆ. ನಮ್ಮ ಯಾವುದೇ ವರ್ಗಾವಣೆ ಶಿಫಾರಸು ಪತ್ರಗಳಿಗೆ ಮಾನ್ಯತೆ ಕೊಡುತ್ತಿಲ್ಲ. ಯಾವ ಅಧಿಕಾರಿಯೂ ನಮ್ಮ ಕೆಲಸಗಳನ್ನು ಮಾಡಿಕೊಡುತ್ತಿಲ್ಲ. ನಮ್ಮ ಮಾತಿಗೆ ಬೆಲೆಯೂ ನೀಡುತ್ತಿಲ್ಲ. ತಾವು ತಕ್ಷಣವೇ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು. ನಮ್ಮ ವಿಶ್ವಾಸಕ್ಕೆ ಚ್ಯುತಿ ಬಾರದಂತೆ ನಡೆದುಕೊಳ್ಳಬೇಕು.

ಬಿಜೆಪಿ ಕುತಂತ್ರ: ಬಿ.ಆರ್. ಪಾಟೀಲ



ಕಲಬುರಗಿ: 'ನನ್ನ ಲೆಟರ್‌ಹೆಡ್‌ನಲ್ಲಿ ನಕಲಿ ಪತ್ರ ಸೃಷ್ಟಿಸಿ ಸಚಿವರೊಂದಿಗೆ ವೈಮನಸ್ಸು ಸೃಷ್ಟಿಸಲು ಬಿಜೆಪಿ ಕುತಂತ್ರ ನಡೆಸಿದೆ. ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿರುವ ಪತ್ರ ನಾನು ಬರೆದಿದ್ದಲ್ಲ' ಎಂದು ಬಿ.ಆರ್. ಪಾಟೀಲ ಸ್ಪಷ್ಟಪಡಿಸಿದರು.

'ಹಳೆಯ ಮನೆ ವಿಳಾಸವಿರುವ ಪತ್ರವನ್ನು ಸೃಷ್ಟಿಸಲಾಗಿದೆ. ಜುಲೈ 24 ರಂದು ಪತ್ರ ಬರೆದಿದ್ದೇನೆ ಎಂದಿದೆ. ಅಂದು ನಾನು ಕಲಬುರಗಿಯಲ್ಲೇ ಇದ್ದೆ. ಸಿಎಂಗೆ ಈ ಪತ್ರ ನೀಡುವ ಪ್ರಶ್ನೆಯೇ ಬರುವುದಿಲ್ಲ. ಶಾಸಕಾಂಗ ಪಕ್ಷದ ಸಭೆ ನಡೆಸಲು ಪತ್ರ ಬರೆದಿರುವೆ. ವರ್ಗಾವಣೆ ಶಿಫಾರಸುಗಳಿಗೆ ಸಚಿವರು ಮನ್ನಣೆ ನೀಡುತ್ತಿಲ್ಲ. ಅನುದಾನ ಬಿಡುಗಡೆಗೆ ಸಚಿವರು ಮೂರನೇ ವ್ಯಕ್ತಿ ಮೂಲಕ ಹಣದ ಬೇಡಿಕೆ ಇಟ್ಟಿದ್ದಾರೆ ಎಂದು ಉಲ್ಲೇಖಿಸಿಯೇ ಇಲ್ಲ. ಬಿಜೆಪಿಯವರು ಹಣ ಇಲ್ಲದಿದ್ದರೂ ಕಾಮಗಾರಿಗಳಿಗೆ ಮಂಜೂರಾತಿ ನೀಡಿದ್ದರು. ಅವುಗಳ ಬಗ್ಗೆ ಚರ್ಚಿಸಲು ಸಭೆ ಕರೆಯುವಂತೆ ಒತ್ತಾಯಿಸಿದ್ದೇನೆ' ಎಂದೂ ಹೇಳಿದರು.

ದೂರು: 'ನನ್ನ ಹೆಸರಿನ ಹಳೆ ಲೆಟರ್ ಹೆಡ್ ಬಳಸಿ ಸುಳ್ಳು ವಿಷಯ ಪ್ರಸ್ತಾಪಿಸಿ ಅದನ್ನು ಹರಿಬಿಟ್ಟವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕು' ಎಂದು ಬಿ.ಆರ್. ಪಾಟೀಲ ಅವರು ಕಲಬುರಗಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಇಶಾ ಪಂತ್ ಅವರಿಗೆ ಮಂಗಳವಾರ ರಾತ್ರಿ ದೂರು ಸಲ್ಲಿಸಿದ್ದಾರೆ.

ಯಾವ ಶಾಸಕರೂ ದೂರು ನೀಡಿಲ್ಲ. ಶಾಸಕಾಂಗ ಪಕ್ಷದ ಸಭೆ ಕರೆಯುವಂತೆ ಒತ್ತಾಯಿಸಿದ್ದರು. ಗುರುವಾರ ಸಭೆ ಕರೆಯಲಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

'ಜೆಡಿಎಸ್‌ನಿಂದ ಏಕಾಂಗಿ ಹೋರಾಟ'

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಯಾವ ಮೈತ್ರಿಕೂಟವನ್ನೂ ಸೇರುವುದಿಲ್ಲ. ಏಕಾಂಗಿಯಾಗಿ ಹೋರಾಟ ಮಾಡಲಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಹೇಳಿದರು. 5

ಕೃಷ್ಣೆಗೆ 1.27 ಲಕ್ಷ ಕ್ಯುಸೆಕ್ ನೀರು ● ಕಬಿನಿಯಿಂದ 20 ಸಾವಿರ ಕ್ಯುಸೆಕ್ ಹೊರಕ್ಕೆ

102 ಅಡಿ ತಲುಪಿದ ಕೆಆರ್‌ಎಸ್

ಪ್ರಜಾವಾಣಿ ವಾರ್ತೆ



ಕೊಡಗು ಜಿಲ್ಲೆಯ ನಾಪೋಕ್ಲು ಸಮೀಪದ ಚೆರಿಯಪರಂಬು ನಿವಾಸಿಗಳು ಮಂಗಳವಾರ ದಿನಬಳಕೆಯ ವಸ್ತುಗಳನ್ನು ಖರೀದಿಸಲು ತೆಪ್ಪದ ಮೂಲಕ ಪಟ್ಟಣಕ್ಕೆ ತೆರಳಿದರು

ಬೆಂಗಳೂರು: ರಾಜ್ಯದಾದ್ಯಂತ ಉತ್ತಮ ಮಳೆಯಾಗುತ್ತಿದ್ದು ಕಾವೇರಿ, ಕಬಿನಿ, ಹೇಮಾವತಿ, ಕೃಷ್ಣಾ, ಮಲಪ್ರಭಾ, ಘಟಪ್ರಭಾ ಸೇರಿದಂತೆ ಹಲವು ನದಿಗಳು ಮೈದುಂಬಿ ಹರಿಯುತ್ತಿವೆ. ಇದರಿಂದಾಗಿ ಜಲಾಶಯಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ಜತೆಗೆ ಜಲಾಶಯಗಳಿಂದ ಹೊರ ಹರಿವೂ ಹೆಚ್ಚಾಗಿದ್ದು, ಹಲವು ಗ್ರಾಮಗಳು ಪ್ರವಾಹ ಭೀತಿಗೆ ಒಳಗಾಗಿವೆ.

ಕಾವೇರಿ ಜಲಾನಯದ ಪ್ರದೇಶದಲ್ಲಿ ಧಾರಾಕಾರ ಮಳೆ ಸುರಿಯುತ್ತಿದ್ದು ಮಂಡ್ಯ ಜಿಲ್ಲೆಯ ಕೆಆರ್‌ಎಸ್ ಜಲಾಶಯದ ನೀರಿನ ಮಟ್ಟ ಮಂಗಳವಾರ 102.35 ಅಡಿಗೆ ತಲುಪಿದೆ. ಎರಡು ದಿನಗಳಿಂದೀಚೆಗೆ ಜಲಾಶಯಕ್ಕೆ 10.25 ಅಡಿ ನೀರು ಹರಿದು ಬಂದಿದೆ. ಮಂಗಳವಾರ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ಗಂಟೆಯವರೆಗೆ 2.35 ಅಡಿ ನೀರು ಸೇರಿದೆ. ಸದ್ಯ ಜಲಾಶಯಕ್ಕೆ 49,280 ಕ್ಯುಸೆಕ್ ನೀರು ಹರಿದು ಬರುತ್ತಿದೆ, 5067 ಕ್ಯುಸೆಕ್ ಹೊರಹರಿವು ಇದೆ. 124.80 ಅಡಿ ಗರಿಷ್ಠ ಮಟ್ಟ ಹೊಂದಿರುವ ಜಲಾಶಯದಲ್ಲಿ ಕಳೆದ ವರ್ಷ ಇದೇ ದಿನ 124.72 ಅಡಿ ನೀರಿನ ಸಂಗ್ರಹವಿತ್ತು.

20 ಸಾವಿರ ಕ್ಯುಸೆಕ್ ನೀರು ನದಿಗೆ: ಕೇರಳದಲ್ಲಿ ಭಾರಿ ಮಳೆಯಾಗುತ್ತಿದ್ದು, ಮೈಸೂರು ಜಿಲ್ಲೆಯ ಎಚ್.ಡಿ. ಕೋಟೆ ತಾಲ್ಲೂಕಿನ ಕಬಿನಿ ಜಲಾಶಯಕ್ಕೆ ಒಳ ಹರಿವಿನ ಪ್ರಮಾಣ ಹೆಚ್ಚಾಗಿದ್ದು, ಮಂಗಳವಾರ ಸಂಜೆ 20 ಸಾವಿರ ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗಿದೆ.

'2,284 ಅಡಿ ಸಾಮರ್ಥ್ಯದ ಕಬಿನಿ ಜಲಾಶಯದಲ್ಲಿ ಸದ್ಯ 2,281.27 ಅಡಿಯಷ್ಟು ನೀರು ಸಂಗ್ರಹವಾಗಿದೆ. ಭರ್ತಿಯಾಗಲು ಎರಡೂವರೆ ಅಡಿಯಷ್ಟೇ ಬಾಕಿ ಇದೆ' ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ನದಿಯಲ್ಲಿ ನೀರಿನ ಮಟ್ಟ ಹೆಚ್ಚಿದ್ದರಿಂದ ಎಚ್.ಡಿ. ಕೋಟೆ ತಾಲ್ಲೂಕಿನ ಬಿದರಹಳ್ಳಿ ಸೇತುವೆ ಭಾಗಶಃ ಮುಳುಗಡೆಯಾಗಿದೆ.

ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಲಕ್ಷ್ಮಣತೀರ್ಥ ನದಿ ಉಕ್ಕಿ ಹರಿಯುತ್ತಿದೆ. ಹಾಸನ ಜಿಲ್ಲೆಯ ಹೇಮಾವತಿ ಜಲಾಶಯಕ್ಕೆ 25,888 ಕ್ಯುಸೆಕ್ ನೀರು ಹರಿದು ಬಂದಿದೆ. ಜಲಾಶಯ ಭರ್ತಿಗೆ ಇನ್ನೂ 16 ಅಡಿ ಬಾಕಿ ಇದೆ.

ಕೃಷ್ಣೆಯಲ್ಲಿ 1.27 ಲಕ್ಷ ಕ್ಯುಸೆಕ್ ನೀರು: ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಸೇತುವೆ ಬಳಿ ಕೃಷ್ಣಾ ನದಿಗೆ ಮಂಗಳವಾರ ಮಧ್ಯಾಹ್ನದ ವೇಳೆಗೆ 1.27 ಲಕ್ಷ ಕ್ಯುಸೆಕ್ ನೀರು ಹರಿದುಬಂದಿದೆ. ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಮಳೆ ಮತ್ತಷ್ಟು ಬಿರುಸು ಪಡೆದಿದ್ದು ಕೃಷ್ಣಾ ಹಾಗೂ ಅದರ ಉಪನದಿಗಳಾದ ವೇದಗಂಗಾ, ದೂಧಗಂಗಾದಲ್ಲಿ ಹರಿವು ಹೆಚ್ಚಾಗಿದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಅಘನಾಶಿನಿ, ಗಂಗಾವಳಿ ನದಿ ಅಪಾಯದ ಮಟ್ಟದಲ್ಲಿ ಹರಿಯುತ್ತಿದ್ದು, ಪ್ರವಾಹದ ಸ್ಥಿತಿ ಮುಂದುವರೆದಿದೆ. ಜೊಯಿಡಾ ಭಾಗದಲ್ಲಿ ಮಳೆ ಇಳಿಕೆಯಾಗಿದ್ದರಿಂದ ಕಾಳಿನದಿಯಲ್ಲಿ ನೀರಿನ ಹರಿವು ಕಡಿಮೆಯಾಗಿದೆ. ಸೂಪಾ ಜಲಾಶಯಕ್ಕೆ 43 ಸಾವಿರ ಕ್ಯುಸೆಕ್ ನೀರು ಹರಿದು ಬಂದಿದೆ. ತುಂಗಭದ್ರಾ ಜಲಾಶಯಕ್ಕೆ ಹರಿದು ಬರುತ್ತಿರುವ ನೀರಿನ ಪ್ರಮಾಣ 66,250 ಕ್ಯುಸೆಕ್‌ಗೆ ಹೆಚ್ಚಳವಾಗಿದೆ.

ಇನ್ನಷ್ಟು ಸುದ್ದಿಗಳು 7

ಈಸ್ಟ್ ಇಂಡಿಯಾ ಕಂಪನಿ, ಐ.ಎಂ ಉಲ್ಲೇಖ

'ಇಂಡಿಯಾ' ಟೀಕಿಸಿದ ಮೋದಿ

ನವದೆಹಲಿ(ಪಿಟಿಐ): ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ವಿರುದ್ಧ ಮಂಗಳವಾರ ವಾಗ್ದಾಳಿ ನಡೆಸಿರುವ ಪ್ರಧಾನಿ ನರೇಂದ್ರ ಮೋದಿ, 'ಗೊತ್ತು-ಗುರಿಯಿಲ್ಲದ ಇಂಥ ಮೈತ್ರಿಯನ್ನು ದೇಶ ಹಿಂದೆಂದೂ ಕಂಡಿರಲಿಲ್ಲ' ಎಂದು ಹೇಳಿದ್ದಾರೆ.

ಈಸ್ಟ್ ಇಂಡಿಯಾ ಕಂಪನಿ, ಇಂಡಿಯನ್ ಮುಜಾಹಿದೀನ್(ಐ.ಎಂ), ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಹೆಸರುಗಳನ್ನು ಪ್ರಸ್ತಾಪಿಸುವ ಮೂಲಕ 'ಮೈತ್ರಿ-ಕೂಟ'ವನ್ನು ಹೀಗಳೆದ ಅವರು, 'ದೇಶದ ಹೆಸರನ್ನು ಬಳಸಿಕೊಳ್ಳುವ ಮೂಲಕ ಜನರ ದಾರಿ ತಪ್ಪಿಸಲು ಸಾಧ್ಯವಿಲ್ಲ' ಎಂದು ಕುಟುಕಿದ್ದಾರೆ.

ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಮೋದಿ, ಪ್ರತಿಪಕ್ಷಗಳನ್ನು ಕಟುವಾಗಿ ಟೀಕಿಸಿದರು ಎಂದು ಮೂಲಗಳು ಹೇಳಿವೆ.

ಮುಂದಿನ ವರ್ಷ ನಡೆಯುವ ಲೋಕಸಭಾ ಚುನಾವಣೆಯಲ್ಲಿ ಭಾರಿ ಬಹುಮತದಿಂದ ಗೆಲ್ಲುವ ಮೂಲಕ ಆಡಳಿತಾರೂಢ ಎನ್‌ಡಿಎ ಮತ್ತೊಮ್ಮೆ ಅಧಿಕಾರದ ಗದ್ದುಗೆ ಏರಲಿದೆ ಎಂಬ ವಿಶ್ವಾಸವನ್ನು ಮೋದಿ ವ್ಯಕ್ತಪಡಿಸಿದರು ಎಂದು ಮೂಲಗಳು ಹೇಳಿವೆ.

ದೇಶದ ಹೆಸರಿದ್ದ ಹಲವು ನಿಷೇಧಿತ ಉಗ್ರ ಸಂಘಟನೆಗಳನ್ನು ಉಲ್ಲೇಖಿಸಿದ ಮೋದಿ, 'ಇಂಡಿಯಾ' ಎಂಬುದು ಭ್ರಷ್ಟ ನಾಯಕರು ಹಾಗೂ ಪಕ್ಷಗಳ ಗುಂಪಾಗಿದೆ. ದೇಶದ ಪ್ರಮುಖ ವಿರೋಧ ಪಕ್ಷವಾದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ಗೆ ಎ.ಒ.ಹ್ಯೂಮ್ ಎಂಬ ಬ್ರಿಟನ್ ಮೂಲದ ವ್ಯಕ್ತಿ ಈ ಹೆಸರು ಇಟ್ಟಿದ್ದು' ಎಂಬುದಾಗಿ ಕುಟುಕಿದರು.

'ದೇಶದ ಜನರು ಸಾಕಷ್ಟು ಪ್ರಬುದ್ಧರಾಗಿದ್ದು, ಇಂತಹ ನಾಮಕರಣಗಳಿಂದ ಅವರ ದಾರಿ ತಪ್ಪಿಸಲು ಸಾಧ್ಯ ಇಲ್ಲ' ಎಂದು ಮೋದಿ ವಾಗ್ದಾಳಿ ನಡೆಸಿದ್ದಾಗಿಯೂ ಮೂಲಗಳು ಹೇಳಿವೆ.

11ನೇ ಪುಟ ನೋಡಿ

ಅವಿಶ್ವಾಸಕ್ಕೆ ಸಜ್ಜು

ನವದೆಹಲಿ: ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಎನ್‌ಡಿಎ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪಣ ತೊಟ್ಟಿರುವ 'ಇಂಡಿಯಾ'ವು, ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆಗೆ ರಣತಂತ್ರ ರೂಪಿಸಿದೆ. 11

ಚಿನಕುರಳಿ

ಪ್ರಕಾಶ್ ಶೆಟ್ಟಿ



ಹಾವೇರಿ ಜಿಲ್ಲಾಸ್ಪತ್ರೆ ಸೋರಿಕೆ: ಸಿ.ಎಂ ಖುದ್ದು ಪರಿಶೀಲನೆ

ಎಂಜಿನಿಯರ್ ಅಮಾನತು

ಪ್ರಜಾವಾಣಿ ವಾರ್ತೆ

ವರದಿ ಪರಿಣಾಮ

ಹಾವೇರಿ: ಜಿಲ್ಲಾಸ್ಪತ್ರೆಯ ಮಕ್ಕಳ ವಾರ್ಡ್, ತಾಯಂದಿರ ವಾರ್ಡ್ ಸೇರಿ ಬಹುತೇಕ ವಾರ್ಡ್‌ಗಳು ಮಳೆಯಿಂದ ಸೋರುತ್ತಿದ್ದು, ರೋಗಿಗಳಿಗೆ ತೀವ್ರ ಸಮಸ್ಯೆಯಾಗಿದೆ. ನಿರ್ಲಕ್ಷ್ಯ ತೋರಿರುವ ಆರೋಗ್ಯ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ನಾಯಕ್ ಅವರನ್ನು ತಕ್ಷಣವೇ ಅಮಾನತು ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದರು.

ನಗರದಲ್ಲಿ ಮಂಗಳವಾರ ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಳ್ಳುವ ಮುನ್ನ ನೇರವಾಗಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಅವರು ಆಸ್ಪತ್ರೆ ಅವ್ಯವಸ್ಥೆ ಕಂಡು ಕೆಂಡಾಮಂಡಲರಾದರು. ತಕ್ಷಣವೇ ಆರೋಗ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಟಿ.ಕೆ.ಅನಿಲ್ ಕುಮಾರ್ ಅವರಿಗೆ ಕರೆ ಮಾಡಿ, 'ಎಂಜಿನಿಯರ್ ಅಮಾನತುಗೊಳಿಸಿ' ಎಂದು ಸೂಚಿಸಿದರು.

ಮಕ್ಕಳ ವಾರ್ಡ್, ತುರ್ತು ಚಿಕಿತ್ಸಾ ವಾರ್ಡ್, ತಾಯಂದಿರ ವಾರ್ಡ್ ಸೇರಿ ವಿವಿಧ ವಾರ್ಡ್‌ಗಳಲ್ಲಿ ಚಾವಣಿ, ಗೋಡೆ ಸೋರುತ್ತಿರುವುದು ಕಂಡ ಅವರು, 'ರೋಗಿಗಳನ್ನು ಬೇರೆಡೆ ಸ್ಥಳಾಂತರ ಮಾಡದೆ, ವಾರ್ಡ್‌ನ ಮೇಲ್ಭಾಗದಲ್ಲಿ ಕಟ್ಟಡ ಕಾಮಗಾರಿ ಹೇಗೆ ಕೈಗೊಂಡಿದ್ದೀರಿ? ನಿಮಗೆ ತಲೆಯಲ್ಲಿ ಬುದ್ಧಿ ಇಲ್ವಾ' ಎಂದು ಜಿಲ್ಲಾ ಶಸ್ತ್ರಚಿಕಿತ್ಸಕ, ಎಂಜಿನಿಯರ್‌ಗೆ ತರಾಟೆಗೆ ತೆಗೆದುಕೊಂಡರು.

5 ನೇ ಪುಟ ನೋಡಿ

ಅರ್ಜಿ ಆಹ್ವಾನ

ಬೆಂಗಳೂರು: ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನಮ್‌ನಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

ದ್ವಿತೀಯ ಪಿ.ಯು ಪರೀಕ್ಷೆಯ ಸಂಸ್ಕೃತ ವಿಷಯದಲ್ಲಿ 98ಕ್ಕೂ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳು ಜುಲೈ 30ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಭವಾನಿ ಹೆಗಡೆ, ಕಾರ್ಯದರ್ಶಿಗಳು, ಮೈತ್ರೀ ಸಂಸ್ಕೃತ-ಸಂಸ್ಕೃತಿ ಪ್ರತಿಷ್ಠಾನಮ್, ನಂ. 130, 3ನೇ ಮೈನ್, ಗೃಹಲಕ್ಷ್ಮಿ ಲೇಔಟ್, 2ನೇ ಹಂತ, ಕಮಲಾನಗರ, ಬೆಂಗಳೂರು-79,
ಮಾಹಿತಿಗೆ: 9731134264ಗೆ ಸಂಪರ್ಕಿಸಬಹುದು.

ನಗರದಲ್ಲಿ ಇಂದು

ಕಾರ್ಗಿಲ್ ವಿಜಯೋತ್ಸವ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಉದ್ಘಾಟನೆ: ಪ್ರಿಯಕೃಷ್ಣ, ಆಯೋಜನೆ: ಅಖಿಲ ಕರ್ನಾಟಕ ಮಾಜಿ ಸೈನಿಕರ ಸಂಘ, ಸ್ಥಳ: ಬಿ.ಜಿ.ಎಸ್. ಕ್ರೀಡಾಂಗಣ, ವಿಜಯನಗರ, ಬೆಳಿಗ್ಗೆ 8ರಿಂದ



ನಿರ್ಮಲಾನಂದನಾಥ ಸ್ವಾಮೀಜಿ

ಪದವಿ ತರಗತಿಗಳ ಉದ್ಘಾಟನಾ ಕಾರ್ಯಕ್ರಮ: ಅತಿಥಿಗಳು: ಸುನಿಲ್ ಕ್ರಿಸ್ಟೋಫರ್, ಕೆ.ಸಿ. ರಾಮಮೂರ್ತಿ, ಅಧ್ಯಕ್ಷತೆ: ಸಬಿತಾ ರಾಮಮೂರ್ತಿ, ಆಯೋಜನೆ: ಸಿಎಂಆರ್ ವಿಶ್ವವಿದ್ಯಾಲಯ, ಎಚ್.ಆರ್.ಬಿ.ಆರ್. ಲೇಔಟ್ ಕಲ್ಯಾಣನಗರ, ಬೆಳಿಗ್ಗೆ 9.30

ಕಾಲೇಜು ದಿನಾಚರಣೆ: ಅತಿಥಿಗಳು: ವಂಶಿ ಕೃಷ್ಣ ರವಿ, ಸುವಿನಾ ಗೌಡ, ಕೆ.ಪಿ. ನರಸಿಂಹ ಮೂರ್ತಿ, ಆಯೋಜನೆ ಮತ್ತು ಸ್ಥಳ: ಆಚಾರ್ಯ ಪಾಠಶಾಲಾ ವಾಣಿಜ್ಯ ಕಾಲೇಜು, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

ಛತ್ರಪತಿ ಶಾಹುಮಹಾರಾಜ್ ಜಯಂತಿ ಅಂಗವಾಗಿ 'ಸಂವಿಧಾನದ ಆಶಯಗಳು: ಜಾರಿಗಾಗಿ ಶೋಷಿತ ಸಮುದಾಯಗಳ ಜಾಗೃತಿ ಸಮಾವೇಶ': ಉದ್ಘಾಟನೆ: ಬಿ.ಟಿ. ಲಲಿತಾ ನಾಯಕ್, ಅಧ್ಯಕ್ಷತೆ: ಆರ್. ಮೋಹನ್ ರಾಜ್, ಅತಿಥಿಗಳು: ಸಿ. ಚಂದ್ರಪ್ಪ, ಸಪ್ನ ಮೋಹನ್, ವೆಂಕಟಗಿರಿಯಯ್ಯ, ಗೋಪಾಲಕೃಷ್ಣ ಹರಳಹಳ್ಳಿ, ಆಯೋಜನೆ: ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ, ಕರ್ನಾಟಕ ದಲಿತ ಸಂಘರ್ಷ ಸಮಿತಿ, ಸ್ಥಳ: ಗಾಂಧಿ ಭವನ, ಶೇಷಾದ್ರಿಪುರ, ಬೆಳಿಗ್ಗೆ 11

ಬೆಳ್ಳಾವೆ ನರಹರಿಶಾಸ್ತ್ರಿ ಅವರ 'ಸಂಪೂರ್ಣ ರಾಮಾಯಣ' ಪೌರಾಣಿಕ ನಾಟಕ ಪ್ರದರ್ಶನ: ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಶಿವರಾಜ್ ಎಸ್. ತಂಗಡಗಿ, ಅತಿಥಿ: ಚಲುವರಾಯಸ್ವಾಮಿ, ಸಂಗೀತ ನಿರ್ದೇಶ: ಪ್ರವೀಣ್ ಕುಮಾರ್, ಆಯೋಜನೆ: ಅಖಿಲ ಕರ್ನಾಟಕ ರಂಗಭೂಮಿ ಪರಿಷತ್ತು, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 11.30ರಿಂದ

ವಕೀಲರು ಮತ್ತು ಅವರ ಕುಟುಂಬಗಳಿಗೆ ಅಂಚೆ ಮೇಳ: ಅತಿಥಿಗಳು: ಎಂ. ನಾಗಪ್ರಸನ್ನ, ಎಸ್. ರಾಜೇಂದ್ರ ಕುಮಾರ್, ಎಲ್. ಕೆ. ಡ್ಯಾಶ್, ಕೈಯಾ ಅರೋರಾ, ವಿವೇಕ್ ಸುಬ್ಬಾರೆಡ್ಡಿ, ಆಯೋಜನೆ: ವಕೀಲ ಸಂಘ, ಅಂಚೆ ಇಲಾಖೆ, ಸ್ಥಳ: ಸಿಟಿ ಯೂನಿಟಿ, ವಕೀಲರ ಭವನ, ಮಧ್ಯಾಹ್ನ 2



ಎಚ್‌.ಎನ್‌. ನಾಗಮೋಹನದಾಸ್

ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ: ಉದ್ಘಾಟನೆ: ಡಿ.ಕೆ. ಶಿವಕುಮಾರ್, ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಉಪನ್ಯಾಸ: ಎಚ್.ಎನ್. ನಾಗಮೋಹನದಾಸ್, ಅತಿಥಿಗಳು: ಡಾ.ಎಚ್.ಸಿ. ಮಹದೇವಪ್ಪ, ಎನ್.ಜಯರಾಮ್, ಮಂಜಮ್ಮ ಜೋಗತಿ, ಮೂಡ್ನಾಕೂಡು ಚಿನ್ನಸ್ವಾಮಿ, ವಿವೇಕಾನಂದ ಎಚ್.ಕೆ., ಪ್ರಾಸ್ತಾವಿಕ ನುಡಿ: ಸದಾಶಿವ ಕಾಂಬಳೆ, ಆಯೋಜನೆ: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಸ್ಥಳ: ರಜತ ಭವನ, ಜಲಮಂಡಳಿ, ಮಲ್ಲೇಶ್ವರ, ಮಧ್ಯಾಹ್ನ 2.35

'ಶಹರ್ ಇನ್ ದಿ ಖಾಕಿ ರೂಮ್': ರೂಮಿ ಹರೀಶ್, ಆಯೋಜನೆ: ಇಂಡಿಯಾ ಫೌಂಡೇಷನ್ ಫಾರ್ ದಿ ಆರ್ಟ್ಸ್, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ದೊಮ್ಮಲೂರು, ಸಂಜೆ 6

ತಿಂಗಳ ಕಾರ್ಯಕ್ರಮ 'ಲಯ ಲಾವಣ್ಯ, ಕರ್ನಾಟಕ ಸಂಗೀತ ತಾಳ ವಾದ್ಯ ವೈಭವ': ಅನೂರು ಆರ್. ಅನಂತ ಕೃಷ್ಣಶರ್ಮ, ಅತಿಥಿ: ವಿನಯ್ ಕುಮಾರ್, ಆಯೋಜನೆ: ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

ಪ್ರವಚನ ವಾಹಿನಿ: 'ಶ್ರೀಮದ್ ಭಾಗವತದ ವೈಜ್ಞಾನಿಕ ಮತ್ತು ವಿಸ್ಮಯ ಪ್ರಸಂಗಗಳು' ಕುರಿತ ಉಪನ್ಯಾಸ: ವರದರಾಜ ಐಯ್ಯಂಗಾರ್, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

ಬಸವನಗುಡಿಯ ನ್ಯಾಷನಲ್ ಕೋ ಆಪರೇಟಿವ್ ಬ್ಯಾಂಕ್

ಅವ್ಯವಹಾರ ಆರೋಪ; ನ್ಯಾಯಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿಯ 'ನ್ಯಾಷನಲ್‌ಕೋ-ಆಪರೇಟಿವ್‌ಬ್ಯಾಂಕ್'ನಲ್ಲಿ ಅವ್ಯವಹಾರ ನಡೆದಿರುವ ಆರೋಪ ಕೇಳಿಬಂದಿದ್ದು, ಠೇವಣಿದಾರರಿಗೆ ನ್ಯಾಯ ಕಲ್ಪಿಸುವಂತೆ ಗುರು ರಾಘವೇಂದ್ರ ಬ್ಯಾಂಕ್ ಠೇವಣಿದಾರರು ಮತ್ತು ಷೇರುದಾರರ ಹಿತರಕ್ಷಣಾ ವೇದಿಕೆಯ ಮುಖ್ಯಪೋಷಕ ಶಂಕರ್ ಗುಹಾ ದ್ವಾರಕನಾಥ್ ಒತ್ತಾಯಿಸಿದ್ದಾರೆ.

'ಬಸವನಗುಡಿ ಐತಿಹಾಸಿಕ ಪ್ರಸಿದ್ಧಿ ಕ್ಷೇತ್ರವಾಗಿತ್ತು. ಆದರೆ, ಇದೀಗ ಬ್ಯಾಂಕ್ ಹಗರಣಗಳಿಂದ ಸುದ್ದಿ ಆಗುತ್ತಿದೆ. ಬಸವನಗುಡಿ ಸಹಕಾರಿ ಬ್ಯಾಂಕ್ ಹಗರಣಗಳ ಸರಮಾಲೆಗೆ ಇದು ಸೇರ್ಪಡೆಯಾಗಿದೆ' ಎಂದಿದ್ದಾರೆ.

'ಈ ಬ್ಯಾಂಕ್‌ನ ಹೊಸ ಆಡಳಿತ ಮಂಡಳಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿ, ಕೆಲವೇ ವರ್ಷಗಳಾಗಿದೆ. ಈ ಹಗರಣದ ಕುರಿತು ಹಳೇ ಆಡಳಿತ ಮಂಡಳಿ ಪದಾಧಿಕಾರಿಗಳು ಉತ್ತರ ನೀಡಬೇಕು. ಬ್ಯಾಂಕ್ ಅನ್ನು ಗ್ರಾಹಕರು ನಂಬಿ ತಾವು ಕಷ್ಟಪಟ್ಟು ಬೆವರು ಸುರಿಸಿ ದುಡಿದ ಹಣ ಠೇವಣಿ ರೂಪದಲ್ಲಿ ಇಟ್ಟಿರುತ್ತಾರೆ. ಗ್ರಾಹಕರ ನಂಬಿಕೆ ಉಳಿಸಿಕೊಳ್ಳಬೇಕಿದ್ದ ಬ್ಯಾಂಕ್‌ಗಳೇ ಹಗರಣಕ್ಕೆ ಒಳಪಡುತ್ತಿರುವುದು ಅತ್ಯಂತ ಆತಂಕಕಾರಿ' ಎಂದು ತಿಳಿಸಿದ್ದಾರೆ.

'ಠೇವಣಿದಾರರ ಹಿತದೃಷ್ಟಿಯಿಂದ ಕೇಂದ್ರ, ರಾಜ್ಯ ಸರ್ಕಾರ ಹಗರಣ ನಡೆಸಿರುವ ಬ್ಯಾಂಕ್‌ಗಳ ವಿರುದ್ಧ ಕ್ರಮ ಕೈಗೊಳ್ಳಬೇಕು. ವಿಶೇಷ ತಂಡವನ್ನು ರಚಿಸಬೇಕು. ದೈನಂದಿನ ವ್ಯವಹಾರಗಳ ಮೇಲೆ ನಿಗಾ ಇರಿಸಬೇಕು' ಎಂದು ಒತ್ತಾಯಿಸಿದರು. 'ಬಸವನಗುಡಿಯಲ್ಲಿ ಇನ್ನೆರಡು ಸಹಕಾರಿ ಬ್ಯಾಂಕುಗಳು ಇದೇ ರೀತಿ ಹಗರಣದ ಹಾದಿ ಹಿಡಿಯುವ ಮುನ್ಸೂಚನೆ ಕಾಣಿಸುತ್ತಿದೆ' ಎಂದು ಗುಹಾ ಪ್ರಕಟಣೆಯಲ್ಲಿ ಹೇಳಿದ್ದಾರೆ.



ನಗರದ ಬಸವನಗುಡಿಯ 'ನ್ಯಾಷನಲ್ ಕೋಆಪರೇಟಿವ್ ಬ್ಯಾಂಕ್' ಎದುರು ಜಮಾಯಿಸಿದ್ದ ಠೇವಣಿದಾರರು.

'ತಾಳ್ಮೆ ಕಳೆದುಕೊಳ್ಳುವುದು ಬೇಡ'

'ಸಾಲ ಪಡೆಯುವ ವೇಳೆ ಸದಸ್ಯರು ತಮ್ಮ ಆಸ್ತಿಗಳನ್ನು ಅಡಮಾನ ಇಟ್ಟಿದ್ದು ಅದರ ಮೌಲ್ಯವೇ ₹ 1,500 ಕೋಟಿಯಾಗಿದೆ. ಶೀಘ್ರವೇ ಸಾಲ ವಸೂಲಾತಿ ಮಾಡಿ ಸಮಸ್ಯೆ ಇತ್ಯರ್ಥ ಮಾಡುತ್ತೇವೆ' ಎಂದು ದಿ ನ್ಯಾಷನಲ್ ಕೋ-ಆಪರೇಟಿವ್ ಬ್ಯಾಂಕ್‌ನ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಪಿ.ವಿ.ಸುಮಾ ಸ್ಪಷ್ಟನೆ ನೀಡಿದ್ದಾರೆ.

'ಜುಲೈ 24ರಂದು ಭಾರತೀಯ ರಿಸರ್ವ್ ಬ್ಯಾಂಕ್‌ನವರು ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 35ರ ಅನ್ವಯ ನಮ್ಮ ಬ್ಯಾಂಕ್ ವ್ಯವಹಾರಗಳ ಮೇಲೆ ನಿರ್ಬಂಧ ವಿಧಿಸಿದ್ದಾರೆ. ಸದಸ್ಯರು ಹಾಗೂ ಗ್ರಾಹಕರು ತಾಳ್ಮೆ ಕಳೆದುಕೊಳ್ಳುವುದು ಬೇಡ' ಎಂದು ಪ್ರಕಟಣೆಯಲ್ಲಿ ಕೋರಿದ್ದಾರೆ.

ಪ್ರಸಕ್ತ ಸಾಲಿನಲ್ಲಿ ಬ್ಯಾಂಕ್ ಹಣಕಾಸಿನ ವಿವರ (ಕೋಟಿಗಳಲ್ಲಿ)

- ಒಟ್ಟು ಠೇವಣಿ;₹1,416.34
- ಒಟ್ಟು ಸಾಲ;₹869.55
- ಸಾಲಗಳ ಮೇಲೆ ಬರಬೇಕಾದ ಬಡ್ಡಿ;₹355
- ಸರ್‌ಫೇಸಿ ಕಾಯ್ದೆಯಲ್ಲಿ ವಸೂಲಾತಿ ಕೈಗೊಂಡ ಮೊತ್ತ;₹ 340.72
- ಹರಾಜು ಪ್ರಕ್ರಿಯೆಯಲ್ಲಿ;₹203.35
- ಕೋರ್ಟ್‌ನಲ್ಲಿರುವ ದಾವೆಗಳು; ₹110.32
- ಹೂಡಿಕೆಗಳು ಹಾಗೂ ಬರಬೇಕಾದ ಬಾಕಿ ಮೊತ್ತ; ₹738
- ಸ್ವಂತ ಆಸ್ತಿ ಮೌಲ್ಯ ₹ 65

ಈಜಿಪುರ ಮೇಲ್ಸೇತುವೆ ಗುತ್ತಿಗೆ

ಶೀಘ್ರವೇ ಅನುಮೋದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆ ಬಾಕಿ ಕಾಮಗಾರಿಗೆ ಟೆಂಡರ್ ಕೊನೆಗೂ ಸರ್ಕಾರದ ಅಂಗಳಕ್ಕೆ ತಲುಪಿದೆ. ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಮುಂದಿನ ಸಚಿವ ಸಂಪುಟದ ಮುಂದೆ ಗುತ್ತಿಗೆ ಅನುಮೋದನೆ ವಿಷಯ ಮಂಡಿಸಲಿದ್ದಾರೆ.

ನಾಲ್ಕು ಬಾರಿ ಟೆಂಡರ್ ಕರೆದಿದ್ದ ಈ ಬಾಕಿ ಕಾಮಗಾರಿಗೆ ಮಾರ್ಚ್‌ನಲ್ಲೇ ಗುತ್ತಿಗೆದಾರರು ಅಂತಿಮಗೊಂಡಿದ್ದರು. ಅವರೊಂದಿಗೆ ಚೌಕಾಸಿ ಮಾಡುವ ಪ್ರಕ್ರಿಯೆಗೆ ಬಿಬಿಎಂಪಿ ಅಧಿಕಾರಿಗಳು ಅಧಿಕ ಸಮಯ ತೆಗೆದುಕೊಂಡಿದ್ದರು. ಈ ವಿಳಂಬ ನೀತಿಯಿಂದ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರೂ ಆಕ್ರೋಶಗೊಂಡಿದ್ದರು.

ಬಿಬಿಎಂಪಿ ಅಧಿಕಾರಿಗಳು ಕೊನೆಗೂ ಈಜಿಪುರ ಮೇಲ್ಸೇತುವೆ ಬಾಕಿ ಕಾಮಗಾರಿಗೆ ಟೆಂಡರ್ ಮೊತ್ತಕ್ಕಿಂತ ಶೇ 18.30ರಷ್ಟು ಹೆಚ್ಚಿನ ಮೊತ್ತಕ್ಕೆ ಗುತ್ತಿಗೆದಾರರ ಮನವೊಲಿಸಿದ್ದಾರೆ. ಜುಲೈ 17ರಂದು ಈ ಟೆಂಡರ್ ಅನುಮೋದನೆಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅವರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಕಳುಹಿಸಿಕೊಟ್ಟಿದ್ದಾರೆ.

'ಈಜಿಪುರ ಮೇಲ್ಸೇತುವೆ ಬಾಕಿ ಕಾಮಗಾರಿ ಟೆಂಡರ್ ಅನುಮೋದನೆ ಸರ್ಕಾರಕ್ಕೆ ಬಂದಿದೆ. ಈ ಮುಂದಿನ ಸಚಿವ ಸಂಪುಟದ ಮುಂದೆ ಅದನ್ನು ತರುವಂತೆ ರಾಕೇಶ್ ಸಿಂಗ್ ಅವರಿಗೆ ಸೂಚಿಸಲಾಗಿದೆ. ಅಲ್ಲಿ ಅನುಮೋದನೆಗೊಂಡ ಕೂಡಲೇ ಕಾಮಗಾರಿ ಆರಂಭಿಸಲಾಗುತ್ತದೆ. ಟರ್ನ್‌ಕೀ ಗುತ್ತಿಗೆಯಲ್ಲಿ ಈ ಕಾಮಗಾರಿಯನ್ನು 12 ತಿಂಗಳಲ್ಲಿ ಮುಗಿಸಲಾಗುತ್ತದೆ' ಎಂದು ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.



ಈಜಿಪುರ ಮೇಲ್ಸೇತುವೆ ಕಾಮಗಾರಿ ಸ್ಥಗಿತಗೊಂಡಿದ್ದು, ಆ ಪ್ರದೇಶ ಕಸ ಹಾಗೂ ಕಟ್ಟಡ ತ್ಯಾಜ್ಯದ ತಾಣವಾಗಿದೆ

–ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಬಿಎಂಟಿಸಿ ಬಸ್ ಡಿಕ್ಕಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೆಜೆಸ್ಟಿಕ್ ಕೇಂದ್ರ ನಿಲ್ದಾಣದಲ್ಲಿ ಬಿಎಂಟಿಸಿ ಬಸ್ ಗುದ್ದಿ ಪ್ರಯಾಣಿಕರೊಬ್ಬರು ಮೃತಪಟ್ಟಿದ್ದು, ಅಪಘಾತಕ್ಕೆ ಕಾರಣವಾದ ಆರೋಪದಡಿ ಚಾಲಕ ಚನ್ನಯ್ಯ (43) ಅವರನ್ನು ಉಪ್ಪಾರಪೇಟೆ ಸಂಚಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ರಾಜರಾಜೇಶ್ವರಿನಗರ ಡಿಪೊಗೆ ಸೇರಿದ್ದ ಬಿಎಂಟಿಸಿ ಬಸ್ (ಕೆಎ 57 ಎಫ್ 5187), ಸೋಮವಾರ ಸಂಜೆ ನಿಲ್ದಾಣಕ್ಕೆ ಬಂದಿತ್ತು. ಚಾಲಕ ಚನ್ನಯ್ಯ, ನಿಗದಿತ ಸ್ಥಳದಲ್ಲಿ ಬಸ್ ನಿಲ್ಲಿಸುತ್ತಿದ್ದರು. ಅದೇ ಸಂದರ್ಭದಲ್ಲಿ ಪ್ರಯಾಣಿಕ, ನಿಲ್ದಾಣದೊಳಗೆ ರಸ್ತೆ ದಾಟುತ್ತಿದ್ದರು.'

'ಚಾಲಕ, ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಬಸ್ ಚಲಾಯಿಸಿದ್ದ. ಪ್ರಯಾಣಿಕನಿಗೆ ಡಿಕ್ಕಿ ಹೊಡೆದು, ಪ್ರಯಾಣಿಕನ ತಲೆಗೆ ತೀವ್ರ ಪೆಟ್ಟಾಗಿತ್ತು. ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು' ಎಂದು ಪೊಲೀಸರು ತಿಳಿಸಿದರು.

'ಪ್ರಯಾಣಿಕನ ಬಳಿ ಯಾವುದೇ ಗುರುತಿನ ಚೀಟಿಗಳಿಲ್ಲ. ಹೆಸರು ಗೊತ್ತಾಗಿಲ್ಲ. 25 ವರ್ಷದಿಂದ 30 ವರ್ಷ ವಯಸ್ಸಾಗಿರಬಹುದೆಂದು ಅಂದಾಜಿಸಲಾಗಿದೆ. ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಇರಿಸಲಾಗಿದೆ. ಸಂಬಂಧಿಕರು ಸಿಕ್ಕ ಬಳಿಕವೇ ಮರಣೋತ್ತರ ಪರೀಕ್ಷೆ ಪ್ರಕ್ರಿಯೆ ಆರಂಭಿಸಲಾಗುವುದು' ಎಂದು ಹೇಳಿದರು.

ವಧು ಹುಡುಕುವ ನೆಪ; ₹ 86 ಸಾವಿರ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಧು ಹುಡುಕಿಕೊಡುವ ನೆಪದಲ್ಲಿ ನಗರದ ನಿವಾಸಿಯೊಬ್ಬರಿಂದ ₹ 86 ಸಾವಿರ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಹೆಣ್ಣೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಠಾಣೆ ವ್ಯಾಪ್ತಿಯ ನಿವಾಸಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಸುಧಾಕರ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ದೂರುದಾರ, ತಮ್ಮ ಪುತ್ರನಿಗೆ ವಧು ಹುಡುಕುತ್ತಿದ್ದರು. ಹಲವು ಸಂಬಂಧಿಕರು ಹಾಗೂ ಸ್ನೇಹಿತರ ಬಳಿ ವಧು ಬಗ್ಗೆ ವಿಚಾರಿಸುತ್ತಿದ್ದರು. 'ಬ್ರಾಹ್ಮಣ ವೇದಿಕೆ ಟ್ರಸ್ಟ್'ನಲ್ಲಿ ಕೆಲಸ ಮಾಡುತ್ತಿರುವುದಾಗಿ ಹೇಳಿ ದೂರುದಾರರನ್ನು ಪರಿಚಯ ಮಾಡಿಕೊಂಡಿದ್ದ ಸುಧಾಕರ್ ಅಲಿಯಾಸ್ ವೆಂಕಟಾಚಾರಿ, ವಧು ಹುಡುಕಿಕೊಡುವುದಾಗಿ ಹೇಳಿದ್ದ. ಅದಕ್ಕಾಗಿ ಹಂತ ಹಂತವಾಗಿ ₹ 86 ಸಾವಿರ ಪಡೆದಿದ್ದ.'

'ಹಲವು ತಿಂಗಳಾದರೂ ಆರೋಪಿ, ವಧು ಹುಡುಕಿಲ್ಲ. ಬೇಸತ್ತ ದೂರುದಾರ, ಹಣವನ್ನು ವಾಪಸು ನೀಡುವಂತೆ ಕೋರಿದ್ದರು. ಇದಾದ ನಂತರ, ಆರೋಪಿ ಪರಾರಿಯಾಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಸಾಫ್ಟ್‌ವೇರ್ ಪೈರಸಿ: ಬಿಇ ಪದವೀಧರ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಷೇರು ಮಾರುಕಟ್ಟೆಗೆ ಸಂಬಂಧಿಸಿದ ಸಾಫ್ಟ್‌ವೇರ್ ಪೈರಸಿ ಮಾಡಿ ಮಾರುತ್ತಿದ್ದ ಆರೋಪದಡಿ ಅರವನೀತ್ ಸ್ವಾಮಿ ಅವರನ್ನು ದಕ್ಷಿಣ ವಿಭಾಗ ಸೈಬರ್ ಕ್ರೈಂ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಅರವನೀತ್, ಎಂಜಿನಿಯರಿಂಗ್ ಪದವೀಧರ. ಸಾಫ್ಟ್‌ವೇರ್ ಹ್ಯಾಕ್ ಮಾಡಿ, ಪೈರಸಿ ತಯಾರಿಸಿ ಮಾರುತ್ತಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಬನಶಂಕರಿ ಎರಡನೇ ಹಂತದಲ್ಲಿರುವ ಕಂಪನಿಯೊಂದು ಸಾಫ್ಟ್‌ವೇರ್ ಅಭಿವೃದ್ಧಿಪಡಿಸಿದೆ. ಇದರ ಖರೀದಿ ಹಾಗೂ ಬಳಕೆಗೆ ಹಣ ನಿಗದಿಪಡಿಸಲಾಗಿದೆ. ಈ ಸಂಗತಿ ತಿಳಿದಿದ್ದ ಆರೋಪಿ, ಸಾಫ್ಟ್‌ವೇರ್ ಪೈರಸಿ ಸಿದ್ಧಪಡಿಸಿಕೊಂಡಿದ್ದ. ಅದನ್ನೇ ಕಡಿಮೆ ಬೆಲೆಗೆ ಗ್ರಾಹಕರಿಗೆ ಮಾರುತ್ತಿದ್ದ' ಎಂದು ತಿಳಿಸಿವೆ.

'ಗ್ರಾಹಕರೊಬ್ಬರ ಮೂಲಕ ಪೈರಸಿ ವಿಷಯ ತಿಳಿದುಕೊಂಡಿದ್ದ ಕಂಪನಿಯ ಪ್ರತಿನಿಧಿ, ಠಾಣೆಗೆ ದೂರು ನೀಡಿದ್ದರು. ತಾಂತ್ರಿಕ ಸುಳಿವು ಆಧರಿಸಿ ಆರೋಪಿಯನ್ನು ಸೆರೆ ಹಿಡಿಯಲಾಗಿದೆ. ಆರೋಪಿ ಇದುವರೆಗೂ 80 ಮಂದಿಗೆ ಸಾಫ್ಟ್‌ವೇರ್ ಮಾರಾಟ ಮಾಡಿ ಹಣ ಪಡೆದಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದರು.

ಟಿಕೆಟ್ ಪಡೆಯದ ಯುವಕ: ಬಸ್‌ನಲ್ಲಿ ಜಟಾಪಟಿ

ಬೆಂಗಳೂರು: ಬಿಎಂಟಿಸಿ ಬಸ್‌ನಲ್ಲಿ ನಿರ್ವಾಹಕ ಹಾಗೂ ಯುವಕನ ನಡುವೆ ಜಟಾಪಟಿ ನಡೆದಿದ್ದು, ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಯಶವಂತಪುರ ನಿಲ್ದಾಣಕ್ಕೆ ಹೋಗುವ ಬಿಎಂಟಿಸಿ ಬಸ್‌ನಲ್ಲಿ ನಡೆದಿದೆ ಎನ್ನಲಾದ ಗಲಾಟೆ ವಿಡಿಯೊವನ್ನು ಪ್ರಯಾಣಿಕರೊಬ್ಬರು ಮೊಬೈಲ್‌ನಲ್ಲಿ ಚಿತ್ರೀಕರಿಸಿ ಹರಿಬಿಟ್ಟಿದ್ದಾರೆ. ಆದರೆ, ಘಟನೆ ಬಗ್ಗೆ ಸದ್ಯಕ್ಕೆ ಯಾವುದೇ ಮಾಹಿತಿ ಇಲ್ಲ' ಎಂದು ಯಶವಂತಪುರ ಠಾಣೆ ಪೊಲೀಸರು ಹೇಳಿದರು.

ಟಿಕೆಟ್ ಪಡೆಯಲು ಹಿಂದೇಟು: ಬಸ್ ಹತ್ತಿದ್ದ ಯುವಕ ಟಿಕೆಟ್ ಪಡೆಯಲು ನಿರಾಕರಿಸಿದ್ದರು. ಅದನ್ನು ಪ್ರಶ್ನಿಸಿದ್ದ ನಿರ್ವಾಹಕ, ಟಿಕೆಟ್ ಪಡೆಯುವಂತೆ ಒತ್ತಾಯಿಸಿದ್ದರು. ಅದಕ್ಕೆ ಒಪ್ಪದ ಯುವಕ, 'ಮಹಿಳೆಯರಿಗೆ ಉಚಿತ ಟಿಕೆಟ್ ಇದೆ. ನನಗೇಕೆ ಇಲ್ಲ. ನಾನೂ ಟಿಕೆಟ್ ಪಡೆಯುವುದಿಲ್ಲ' ಎಂದಿದ್ದರೆಂದು ಹೇಳಲಾಗಿದೆ.

ಇದೇ ವಿಚಾರವಾಗಿ ಯುವಕ–ನಿರ್ವಾಹಕನ ನಡುವೆ ಜಗಳ ನಡೆದಿದೆ. ಪರಿಸ್ಥಿತಿ ವಿಕೋಪಕ್ಕೆ ಹೋಗಿ, ಇಬ್ಬರೂ ಪರಸ್ಪರ ಕೈ ಕೈ ಮಿಲಾಯಿಸಿ ಹೊಡೆದಾಡಿದ್ದಾರೆ. ಸಹ ಪ್ರಯಾಣಿಕರು ಜಗಳ ಬಿಡಿಸಿ, ಇಬ್ಬರನ್ನೂ ಸಮಾಧಾನಪಡಿಸಿದ್ದಾರೆ. ಈ ದೃಶ್ಯ ವಿಡಿಯೊದಲ್ಲಿದೆ.

'ಬಸ್‌ನಲ್ಲಿ ವ್ಯಕ್ತಿಯೊಬ್ಬರು ಯಶವಂತಪುರ ಎಂದು ಕೂಗಾತ್ತಾರೆ. ಇದು ಕ್ಯಾಮೆರಾದಲ್ಲಿ ಸೆರೆಯಾಗಿದೆ. ಹೀಗಾಗಿ, ಯಶವಂತಪುರದಲ್ಲಿ ಘಟನೆ ನಡೆದಿರಬಹುದೆಂದು ಹೇಳಲಾಗುತ್ತಿದೆ. ಆದರೆ, ಇಂಥ ಘಟನೆ ಮಂಗಳವಾರ ರಾತ್ರಿಯವರೆಗೂ ಗಮನಕ್ಕೆ ಬಂದಿಲ್ಲ' ಎಂದು ಪೊಲೀಸರು ಹೇಳಿದರು.

ಬಸ್‌ಗಳಲ್ಲಿ ಕಳ್ಳತನ: ಐವರ ಬಂಧನ

ಬೆಂಗಳೂರು: ಬಸ್ ನಿಲ್ದಾಣ ಹಾಗೂ ಸಂಚರಿಸುವ ಬಸ್‌ಗಳಲ್ಲಿ ಪ್ರಯಾಣಿಕರ ವಸ್ತುಗಳನ್ನು ಕಳ್ಳತನ ಮಾಡುತ್ತಿದ್ದ ಆರೋಪದಡಿ ಒಂದೇ ಕುಟುಂಬದ ಐವರನ್ನು ಸಂಪಂಗಿರಾಮನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕದರಿ ವೇಲು, ಕನ್ಯಾಕುಮಾರ್, ಮಹೇಶ್, ಸುಂದರ್ ರಾಜ್ ಹಾಗೂ ಸಲೀಂ ಬಂಧಿತರು. ಒಂದೇ ಪ್ರದೇಶದಲ್ಲಿ ವಾಸವಿದ್ದ ಆರೋಪಿಗಳು, ಗುಂಪು ಕಟ್ಟಿಕೊಂಡು ಹಲವು ತಿಂಗಳಿನಿಂದ ಕೃತ್ಯ ಎಸಗುತ್ತಿದ್ದರು. ಇವರನ್ನು ಬಂಧಿಸಿ ₹ 70 ಸಾವಿರ ನಗದು ಹಾಗೂ 30 ಗ್ರಾಂ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರರೊಬ್ಬರು ₹1 ಲಕ್ಷ ನಗದು ಹಾಗೂ ಪತ್ನಿಯ ಚಿನ್ನದ ಮಾಂಗಲ್ಯವನ್ನು ಜೇಬಿನಲ್ಲಿ ಇಟ್ಟುಕೊಂಡು ಬಸ್‌ನಲ್ಲಿ ಹೊರಟಿದ್ದರು. ಬಸ್ ಏರಿದ್ದ ಆರೋಪಿಗಳು, ದೂರುದಾರನ ಜೇಬಿನಲ್ಲಿದ್ದ ಹಣ ಕದ್ದುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪ್ರಕರಣ ದಾಖಲಾಗಿತ್ತು.' 'ಆರೋಪಿಗಳ ಪತ್ತೆಗಾಗಿ ಸುಮಾರು 150 ಸ್ಥಳಗಳಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಲಾಗಿತ್ತು. ಸುಳಿವು ಆಧರಿಸಿ ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪೊಪ್ಪಿಕೊಂಡರು' ಎಂದರು.

ದೇವಸ್ಥಾನದ ಹುಂಡಿಗೆ ಮಾಂಗಲ್ಯ: 'ಬಸ್ ನಿಲ್ದಾಣ ಹಾಗೂ ಬಸ್‌ಗಳಲ್ಲಿ ಜನರು ಹೆಚ್ಚಿರುತ್ತಿದ್ದ ಸಂದರ್ಭದಲ್ಲಿ ಆರೋಪಿಗಳು ಕೃತ್ಯ ಎಸಗುತ್ತಿದ್ದರು. ಪ್ರಯಾಣಿಕರ ಜೇಬು ಕತ್ತರಿಸಿ ಕಳ್ಳತನ ಮಾಡುತ್ತಿದ್ದರು. ಪ್ರಯಾಣಿಕರ ಗಮನ ಬೇರೆಡೆ ಸೆಳೆದು ಅವರ ಬಳಿಯ ವಸ್ತುಗಳನ್ನು ಕದ್ದೊಯ್ಯುತ್ತಿದ್ದರು' ಎಂದು ಹೇಳಿದರು.

'ಕಲಾಸಿಪಾಳ್ಯ, ಉಪ್ಪಾರಪೇಟೆ, ಹಲಸೂರು ಗೇಟ್ ಹಾಗೂ ಇತರೆ ಠಾಣೆಗಳ ವ್ಯಾಪ್ತಿಯಲ್ಲೂ ಆರೋಪಿಗಳು ಕೃತ್ಯ ಎಸಗಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಲಾರಿ ಚಕ್ರ ಸ್ಫೋಟಿಸಿ ಸ್ಥಳದಲ್ಲೇ ಕಾರ್ಮಿಕನ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ಪುರ ಸಂಚಾರ ಠಾಣೆ ವ್ಯಾಪ್ತಿಯಲ್ಲಿ ಕಾಂಕ್ರೀಟ್ ಮಿಕ್ಸರ್ ಲಾರಿಯ ಚಕ್ರ ಸ್ಫೋಟಗೊಂಡು ಚಕ್ರದಿಂದ ಹಾರಿದ ಕಬ್ಬಿಣದ ರಿಂಗ್ ತಲೆಗೆ ಬಡಿದು ಕಾರ್ಮಿಕ ಆರೂಫ್ ಹಲ್ದಾರ್ (38) ಸ್ಥಳದಲ್ಲೇ ಮೃತಪಟ್ಟಿದ್ದಾರೆ.

'ಪಶ್ಚಿಮ ಬಂಗಾಳದ ಆರೂಫ್ ಕಟ್ಟಡ ನಿರ್ಮಾಣ ಕಾರ್ಮಿಕರಾಗಿ ಕೆಲಸ ಮಾಡುತ್ತಿದ್ದರು. ಪತ್ನಿ ಹಾಗೂ ಮಕ್ಕಳ ಜೊತೆ ನೆಲೆಸಿದ್ದರು' ಎಂದು ಕೆ.ಆರ್.ಪುರ ಸಂಚಾರ ಪೊಲೀಸರು ಹೇಳಿದರು.

'ಸ್ಫೋಟದ ನಂತರ ಲಾರಿ ಸ್ಥಳದಲ್ಲೇ ಬಿಟ್ಟು ಚಾಲಕ ಪರಾರಿಯಾಗಿದ್ದಾನೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಲಾರಿ ಜಪ್ತಿ ಮಾಡಲಾಗಿದ್ದು, ಚಾಲಕನ ಪತ್ತೆಗೆ ತನಿಖೆ ಮುಂದುವರಿಸಲಾಗಿದೆ' ಎಂದು ತಿಳಿಸಿದರು.



ಕಾಂಕ್ರಿಟ್ ಮಿಕ್ಸರ್ ಲಾರಿಯ ಚಕ್ರ ಸ್ಫೋಟಗೊಂಡಿರುವುದು

ಸ್ಥಳೀಯರಲ್ಲಿ ಆತಂಕ

'ಈ ಅವಘಡದಿಂದಾಗಿ ಸ್ಥಳೀಯರಲ್ಲಿ ಆತಂಕ ಮೂಡಿದೆ. ಸಾವು ಯಾವ ಕಡೆಯಿಂದ ಹೇಗೆ ಬರುತ್ತದೆ ಎಂದು ಗೊತ್ತಾಗುವುದಿಲ್ಲ. ಈ ಭಾಗದಲ್ಲಿ ಕಾಂಕ್ರೀಟ್ ಮಿಕ್ಸರ್ ಲಾರಿಗಳು ಹೆಚ್ಚಾಗಿ ಸಂಚರಿಸುತ್ತವೆ. ಚಾಲಕರ ನಿರ್ಲಕ್ಷ್ಯದಿಂದ ಅಪಘಾತಗಳು ಮೇಲಿಂದ ಮೇಲೆ ಸಂಭವಿಸುತ್ತಿವೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು' ಎಂದು ಸ್ಥಳೀಯರು ಆಗ್ರಹಿಸಿದರು.

ಚಹಾ ಅಂಗಡಿ ಎದುರು ಸಾವು: 'ಅಲ್ಟಿಮಾ ಕಾನ್‌ಮಿಕ್ಸ್ (ಇಂಡಿಯಾ) ಕಂಪನಿಗೆ ಸೇರಿದ್ದ ಕಾಂಕ್ರೀಟ್ ಮಿಕ್ಸರ್ ಲಾರಿ (ಕೆಎ 53 ಡಿ 0963), ದೊಡ್ಡ ಬಾಣಸವಾಡಿ ರಸ್ತೆಯಲ್ಲಿ ಮಂಗಳವಾರ ಮಧ್ಯಾಹ್ನ ಹೊರಟಿತ್ತು. ಇದೇ ರಸ್ತೆಯಲ್ಲಿರುವ 'ಶ್ರೀ ದುರ್ಗಿ ಚಹಾ ಅಂಗಡಿ' ಎದುರು ಆರೂಫ್ ಚಹಾ ಕುಡಿಯುತ್ತ ಕುಳಿತಿದ್ದರು' ಎಂದು ಪೊಲೀಸರು ಹೇಳಿದರು.

'ಚಾಲಕ, ಲಾರಿಯನ್ನು ಅತೀ ವೇಗ ಹಾಗೂ ನಿರ್ಲಕ್ಷ್ಯದಿಂದ ಚಲಾಯಿಸಿದ್ದ. ಲಾರಿಯ ಮುಂಭಾಗದ ಎಡಬದಿಯ ಚಕ್ರ ಏಕಾಏಕಿ ಸ್ಫೋಟಗೊಂಡು ದೊಡ್ಡ ಶಬ್ದ ಬಂದಿತ್ತು. ಚಕ್ರದಿಂದ ಹಾರಿಹೋಗಿದ್ದ ಕಬ್ಬಿಣದ ರಿಂಗ್, ಅಂಗಡಿ ಎದುರು ಕುಳಿತಿದ್ದ ಆರೂಫ್ ತಲೆಗೆ ಬಡಿದಿತ್ತು. ತೀವ್ರ ಪೆಟ್ಟು ಬಿದ್ದು ತಲೆ ಇಬ್ಭಾಗವಾಗಿತ್ತು. ಕುಸಿದು ಬಿದ್ದ ಆರೂಫ್, ತೀವ್ರ ರಕ್ತಸ್ರಾವದಿಂದಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಂಪನಿ ಆಡಳಿತ ಮಂಡಳಿ ಸದಸ್ಯರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ಹೇಳಿದರು.

ವಿಶ್ರಾಂತಿಗೆಂದು ಬಂದಿದ್ದ ಕಾರ್ಮಿಕ: 'ಆರೂಫ್ ಅವರು ಮಂಗಳವಾರ ಬೆಳಿಗ್ಗೆ ಎಂದಿನಂತೆ ಕಟ್ಟಡ ನಿರ್ಮಾಣ ಕೆಲಸಕ್ಕೆ ಹಾಜರಾಗಿದ್ದರು. ಮಧ್ಯಾಹ್ನ ಊಟದ ಸಮಯದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಚಹಾ ಕುಡಿಯಲೆಂದು ಅಂಗಡಿಗೆ ಬಂದಿದ್ದಾಗಲೇ ಈ ಅವಘಡ ಸಂಭವಿಸಿದೆ' ಎಂದು ತಿಳಿಸಿದರು.



ಮಣಿಪುರದಲ್ಲಿ ಶಾಂತಿ ನೆಲೆಸುವಂತೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಮಂಗಳವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

–ಪ್ರಜಾವಾಣಿ ಚಿತ್ರ

ಮಣಿಪುರ ಹಿಂಸಾಚಾರ ನಿಯಂತ್ರಿಸಲು ಸಿಪಿಐ ಆಗ್ರಹ

ಬೆಂಗಳೂರ: ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ನಿಯಂತ್ರಿಸುವಂತೆ ಆಗ್ರಹಿಸಿ ಭಾರತ ಕಮ್ಯುನಿಸ್ಟ್ ಪಕ್ಷದ (ಸಿಪಿಐ) ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಪ್ರತಿಭಟನೆ ನಡೆಸಿದರು.

ಸಿಪಿಐ ರಾಜ್ಯ ಕಾರ್ಯದರ್ಶಿ ಸಾತಿ ಸುಂದರೇಶ್, 'ಮಣಿಪುರದಲ್ಲಿ ನಡೆಯುತ್ತಿರುವ ಹಿಂಸಾಚಾರವನ್ನು ನಿಯಂತ್ರಿಸುವಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರ ಸಂಪೂರ್ಣ ವಿಫಲಗೊಂಡಿವೆ. ರಾಜಕೀಯವಾಗಿ ಪ್ರಬಲವಾಗಿರುವ ಮೈತೇಯಿ ಸಮುದಾಯ ಮತ್ತು ಬುಡಕಟ್ಟು ಕುಕಿ ಸಮುದಾಯಗಳು ಪರಸ್ಪರ ವೈರಿಗಳಂತೆ ಗಲಭೆ, ಕೊಲೆ, ಸುಲಿಗೆ, ಅತ್ಯಾಚಾರ ಹಿಂಸೆಗಳಲ್ಲಿ ತೊಡಗಿಕೊಂಡಿದ್ದು, ಕಣಿವೆ ರಾಜ್ಯದಲ್ಲಿ ಅರಾಜಕತೆ ಸೃಷ್ಟಿಯಾಗಿದೆ. ಬಿಜೆಪಿ ಮತ್ತು ಸಂಘ ಪರಿವಾರ ದಶಕಗಳ ಕಾಲ ಮಾಡಿರುವ ಕೋಮು ಪ್ರಚೋದನೆಯಿಂದಲೇ ಈ ಎರಡು ಸಮುದಾಯಗಳ ನಡುವೆ ದ್ವೇಷ ಬೆಳೆದಿದೆ' ಎಂದು ಆರೋಪಿಸಿದರು.

'ಗಲಭೆಯನ್ನು ನಿಯಂತ್ರಿಸಲು ವಿಫಲವಾಗಿರುವ ಮಣಿಪುರದ ಮುಖ್ಯಮಂತ್ರಿ ಕೂಡಲೇ ರಾಜೀನಾಮೆ ನೀಡಬೇಕು. ಜನರ ಬಳಿ ಇರುವ ಅಕ್ರಮ ಶಸ್ತ್ರಾಸ್ತ್ರ ವಶಪಡಿಸಿಕೊಳ್ಳಬೇಕು. ಅಕ್ರಮವಾಗಿ ಅರಣ್ಯದಲ್ಲಿ ಬೆಳೆಯುತ್ತಿರುವ ಗಸಗಸೆ ಕೃಷಿಯನ್ನು ನಿಯಂತ್ರಿಸಬೇಕು. ಅಕ್ರಮ ವಲಸೆ ತಡೆಯಲು ಕ್ರಮ ಕೈಗೊಳ್ಳಬೇಕು. ಮಣಿಪುರ ಹೆದ್ದಾರಿಯನ್ನು ಸಂಚಾರಕ್ಕೆ ಮುಕ್ತಗೊಳಿಸಿ, ಜನತೆಗೆ ಅಗತ್ಯ ವಸ್ತುಗಳು ಮತ್ತು ಔಷಧ ಸರಬರಾಜು ಮಾಡಬೇಕು. ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ನೀಡಬೇಕು. ಎನ್‌ಎಫ್‌ಐಡಬ್ಲ್ಯು ನಾಯಕಿಯರ ಮೇಲೆ ದಾಖಲಿಸಿರುವ ಪ್ರಕರಣಗಳನ್ನು ರದ್ದುಗೊಳಿಸಬೇಕು' ಎಂದು ಆಗ್ರಹಿಸಿದರು.

ಹಿಮಾಲಯ: 60 ಕೋಟಿ ವರ್ಷ ಹಿಂದಿನ ಸಮುದ್ರದ ನೀರು ಪತ್ತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಮಾಲಯದ ಶಿಲಾ ಪದರುಗಳಲ್ಲಿ 60 ಕೋಟಿ ವರ್ಷಗಳಷ್ಟು ಹಿಂದಿನ ಸಮುದ್ರದ ನೀರನ್ನು ಬೆಂಗಳೂರು ಮೂಲದ ವಿಜ್ಞಾನಿಗಳ ತಂಡ ಪತ್ತೆ ಹಚ್ಚಿದೆ.

ಈ ಸಂಶೋಧನೆಯು ಭೂಮಿಯ ಮೇಲೆ ಜೀವರಾಶಿಗಳ ಉಗಮದಂತಹ ಸಂಕೀರ್ಣ ವಿಷಯದ ಮೇಲೆ ಹೊಸ ಸುಳಿವುಗಳನ್ನು ನೀಡಲಿದೆ ಎಂದು ವಿಜ್ಞಾನಿಗಳು ಹೇಳಿದ್ದಾರೆ.

ಭಾರತೀಯ ವಿಜ್ಞಾನ ಸಂಸ್ಥೆ- (ಐಐಎಸ್‌ಸಿ)ಯ ಭೂವಿಜ್ಞಾನಗಳ ಕೇಂದ್ರದ ಪ್ರಾಧ್ಯಾಪಕ ಸಜೀವ್ ಕೃಷ್ಣನ್ ನೇತೃತ್ವದ ವಿಜ್ಞಾನಿಗಳ ತಂಡ ಅಧ್ಯಯನ ನಡೆಸಿದ್ದು, 'ಪ್ರಿಕ್ಯಾಂಬ್ರಿಯನ್ ರಿಸರ್ಚ್' ಎಂಬ ನಿಯತಕಾಲಿಕದಲ್ಲಿ ಈ ವರದಿ ಪ್ರಕಟವಾಗಿದೆ.

ಹಿಮಾಲಯದ ಖನಿಜಗಳಲ್ಲಿ ನೀರಿನ ಹನಿಗಳಿರುವುದನ್ನು ಕೂಡ ಸಂಶೋಧಕರು ಪತ್ತೆ ಹಚ್ಚಿದ್ದಾರೆ. ಭೂಮಿ ಮೇಲೆ ಜೀವರಾಶಿ ವಿಕಾಸಗೊಂಡಿದ್ದ ಆರಂಭಿಕ ಅವಧಿಯಲ್ಲಿ ಅಗತ್ಯದಷ್ಟು ಪ್ರಮಾಣದ ಆಮ್ಲಜನಕ ಹೇಗೆ ಉತ್ಪತ್ತಿಯಾಗಿತ್ತು ಎಂಬ ಪ್ರಶ್ನೆಗೆ ಈ ಸಂಶೋಧನೆಯಿಂದ ಪರಿಹಾರ ದೊರೆತಿದೆ ಎಂದು ಸಂಶೋಧಕರು ಹೇಳಿದ್ದಾರೆ.

'60 ಕೋಟಿ ವರ್ಷಗಳಷ್ಟು ಹಿಂದಿನ ಕಡಲ ನೀರು ಈವರೆಗೆ ಪತ್ತೆಯಾಗಿರಲಿಲ್ಲ. ನೀರಿನ ಹನಿಗಳಿದ್ದ ಖನಿಜಗಳನ್ನು ಹೊಂದಿದ್ದ ಶಿಲೆಗಳ ಯುಗವನ್ನು ಪತ್ತೆ ಮಾಡುವ ಮೂಲಕ ನೀರು ರೂಪುಗೊಂಡ ಕಾಲಾವಧಿಯನ್ನು ನಿರ್ಧರಿಸಿದ್ದೇವೆ' ಎಂದು ಸಜೀವ್ ಕೃಷ್ಣನ್ 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.

'ಹಿಮಾಲಯದ ಶಿಲಾಪದರುಗಳಲ್ಲಿ ಪತ್ತೆಯಾಗಿರುವ ನೀರಿನ ಹನಿಗಳು, ಪ್ರಸ್ತುತ ಕಡಲ ನೀರಿನೊಂದಿಗೆ ಹೋಲಿಕೆಯಾಗುತ್ತಿರುವುದನ್ನು ಕೂಡ ನಮ್ಮ ಅಧ್ಯಯನ ದೃಢಪಡಿಸಿದೆ' ಎಂದು ಹೇಳಿದ್ದಾರೆ.

'ಕೆಲ ನಿರ್ದಿಷ್ಟ ಬಗೆಯ ಸೂಕ್ಷ್ಮಾಣುಜೀವಿಗಳ ಬೆಳವಣಿಗೆಗೆ ಆಗಿನ ವಾತಾವರಣ ಪೂರಕವಾಗಿತ್ತು. ಹೆಚ್ಚಿನ ಪ್ರಮಾಣದಲ್ಲಿ ಪೌಷ್ಟಿಕಾಂಶಗಳು ಅಗತ್ಯವಿಲ್ಲದಿದ್ದರೂ ಈ ಸೂಕ್ಷ್ಮಾಣುಜೀವಿಗಳು ವಾತಾವರಣಕ್ಕೆ ಅಪಾರ ಪ್ರಮಾಣದ ಆಮ್ಲಜನಕ ಬಿಡುಗಡೆ ಮಾಡುತ್ತಿದ್ದವು ಎಂಬುದು ತಿಳಿದು ಬಂತು' ಎಂದು ತಂಡದಲ್ಲಿದ್ದ, ಐಐಎಸ್‌ಸಿಯ ಮತ್ತೊಬ್ಬ ವಿಜ್ಞಾನಿ ಪ್ರಕಾಶಚಂದ್ರ ಆರ್ಯ ತಿಳಿಸಿದ್ದಾರೆ.

ಭೂಗೋಳವಿಜ್ಞಾನದ ಈ ರಹಸ್ಯಗಳನ್ನು ಬಿಚ್ಚಿಡುವ ಸಲುವಾಗಿ ಹಿಮಾಲಯದ ಪಶ್ಚಿಮ ಭಾಗದಲ್ಲಿ ವಿಜ್ಞಾನಿಗಳ ತಂಡ ಮೂರು ತಿಂಗಳ ಕಾಲ ಕ್ಷೇತ್ರ ಅಧ್ಯಯನ ಕೈಗೊಂಡಿತ್ತು. ರಾಸಾಯನಿಕವಾಗಿ ಮೂಲರೂಪದಲ್ಲಿರುವ ಖನಿಜಗಳನ್ನು ಸಂಗ್ರಹಿಸಿದ್ದ ತಂಡ, ಪ್ರಯೋಗಾಲಯದಲ್ಲಿ ಕೂಲಂಕಷ ಅಧ್ಯಯನಕ್ಕೆ ಒಳಪಡಿಸಿತ್ತು.

ಆ. 1ರಂದು ಚಂದಿರನ ಕಕ್ಷೆಗೆ ನೌಕೆ ಬದಲಾವಣೆ ಪ್ರಕ್ರಿಯೆ

ಬೆಂಗಳೂರು (ಪಿಟಿಐ): ಭೂಕಕ್ಷೆಯಲ್ಲಿ ಪರಿಭ್ರಮಿಸುತ್ತಿರುವ 'ಚಂದ್ರಯಾನ 3'ರ ಗಗನನೌಕೆಯ ಕಕ್ಷೆ ಬದಲಿಸುವ ಐದನೇ ಹಂತದ ಪ್ರಕ್ರಿಯೆಯು ಮಂಗಳವಾರ ಯಶಸ್ವಿಯಾಗಿದೆ.

ಇಲ್ಲಿನ ಟೆಲಿಮೆಟ್ರಿ, ಟ್ರ್ಯಾಕಿಂಗ್ ಮತ್ತು ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ) ಕೇಂದ್ರದಿಂದ ಬಾಹ್ಯಾಕಾಶ ನೌಕೆಗೆ ಅಗತ್ಯ ನೂಕುಬಲ ನೀಡುವ ಐದನೇ ಹಂತದ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಿರ್ವಹಿಸಲಾಗಿದೆ. ನೌಕೆಯು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ ಎಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ತಿಳಿಸಿದೆ.

ಚಂದಿರನ ದಕ್ಷಿಣ ಧ್ರುವದತ್ತ ತಲುಪಲು ನೌಕೆಗೆ ಅಗತ್ಯವಿರುವ ನೂಕುಬಲ ನೀಡುವ ಪ್ರಕ್ರಿಯೆಗಳು ಯಾವುದೇ ಅಡೆತಡೆ ಇಲ್ಲದೆ ನಡೆಯುತ್ತಿವೆ ಎಂದು ಹೇಳಿದೆ.

ಆಗಸ್ಟ್ 1ರಂದು ಚಂದ್ರನ ಕಕ್ಷೆಗೆ ನೌಕೆಯನ್ನು ಸೇರಿಸುವ ಕಾರ್ಯ ಆರಂಭವಾಗಲಿದೆ. ಅಂದು ಮಧ್ಯರಾತ್ರಿ 12ಗಂಟೆಯಿಂದ 1ಗಂಟೆ ನಡುವೆ ಈ ಪ್ರಕ್ರಿಯೆ ನಡೆಯಲಿದೆ ಎಂದು ಮಾಹಿತಿ ನೀಡಿದೆ.

70 ಸಾವಿರಕ್ಕೂ ಹೆಚ್ಚು ಸಲಹೆ: ಯುವಕರ ಅಭಿಪ್ರಾಯ ಮುಖ್ಯ: ಡಿಸಿಎಂ ಡಿ.ಕೆ. ಶಿವಕುಮಾರ್

ಬ್ರ್ಯಾಂಡ್ ಬೆಂಗಳೂರು: ವಿದ್ಯಾರ್ಥಿಗಳ ಚರ್ಚಾ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು' ಅಭಿಯಾನದ ಅಂಗವಾಗಿ ವರ್ಬ್ಯಾಟಲ್ ಸಂಸ್ಥೆ ವತಿಯಿಂದ 17 ಶಾಲಾ ಮಕ್ಕಳಿಗೆ ಚರ್ಚಾ ಸ್ಪರ್ಧೆ ಏರ್ಪಡಿಸಲಾಗಿತ್ತು.

ಪಾದಚಾರಿ ಹಕ್ಕು, ನಮ್ಮ ಮೆಟ್ರೊ, ಸಂಸ್ಕೃತಿ, ಸಾರ್ವಜನಿಕ ಆರೋಗ್ಯ ವಿಷಯಗಳ ಬಗ್ಗೆ 300ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಭಿಪ್ರಾಯ, ವಾದ ಮಂಡಿಸಿದರು.

ಪಾದಚಾರಿ ಹಕ್ಕುಗಳ ಬಗ್ಗೆ ಪ್ರಾಮುಖ್ಯ ನೀಡಬೇಕು, ನಗರದ ಜನಸಾಮಾನ್ಯರಿಗೆ ಅತ್ಯುತ್ತಮ ಸಾರಿಗೆ ಲಭ್ಯವಾಗಬೇಕು, ಸ್ಥಳೀಯ ಸಂಸ್ಕೃತಿಯು ಇತರರಿಗಿಂತ ಆದ್ಯತೆ ಹೊಂದಿರಬೇಕು, ಮೂಲಸೌಕರ್ಯಕ್ಕಿಂತ ಸಾರ್ವಜನಿಕ ಆರೋಗ್ಯಕ್ಕೆ ಪ್ರಾಮುಖ್ಯವಿರಬೇಕು, ಅಭಿವೃದ್ಧಿಯಲ್ಲಿ ಪಾಶ್ಚಾತ್ಯ ಮಾದರಿಗಿಂತ ಭಾರತೀಯ ನೈತಿಕತೆಯತ್ತ ಒತ್ತು ನೀಡಬೇಕು, ಶಾಲೆಗಳ ಬದ್ಧತೆಯಿಂದ ಮಾತ್ರ 'ಹಸಿರು ಬೆಂಗಳೂರು' ಸಾಧ್ಯ, ಕುಡಿಯುವ ನೀರಿನ ಗುಣಮಟ್ಟವು ದಿನನಿತ್ಯ ಬಳಸುವ ನೀರಿಗಿಂತ ಹೆಚ್ಚಿರಬೇಕು, ಟೆಕ್ ಉದ್ಯಮ ಆದ್ಯತೆ ವಲಯವಾಗಬೇಕು, ದೊಡ್ಡ ನಗರವನ್ನು ನಿರ್ಮಿಸಲು ದೂರದೃಷ್ಟಿಯೊಂದಿಗೆ ರಾಜಕೀಯ ನಾಯಕತ್ವವೂ ಅಗತ್ಯ ಎಂದು ವಿದ್ಯಾರ್ಥಿಗಳು ನುಡಿದರು.

'ನಾಡಪ್ರಭು ಕೆಂಪೇಗೌಡ ಅವರು ಕಟ್ಟಿದ ಬೆಂಗಳೂರಿಗೆ ಹೊಸ ರೂಪ ನೀಡುವ ಮಹತ್ವಾಕಾಂಕ್ಷೆ ಹೊಂದಿದ್ದೇನೆ. ನಾವು ಭವಿಷ್ಯದ ಬೆಂಗಳೂರನ್ನು ಮುಂದಿನ ಪೀಳಿಗೆಗಾಗಿ ನಿರ್ಮಾಣ ಮಾಡಬೇಕು. ಇದಕ್ಕಾಗಿ, ನಮ್ಮ ದೃಷ್ಟಿಕೋನಕ್ಕಿಂತ ಮಕ್ಕಳ ದೃಷ್ಟಿಕೋನದಲ್ಲಿ ನೋಡಬೇಕು. ಅದಕ್ಕಾಗಿ ಮಕ್ಕಳ ಸಲಹೆ ಪಡೆಯುತ್ತಿದ್ದೇನೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಬೆಂಗಳೂರಿಗೆ ಹೊಸ ರೂಪ ನೀಡಲು 70 ಸಾವಿರಕ್ಕೂ ಹೆಚ್ಚಿನ ಸಲಹೆಗಳು ಬಂದಿವೆ. ಇವುಗಳ ಜತೆ ಯುವ ಪ್ರತಿಭೆಗಳ ಆಲೋಚನೆಗಳನ್ನು ಪಡೆಯಬೇಕಿದೆ. ಇಲ್ಲಿ ಓದಿದ ಪ್ರತಿಭಾವಂತರು ಹೊರದೇಶಗಳಿಗೆ ವಲಸೆ ಹೋಗುತ್ತಿದ್ದಾರೆ. ಕೆಲವರು ಮಾತ್ರ ಇಲ್ಲೇ ಉಳಿಯುತ್ತಿದ್ದಾರೆ. ಕೆಲವೊಮ್ಮೆ ರಾಜಕಾರಣಿಗಳು ಹಾಗೂ ಐಎಎಸ್ ಅಧಿಕಾರಿಗಳಿಗಿಂತ ಮಕ್ಕಳು ಅತ್ಯುತ್ತಮ ಸಲಹೆಗಳನ್ನು ನೀಡುತ್ತಾರೆ. ಹೀಗಾಗಿ ನಾನು ನಿಮ್ಮ ಸಲಹೆ ಪಡೆಯುತ್ತಿದ್ದೇನೆ' ಎಂದರು.

ಭಾರತ್ ಸ್ಕೌಟ್ಸ್ ಮತ್ತು ಗೌಡ್ಸ್ ಮುಖ್ಯ ಆಯುಕ್ತ ಪಿ.ಜಿ.ಆರ್ ಸಿಂಧ್ಯಾ, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ವರ್ಬ್ಯಾಟಲ್ ಸಂಸ್ಥೆಯ ಸಂಸ್ಥಾಪಕ ದೀಪಕ್ ತಿಮ್ಮಯ್ಯ ಇದ್ದರು.



'ಬ್ರ್ಯಾಂಡ್ ಬೆಂಗಳೂರು' ಅಭಿಯಾನದ ಅಂಗವಾಗಿ ವರ್ಬ್ಯಾಟಲ್ ಸಂಸ್ಥೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರೊಂದಿಗೆ ವಿದ್ಯಾರ್ಥಿಗಳು ಸಂವಾದ ನಡೆಸಿದರು

'ಆಕರ್ಷಕ ಬೆಂಗಳೂರು' ಸಮಿತಿ ರಚನೆ

ಬೆಂಗಳೂರು: 'ಬ್ರ್ಯಾಂಡ್ ಬೆಂಗಳೂರು' ಯೋಜನೆಯಡಿ ಜನಹಿತ ಅಥವಾ ಆಕರ್ಷಕ ಬೆಂಗಳೂರು ವಿಷಯಕ್ಕೆ ಸಂಬಂಧಿಸಿದಂತೆ ಶಿಫಾರಸುಗಳನ್ನು ನೀಡಲು ಬಿಬಿಎಂಪಿ ಹಣಕಾಸು ವಿಭಾಗದ ವಿಶೇಷ ಆಯುಕ್ತ ಜಯರಾಂ ರಾಯ್‌ಪುರ ಅವರ ನೇತೃತ್ವದಲ್ಲಿ ಸಮಿತಿ ರಚಿಸಲಾಗಿದೆ.

'ಬ್ರ್ಯಾಂಡ್ ಬೆಂಗಳೂರು'ನಲ್ಲಿ ಉತ್ತಮ ಆಡಳಿತ, ನಾಗರಿಕ ಕೇಂದ್ರಿತ ನೀತಿ ಮತ್ತು ಸೇವಾ ವಿತರಣೆ, ಭೂ-ಪ್ರಾದೇಶಿಕ ಯೋಜನೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಸಂಪನ್ಮೂಲ ಹಂಚಿಕೆಯ ದೃಷ್ಟಿಯಿಂದ ಗಮನಹರಿಸಬೇಕಾದ ಏಳು ವಿಷಯಗಳನ್ನು ಗುರುತಿಸಲಾಗಿದೆ. ಈ ಉಪಕ್ರಮದ ಭಾಗವಾಗಿ, 'ಜನಹಿತ/ ಆಕರ್ಷಕ ಬೆಂಗಳೂರು' ಸಮಿತಿ ರಚಿಸಿ, ಜಯರಾಂ ರಾಯ್‌ಪುರ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ಮಾಡಲಾಗಿದೆ. ಸೃಷ್ಟಿ ಮಣಿಪಾಲ್ ಇನ್ಸ್ಟಿಟ್ಯೂಟ್ ಆಫ್ ಆರ್ಟ್, ಡಿಸೈನ್ ಅಂಡ್ ಟೆಕ್ನಾಲಜಿ ಶೈಕ್ಷಣಿಕ ಸಂಸ್ಥೆಯನ್ನು ಪಾಲುದಾರರಾಗಿ ಮಾಡಿದೆ.

ಸಮಿತಿ: ಜಯರಾಂ ರಾಯ್‌ಪುರ– ನೋಡಲ್ ಅಧಿಕಾರಿ, ನರೇಶ್ ನರಸಿಂಹನ್– ನಗರ ಯೋಜಕ, ರಘುನಂದನ್ ರಾಮಣ್ಣ– ಸಾಮಾಜಿಕ ಸೇವೆ, ಪ್ರಶಾಂತ್ ಪ್ರಕಾಶ್– ತಂತ್ರಜ್ಞಾನ, ಕೃಷ್ಣಕುಮಾರ್– ಕಲಾ ವಿನ್ಯಾಸಕ ಮತ್ತು ಪಾರಂಪರಿಕ ತಜ್ಞ, ಕೆ.ವೈ. ನಾರಾಯಣಸ್ವಾಮಿ– ಸಾಹಿತಿ, ದೇವರಕೊಂಡ ರೆಡ್ಡಿ– ಇತಿಹಾಸಕಾರ, ಶಶಿಧರ ಭರಿಘಾಟ್– ಕಲೆ, ಬಿ. ರವಿಚಂದ್ರನ್– ಆಹ್ವಾನಿತರು.

ವಿಷಯಗಳು: ಆಕರ್ಷಕ ಬೆಂಗಳೂರು ವಿಷಯದಲ್ಲಿ ಸಮಿತಿ ಸಾರ್ವಜನಿಕ ಸ್ಥಳಗಳ ಬಳಕೆ ಬಗ್ಗೆ ಶಿಫಾರಸು ನೀಡಲಿದೆ. ಮೇಲ್ಸೇತುವೆ ಕೆಳಭಾಗದ ಸ್ಥಳ ಬಳಕೆ, ರಸ್ತೆಯ ಕೊನೆಯಭಾಗದಲ್ಲಿ ಆಸನ ಸೇರಿದಂತೆ ಜನರಿಗಾಗಿ ಸೌಲಭ್ಯಗಳು, ಗೋಡೆಗಳ ಮೇಲೆ ಸಂಸ್ಕೃತಿ, ಕಲೆ, ಪಾರಂಪರಿಕ ತಾಣಗಳ ಚಿತ್ರಣ, ಸಾಂಸ್ಕೃತಿಕ ಹಬ್ಬಗಳು, ಪಾರಂಪರಿಕ ತಾಣಗಳನ್ನು ಪ್ರದರ್ಶಿಸುವ ಆ್ಯಂಪಿ–ಥಿಯೇಟರ್‌ಗಳ ನಿರ್ಮಾಣ, ಸಾರ್ವಜನಿಕ ಚರ್ಚೆ ಮತ್ತು ಸಂವಾದಗಳಿಗೆ ತೆರೆದ ಪ್ರದೇಶಗಳ ಬಳಕೆ, ಓದುವ ಹವ್ಯಾಸವನ್ನು ವೃದ್ಧಿಸಲು ಸಾರ್ವಜನಿಕ ಸ್ಥಳಗಳಲ್ಲಿ ಓದುವ ಕೊಠಡಿಗಳ ನಿರ್ಮಾಣ, ಜನರಿಗೆ ಅನುಕೂಲಕರವಾಗಿರುವ ರಸ್ತೆಗಳ ನಿರ್ಮಾಣದ ವಿಷಯಗಳ ಬಗ್ಗೆ ಸಲಹೆ, ಶಿಫಾರಸುಗಳನ್ನು ಸಮಿತಿ ನೀಡಲಿದೆ.

ಸುದ್ದಿ 2 ನಿಮಿಷ

ಹೋಟೆಲ್ ತಿಂಡಿ–ತಿನಿಸು ಬೆಲೆ ಶೇ 10ರಷ್ಟು ಹೆಚ್ಚಿಸಲು ನಿರ್ಧಾರ

ಬೆಂಗಳೂರು: ಹೋಟೆಲ್‌ಗಳ ತಿಂಡಿ–ತಿನಿಸುಗಳ ಬೆಲೆಯನ್ನು ಶೇ 10ರಷ್ಟು ಹೆಚ್ಚಿಸಲು ಮಂಗಳವಾರ ನಡೆದ ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಸಭೆಯಲ್ಲಿ ನಿರ್ಧರಿಸಲಾಯಿತು.

'ವಿದ್ಯುತ್, ಹಾಲಿನ ದರ ಏರಿ ದಿನಬಳಕೆ ವಸ್ತುಗಳ ಬೆಲೆ ಹೆಚ್ಚಳವಾಗಿದೆ. ಹೀಗಾಗಿ, ಆ. 1ರಿಂದ ಕಾಫಿ ಮತ್ತು ಟೀ ಬೆಲೆಯಲ್ಲಿ ₹2ರಿಂದ ₹3 ಹೆಚ್ಚಳವಾಗಲಿದೆ. ತಿಂಡಿ–ತಿನಿಸುಗಳ ದರದಲ್ಲಿ ₹5 ಹಾಗೂ ಊಟಕ್ಕೆ ₹10 ಹೆಚ್ಚಳವಾಗಲಿದೆ' ಎಂದು ಸಂಘದ ಗೌರವ ಕಾರ್ಯದರ್ಶಿ ವೀರೇಂದ್ರ ಕಾಮತ್ ಮಾಹಿತಿ ನೀಡಿದರು.



ಬಸವರಾಜ ಸಾದರಗೆ 'ಹನಿಗವನ ಸಾಹಿತ್ಯ ಪ್ರಶಸ್ತಿ' ಪ್ರದಾನ

ಬೆಂಗಳೂರು: ಕರ್ನಾಟಕ ವಿಕಾಸ ರಂಗ ನಗರದಲ್ಲಿ ಮಂಗಳವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಕವಿ, ಕಥೆಗಾರ ಬಸವರಾಜ ಸಾದರ ಅವರಿಗೆ 'ಜರಗನಹಳ್ಳಿ ಶಿವಶಂಕರ್ ಹನಿಗವನ ಸಾಹಿತ್ಯ ಪ್ರಶಸ್ತಿ' ಪ್ರದಾನ ಮಾಡಲಾಯಿತು.

ಪ್ರಶಸ್ತಿಯು ₹ 5 ಸಾವಿರ ನಗದು ಒಳಗೊಂಡಿದೆ. ಚುಟುಕು ಕವಿ ಜರಗನಹಳ್ಳಿ ಶಿವಶಂಕರ್ ಸ್ಮರಣಾರ್ಥ ಈ ಪ್ರಶಸ್ತಿ ನೀಡಲಾಗುತ್ತಿದೆ.

ಪ್ರಶಸ್ತಿ ಪ್ರದಾನ ಮಾಡಿದ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ, 'ಕವಿತೆ ಮಕ್ಕಳಿಗೆ ಹೆಚ್ಚು ಪರಿಣಾಮಕಾರಿಯಾಗಿ ತಲುಪಬೇಕು. ಮಕ್ಕಳಲ್ಲಿ ಜಾತಿಭೇದಗಳ ವಿರುದ್ಧ ಹೋರಾಡುವ ಶಕ್ತಿ ತುಂಬಿ, ನಾವೆಲ್ಲ ಒಂದೇ ಎನ್ನುವ ಭಾವನೆ ಮೂಡಿಸಬೇಕು. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಚುಟುಕು ಸಾಹಿತ್ಯಕ್ಕೆ ಹೊಸ ರೂಪ ಕೊಟ್ಟವರು ಜರಗನಹಳ್ಳಿ ಶಿವಶಂಕರ್. ಅವರ ಬರಹದಲ್ಲಿ ತಾತ್ವಿಕತೆಯಿತ್ತು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಬಸವರಾಜ ಸಾದರ ಮಾತನಾಡಿ, 'ಚುಟುಕು ಸಾಹಿತ್ಯದಲ್ಲಿ ಜರಗನಹಳ್ಳಿ ಶಿವಶಂಕ ರಹಾಗೂ ಡುಂಡಿರಾಜ್ ಮೇರು ವ್ಯಕ್ತಿಗಳು. ಜರಗನಹಳ್ಳಿ ಅವರ ಹೆಸರಿನಲ್ಲಿ ನೀಡುವ ಪ್ರಶಸ್ತಿಯು ನನ್ನ 'ತೊಟ್ಟು' ಕೃತಿಗೆ ಲಭಿಸಿರುವುದು ಸಂತೋಷವನ್ನುಂಟು ಮಾಡಿದೆ' ಎಂದರು.

ಕರ್ನಾಟಕ ವಿಕಾಸರಂಗದ ಅಧ್ಯಕ್ಷ ವ.ಚ. ಚನ್ನೇಗೌಡ, 'ತಮ್ಮ ಬರಹದ ಮೂಲಕ ಹನಿಗವನಕ್ಕೆ ಹೆಚ್ಚು ಮನ್ನಣೆಯನ್ನು ತಂದುಕೊಟ್ಟವರು ಜರಗನಹಳ್ಳಿ ಶಿವಶಂಕರ್. ತಮ್ಮ ಶುಭದ ಪ್ರಕಾಶನದ ಮೂಲಕ ಸುಮಾರು 50ಕ್ಕೂ ಹೆಚ್ಚು ಯುವ ಬರಹಗಾರರ ಕವನ ಸಂಕಲನಗಳನ್ನು ಹೊರತಂದು, ಸ್ಫೂರ್ತಿ ತುಂಬಿದರು' ಎಂದು ಹೇಳಿದರು.

ವೈದ್ಯ ವಿದ್ಯಾರ್ಥಿಗಳ ತಿಂಗಳ ಗೌರವಧನ ಹೆಚ್ಚಳ ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಜಯಗಾಂಧಿ ಟ್ರಾಮಾ, ಅಸ್ಥಿ ಸಂಸ್ಥೆಯ ಆರ್ಥೋಪಿಡಿಕ್ಸ್ ಸ್ನಾತಕೋತ್ತರ ಮತ್ತು ಹಿರಿಯ ನಿವಾಸಿ ವೈದ್ಯಾಧಿಕಾರಿ ಪದವಿಯ 46 ವೈದ್ಯ ವಿದ್ಯಾರ್ಥಿಗಳಿಗೆ ಪ್ರತಿ ತಿಂಗಳ ಗೌರವ ಧನ ಹೆಚ್ಚಿಸಲು ಏಕಸದಸ್ಯ ನ್ಯಾಯಪೀಠ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ವಿಭಾಗೀಯ ನ್ಯಾಯಪೀಠ ಮಧ್ಯಂತರ ತಡೆ ನೀಡಿದೆ.



ರಾಜ್ಯ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಕೋವಿಡ್‌-19ರ ಸಂದರ್ಭದಲ್ಲಿ ವೈದ್ಯಕೀಯ ಕರ್ತವ್ಯದಲ್ಲಿ ತೊಡಗಿಸಿಕೊಳ್ಳುವುದನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ರಾಜ್ಯ ಸರ್ಕಾರಿ ಸ್ವಾಮ್ಯದ ವೈದ್ಯಕೀಯ ಕಾಲೇಜಿನಲ್ಲಿ ಎಂ.ಎಸ್ ಆರ್ಥೋ ಮತ್ತು ಹಿರಿಯ ನಿವಾಸಿ ವೈದ್ಯಾಧಿಕಾರಿಗಳಾಗಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ 2020ರ ಮೇ 16ರಿಂದ ಅನ್ವಯವಾಗುವಂತೆ ಪ್ರತಿ ತಿಂಗಳ ಗೌರವ ಧನವನ್ನು ₹ 30 ಸಾವಿರದಿಂದ ₹ 60 ಸಾವಿರದವರೆಗೆ ಹೆಚ್ಚಿಸಿ 2021ರ ಫೆಬ್ರುವರಿ 23ರಂದು ಆದೇಶಿಸಲಾಗಿತ್ತು.

ಈ ಆದೇಶವನ್ನು 2018ರಿಂದ 2020ರ ಅವಧಿಯಲ್ಲಿದ್ದ ಸಂಜಯ ಗಾಂಧಿ ಟ್ರಾಮಾ, ಮತ್ತು ಅಸ್ಥಿ ಚಿಕಿತ್ಸಾ ಕೇಂದ್ರದಲ್ಲಿ ಎಂ.ಎಸ್. ಆರ್ಥೋಪಿಡಿಕ್ಸ್ ಸ್ನಾತಕೋತ್ತರ ಮತ್ತು ಹಿರಿಯ ನಿವಾಸಿ ವೈದ್ಯಾಧಿಕಾರಿ ಪದವಿಗೆ (ಆರ್‌ಎಂಒ) ಪ್ರವೇಶ ಪಡೆದಿದ್ದ ಡಾ.ಎಚ್. ನಾಗರಾಜು ಸೇರಿದಂತೆ 46 ವೈದ್ಯ ವಿದ್ಯಾರ್ಥಿಗಳಿಗೆ ಅನ್ವಯಿಸಿರಲಿಲ್ಲ. ಇದರಿಂದಾಗಿ ಇವರೆಲ್ಲಾ, 'ನಮಗೂ ಪ್ರತಿ ತಿಂಗಳ ಗೌರವ ಧನ ಹೆಚ್ಚಿಸಬೇಕು' ಎಂದು ಕೋರಿ ಸಲ್ಲಿಸಿದ್ದ ಮನವಿಯನ್ನು ವೈದ್ಯಕೀಯ ಶಿಕ್ಷಣ ಇಲಾಖೆ 2021ರ ಏಪ್ರಿಲ್ 23ರಂದು ತಿರಸ್ಕರಿಸಿತ್ತು. ಈ ಸಂಬಂಧ ಅವರು ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು.

ಈ ಅರ್ಜಿಯನ್ನು ಪುರಸ್ಕರಿಸಿದ್ದ ಏಕಸದಸ್ಯ ನ್ಯಾಯಪೀಠ, 2020ರ ಮೇ 6ರಿಂದ ಅನ್ವಯವಾಗುವಂತೆ ಪರಿಷ್ಕೃತ ಗೌರವ ಮತ್ತು ಹಿಂಬಾಕಿ ಪಾವತಿಸುವಂತೆ ಸರ್ಕಾರಕ್ಕೆ 2022ರ ಆಗಸ್ಟ್ 22ರಂದು ಆದೇಶಿಸಿತ್ತು. ಈ ಆದೇಶ ರದ್ದು ಕೋರಿ ಸರ್ಕಾರ ಮೇಲ್ಮನವಿ ಸಲ್ಲಿಸಿದೆ.

ಯೋಧ ಸಾವು: ಗೌರವದೊಂದಿಗೆ ಅಂತ್ಯಕ್ರಿಯೆ



ಅರುಣ್

ಚಿಕ್ಕಮಗಳೂರು: ಹೃದಯಾಘಾತದಿಂದ ನಿಧನರಾದ ಸಿಆರ್‌ಪಿಎಫ್ ಯೋಧ ಅರುಣ್(42) ಅವರ ಅಂತ್ಯ ಸಂಸ್ಕಾರವನ್ನು ಅವರ ಹುಟ್ಟೂರಿನಲ್ಲಿ ಮಂಗಳವಾರ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಯಿತು.

20 ವರ್ಷಗಳ ಕಾಲ ಜಮ್ಮು ಮತ್ತು ಕಾಶ್ಮೀರದಲ್ಲಿ ಕೆಲಸ ಮಾಡಿದ್ದ ಅವರು, ಎರಡು ವರ್ಷಗಳಿಂದ ಬೆಂಗಳೂರಿನ ಯಲಹಂಕದಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ ರಾತ್ರಿ ಹೃದಯಾಘಾತದಿಂದ ನಿಧನರಾದರು. ಪತ್ನಿ ನಳಿನಾ, ಪುತ್ರ ಕಿಶೋರ್, ತಂದೆ–ತಾಯಿ ಮತ್ತು ಸೋದರರನ್ನು ಅರುಣ್ ಅಗಲಿದ್ದಾರೆ. ಮಂಗಳವಾರ ಗ್ರಾಮಕ್ಕೆ ಮೃತದೇಹ ತರಲಾಗಿತ್ತು.

ಪೂರ್ಣರಾತ್ರಿ ನಡೆದ ಯಕ್ಷಗಾನ ತಾಳಮದ್ದಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂಸ್ಕಾರ, ಸಂಸ್ಕೃತಿ ಪಸರಿಸುವ ವಿಶಿಷ್ಟ ಕಲೆ ಯಕ್ಷಗಾನ. 'ಇದು ಹೇಗೆ ಸರಿ, ಅದೇಕೆ ಸರಿಯಲ್ಲ' ಮುಂತಾಗಿ ತರ್ಕಿಸುವ ಬುದ್ಧಿ ನಮಗೆ ಶಾಲಾ ಪಠ್ಯದಿಂದ ದೊರೆತಿದ್ದಲ್ಲ, ಬದಲಾಗಿ ತರ್ಕಶಕ್ತಿ, ಪದ ಭಂಡಾರ, ಪೌರಾಣಿಕ ಜ್ಞಾನ ಇವೆಲ್ಲ ದೊರೆತಿರುವುದು ಯಕ್ಷಗಾನದಿಂದ' ಎಂದು ಅರ್ಥವಾದಿ ಜಬ್ಬಾರ್ ಸಮೊ ಸಂಪಾಜೆ ಹೇಳಿದರು.

ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ ಶನಿವಾರ ನಡೆದ ಪೂರ್ಣ ರಾತ್ರಿ ನಡೆದ ಯಕ್ಷಗಾನ ತಾಳಮದ್ದಲೆಗೆ ಮುನ್ನ, ಯಕ್ಷ ಸಂಕ್ರಾಂತಿ ವತಿಯಿಂದ 'ಗುರು ಸಂಮಾನ' ಸ್ವೀಕರಿಸಿ ಅವರು ಮಾತನಾಡಿದರು.

ಶಾಸಕ ಗುರುರಾಜ್ ಗಂಟಿಹೊಳಿ ಅವರನ್ನು ಗೌರವಿಸಲಾಯಿತು. ನಟ, ನಿರ್ದೇಶಕ ಸೇತುರಾಂ ಎಸ್.ಎನ್., ಟಿ. ಶಿವಾನಂದ ಶೆಟ್ಟಿ, ದೀಪಕ್ ಶೆಟ್ಟಿ ಬಾರ್ಕೂರು, ಡಾ.ಬಾಬು ಗೋವಿಂದ ಪೂಜಾರಿ, ರಘುರಾಮ ಶೆಟ್ಟಿ ಎಳ್ಳುಡಿ, ಪ್ರವೀಣ್ ಕುಮಾರ್ ಶೆಟ್ಟಿ, ಅಶ್ವಥ್ ಹೆಗ್ಡೆ ಇದ್ದರು. 'ಕೃಷ್ಣ ಸಂಧಾನ' ಹಾಗೂ 'ಕರ್ಣಾರ್ಜುನ' ಎಂಬ ಎರಡು ಆಖ್ಯಾನಗಳು ಯಕ್ಷಗಾನ ತಾಳಮದ್ದಲೆ ರೂಪದಲ್ಲಿ ಪ್ರದರ್ಶನ ನಡೆಯಿತು.



ನಗರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಬೈಂದೂರು ಶಾಸಕ ಗುರುಗಾರ ಗಂಟಿಹೊಳಿ ಅವರನ್ನು ಸನ್ಮಾನಿಸಲಾಯಿತು. ರಂಗಕರ್ಮಿ ಸೇತುರಾಂ ಎಸ್‌ಎನ್, ಗುರು ಸಂಮಾನ ಪಡೆದ ತಾಳಮದ್ದಲೆ ಅರ್ಥವಾದಿ ಜಬ್ಬಾರ್ ಸಮೊ ಸಂಪಾಜೆ ಇದ್ದರು.

'ಸಾಹಿತ್ಯ ಕೃತಿಗಿಂತ ವಿಮರ್ಶೆ ದೊಡ್ಡದಲ್ಲ'

ಬೆಂಗಳೂರು: ವಿಮರ್ಶೆಯು ಯಾವತ್ತಿಗೂ ಸಾಹಿತ್ಯ ಕೃತಿಗಿಂತ ದೊಡ್ಡದಾಗಲು ಸಾಧ್ಯವಿಲ್ಲ ಎಂದು ಕಥೆಗಾರ್ತಿ ದೀಪಾ ಫಡ್ಕೆ ಹೇಳಿದರು.

ದಶಮಾನೋತ್ಸವ ಸಂಭ್ರಮದಲ್ಲಿರುವ 'ಈ ಹೊತ್ತಿಗೆ' ಟ್ರಸ್ಟ್ ಕೇಂದ್ರ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಜೆ.ಪಿ. ನಗರದ ಕಪ್ಪಣ್ಣ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ 'ಸಮಕಾಲೀನ ಕನ್ನಡ ಜಗತ್ತು' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಅನೇಕ ಹೊಸ ಬರಹಗಾರರು ಉತ್ತಮ ಕಥೆಗಳನ್ನು ಬರೆಯುತ್ತಿದ್ದಾರೆ. ವಿಮರ್ಶಕರು ಕೂಡ ಹೊಸಬರನ್ನು ಮೃದು ಧೋರಣೆಯಿಂದ ನೋಡಿ ಪ್ರೋತ್ಸಾಹಿಸುತ್ತಿದ್ದಾರೆ. ಕೆಲವು ವರ್ಷಗಳ ಹಿಂದೆಲ್ಲ ಪ್ರಖರ ಬಿಗಿ ಅಂತೆಲ್ಲ ಕಟು ವಿಮರ್ಶೆ ಮಾಡುತ್ತಿದ್ದರು. ಈಗಿನ ವಿಮರ್ಶಕರು ತಪ್ಪುಗಳನ್ನು ಹೇಳುತ್ತಲೇ ಒಪ್ಪುಗಳನ್ನೂ ಹೇಳಿ ಕಥೆಗಾರರನ್ನು ಪ್ರೋತ್ಸಾಹಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ತಿಳಿಸಿದರು.

'ಅರ್ಹತೆ, ದಲಿತ ಕಥನಗಳಲ್ಲಿ ಹೊಸ ನೋಟ, ನಗರ ಕೇಂದ್ರಿತ ಕಥೆಗಳು ಜಾಗತೀಕರಣದ ನಂತರ ಕಥಾ ಸ್ವರೂಪಗಳಲ್ಲಿ ಆದ ಬದಲಾವಣೆಗಳಾಗಿವೆ' ಎಂದು ಕಥೆಗಾರ ಶ್ರೀಹರ್ಷ ಹೇಳಿದರು.

ಸಾಹಿತಿಯು ಕಣ್ಣಿಗೆ ಕಾಣುವುದನ್ನು ಕಾಣಿಸುವುದರ ಜೊತೆಗೆ ಕಣ್ಣಿಗೆ ಕಾಣದ ಆಚೆಗಿನ ದನಿಯನ್ನು ಹಿಡಿಯಬೇಕು. ಮುಖವಾಡದ ಹಿಂದಿನ ಕೇಡನ್ನು ಕಾಣಿಸಬೇಕು. ಕಂಡದ್ದನ್ನು ಅನುಭವದ ಮೂಲಕ ಸಹಜೀವಿಗಳಿಗೆ ದಾಟಿಸಬೇಕು ಎಂದು ಕಥೆಗಾರ ಪದ್ಮನಾಭ ಭಟ್ ಶೇವ್ಕಾರ ವಿಶ್ಲೇಷಿಸಿದರು.

ನಿವೃತ್ತ ಉಪನ್ಯಾಸಕಿ ಕುಸುಮಾ ಹೆಗಡೆ ಕಾರ್ಯಕ್ರಮ ಉದ್ಘಾಟಿಸಿದರು. ಕಥೆಗಾರ ಕೇಶವ ಮಳಗಿ ಅಧ್ಯಕ್ಷತೆ ವಹಿಸಿದ್ದರು.

'ಈ ಹೊತ್ತಿಗೆ'ಯ ರೂವಾರಿ ಜಯಲಕ್ಷ್ಮಿ ಪಾಟೀಲ್, ಕಥೆಗಾರ್ತಿ ಅನನ್ಯ ತುಷಿರಾ ಕಾರ್ಯಕ್ರಮ ನಡೆಸಿಕೊಟ್ಟರು.

ಹೆದ್ದಾರಿ ಪ್ರಾಧಿಕಾರದ ವಿರುದ್ಧ ಎಡಿಜಿಪಿ ಅಸಮಾಧಾನ

ತೃಪ್ತಿ ನೀಡದ ಸುರಕ್ಷಾ ಕ್ರಮ

ಪ್ರಜಾವಾಣಿ ವಾರ್ತೆ

ರಾಮನಗರ: 'ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ ಸುರಕ್ಷತೆ ಮತ್ತು ಅಪಘಾತ ತಡೆಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೊಂಡಿರುವ ಕ್ರಮಗಳು ತೃಪ್ತಿದಾಯಕವಾಗಿಲ್ಲ. ರಸ್ತೆ ಸುರಕ್ಷತೆ ನಿಟ್ಟಿನಲ್ಲಿ ಮತ್ತಷ್ಟು ಕ್ರಮಗಳನ್ನು ಕೈಗೊಳ್ಳಬೇಕು' ಎಂದು ಸಂಚಾರ ಮತ್ತು ಸುರಕ್ಷತೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ಹೇಳಿದರು.

ಎಕ್ಸ್‌ಪ್ರೆಸ್ ವೇಯ ವಿವಿಧ ಸ್ಥಳಗಳಿಗೆ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಿಂಗಳ ಹಿಂದೆ ಎಕ್ಸ್‌ಪ್ರೆಸ್ ವೇಗೆ ಭೇಟಿ ನೀಡಿದ್ದಾಗ ಸುರಕ್ಷತೆಗೆ ವಿವಿಧ ಕ್ರಮಗಳನ್ನು ಕೈಗೊಳ್ಳುವಂತೆ ಸೂಚನೆ ನೀಡಲಾಗಿತ್ತು. ಆದರೆ, ಹೇಳಿಕೊಳ್ಳುವಂತಹ ಯಾವುದೇ ಕೆಲಸವಾಗಿಲ್ಲ' ಎಂದರು.

ಎಕ್ಸ್‌ಪ್ರೆಸ್ ವೇ

ಸೂಚನಾ ಫಲಕ ಹಾಕಿಲ್ಲ: 'ಅಪಘಾತ ಸ್ಥಳ, ಪ್ರವೇಶ–ನಿರ್ಗಮನ ಜಾಗದಲ್ಲಿ ಸೂಚನಾ ಫಲಕ ಇನ್ನೂ ಹಾಕಿಲ್ಲ. ಪೊಲೀಸರು ಗುರುತಿಸಿರುವ 18 ಅಪಘಾತದ ಸ್ಥಳಗಳಲ್ಲಿ ಕೇವಲ ಒಂದು ಕಡೆ ಮಾತ್ರ ಎಎನ್‌ಪಿಆರ್ (ಆಟೋಮ್ಯಾಟಿಕ್ ನಂಬರ್ ಪ್ಲೇಟ್ ರೆಕಾರ್ಡರ್) ಕ್ಯಾಮೆರಾ ಅಳವಡಿಸಿರುವುದಾಗಿ ಹೇಳಿದ್ದಾರೆ. ಹೆದ್ದಾರಿ ಗಸ್ತು ವಾಹನ, ತುರ್ತು ವಾಹನಗಳ ವ್ಯವಸ್ಥೆಯನ್ನು ಸರಿಯಾಗಿ ಮಾಡಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಇನ್ನೂ 20 ದಿನದೊಳಗೆ ಅಳವಡಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಸಾರ್ವಜನಿಕರು ರಸ್ತೆ ದಾಟಲು ಸ್ಕೈವಾಕ್ ನಿರ್ಮಿಸಲು ಸೂಚಿಸಲಾಗಿದ್ದು, ಅದಕ್ಕೆ ಹೆಚ್ಚಿನ ಕಾಲಾವಕಾಶ ಕೋರಿದ್ದಾರೆ' ಎಂದು ತಿಳಿಸಿದರು.

ವಿವಿಧೆಡೆ ಪರಿಶೀಲನೆ: ಹೆದ್ದಾರಿ ಆರಂಭಗೊಳ್ಳುವ ಕುಂಬಳಗೋಡು ಸಮೀಪದ ವಿಶ್ವ ಒಕ್ಕಲಿಗರ ಸಂಸ್ಥಾನ ಮಠದಿಂದ ಪರಿಶೀಲನೆ ಆರಂಭಿಸಿದ ಎಡಿಜಿಪಿ, ರಾಮನಗರ ಜಿಲ್ಲೆಯ ಗಡಿ ನಿಡಘಟ್ಟದವರೆಗೆ ಸಂಚರಿಸಿದರು. ಮಾರ್ಗಮಧ್ಯೆ ಟೋಲ್ ಸಂಗ್ರಹ ಕೇಂದ್ರ ಮತ್ತು ಕೆಲ ಪ್ರವೇಶ–ನಿರ್ಗಮನ ಸ್ಥಳಗಳನ್ನು ಪರಿಶೀಲಿಸಿದರು.

ಕೇಂದ್ರ ವಲಯದ ಐಜಿಪಿ ರವಿಕಾಂತೇಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಪ್ರಾದೇಶಿಕ ಅಧಿಕಾರಿ ವಿವೇಕ್ ಜೈಸ್ವಾಲ್, ಎಕ್ಸ್‌ಪ್ರೆಸ್ ವೇ ಯೋಜನಾ ಅಧಿಕಾರಿ ರಾಹುಲ್ ಗುಪ್ತಾ ಹಾಗೂ ಕನ್ಸಲ್ಟೆಂಟ್ ರವಿಕುಮಾರ್ ಇದ್ದರು.

ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತ ಹೆಚ್ಚಳದ ಬೆನ್ನಲ್ಲೇ, ಅಲೋಕ್ ಕುಮಾರ್ ಜೂನ್‌ನಲ್ಲಿ ಹೆದ್ದಾರಿಗೆ ಭೇಟಿ ನೀಡಿದ್ದರು. ಅದಾದ ಒಂದು ತಿಂಗಳಲ್ಲೆ ಮತ್ತೊಮ್ಮೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ರಾಮನಗರ ಸಮೀಪದ ಬಿಡದಿ ಬಳಿಯ ಬೆಂಗಳೂರು ಮೈಸೂರು ಎಕ್ಸ್‌ಪ್ರೆಸ್ ವೇಗೆ ಎಡಿಜಿಪಿ ಅಲೋಕ್ ಕುಮಾರ್ ಮಂಗಳವಾರ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಐಜಿಪಿ ರವಿಕಾಂತೇಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಇದ್ದಾರೆ – ಪ್ರಜಾವಾಣಿ ಚಿತ್ರ

'ಚಾಲನಾ ಪರವಾನಗಿ ರದ್ದುಗೊಳಿಸಿ'

'ಎಕ್ಸ್‌ಪ್ರೆಸ್ ವೇನಲ್ಲಿ ಸಂಚಾರ ನಿಯಮ ಉಲ್ಲಂಘನೆ ವಿರುದ್ಧ ಪೊಲೀಸರು ಒಂದು ತಿಂಗಳು ನಡೆಸಿದ ಕಾರ್ಯಾಚರಣೆ ಹಾಗೂ ಇನ್ನಿತರ ಸುಧಾರಣಾ ಕ್ರಮಗಳಿಂದಾಗಿ ಅಪಘಾತಗಳ ಸಂಖ್ಯೆ ಕಡಿಮೆಯಾಗಿದೆ. ಸಾವಿನ ಸಂಖ್ಯೆಯೂ ಒಂದಂಕಿಗೆ ಇಳಿದಿದೆ. ಜುಲೈ ತಿಂಗಳಲ್ಲಿ 30 ಅಪಘಾತಗಳು ಸಂಭವಿಸಿದ್ದು ಮೂವರು ಮೃತಪಟ್ಟಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಾರ್ತಿಕ್ ರೆಡ್ಡಿ ಅವರು ಎಡಿಜಿಪಿ ಅಲೋಕ್ ಕುಮಾರ್ ಗಮನಕ್ಕೆ ತಂದರು.

'ಸಂಚಾರ ನಿಯಮವನ್ನು ಪದೇ ಪದೇ ಉಲ್ಲಂಘನೆ ಮಾಡಿರುವ 27 ಮಂದಿಯ ಚಾಲನಾ ಪರವಾನಗಿಯನ್ನು ರದ್ದುಪಡಿಸಲು ಸಾರಿಗೆ ಇಲಾಖೆಗೆ ಶಿಫಾರಸ್ಸು ಮಾಡಲಾಗಿದೆ' ಎಂದರು. ಆಗ ಎಡಿಜಿಪಿ, 'ಕೂಡಲೇ ರದ್ದುಮಾಡಿ' ಎಂದು ಪಕ್ಕದಲ್ಲೇ ಇದ್ದ ಆರ್‌ಟಿಒ ಅಧಿಕಾರಿ ಶಿವಕುಮಾರ್ ಅವರಿಗೆ ಸೂಚನೆ ನೀಡಿದರು.

ಆಗ ಕೇಂದ್ರ ವಲಯದ ಐಜಿಪಿ ರವಿಕಾಂತೇಗೌಡ , 'ನಾವು ಪರವಾನಗಿ ರದ್ದು ಪಡಿಸಲು ಶಿಫಾರಸ್ಸು ಮಾಡಿದರೂ, ಡಿಜಿಟಲ್ ಲಾಕರ್‌ನಲ್ಲಿ ಅದು ಇರುತ್ತದೆ. ಅಲ್ಲಿಯೂ ರದ್ದಾಗಿರುವ ಬಗ್ಗೆ ಮಾಹಿತಿ ಬರುವಂತೆ ಮಾಡಿ. ಇಲ್ಲದಿದ್ದರೆ ಅದನ್ನೇ ತೋರಿಸಿಕೊಂಡು ತಿರುಗಾಡುತ್ತಾರೆ' ಎಂದು ಸಲಹೆ ನೀಡಿದರು.

ಅಂಕಿ-ಅಂಶಗಳು

(ಜುಲೈ 24ರವರೆಗೆ)

30 ಹೆದ್ದಾರಿಯಲ್ಲಿ ಜುಲೈ ತಿಂಗಳಲ್ಲಿ ಸಂಭವಿಸಿದ ಅಪಘಾತ

3 ಅಪಘಾತದಲ್ಲಿ ಮೃತಪಟ್ಟವರು

40 ಗಾಯಾಗಳುಗಳು

ನಿರ್ಲಕ್ಷ್ಯಿಸಿದರೆ ಕ್ರಮ: ಎಡಿಜಿಪಿ

'ಎಕ್ಸ್‌ಪ್ರೆಸ್ ವೇನಲ್ಲಿ ಸುರಕ್ಷತೆ ಮತ್ತು ಸಂಚಾಯ ನಿಯಮ ತಡೆಗೆ ತಂತ್ರಜ್ಞಾನ ಆಧಾರಿತ ಶಾಶ್ವತ ಪರಿಹಾರ ಸಿಗಬೇಕು. ಇಲ್ಲಿ ಹೆದ್ದಾರಿಯವರು ಮಾಡಬೇಕಾದ ಕೆಲಸಗಳೇ ಹೆಚ್ಚಿವೆ. ನಿರ್ಲಕ್ಷ್ಯ ಮಾಡಿದರೆ, ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಎಡಿಜಿಪಿ ಅಲೋಕ್ ಕುಮಾರ್ ಎಚ್ಚರಿಕೆ ನೀಡಿದರು.

ಮೆಚ್ಚುಗೆ: 'ನಮ್ಮ ಪೊಲೀಸರು ಇರುವ ಸೌಲಭ್ಯಗಳನ್ನೇ ಬಳಸಿಕೊಂಡು ಅಪಘಾತಗಳನ್ನು ಸ್ವಲ್ಪಮಟ್ಟಿಗೆ ನಿಯಂತ್ರಿಸಿದ್ದಾರೆ. ಸಾವಿನ ಸಂಖ್ಯೆ ಒಂದಂಕಿಗೆ ಇಳಿಸಿದ್ದಾರೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಜಿಲ್ಲೆಯಲ್ಲಿ ಈ ತಿಂಗಳು 27 ಅಪಘಾತಗಳು ಸಂಭವಿಸಿವೆ. ಈ ಪೈಕಿ, ಮೂವರು ಮೃತಪಟ್ಟಿದ್ದು, 30 ಮಂದಿ ಗಾಯಗೊಂಡಿದ್ದಾರೆ. ಆರು ತಿಂಗಳಿಗೆ ಹೋಲಿಸಿದರೆ, ಇದು ಅತ್ಯಂತ ಕಡಿಮೆ' ಎಂದರು.

ಸರ್ಕಾರದಿಂದ ಗೆಜೆಟ್ ಅಧಿಸೂಚನೆ: ಆಗಸ್ಟ್ 1ರಿಂದ ನಿಷೇಧ ಜಾರಿ

ಎಕ್ಸ್‌ಪ್ರೆಸ್ ವೇ: ಬೈಕ್, ಆಟೊ, ಟ್ರ್ಯಾಕ್ಟರ್‌ಗೆ ನಿಷೇಧ

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇನಲ್ಲಿ (ರಾಷ್ಟ್ರೀಯ ಹೆದ್ದಾರಿ–275) ದ್ವಿಚಕ್ರವಾಹನ, ಆಟೊ, ಕೃಷಿ ವಾಹನಗಳು ಸೇರಿದಂತೆ ವಿವಿಧ ಬಗೆ ವಾಹನಗಳ ಸಂಚಾರಕ್ಕೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ನಿಷೇಧ ಹೇರಿದೆ.

ಮೋಟಾರು ವಾಹನ ಕಾಯ್ದೆಯ ಅನ್ವಯ ಜುಲೈ 12ರಂದು ಈ ಕುರಿತು ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ. ನಿಷೇಧ ಆದೇಶವು ಆಗಸ್ಟ್ 1ರಿಂದ ಜಾರಿಗೆ ಬರಲಿದೆ.

ಸಂಚಾರಕ್ಕೆ ಎಕ್ಸ್‌ಪ್ರೆಸ್ ವೇ ಮುಕ್ತವಾದಾಗಲೇ ಬೈಕ್, ಆಟೊ ಹಾಗೂ ಕೃಷಿಗೆ ಬಳಸುವ ವಾಹನಗಳ ಸಂಚಾರವನ್ನು ನಿಷೇಧಿಸಬೇಕು ಎಂಬ ಮಾತು ಕೇಳಿ ಬಂದಿತ್ತು. ಈ ಕುರಿತು, ಪ್ರಾಧಿಕಾರ ಪ್ರಸ್ತಾವ ಸಿದ್ದಪಡಿಸಿ ಕೇಂದ್ರ ಭೂ ಸಾರಿಗೆ ಸಚಿವಾಲಯಕ್ಕೆ ಕಳಿಸಿ ಕೊಟ್ಟಿತ್ತು. ಇದಕ್ಕೆ ಭಾರೀ ವಿರೋಧ ವ್ಯಕ್ತವಾಗಿತ್ತು. ನಂತರ ವಿಷಯ ತಣ್ಣಗಾಗಿತ್ತು.

ಎಕ್ಸ್‌ಪ್ರೆಸ್ ವೇನಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಳವಾದ ಬೆನ್ನಲ್ಲೇ, ಪ್ರಸ್ತಾವದ ಕುರಿತ ಚರ್ಚೆ ಮುನ್ನೆಲೆಗೆ ಬಂದಿತ್ತು. ಉನ್ನತ ಮಟ್ಟದ ಅಧಿಕಾರಿಗಳ ಹಂತದಲ್ಲಿ ಪರಿಶೀಲನೆ ನಡೆದು, ಕಡೆಗೂ ಪ್ರಸ್ತಾವಕ್ಕೆ ಹಸಿರು ನಿಶಾನೆ ತೋರಿಸಿ, ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದೆ.

ಇತ್ತೀಚೆಗಷ್ಟೇ ಪ್ರಾಧಿಕಾರದ ತಜ್ಞರ ಸಮಿತಿ ಎಕ್ಸ್‌ಪ್ರೆಸ್ ವೇಗೆ ಭೇಟಿ ನೀಡಿ, ಸುರಕ್ಷತೆ ಮತ್ತು ಅಪಘಾತ ತಡೆ ಕ್ರಮಗಳ ಕುರಿತು ಪರಿಶೀಲನೆ ನಡೆಸಿತ್ತು.

ಯಾವುದಕ್ಕೆಲ್ಲಾ ನಿಷೇಧ?

- ಮೋಟಾಲ್ ಸೈಕಲ್‌ಗಳು (ಸ್ಕೂಟರ್ ಹಾಗೂ ಇತರ ದ್ವಿಚಕ್ರ ವಾಹನ)
- ಮೂರು ಚಕ್ರದ ವಾಹನಗಳು (ಇ- ಗಾಡಿ, ಇ-ರಿಕ್ಷಾ)
- ಮೋಟಾರ್ ರಹಿತ ವಾಹನಗಳು
- ಟ್ರೇಲರ್ ಸಹಿತ ಅಥವಾ ರಹಿತ ಟ್ರ್ಯಾಕ್ಟರ್‌ಗಳು
- ಮಲ್ಟಿ ಆಕ್ಸೆಲ್ ಹೈಡ್ರಾಲಿಕ್ ಟ್ರೈಲರ್ ವಾಹನಗಳು
- ಕ್ವಾಡ್ರಿ ಸೈಕಲ್‌ಗಳು

ಆಗಸ್ಟ್ 1ರಿಂದ ಎಕ್ಸ್‌ಪ್ರೆಸ್ ವೇನಲ್ಲಿ ದ್ವಿಚಕ್ರ ಮತ್ತು ತ್ರಿಚಕ್ರ ವಾಹನಗಳಿಗೆ ನಿಷೇಧವಿದೆ. ಯಾವುದಾದರೂ ವಾಹನ ಬಂದರೆ ಪೊಲೀಸರು ದಂಡ ವಿಧಿಸಲಿದ್ದಾರೆ

ಅಲೋಕ್ ಕುಮಾರ್, ಎಡಿಜಿಪಿ, ಸಂಚಾರ ಮತ್ತು ರಸ್ತೆ ಸುರಕ್ಷತೆ ವಿಭಾಗ

'ಆರೋಗ್ಯವಂತ ಸಮಾಜ ನಿರ್ಮಿಸಿ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: 'ಯುವ ವೈದ್ಯರು ತಮಗೆ ಸಿಕ್ಕಿರುವ ಸದವಕಾಶಗಳನ್ನು ಯಶಸ್ವಿಯಾಗಿ ಬಳಸಿಕೊಂಡು, ಗ್ರಾಮೀಣ ಭಾಗದ ಬಡವರಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಒದಗಿಸಬೇಕು' ಎಂದು ಜಾರ್ಖಂಡ್ ರಾಜ್ಯಪಾಲ ಸಿ.ಪಿ. ರಾಧಾಕೃಷ್ಣನ್ ತಿಳಿಸಿದರು.

ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯದ 13ನೇ ಘಟಿಕೋತ್ಸವ ಉದ್ಘಾಟಿಸಿ, 436 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಿದರು.

'ವೈದ್ಯ ವೃತ್ತಿ ಅತ್ಯಂತ ಪವಿತ್ರವಾದ ವೃತ್ತಿ. ವೈದ್ಯರಾದವರು ರೋಗಿಗಳನ್ನು ಪ್ರೀತಿ, ವಿಶ್ವಾಸದಿಂದ ಕಾಣಬೇಕು. ಆಗ ಕಾಯಿಲೆಯು ಶೇ 75 ರಷ್ಟು ವಾಸಿಯಾಗುತ್ತದೆ. ಯಾವುದೇ ಕಾರಣಕ್ಕೂ ವೈದ್ಯರು ಹಣದ ಹಿಂದೆ ಹೋಗಬಾರದು. ಮಾನವೀಯತೆ, ಸಾಮಾಜಿಕ ಕಳಕಳಿ ಮೈಗೂಡಿಸಿಕೊಂಡು, ಪ್ರತಿನಿತ್ಯ ಹೊಸ ಹೊಸ ವಿಷಯಗಳ ಬಗ್ಗೆ ಅಧ್ಯಯನ, ಸಂಶೋಧನೆ ಹಾಗೂ ಪ್ರಯೋಗಗಳತ್ತ ಗಮನ ಹರಿಸಬೇಕು' ಎಂದು ಹೇಳಿದರು.

'ವೈದ್ಯರು ರೋಗಿಗಳಿಗೆ ಚಿಕಿತ್ಸೆ, ಔಷಧ ನೀಡುವ ಜೊತೆಗೆ ನೈಸರ್ಗಿಕವಾಗಿ ಸಿಗುವ, ಔಷಧ ಗುಣಗಳುಳ್ಳ ಹಣ್ಣು, ತರಕಾರಿಗಳನ್ನು ಸೇವಿಸುವಂತೆ ಸಲಹೆ ನೀಡಬೇಕು' ಎಂದು ತಿಳಿಸಿದರು.

ರಾಜರಾಜೇಶ್ವರಿ ವೈದ್ಯಕೀಯ ಮಹಾವಿದ್ಯಾಲಯದ ಸಂಸ್ಥಾಪಕ ಡಾ.ಎ.ಸಿ. ಷಣ್ಮುಗಮ್, 'ವಿದ್ಯಾರ್ಥಿಗಳು ವೈದ್ಯಕೀಯ ಪದವಿ ಪಡೆದರೆ ಸಾಲದು, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ಸೇವೆ ಸಲ್ಲಿಸುವಂತಾಗಬೇಕು' ಎಂದು ಹೇಳಿದರು. ಸಂಸ್ಥೆಯ ಅಧ್ಯಕ್ಷ ಎ.ಸಿ.ಎಸ್. ಅರುಣ್ ಕುಮಾರ್, ಟ್ರಸ್ಟಿ ಎಸ್. ಲಲಿತಾಲಕ್ಷ್ಮಿ, ಕಾರ್ಯನಿರ್ವಾಹಕ ನಿರ್ದೇಶಕ ಡಾ.ವಿಜಯಾನಂದ, ಡೀನ್ ಡಾ.ಸತ್ಯಮೂರ್ತಿ, ಪ್ರಾಂಶುಪಾಲ ಡಾ.ಎಸ್. ನವೀನ್ ಇದ್ದರು.



ಘಟಿಕೋತ್ಸವದಲ್ಲಿ ಸಿ.ಪಿ. ರಾಧಾಕೃಷ್ಣನ್ ಅವರು ವಿದ್ಯಾರ್ಥಿನಿ ಯಶಸ್ವಿನಿ ಕುಂಬಾರ್ ಅವರಿಗೆ ಬಂಗಾರದ ಪದಕ ಪ್ರದಾನ ಮಾಡಿದರು. ಡಾ.ಎ.ಸಿ. ಷಣ್ಮುಗಮ್ ಇದ್ದಾರೆ

ಸಮಸ್ಯೆ ಬಗೆಹರಿಸಲು ಬಡಾವಣೆ ನಿವಾಸಿಗಳಿಂದ ಮನವಿ

'ಕೆಂಪೇಗೌಡ ಬಡಾವಣೆಗೆ ಶೀಘ್ರ ಭೇಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡಪ್ರಭು ಕೆಂಪೇಗೌಡ ಬಡಾವಣೆಯಲ್ಲಿ ಮೂಲಸೌಕರ್ಯ ಕೊರತೆಯನ್ನು ಪರಿಶೀಲಿಸಲು ಮುಂದಿನ ವಾರ ಭೇಟಿ ನೀಡುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ನಾಡಪ್ರಭು ಕೆಂಪೇಗೌಡ ಬಡಾವಣೆ ಮುಕ್ತ ವೇದಿಕೆಯ ಪದಾಧಿಕಾರಿಗಳ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

'ನೀವು ಆಘಾತಕಾರಿ ಅಂಶಗಳನ್ನು ಹೇಳುತ್ತಿದ್ದೀರಿ. 4 ಸಾವಿರ ಎಕರೆ ಬಡಾವಣೆಯಲ್ಲಿ ಒಂದೂ ಆಟದ ಮೈದಾನ ಇಲ್ಲ ಎನ್ನುತ್ತಿದ್ದೀರಿ. ನಾನು ಮುಂದಿನ ವಾರ ಕೆಂಪೇಗೌಡ ಬಡಾವಣೆಗೆ ಭೇಟಿ ನೀಡಿ ಖುದ್ದಾಗಿ ಪರಿಶೀಲನೆ ಮಾಡುತ್ತೇನೆ' ಎಂದು ಹೇಳಿದರು.

'13 ವರ್ಷ ಕಳೆದರೂ ಬಿಡಿಎ ಬಡಾವಣೆ ಕಾಮಗಾರಿ ಪೂರ್ಣಗೊಳಿಸಿಲ್ಲ. 1,400 ಎಕರೆ ಭೂಸ್ವಾಧೀನವನ್ನು ಬಾಕಿ ಉಳಿಸಿಕೊಳ್ಳಲಾಗಿದೆ. 7 ವರ್ಷಗಳಲ್ಲಿ 26 ಸಾವಿರ ನಿವೇಶನ ಹಂಚಿಕೆ ಮಾಡಲಾಗಿದೆ. ಆದರೆ, ಕುಡಿಯುವ ನೀರು, ವಿದ್ಯುತ್ ಸಂಪರ್ಕ, ರಸ್ತೆ, ಒಳಚರಂಡಿ ವ್ಯವಸ್ಥೆ ಕಲ್ಪಿಸದಿರುವ ಕಾರಣ ನಿವೇಶನ ಖರೀದಿಸಿದವರು ಮನೆ ನಿರ್ಮಿಸಲು ಸಾಧ್ಯವಾಗುತ್ತಿಲ್ಲ. ಮೂಲ ಸೌಕರ್ಯ ಕಲ್ಪಿಸಬೇಕು' ಎಂದು ವೇದಿಕೆಯ ಪದಾಧಿಕಾರಿಗಳು ಕೋರಿದರು.

'ಕೆಂಪೇಗೌಡ ಬಡಾವಣೆ ಭೂಸ್ವಾಧೀನ ವಿಭಾಗದಲ್ಲಿ ಅಧಿಕಾರಿಗಳ ಕೊರತೆಯಿದೆ. ಸುಪ್ರೀಂ ಕೋರ್ಟ್ ನಿರ್ದೇಶನದಂತೆ ಡಾ.ಶಿವರಾಮ ಕಾರಂತ ಬಡಾವಣೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಅದೇ ಕಾರಣದಿಂದ 1,400 ಎಕರೆ ಭೂಸ್ವಾಧೀನ ಪ್ರಕ್ರಿಯೆ ಬಾಕಿಯಿದೆ' ಎಂದು ಸಚಿವರ ಗಮನ ಸೆಳೆದರು.

'2015ರಲ್ಲಿ ಅನುಮೋದನೆ ಪಡೆದಂತೆಯೇ 607.17 ಎಕರೆಯನ್ನು ಉದ್ಯಾನ ನಿರ್ಮಾಣ ಹಾಗೂ 387.52 ಎಕರೆ ಪ್ರದೇಶವನ್ನು ನಾಗರಿಕ ಸೌಲಭ್ಯಗಳ ನಿವೇಶನಕ್ಕೆ ಮೀಸಲಿಡಬೇಕು' ಎಂದು ಆಗ್ರಹಿಸಿದರು.

ಬಡಾವಣೆಯ ಮೂಲಸೌಕರ್ಯಗಳ ಮೇಲುಸ್ತುವಾರಿಗೆ ಸಮಿತಿ ಹಾಗೂ ತನಿಖಾ ಸಮಿತಿಗೆ ವೇದಿಕೆ ಸದಸ್ಯರನ್ನು ನೇಮಕ ಮಾಡುವಂತೆ ವೇದಿಕೆ ಅಧ್ಯಕ್ಷ ಎನ್.ಶ್ರೀಧರ್ ಹಾಗೂ ವಕ್ತಾರ ಸೂರ್ಯಕಿರಣ್ ಕೋರಿದರು.

ಸಿಎ ನಿವೇಶನಗಳನ್ನು ದುರುಪಯೋಗ ಮಾಡಿಕೊಳ್ಳಲಾಗಿದೆ. ಸಿಎ ನಿವೇಶನಗಳನ್ನು ಬೇರೆಯವರಿಗೆ ಹಂಚಿಕೆ ಮಾಡಿ ನಿಯಮ ಉಲ್ಲಂಘನೆ ಮಾಡಲಾಗಿದೆ. ಸಿಎ ನಿವೇಶನಕ್ಕಾಗಿ 350 ಎಕರೆ ಜಾಗ ಮೀಸಲು ಇಡಬೇಕಾಗಿತ್ತು. ಈಗ ಸ್ವಾಧೀನ ಪಡಿಸಿಕೊಂಡಿರುವ ಪ್ರದೇಶದಲ್ಲಿ ಸಿಎ ನಿವೇಶನಗಳಿಗೆ ಅಷ್ಟು ಜಾಗ ಮೀಸಲು ಇಟ್ಟಿಲ್ಲ. ಇನ್ನು ಈ ಯೋಜನೆಯಲ್ಲಿ ಬಫರ್ ಜೋನ್ ನಿಯಮ ಪಾಲನೆ ಆಗಿಲ್ಲ ಎಂದು ತಿಳಿಸಿದರು.

ಮುಖ್ಯಾಂಶಗಳು

- 13 ವರ್ಷ ಕಳೆದರೂ ಪೂರ್ಣವಾಗದ ಕಾಮಗಾರಿ
- ಮೂಲ ಸೌಕರ್ಯ ಕಲ್ಪಿಸದ ಬಿಡಿಎ
- ಸಿಎ ನಿವೇಶನಗಳ ದುರುಪಯೋಗದ ಆರೋಪ

ನಕಲಿ ನೋಟು ಪತ್ತೆ

ಬೆಂಗಳೂರು: ತಲಘಟ್ಟಪುರ ಠಾಣೆ ವ್ಯಾಪ್ತಿಯಲ್ಲಿರುವ ನೈಸ್ ರಸ್ತೆಯ ಬಳಿ ₹2,000 ಮುಖಬೆಲೆಯ ಹತ್ತು ಕೋಟಿ ಮೊತ್ತದ ಜೆರಾಕ್ಸ್ ನೋಟುಗಳು ಪತ್ತೆಯಾಗಿವೆ.

'ಕನಕಪುರ ರಸ್ತೆಗೆ ಹೊಂದಿಕೊಂಡಿರುವ ನೈಸ್ ರಸ್ತೆ ಬಳಿಯ ಪೊದೆಯಲ್ಲಿ ಸೂಟ್‌ಕೇಸ್ ಹಾಗೂ ಎರಡು ರಟ್ಟಿನ ಬಾಕ್ಸ್‌ಗಳು ಇದ್ದವು. ಅನುಮಾನಗೊಂಡ ಸ್ಥಳೀಯರು, ಎರಡನ್ನೂ ಬಿಚ್ಚಿ ನೋಡಿದ್ದರು. ಆಗ ಜೆರಾಕ್ಸ್ ನೋಟುಗಳು ಕಂಡಿವೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಸ್ಥಳೀಯರು ನೀಡಿದ್ದ ಮಾಹಿತಿ ಆಧರಿಸಿ ಸ್ಥಳಕ್ಕೆ ಹೋಗಿ ನೋಟುಗಳನ್ನು ಜಪ್ತಿ ಮಾಡಲಾಗಿದೆ. ಅಸಲಿ ನೋಟುಗಳ ಜೊತೆ ಸೇರ್ಪಡೆ ಮಾಡಿ, ಚಲಾವಣೆ ಮಾಡುವ ಜಾಲ ಸಕ್ರಿಯವಾಗಿರುವ ಅನುಮಾನವಿದೆ' ಎಂದು ತಿಳಿಸಿವೆ.

'₹2,000 ಮುಖಬೆಲೆ ನೋಟುಗಳ ಚಲಾವಣೆಯನ್ನು ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ರದ್ದುಪಡಿಸಿದೆ. ಹಳೇ ನೋಟುಗಳನ್ನು ಬ್ಯಾಂಕ್‌ಗೆ ಪಾವತಿಸಲು ಹೇಳಿದೆ. ಇದೇ ಕಾರಣಕ್ಕೆ ಆರೋಪಿಗಳು, ಜೆರಾಕ್ಸ್ ನೋಟುಗಳನ್ನು ರಸ್ತೆ ಪಕ್ಕದಲ್ಲಿ ಎಸೆದು ಹೋಗಿದ್ದಾರೆ. ಇವುಗಳನ್ನು ಎಸೆದವರು ಯಾರು? ಅವರ ಉದ್ದೇಶವೇನು ? ಖೋಟಾ ನೋಟು ಜಾಲ ಸಕ್ರಿಯವಾಗಿದೆಯಾ? ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಮೆಟ್ರೊ ದುರಂತ: ₹ 10 ಕೋಟಿ ಪರಿಹಾರ ಕೋರಿ ಅರ್ಜಿ

ಸರ್ಕಾರಕ್ಕೆ ಹೈಕೋರ್ಟ್‌ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾಗವಾರದ ಬಳಿ ನಿರ್ಮಾಣ ಹಂತದ ಮೆಟ್ರೊ ಪಿಲ್ಲರ್ ಉರುಳಿ ತೇಜಸ್ವಿನಿ ಮತ್ತು ಅವರ ಪುತ್ರ ವಿಹಾನ್ ಸಾವನ್ನಪ್ಪಿದ ಘಟನೆಗೆ ಸಂಬಂಧಿಸಿದಂತೆ ₹ 10 ಕೋಟಿ ನಷ್ಟ ಪರಿಹಾರ ನೀಡಲು ಆದೇಶಿಸಬೇಕು' ಎಂದು ಕೋರಿ ಮೃತ ತೇಜಸ್ವಿನಿ (28) ಅವರ ಪತಿ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರ ಮತ್ತು ಬೆಂಗಳೂರು ಮೆಟ್ರೊ ರೈಲು ನಿಗಮ ನಿಯಮಿತಕ್ಕೆ (ಬಿಎಂಆರ್‌ಸಿಎಲ್) ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಪತಿ ಲೋಹಿತ್ ಕುಮಾರ್ ವಿ.ಸುಲಾಖೆ ಸಲ್ಲಿಸಿರುವ



ರಿಟ್ ಅರ್ಜಿಯನ್ನು, ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಎಂ.ಎಫ್. ಹುಸೇನ್ ವಾದ ಆಲಿಸಿದ ನ್ಯಾಯಪೀಠವು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ಜಿಲ್ಲಾಧಿಕಾರಿ ಹಾಗೂ ಮೆಟ್ರೊ ಕಾಮಗಾರಿ ಗುತ್ತಿಗೆದಾರ ಕಂಪನಿಯಾದ ಮೆಸರ್ಸ್ ನಾಗಾರ್ಜುನ ಕನ್‌ಸ್ಟ್ರಕ್ಷನ್ ನ ವ್ಯವಸ್ಥಾಪಕ ನಿರ್ದೇಶಕರೂ ಸೇರಿದಂತೆ ಎಂಟು ಜನ ಪ್ರತಿವಾದಿಗಳಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆಯನ್ನು ಎರಡು ವಾರಗಳ ಕಾಲ ಮುಂದೂಡಿದೆ.

ಘಟನೆ: ಲೋಹಿತ್ ಕುಮಾರ್ ಮತ್ತು ತೇಜಸ್ವಿನಿ 2017ರಲ್ಲಿ ಮದುವೆಯಾಗಿದ್ದರು. ದಂಪತಿಗೆ ಅವಳಿ ಮಕ್ಕಳು ಜನಿಸಿದ್ದರು. ದಾವಣಗೆರೆಯ ಈ ದಂಪತಿ ಉದ್ಯೋಗ ನಿಮಿತ್ತ ಬೆಂಗಳೂರಿಗೆ ಬಂದು ನೆಲೆಸಿದ್ದರು. 2023ರ ಜನವರಿ 1ರಂದು ಬೆಳಗ್ಗೆ 10 ಗಂಟೆಯ ವೇಳೆಯಲ್ಲಿ ಹೊರಮಾವುನಲ್ಲಿರುವ ತಮ್ಮ ಮನೆಯಿಂದ ಕಚೇರಿಗೆ ಪತ್ನಿ ಮತ್ತು ಮಕ್ಕಳೊಂದಿಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದರು. ನಾಗವಾರದ ಎಚ್‌ಬಿಆರ್ ಬಡಾವಣೆಯ ವರ್ತುಲ ರಸ್ತೆಯ ಆ್ಯಕ್ಸಿಸ್ ಬ್ಯಾಂಕ್ ಮುಂದೆ ಹೋಗುತ್ತಿದ್ದಾಗ ನಿರ್ಮಾಣ ಹಂತದಲ್ಲಿದ್ದ ಮೆಟ್ರೊ ಪಿಲ್ಲರ್ ಇವರ ದ್ವಿಚಕ್ರ ವಾಹನದ ಮೇಲೆ ಬಿದ್ದಿತ್ತು. ಘಟನೆಯಲ್ಲಿ ಹಿಂಬದಿಯಲ್ಲಿ ಕುಳಿತಿದ್ದ ಪತ್ನಿ ತೇಜಸ್ವಿನಿ ಮತ್ತು ಮಗ ವಿಹಾನ್ ಗಂಭೀರವಾಗಿ ಗಾಯಗೊಂಡಿದ್ದರು. ನಂತರ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದರು.

'ಲೋಹಿತ್ ಕುಮಾರ್ ಮತ್ತು ಪುತ್ರಿ ಗಾಯಗೊಂಡಿದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಗುಣಮುಖರಾಗಿದ್ದಾರೆ' ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ.

ಪ್ರಾದೇಶಿಕ ಭಾಷೆಗಳಿಗೆ ತೊಡಕಿಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಪ್ರಾದೇಶಿಕ ಭಾಷೆಗಳಿಗೆ ತೊಡಕಾಗಿಲ್ಲ. ಎಲ್ಲ ಭಾಷೆಯ ಮಕ್ಕಳು ಹಾಗೂ ವಿಷಯಗಳ ಮಧ್ಯೆ ಸಮನ್ವಯಕ್ಕೆ ನಾಂದಿಹಾಡಿದೆ ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ನಿರ್ದೇಶಕ ಗೋವಿಂದನ್ ರಂಗರಾಜನ್ ಹೇಳಿದರು.

ಸಂಸ್ಥೆಯ ಆವರಣದಲ್ಲಿ ಮಂಗಳವಾರ ರಾಷ್ಟ್ರೀಯ ಶಿಕ್ಷಣ ನೀತಿಯ ಮೂರು ವರ್ಷಗಳ ಸಂಭ್ರಮ ಹಂಚಿಕೊಳ್ಳಲು ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಶಿಕ್ಷಣ ನೀತಿಯಿಂದಾಗಿ ವಿಜ್ಞಾನ ವಿಷಯ ಆಯ್ಕೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಕೇಂದ್ರೀಯ ವಿದ್ಯಾಲಯ, ಸಿಬಿಎಸ್‌ಇ ಶಿಕ್ಷಣ ಸಂಸ್ಥೆಗಳು, ನವೋದಯ ವಿದ್ಯಾಲಯ, ಕೌಶಲಕೇಂದ್ರಗಳು ಸೇರಿದಂತೆ ಕೇಂದ್ರದ ಅಧೀನದಲ್ಲಿರುವ ಶಿಕ್ಷಣ ಸಂಸ್ಥೆಗಳಲ್ಲಿ ಮೊದಲು ಒಂದೇ ತೆರನಾದ ಪಠ್ಯಕ್ರಮ, ಶಿಕ್ಷಣವಿದ್ದರೂ, ಸಣ್ಣಪುಟ್ಟ ವ್ಯತ್ಯಾಸಗಳಿದ್ದವು. ಎನ್‌ಇಪಿ ಜಾರಿಯಾದ ನಂತರ ಏಕರೀತಿಯ ಶಿಕ್ಷಣ ಸಾಧ್ಯವಾಗಿದೆ. ವಿದ್ಯಾರ್ಥಿಗಳಿಗೆ ವಿಷಯ ಆಯ್ಕೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿದೆ. ಇದು ಕಲಿಕೆಯಮಟ್ಟ ಹಾಗೂ ಕೌಶಲವೃದ್ಧಿಸುವಲ್ಲಿ ಸಹಕಾರಿಯಾಗಿದೆ ಎಂದರು.

ವೃತ್ತಿಪರ ಶಿಕ್ಷಣ ಸೇರಿದಂತೆ ಉನ್ನತ ಶಿಕ್ಷಣದಲ್ಲಿ ದಾಖಲಾತಿ ಅನುಪಾತದಲ್ಲೂ ಏರಿಕೆಯಾಗಿದೆ. ವಿಶ್ವದ ಇತರ ದೇಶಗಳ ಜತೆ ವಿಜ್ಞಾನ, ತಂತ್ರಜ್ಞಾನ, ಕೌಶಲಯುಕ್ತ ಕಾರ್ಯಗಳನ್ನು ಜಂಟಿಯಾಗಿ ನಿರ್ವಹಿಸಲು ಅಗತ್ಯವಾದ ಅವಕಾಶಗಳನ್ನು ಒದಗಿಸಿದೆ. ಬುನಾದಿ ಹಂತದಿಂದಲೂ ಮಕ್ಕಳ ಜ್ಞಾನದ ವಿಕಾಸಕ್ಕೆ ಪೂರಕವಾದ ಹಂತಗಳನ್ನು, ಅಗತ್ಯವಿರುವ ಪಠ್ಯಚೌಕಟ್ಟನ್ನು ಒದಗಿಸಲಾಗಿದೆ. ನೀತಿಯ ಅನುಷ್ಠಾನದ ಉತ್ತಮ ಫಲಿತಾಂಶಕ್ಕೆ ಇನ್ನಷ್ಟು ಸಮಯಬೇಕಾಗುತ್ತದೆ ಎಂದರು.

ಐಐಎಂ ನಿರ್ದೇಶಕ ರಿಷಿಕೇಶ ಕೃಷ್ಣ, ಸಂಸ್ಥೆಯಲ್ಲಿ ಪ್ರಾದೇಶಿಕ ಭಾಷೆಯನ್ನು ಕಡೆಗಣಿಸಲಿಲ್ಲ. ಅಂತಹ ವಿಷಯಗಳು ಗಮನಕ್ಕೆ ಬಂದಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪ್ರಾದೇಶಿಕ ಕೌಶಲಾಭಿವೃದ್ಧಿ ಕೇಂದ್ರದ ನಿರ್ದೇಶಕ ಬಿ.ಎನ್. ಶ್ರೀಧರ್, ಸಿಬಿಎಸ್‌ಇ ಪ್ರಾದೇಶಿಕ ಅಧಿಕಾರಿ ಪಿ.ರಮೇಶ್, ಕೇಂದ್ರೀಯ ವಿದ್ಯಾಲಯದ ಉಪ ಆಯುಕ್ತ ಧರ್ಮೇಂದ್ರ ಪಟ್ಲೆ, ಸಹಾಯಕ ಆಯುಕ್ತೆ ಕೆ.ಹೇಮಾ ಇನ್‌ಇಪಿ ಕುರಿತ ಅನಿಸಿಕೆಗಳನ್ನು ಹಂಚಿಕೊಂಡರು.

ಯುವ ಕಾಂಗ್ರೆಸ್ ಸಮಾವೇಶ ಇಂದಿನಿಂದ

ಬೆಂಗಳೂರು: ಭಾರತೀಯ ಯುವ ಕಾಂಗ್ರೆಸ್ಸಿನ (ಐವೈಸಿ) ಮೂರು ದಿನಗಳ ರಾಷ್ಟ್ರೀಯ ಸಮಾವೇಶ 'ಬೆಹ್ತರ್ ಭಾರತ್ ಕಿ ಬುನಿಯಾದ್' ಬುಧವಾರದಿಂದ ಮೂರು ದಿನಗಳವರೆಗೆ ಅರಮನೆ ಮೈದಾನದ ಗಾಯತ್ರಿ ವಿಹಾರ್ ಸಾಗರ್ ಸಭಾಂಗಣದಲ್ಲಿ ನಡೆಯಲಿದೆ. ಐವೈಸಿ ರಾಷ್ಟ್ರೀಯ ಉಸ್ತುವಾರಿ ಕೃಷ್ಣ ಅಲ್ಲಾವಾರು ಮತ್ತು ರಾಷ್ಟ್ರೀಯ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ನೇತೃತ್ವದಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬುಧವಾರ ಬೆಳಿಗ್ಗೆ 11 ಗಂಟೆಗೆ ಸಮಾವೇಶವನ್ನು ಉದ್ಘಾಟಿಸಲಿದ್ದಾರೆ.

ಖಾಸಗಿ ವೈದ್ಯಕೀಯ ಕಾಲೇಜು ಶುಲ್ಕ ಶೇ 10ರಷ್ಟು ಹೆಚ್ಚಳ

ಬೆಂಗಳೂರು: ರಾಜ್ಯದ ಖಾಸಗಿ ವೈದ್ಯಕೀಯ ಕಾಲೇಜುಗಳು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಶೇ 10ರಷ್ಟು ಶುಲ್ಕ ಏರಿಕೆ ಮಾಡಲಿವೆ.

ಶೇ 20ರಷ್ಟು ಶುಲ್ಕ ಹೆಚ್ಚಳದ ಕೋರಿಕೆಯನ್ನು ತಿರಸ್ಕರಿಸಿರುವ ವೈದ್ಯಕೀಯ ಶಿಕ್ಷಣ ಇಲಾಖೆ, ಪ್ರಸಕ್ತ ವರ್ಷದಿಂದ ಶೇ 10ರಷ್ಟು ಹೆಚ್ಚಳ ಮಾಡಲು ಸಮ್ಮತಿಸಿದೆ.

'2022-23ನೇ ಶೈಕ್ಷಣಿಕ ವರ್ಷದಲ್ಲೇ ಅಲ್ಪ ಸಂಖ್ಯಾತರ ಒಡೆತನದ ವೈದ್ಯಕೀಯ ಕಾಲೇಜುಗಳಲ್ಲಿ ಶುಲ್ಕ ಹೆಚ್ಚಳ ಮಾಡಲಾಗಿತ್ತು. ಹಾಗಾಗಿ, ಈ ವರ್ಷ ಅಲ್ಪ ಸಂಖ್ಯಾತರ ಕಾಲೇಜುಗಳನ್ನು ಹೊರತುಪಡಿಸಿ, ಉಳಿದ ಖಾಸಗಿ ಕಾಲೇಜುಗಳಿಗೆ ಅನುಮತಿ ನೀಡಲಾಗಿದೆ' ಎಂದು ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ಹೇಳಿದರು.

ಹೆಚ್ಚುತ್ತಿರುವ ದೌರ್ಜನ್ಯ ಪ್ರಕರಣ: ಆತಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದಲ್ಲಿ ತಳ ಸಮುದಾಯಗಳ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಇದು ಆಘಾತಕಾರಿ ಬೆಳವಣಿಗೆ' ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನೌಕರರ ಸಂಘವು ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಅಂಬೇಡ್ಕರ್ ಅವರ 132ನೇ ಜನ್ಮದಿನಾಚರಣೆಯಲ್ಲಿ ಸಾಧಕರಿಗೆ 'ಡಾ. ಬಿ.ಆರ್. ಅಂಬೇಡ್ಕರ್ ಹಾಗೂ ಸಾರಿಗೆ ರತ್ನ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಲಭಿಸಿ 75 ವರ್ಷಗಳು ಕಳೆದಿವೆ. ದೇಶವು ಅನೇಕ ಆವಿಷ್ಕಾರಗಳನ್ನು ಕಂಡಿದೆ. ಇಂತಹ ಸಂದರ್ಭದಲ್ಲೂ ಪರಿಶಿಷ್ಟರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ನಿಂತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.



ನಗರದಲ್ಲಿ ಮಂಗಳವಾರ ಆಯೋಜಿಸಿದ್ದ ಅಂಬೇಡ್ಕರ್ ಅವರ 132ನೇ ಜನ್ಮ ದಿನಾಚರಣೆಯಲ್ಲಿ 'ಡಾ.ಬಿ.ಆರ್.ಅಂಬೇಡ್ಕರ್' ಪ್ರಶಸ್ತಿಯನ್ನು ಮಹಿಳಾ ಕಾಂಗ್ರೆಸ್‌ನ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಜೆ.ಜಯಲಕ್ಷ್ಮಮ್ಮ (ಎಡಬದಿ) ಹಾಗೂ ಕೆಎಸ್‌ಆರ್‌ಟಿಸಿ ಮುಖ್ಯ ಸಾರ್ವಜನಿಕ ಸಂಪರ್ಕಾಧಿಕಾರಿ ಟಿ.ಎಸ್.ಲತಾ ಅವರಿಗೆ ಪ್ರದಾನ ಮಾಡಲಾಯಿತು. ಮೈಸೂರಿನ ವಿಶ್ವಮೈತ್ರಿ ಬುದ್ಧವಿಹಾರದ ಕಲ್ಯಾಣ ಸಿರಿ ಭಂತೇಜಿ, ಕಾರ್ಯಾಧ್ಯಕ್ಷ ರವಿಪ್ರಕಾಶ್, ರಾಜ್ಯ ಅಧ್ಯಕ್ಷ ಎಫ್.ಎಚ್.ಜಕ್ಕಪ್ಪನವರ, ಮಾವಳ್ಳಿ ಶಂಕರ್, ಮುಖ್ಯ ಸಂಚಾರ ವ್ಯವಸ್ಥಾಪಕ ಅಂಥೋಣಿ ಜಾರ್ಜ್, ಮುಖ್ಯ ಸಿಬ್ಬಂದಿ ವ್ಯವಸ್ಥಾಪಕ ದೇವರಾಜ್ ಇದ್ದರು. – ಪ್ರಜಾವಾಣಿ ಚಿತ್ರ

'ಕಠಿಣ ಕಾನೂನು ಇದ್ದರೂ ಮರ್ಯಾದೆಗೇಡು ಹೆಸರಿನಲ್ಲಿ ಹತ್ಯೆಗಳು ನಡೆಯುತ್ತಿವೆ. ತಳ ಸಮುದಾಯಕ್ಕೆ ಸೌಲಭ್ಯ ಕಲ್ಪಿಸಲು ಮುಂದಾದರೆ ಪ್ರತಿರೋಧಗಳು ವ್ಯಕ್ತವಾಗುತ್ತಿವೆ' ಎಂದು ಹೇಳಿದರು.

'ಇಂದು ಖಾಸಗೀಕರಣವೇ ಮದ್ದು ಎಂದು ವಾದಿಸಲಾಗುತ್ತಿದೆ. ಇದು ಭವಿಷ್ಯದಲ್ಲಿ ಅಪಾಯ ತಂದೊಡ್ಡುವ ಸಾಧ್ಯತೆಯಿದೆ' ಎಂದು ಎಚ್ಚರಿಸಿದರು.

'ಸಮಾಜದಲ್ಲಿ ಎಲ್ಲ ಧರ್ಮದ ಬಡವರು ಒಗ್ಗಟ್ಟಿನಿಂದ ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸಬೇಕು' ಎಂದು ಕರೆ ನೀಡಿದರು.

ಸ್ವಾತಂತ್ರ್ಯ ಸೇನಾನಿ ಪಿಂಚಣಿ: ಆದೇಶ ರದ್ದು

ಬೆಂಗಳೂರು: ಮೃತ ಸ್ವಾತಂತ್ರ್ಯ ಹೋರಾಟಗಾರರೊಬ್ಬರ ವೃದ್ಧ ಪತ್ನಿಗೆ ಪಿಂಚಣಿ ಮತ್ತು ಹಿಂಬಾಕಿ ಪಾವತಿಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಏಕಸದಸ್ಯ ನ್ಯಾಯಪೀಠ ಹೊರಡಿಸಿದ್ದ ತೀರ್ಪನ್ನು ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠ ರದ್ದುಪಡಿಸಿದೆ.

ಈ ಸಂಬಂಧ ರಾಜ್ಯ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಆರ್.ದೇವದಾಸ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕೇಂದ್ರ ಸರ್ಕಾರಿ ಸನ್ಮಾನ್ ಪಿಂಚಣಿ ಯೋಜನೆಯ ವಿತರಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು 2014ರಲ್ಲಿ ಮಾರ್ಗಸೂಚಿ ಪ್ರಕಟಿಸಿದೆ. ಅದನ್ನು ರಾಜ್ಯ ಸರ್ಕಾರವೂ ಪಾಲಿಸುತ್ತಿದೆ. ಆ ಮಾರ್ಗಸೂಚಿ ಪ್ರಕಾರ ಸ್ವಾತಂತ್ರ್ಯ ಹೋರಾಟಗಾರ ಅಥವಾ ಹೋರಾಟಗಾರ್ತಿ ಸಾವನ್ನಪ್ಪಿದ ನಂತರ ಅವರ ಹೆಸರಿನಲ್ಲಿ ಪಿಂಚಣಿ ವಿತರಿಸುವಂತಿಲ್ಲ. ಜತೆಗೆ, ಹೋರಾಟಗಾರರ ವಿಷಯವು ಪರಿಶೀಲನೆಯಲ್ಲಿದ್ದರೂ ಪಿಂಚಣಿ ಪಾವತಿಸುವಂತಿಲ್ಲ. ಅದರಂತೆ ರಾಜ್ಯ ಸರ್ಕಾರವು ಪ್ರಕರಣದಲ್ಲಿ ಮೃತ ಸ್ವಾತಂತ್ರ್ಯ ಹೋರಾಟಗಾರರ ವೃದ್ಧ ಪತ್ನಿಯಾದ ಬೆಳಗಾವಿಯ ನಿವಾಸಿ ಸಾವಂತ್ರವ್ವ (89) ಅವರಿಗೆ ಪಿಂಚಣಿ ನಿರಾಕರಿಸಿ ರಾಜ್ಯ ಸರ್ಕಾರ ಹೊರಡಿಸಿದ ಆದೇಶ ಸೂಕ್ತವಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.

ಎರಡು ಪೂರಕ ಪರೀಕ್ಷೆ; ಚರ್ಚಾ ಹಂತದಲ್ಲೇ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯುಸಿಗಳಲ್ಲಿ ಅನುತ್ತೀರ್ಣರಾಗುವ ವಿದ್ಯಾರ್ಥಿಗಳ ಹಿತಕ್ಕಾಗಿ ವರ್ಷದಲ್ಲಿ ಎರಡು ಬಾರಿ ಪೂರಕ ಪರೀಕ್ಷೆ ನಡೆಸುವ ಕುರಿತು ಶಾಲಾ ಶಿಕ್ಷಣ ಇಲಾಖೆಯಲ್ಲಿ ಚರ್ಚೆಗಳು ನಡೆದಿರುವಾಗಲೇ ಶಿಕ್ಷಕರು, ಉಪನ್ಯಾಸಕರಿಂದ ಆಕ್ಷೇಪ ವ್ಯಕ್ತವಾಗಿದೆ.

ಪ್ರಸಕ್ತ ವರ್ಷದಿಂದ ಎಲ್ಲ ವಿಷಯ ಗಳಿಗೂ ಆಂತರಿಕ ಅಂಕಗಳನ್ನು ನಿಗದಿ ಮಾಡಲಾಗಿದೆ. ಪಾಠಗಳ ಮಧ್ಯೆ ಕಿರುಪರೀಕ್ಷೆಗಳನ್ನು ನಡೆಸಬೇಕು. ವಾರ್ಷಿಕ ಪರೀಕ್ಷೆ, ಮೌಲ್ಯಮಾಪನ ಕಾರ್ಯಕ್ಕೆ ಹಾಜರಾಗಬೇಕಿದೆ. ಮತ್ತೆ ಕಿರು ಪರೀಕ್ಷೆ ಹಾಗೂ ಅದರ ಮೌಲ್ಯ ಮಾಪನ ಮಾಡಬೇಕಿದೆ. ಅಷ್ಟರಲ್ಲಿ ಶೈಕ್ಷಣಿಕ ವರ್ಷ ಆರಂಭವಾಗಿ ಎರಡು ತಿಂಗಳು ಕಳೆಯುತ್ತದೆ. ಇನ್ನೊಂದು ಪೂರಕ ಪರೀಕ್ಷೆ ನಡೆಸಿದರೆ ಮಕ್ಕಳಿಗೆ ಪಾಠ ಮಾಡುವುದು ಯಾವಾಗ ಎಂದು ಹಲವರು ಪ್ರಶ್ನಿಸಿದ್ದಾರೆ.

ಈ ಕುರಿತು ಪಿಯು ಉಪನ್ಯಾಸಕರ ಪರ ಧ್ವನಿ ಎತ್ತಿರುವ ಕರ್ನಾಟಕ ರಾಜ್ಯ ಪಿಯು ಉಪನ್ಯಾಸಕರ ಸಂಘ, ಇಲಾಖೆ ಇಂತಹ ನಿರ್ಧಾರ ತೆಗೆದುಕೊಂಡಿದ್ದರೆ ತಕ್ಷಣ ಮರು ಪರಿಶೀಲಿಸುವಂತೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಪತ್ರ ಬರೆದಿದೆ.

ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ 4,073 ಹಾಗೂ ಖಾಸಗಿ ಕಾಲೇಜುಗಳಲ್ಲಿ 2,500 ಉಪನ್ಯಾಸಕರ ಕೊರತೆ ಇದೆ. ಸಿಬಿಎಸ್‌ಇ, ಐಸಿಎಸ್‌ಗಳಲ್ಲಿ ಇರುವಂತೆ ವಿದ್ಯಾರ್ಥಿ ಶಿಕ್ಷಕರ ಅನುಪಾತವನ್ನು 40:1ರಷ್ಟು ನಿಗದಿ ಮಾಡಿಲ್ಲ. ಒತ್ತಡದ ಮಧ್ಯೆ ಕೆಲಸ ಮಾಡುತ್ತಿದ್ದಾರೆ. ಈ ಎಲ್ಲ ಒತ್ತಡಗಳ ಮಧ್ಯೆ ಮತ್ತೊಂದು ಪೂರಕ ಪರೀಕ್ಷೆ ಕಾರ್ಯಸಾಧುವಲ್ಲ ಎಂದು ಸಂಘದ ಅಧ್ಯಕ್ಷ ಎ.ಎಚ್.ನಿಂಗೇಗೌಡ, ಕಾರ್ಯಾಧ್ಯಕ್ಷ ಎಸ್.ಆರ್.ವೆಂಕಟೇಶ್, ಪ್ರಧಾನ ಕಾರ್ಯದರ್ಶಿ ಶಿವರಾವ್ ಬಿ.ಮಾಲಿಪಾಟೀಲ, ಖಜಾಂಚಿ ಎಂ.ಜಯಣ್ಣ ಮನವಿ ಮಾಡಿದ್ದಾರೆ.

ಸಾಲ ವಸೂಲಾತಿಗೆ ಗುರಿ ನಿಗದಿ

ಬೆಂಗಳೂರು: ರಾಜ್ಯ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಲ್ಲಿ ಬಾಕಿ ಇರುವ ಸಾಲದ ಪೈಕಿ ಶೇಕಡ 80 ರಷ್ಟನ್ನು ಆರ್ಥಿಕ ವರ್ಷಾಂತ್ಯದೊಳಗೆ ವಸೂಲಿ ಮಾಡಬೇಕು ಎಂದು ಅಲ್ಪಸಂಖ್ಯಾತರ ಅಭಿವೃದ್ಧಿ ಸಚಿವ ಬಿ.ಜೆಡ್.ಜಮೀರ್ ಅಹಮದ್ ಖಾನ್ ಗುರಿ ನಿಗದಿಪಡಿಸಿದ್ದಾರೆ.

ನಿಗಮದ ಕೇಂದ್ರ ಕಚೇರಿಯಲ್ಲಿ ಜಿಲ್ಲಾ ವ್ಯವಸ್ಥಾಪಕರು ಮತ್ತು ಸಾಲ ವಸೂಲಿ ಅಧಿಕಾರಿಗಳ ಜತೆ ಮಂಗಳವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದರು. ಶಿಕ್ಷಣ, ಸ್ವಯಂ ಉದ್ಯೋಗ ಸೇರಿದಂತೆ ವಿವಿಧ ಯೋಜನೆಗಳಡಿ ನೀಡಿರುವ ₹ 892 ಕೋಟಿ ಸಾಲ ವಸೂಲಾತಿಗೆ ಬಾಕಿ ಇದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

'ಸಾಲ ವಸೂಲಿಯ ಪ್ರಮಾಣ ಶೇಕಡ ಒಂದರಿಂದ ಶೇ 10ರವರೆಗೆ ಮಾತ್ರ ಇದೆ. ಈ ಪ್ರಗತಿಗೆ ಅಧಿಕಾರಿಗಳು, ಸಿಬ್ಬಂದಿ ಏಕೆ ಬೇಕು? ಮುಂದಿನ ಮಾರ್ಚ್ ಅಂತ್ಯದವರೆಗೆ ವಸೂಲಾತಿ ಅಧಿಕಾರಿಗಳನ್ನು ವರ್ಗಾವಣೆ ಮಾಡಬಾರದು' ಎಂದು ಅಲ್ಪಸಂಖ್ಯಾತರ ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಮನೋಜ್ ಜೈನ್ ಅವರಿಗೆ ಸೂಚಿಸಿದರು. ನಿಗಮದ ವ್ಯವಸ್ಥಾಪಕ ನಿರ್ದೇಶಕ ಮೊಹಮ್ಮದ್ ನಝೀರ್ ಸಭೆಯಲ್ಲಿದ್ದರು.

ಸಿಐಸಿ ಆದೇಶ ಆಧಾರವಾಗದು -ಕೇಂದ್ರ

ಆರ್‌ಟಿಐ ವ್ಯಾಪ್ತಿಗೆ ರಾಜಕೀಯ ಪಕ್ಷಗಳು

ಪ್ರಜಾವಾಣಿ ವಾರ್ತೆ

ನವದೆಹಲಿ: 'ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ವ್ಯಾಪ್ತಿಗೆ ಮಾನ್ಯತೆ ಪಡೆದ ರಾಜಕೀಯ ಪಕ್ಷಗಳನ್ನು ತರುವಂತೆ ನಿರ್ದೇಶನ ಕೋರಲು ಮಾಹಿತಿ ಹಕ್ಕು ಆಯೋಗದ ಆದೇಶ ಆಧಾರವಾಗಲಾರದು' ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದಿವಾಲ, ಮನೋಜ್ ಮಿಶ್ರಾ ಅವರಿದ್ದ ನ್ಯಾಯಪೀಠಕ್ಕೆ ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಈ ಬಗ್ಗೆ ಪ್ರಮಾಣಪತ್ರ ಸಲ್ಲಿಸಿದರು.

'ನಿರ್ದಿಷ್ಟ ಅಭ್ಯರ್ಥಿಯ ಆಯ್ಕೆ ಸೇರಿದಂತೆ ಆಂತರಿಕ ವಿಷಯಗಳನ್ನೂ ಆರ್‌ಟಿಐ ಅಡಿ ಕೋರಬಹುದು ಎಂಬ ರಾಜಕೀಯ ಪಕ್ಷಗಳ ವಾದದಲ್ಲಿ ತರ್ಕವಿದೆ' ಎಂದು ಸುಪ್ರೀಂ ಕೋರ್ಟ್‌ನ ಪೀಠವು ಇದೇ ವೇಳೆ ಮೌಖಿಕವಾಗಿ ಅಭಿಪ್ರಾಯಪಟ್ಟಿತು.

ರಾಷ್ಟ್ರೀಯ, ಪ್ರಾದೇಶಿಕ ಪಕ್ಷಗಳನ್ನು 'ಸಾರ್ವಜನಿಕ ಸಂಸ್ಥೆ'ಗಳೆಂದು ಘೋಷಿಸಿ ಆರ್‌ಟಿಐ ಕಾಯ್ದೆಯಡಿ ತರಬೇಕು ಎಂದು ಕೋರಿದ್ದ ಅರ್ಜಿಗಳ ವಿಚಾರಣೆಯನ್ನು ಪೀಠ ಕೈಗೊಂಡಿತು. ಬಿಜೆಪಿ, ಕಾಂಗ್ರೆಸ್ ಸೇರಿ ಹಲವು ಪಕ್ಷಗಳನ್ನು ಪ್ರತಿವಾದಿಗಳಾಗಿ ಹೆಸರಿಸಲಾಗಿದೆ.

ಅಸೋಸಿಯೇಷನ್ ಫಾರ್ ಡೆಮಾಕ್ರಾಟಿಕ್ ರಿಫಾರ್ಮ್ಸ್ ಸಂಸ್ಥೆಯನ್ನು ಪ್ರತಿನಿಧಿಸಿದ್ದ ವಕೀಲ ಪ್ರಶಾಂತ್ ಭೂಷಣ್ ಅವರು, ಮಾಹಿತಿ ಹಕ್ಕು ಆಯೋಗವು (ಸಿಐಸಿ) 2013ರಲ್ಲಿ ಆದೇಶ ನೀಡಿದ್ದು, ಸರ್ಕಾರದಿಂದ ತೆರಿಗೆ ವಿನಾಯಿತಿ ಮತ್ತು ಭೂಮಿಯನ್ನು ಪಡೆಯುವ ರಾಜಕೀಯ ಪಕ್ಷಗಳನ್ನು ಆರ್‌ಟಿಐ ವ್ಯಾಪ್ತಿಗೆ ತರಬೇಕು ಎಂದು ತಿಳಿಸಿದೆ ಎಂಬ ಅಂಶವನ್ನು ಉಲ್ಲೇಖಿಸಿದರು.

ಸಿಪಿಎಂ ಪರ ವಕೀಲ ಪಿ.ವಿ. ದಿನೇಶ್, 'ನಮ್ಮ ಕಕ್ಷಿದಾರರಿಗೆ ಆರ್ಥಿಕ ಪಾರದರ್ಶಕತೆ ಮುಖ್ಯ. ಆರ್‌ಟಿಐ ಅಡಿ ತರಲು ತಕರಾರಿಲ್ಲ. ಆದರೆ, ಇದೇ ಅಭ್ಯರ್ಥಿ ಏಕೆ ಆಯ್ಕೆ ಮಾಡಲಾಯಿತು ಎಂಬುದು ಸೇರಿದಂತೆ ಆಂತರಿಕ ವಿಷಯಗಳನ್ನು ಕೇಳಬಾರದು' ಎಂದರು.

'ಮುಖ್ಯವಾಗಿ ರಾಜಕೀಯ ಪಕ್ಷಗಳು ಹೇಗೆ ಕಾರ್ಯನಿರ್ವಹಿಸುತ್ತವೆ ಎಂದು ತಿಳಿಯುವ ಉದ್ದೇಶ ಇರುತ್ತದೆ' ಎಂದು ತುಷಾರ್ ಮೆಹ್ತಾ ಇದಕ್ಕೆ ದನಿಗೂಡಿಸಿದರು.

'ನಿಮ್ಮ ವಾದದಲ್ಲಿ ತರ್ಕವಿದೆ. ಹೇಗೆ ಅಭ್ಯರ್ಥಿ ಆಯ್ಕೆ ಮಾಡುತ್ತೀರಿ ಎಂದು ಕೇಳಲಾಗದು' ಎಂದು ಪೀಠ ಅಭಿಪ್ರಾಯಪಟ್ಟಿತು. ಬಳಿಕ ಪೀಠವು ಅರ್ಜಿಗಳ ಮುಂದಿನ ವಿಚಾರಣೆಯನ್ನು ಆಗಸ್ಟ್ 1ಕ್ಕೆ ನಿಗದಿಪಡಿಸಿತು.

ರಾಜ್ಯ ಸರ್ಕಾರಕ್ಕೆ ಡಾ. ಎಂ. ಮೋಹನ ಆಳ್ವ ನೇತೃತ್ವದ ಸಮಿತಿ ಶಿಫಾರಸು

2ನೇ ಅಧಿಕೃತ ಭಾಷೆಗೆ ತುಳು ಅರ್ಹ

• ರಾಜೇಶ್ ರೈ ಚಟ್ಲ

ಬೆಂಗಳೂರು: 'ತಮಿಳು- ಕನ್ನಡ ಭಾಷೆಗಳಷ್ಟೇ ಪ್ರಾಚೀನವಾದ, ಭಾಷಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಬೆಳವಣಿಗೆ ಹೊಂದಿರುವ ತುಳು ಭಾಷೆ ರಾಜ್ಯದ ಎರಡನೇ ಅಧಿಕೃತ ಭಾಷೆ ಎಂದು ಘೋಷಿಸಲು ಅರ್ಹವಾಗಿದೆ' ಎಂದು ಖಚಿತ ಆಧಾರಗಳ ಸಹಿತ ಡಾ.ಎಂ. ಮೋಹನ ಆಳ್ವ ಅಧ್ಯಕ್ಷತೆಯ ಸಮಿತಿ ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ತುಳು ಭಾಷೆಯನ್ನು ರಾಜ್ಯದಲ್ಲಿ ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಿಸುವ ಕುರಿತು ಅಧ್ಯಯನ ನಡೆಸಿ ವರದಿ ಸಲ್ಲಿಸಲು ಬಸವರಾಜ ಬೊಮ್ಮಾಯಿ ನೇತೃತ್ವದ ಈ ಹಿಂದಿನ ಬಿಜೆಪಿ ಸರ್ಕಾರವು ಮೋಹನ ಆಳ್ವ ನೇತೃತ್ವದಲ್ಲಿ ಸಮಿತಿ ರಚಿಸಿತ್ತು. ಸಮಿತಿ ಸಲ್ಲಿಸಿರುವ ಅಧ್ಯಯನ ವರದಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ದ್ರಾವಿಡ ಭಾಷಾ ವರ್ಗದ, ಪ್ರಾಚೀನ, ಸ್ವತಂತ್ರವೂ ಆದ ತುಳು ಭಾಷೆಗೆ ರಾಜ್ಯದ ಹೆಚ್ಚುವರಿ ಅಧಿಕೃತ ಭಾಷೆಯ ಸ್ಥಾನಮಾನ ದೊರೆತರೆ, ಯುನೆಸ್ಕೋ ವರದಿಯಲ್ಲಿ ನಶಿಸಿ ಹೋಗುತ್ತಿರುವ ಭಾಷಾ ಪಟ್ಟಿ-ಯಲ್ಲಿರುವ ಈ ಭಾಷೆ ಉಳಿಸಿ, ಬೆಳೆಸಿದ ಮತ್ತು ತುಳುವರಿಗೆ ನೈತಿಕ ಧೈರ್ಯ ತುಂಬಿದ ಶ್ರೇಯ ಸರ್ಕಾರದ್ದಾಗುತ್ತದೆ. ತುಳುವಿಗೆ ಸಂಬಂಧಿಸಿದಂತೆ ಅಕ್ಷರಾಭ್ಯಾಸ ಇಲ್ಲದ ತುಳುವರಿಗೆ ಮತ್ತು ದೇಶ ವಿದೇಶಗಳಿಂದ ಬರುವ ತುಳುವರಿಗೆ ಬ್ಯಾಂಕಿಂಗ್ ವ್ಯವಹಾರ, ನ್ಯಾಯಾಂಗ ವ್ಯವಸ್ಥೆ, ವಿವಿಧ ಇಲಾಖೆಗಳೊಂದಿಗೆ ಸಂವಹನ ಸುಲಭವಾಗುತ್ತದೆ. ಇದರಿಂದ ಆಡಳಿತ, ವ್ಯವಹಾರಗಳು ಹೆಚ್ಚು ಜನಸ್ನೇಹಿಯಾಗುತ್ತದೆ' ಎಂದು ವರದಿಯಲ್ಲಿ ಪ್ರತಿ-ಪಾದಿಸಲಾಗಿದೆ.

ತುಳು ಭಾಷೆಯ ಪ್ರಾಚೀನ- ಆಧುನಿಕ ಸಾಹಿತ್ಯ, ಮೌಖಿಕ ಪರಂಪರೆ, ಹಸ್ತಪ್ರತಿಗಳು, ಇವುಗಳ ಕುರಿತು ನಡೆದಿರುವ ಸಂಶೋಧನೆ, ರಂಗಭೂಮಿ, ಯಕ್ಷಗಾನ, ಸಿನಿಮಾ ಕ್ಷೇತ್ರಗಳಲ್ಲಿ ಆಗಿರುವ ಸಾಧನೆಗಳು, ಭಾಷಾ ಬೆಳವಣಿಗೆಗೆ ದುಡಿದಿರುವ ರಾಜ್ಯ, ದೇಶ, ವಿದೇಶಗಳ ವಿದ್ವಾಂಸರು, ಸರ್ಕಾರಿ ಪ್ರಾಯೋಜಿತ ಮತ್ತು ಖಾಸಗಿ ಸಂಘ- ಸಂಸ್ಥೆಗಳ ತುಳು ಸಂಬಂಧಿ ಕೆಲಸಗಳನ್ನು ಸೂಕ್ತ ದಾಖಲೆಗಳ ಸಹಿತ ಪರಿಶೀಲಿಸಿ ಈ ವರದಿ ಸಿದ್ಧಪಡಿಸಲಾಗಿದೆ ಎಂದು ಸಮಿತಿ ತಿಳಿಸಿದೆ.

ಸಂವಿಧಾನದ ಅನುಚ್ಛೇದ 345, 346 ಮತ್ತು 347ರ ಅಡಿಯಲ್ಲಿ ರಾಜ್ಯದ ಒಂದು ಅಥವಾ ಒಂದಕ್ಕಿಂತ ಹೆಚ್ಚು ಭಾಷೆಗಳನ್ನು ಅಧಿಕೃತ ಉದ್ದೇಶಗಳಿಗೆ ರಾಜ್ಯ ಸರ್ಕಾರವು ಬಳಸುವ ಸಾಂವಿಧಾನಿಕ ಕಾನೂನು ಮತ್ತು ಕಾನೂನಿನ ಅಡಿಯಲ್ಲಿ ವಿವಿಧ ರಾಜ್ಯಗಳು ಹೆಚ್ಚುವರಿ ಅಧಿಕೃತ ಭಾಷೆಗಳನ್ನಾಗಿ ಮಾನ್ಯ ಮಾಡಿದ ಪಟ್ಟಿಯನ್ನು ಪರಿಶೀಲಿಸಲಾಗಿದೆ. ಕನ್ನಡದ ಮೊದಲ ಶಾಸನ ಹಲ್ಮಿಡಿ ಶಾಸನದಲ್ಲಿ 'ಆಳುಪಗಣ ಪಶುಪತಿ' ಎಂಬವನ ಹೆಸರಿದೆ. ಇತಿಹಾಸಕಾರರು ತಿಳಿಸಿದಂತೆ ತುಳು ರಾಜಮನೆತನ ಆಳುಪ ವಂಶದ ಮೊದಲ ವ್ಯಕ್ತಿ ಈತನೇ. ತುಳು ಭಾಷೆಯಲ್ಲಿ ವಿಪುಲವಾದ ಮೌಖಿಕ-ಲಿಖಿತ ಜ್ಞಾನ ಸಂಪತ್ತಿದೆ. ತುಳುನಾಡಿನ ಜನ ವಿವಿಧ ಉದ್ಯಮಗಳಲ್ಲಿ ತೊಡಗಿ ರಾಜ್ಯ ಮತ್ತು ದೇಶದ ಅಭಿವೃದ್ಧಿಗೆ ಕಾರಣರಾಗಿದ್ದಾರೆ. ಹೀಗಿದ್ದೂ ತುಳು ಭಾಷೆಯು 'ನಗಣ್ಯ'ವಾಗಿ ಉಳಿದಿದೆ ಎಂದೂ ವರದಿಯಲ್ಲಿದೆ.



ಸಮಿತಿಯ ವರದಿಯನ್ನು ಪರಿಗಣಿಸಿ, ಸರ್ಕಾರ ತುಳು ಭಾಷೆಗೆ ರಾಜ್ಯದ 2ನೇ ಅಧಿಕೃತ ಭಾಷೆಯ ಮಾನ್ಯತೆ ನೀಡಬೇಕು. ರಾಜಕೀಯರಹಿತವಾಗಿ ಈ ನಿರ್ಧಾರ ಕೈಗೊಳ್ಳಬೇಕು

ಡಾ.ಎಂ. ಮೋಹನ ಆಳ್ವ, ಸಮಿತಿಯ ಅಧ್ಯಕ್ಷ



ಸಮಿತಿಯು ತನ್ನ ಅಧ್ಯಯನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದೆ. ಅಗತ್ಯ ಇರುವ ಇಲಾಖೆಗಳಿಂದ ಅಭಿಪ್ರಾಯ ಪಡೆದ ಬಳಿಕ ಈ ಕುರಿತು ಸರ್ಕಾರ ನಿರ್ಣಯ ತೆಗೆದುಕೊಳ್ಳಲಿದೆ

ಶಿವರಾಜ ತಂಗಡಗಿ, ಸಚಿವರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸಮಿತಿಯ ಪ್ರತಿಪಾದನೆಗಳೇನು?

- ಸುಮಾರು 2,000 ವರ್ಷಗಳ ಹಿಂದೆ ಮೂಲ ದ್ರಾವಿಡದಿಂದ ಪ್ರತ್ಯೇಕಗೊಂಡು ಸ್ವತಂತ್ರವಾದ ಭಾಷೆ
- ಕರಾವಳಿ ಕರ್ನಾಟಕದಲ್ಲಿ ತುಳು ಮಾತೃಭಾಷೆಯ 40ಕ್ಕೂ ಹೆಚ್ಚು ಸಮುದಾಯಗಳಿವೆ
- ಕರ್ನಾಟಕದ ಪಶ್ಚಿಮ ಕರಾವಳಿಯಲ್ಲಿ ಹಿಂದೂ, ಕ್ರೈಸ್ತ, ಮುಸ್ಲಿಂ, ಜೈನರು ತುಳುವನ್ನು ವ್ಯಾವಹಾರಿಕ ಭಾಷೆಯಾಗಿ ಬಳಸುತ್ತಾರೆ.
- ತುಳು-ಕನ್ನಡ-ಇಂಗ್ಲಿಷ್ ಡಿಕ್ಷನರಿ, ತುಳು ವ್ಯಾಕರಣ, ತುಳು ಪಠ್ಯಪುಸ್ತಕಗಳು, ತುಳು ಜಾನಪದ ಸಂಕಲನಗಳು, ತುಳು ಅನುವಾದಗಳು 150 ವರ್ಷಗಳ ಹಿಂದೆಯೇ ಪ್ರಕಟವಾಗಿವೆ
- ತುಳು ಲಿಪಿ ಮತ್ತು ಪ್ರಾಚೀನ ತುಳು ಸಾಹಿತ್ಯಕ್ಕೆ 600 ವರ್ಷಗಳ ಇತಿಹಾಸವಿದೆ

ತುಳು ಭಾಷಿಕರು ಒಂದು ಕೋಟಿ

ದಕ್ಷಿಣ ಕನ್ನಡ, ಉಡುಪಿ ಮತ್ತು ಕೇರಳದ ಕಾಸರಗೋಡಿನಲ್ಲಿ ತುಳು ಭಾಷಿಕರು ಪ್ರಧಾನವಾಗಿ ಇದ್ದಾರೆ. ಬೆಂಗಳೂರು ಮತ್ತು ಇತರ ಎಲ್ಲ ಪ್ರಮುಖ ನಗರಗಳಲ್ಲಿ ಗಣನೀಯ ಸಂಖ್ಯೆಯ ತುಳುವರು ಅನೇಕ ವರ್ಷಗಳಿಂದ ನೆಲೆಸಿದ್ದಾರೆ. ಮಹಾರಾಷ್ಟ್ರ (ಮುಂಬೈ ನಗರ ಸಹಿತ) ತಮಿಳುನಾಡು, ಆಂಧ್ರಪ್ರದೇಶ, ದೆಹಲಿ, ಗುಜರಾತ್, ಕೇರಳ ಮುಂತಾದ ರಾಜ್ಯಗಳಿಗೆ ದೊಡ್ಡ ಪ್ರಮಾಣದಲ್ಲಿ ತುಳು ಭಾಷಿಕರು ವಲಸೆ ಹೋಗಿ ನೆಲೆಸಿದ್ದಾರೆ. ಯುಎಇ, ಮಧ್ಯಪ್ರಾಚ್ಯ ದೇಶಗಳು, ಇಂಗ್ಲೆಂಡ್, ಅಮೆರಿಕ, ಸಿಂಗಪುರ, ಆಸ್ಟ್ರೇಲಿಯಾ, ಯುರೋಪಿನ ರಾಷ್ಟ್ರಗಳಲ್ಲಿ ತುಳುವರಿದ್ದಾರೆ. ಹೀಗೆ ದೇಶ-ವಿದೇಶಗಳಲ್ಲಿ ಇರುವ ತುಳುವರು ಮತ್ತು ತುಳು ಸಂಪರ್ಕ ಭಾಷೆಯಾಗಿ ಬಳಸುವವರ ಸಂಖ್ಯೆ ಸುಮಾರು 1 ಕೋಟಿ.

ಈ–ದಿನ ವೆಬ್‌ಸೈಟ್‌ನಿಂದ ಸಮೀಕ್ಷೆ

'ಗ್ಯಾರಂಟಿ ಜಾರಿಗೆ ಮೆಚ್ಚುಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಎರಡು ತಿಂಗಳ ಅವಧಿಯ ಸಾಧನೆ ಕುರಿತು ತಾವು ನಡೆಸಿದ ಸಮೀಕ್ಷೆಯಲ್ಲಿ ಜನರಿಂದ ಮೆಚ್ಚುಗೆ ವ್ಯಕ್ತವಾಗಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ-ವನ್ನು ಶ್ಲಾಘಿಸಿದ್ದಾರೆ ಎಂದು ಈದಿನ. ಕಾಮ್ ವೆಬ್‌ಸೈಟ್ ತಿಳಿಸಿದೆ.

39 ವಿಧಾನಸಭಾ ಕ್ಷೇತ್ರಗಳ 152 ಮತಗಟ್ಟೆಗಳ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಲಾಗಿದೆ. ಒಟ್ಟು 2,455 ಮಂದಿ ಸಮೀಕ್ಷೆಗೆ ಪ್ರತಿಕ್ರಿಯಿಸಿದ್ದಾರೆ. ಅವರ ಅಭಿಪ್ರಾಯಗಳನ್ನು ವಿಶ್ಲೇಷಿಸಿ ಸಮೀಕ್ಷಾ ವರದಿ ಸಿದ್ಧಪಡಿಸಲಾಗಿದೆ ಎಂದು ಸಂಸ್ಥೆಯ ಮುಖ್ಯಸ್ಥ ಡಾ.ಎಚ್.ವಿ. ವಾಸು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಮೀಕ್ಷೆಗೆ ಪ್ರತಿಕ್ರಿಯಿಸಿದವರಲ್ಲಿ ಶೇಕಡ 69ರಷ್ಟು ಮಂದಿ ಸಿದ್ದರಾಮಯ್ಯ ಸರ್ಕಾರದ ಸಾಧನೆಗೆ ತೃಪ್ತಿ ವ್ಯಕ್ತಪಡಿಸಿ-ದ್ದಾರೆ. ಪ್ರತಿಕ್ರಿಯಿಸಿದ ಮಹಿಳೆಯರಲ್ಲಿ ಶೇ 70ರಷ್ಟು ಮಹಿಳೆಯರು ಸರ್ಕಾರದ ಕಾರ್ಯವೈಖರಿಗೆ ಸಂತೋಷ ವ್ಯಕ್ತ-ಪಡಿಸಿದ್ದಾರೆ. ಶೇ 61ರಷ್ಟು ಜನರು ಈ ಸರ್ಕಾರ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ವಿಶ್ವಾಸ ವ್ಯಕ್ತ-ಪಡಿಸಿದ್ದಾರೆ ಎಂದು ವರದಿ ಹೇಳಿದೆ.

'ಗ್ಯಾರಂಟಿ ಯೋಜನೆಗಳು ಉಚಿತ ಕೊಡುಗೆಗಳಲ್ಲ, ಜನರ ಹಣ ಜನರ ಜೇಬಿಗೆ ಮರಳುತ್ತಿದೆ ಎಂಬ ಅಭಿಪ್ರಾಯ ಸಮೀಕ್ಷೆಯಲ್ಲಿ ಕಂಡುಬಂದಿದೆ. ಸಮೀಕ್ಷೆಯಲ್ಲಿ ಅಭಿಪ್ರಾಯ ನೀಡಿರುವ-ವರಲ್ಲಿ ಶೇ 73 ರಷ್ಟು ಮಂದಿ ಗ್ಯಾರಂಟಿ ಬೆಂಬಲಿಸಿದ್ದಾರೆ. ಶೇ 19 ರಷ್ಟು ಮಂದಿ ಮಾತ್ರ ಇಂತಹ ಯೋಜನೆಗಳಿಂದ ತೆರಿಗೆದಾರರಿಗೆ ಹೊರೆಯಾಗುತ್ತದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ' ಎಂಬ ಅಂಶ ಸಮೀಕ್ಷೆಯ ವಿಶ್ಲೇಷಣಾ ವರದಿಯಲ್ಲಿದೆ.

'ಗ್ಯಾರಂಟಿ ಯೋಜನೆಗಳನ್ನು ಆದ್ಯತೆ ಮೇಲೆ ಜಾರಿಗೊಳಿಸಬೇಕು ಎಂದು ಶೇ 53ರಷ್ಟು ಮಹಿಳೆಯರು ಆಗ್ರಹಿಸಿ-ದ್ದಾರೆ. ಈ ಯೋಜನೆಗಳ ಅನುಷ್ಠಾನ ಅಗತ್ಯವಿತ್ತು ಎಂಬ ಅಭಿಪ್ರಾಯವನ್ನು ಶೇ 68ರಷ್ಟು ಜನರು ನೀಡಿದ್ದಾರೆ. ಕೃಷಿಕರು ಮತ್ತು ಕಾರ್ಮಿಕರಲ್ಲಿ ಶೇ 79ರಷ್ಟು ಜನರು ಈ ಯೋಜನೆಗಳ ಅಗತ್ಯವಿದೆ ಎಂದು ಹೇಳಿದ್ದಾರೆ.

ಮಹಿಳೆಯರನ್ನು ಕೇಂದ್ರೀಕರಿಸಿ ರೂಪಿಸಿರುವ ಶಕ್ತಿ, ಗೃಹ ಜ್ಯೋತಿ ಮತ್ತು ಗೃಹ ಲಕ್ಷ್ಮಿ ಯೋಜನೆಗಳು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿವೆ ಎಂದು ಶೇ 80 ರಷ್ಟು ಜನರು ಸಮೀಕ್ಷೆಯಲ್ಲಿ ಹೇಳಿದ್ದಾರೆ. 18ರಿಂದ 25 ವರ್ಷ ವಯಸ್ಸಿನವರಲ್ಲಿ ಸುಮಾರು ಶೇ 71ರಷ್ಟು ಜನರು 'ಯುವ ನಿಧಿ' ಯೋಜನೆಯನ್ನು ಸ್ವಾಗತಿಸಿದ್ದಾರೆ ಎಂದು ವರದಿ ಹೇಳಿದೆ.



ಹಾವೇರಿ ಜಿಲ್ಲಾಸ್ಪತ್ರೆಗೆ ಭೇಟಿ ನೀಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೋಗಿಗಳು ಮತ್ತು ಸಂಬಂಧಿಕರಿಂದ ಆಸ್ಪತ್ರೆ ಅವ್ಯವಸ್ಥೆ ಬಗ್ಗೆ ಮಾಹಿತಿ ಪಡೆದರು. ಸಚಿವ ಎಚ್‌.ಕೆ.ಪಾಟೀಲ, ವಿಧಾನ ಪರಿಷತ್ ಸದಸ್ಯ ಸಲೀಂ ಅಹಮದ್ ಇದ್ದಾರೆ

ಸ್ಫೋಟಕಗಳ ಜಾಗ ತೋರಿಸಿದ ಶಂಕಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಂಬ್ ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದ ತನಿಖೆ ಚುರು-ಕುಗೊಳಿಸಿರುವ ಸಿಸಿಬಿ ಪೊಲೀಸರು, ಐವರು ಶಂಕಿತರ ಸಮ್ಮುಖದಲ್ಲಿ ಮಹಜರು ಪ್ರಕ್ರಿಯೆಯನ್ನು ಬಹುತೇಕ ಪೂರ್ಣಗೊಳಿಸಿದ್ದಾರೆ.

'ನೆಲಮಂಗಲ ಟೋಲ್‌ಗೇಟ್, ಹೆಬ್ಬಾಳ, ಸುಲ್ತಾನ್‌ಪಾಳ್ಯ, ಪರಪ್ಪನ ಅಗ್ರಹಾರ ಕಾರಾಗೃಹ ಬಳಿ ಹಾಗೂ ಇತರೆ ಸ್ಥಳಗಳಲ್ಲಿ ಮಹಜರು ನಡೆಸಲಾಗಿದೆ. ಮುಂಬರುವ ದಿನಗಳಲ್ಲಿ ಮತ್ತಷ್ಟು ಕಡೆ ಮಹಜರು ಮಾಡಲಾಗುವುದು' ಎಂದು ಮೂಲಗಳು ಹೇಳಿವೆ.

'ಜಪ್ತಿ ಮಾಡಲಾದ ವಸ್ತುಗಳ ಬಗ್ಗೆ ಶಂಕಿತರು ಎಲ್ಲ ಮಾಹಿತಿ ಬಾಯ್ಬಿಟ್ಟಿದ್ದಾ-ರೆ. ಹೀಗಾಗಿ, ಅವರನ್ನು ಆಯಾ ಸ್ಥಳಕ್ಕೆ ಕರೆದೊಯ್ದು ಮಹಜರು ನಡೆಸಲಾಗಿದೆ. ಶಂಕಿತರು, ತಾವು ಸ್ಫೋಟಕ ಪಡೆದಿದ್ದ ಜಾಗವನ್ನು ತೋರಿಸಿದ್ದಾರೆ. ಸ್ಫೋಟ-ಕಗಳನ್ನು ವಾಹನದಲ್ಲಿ ಇಟ್ಟುಕೊಂಡು ಸುತ್ತಾಡಿದ ರಸ್ತೆಗಳ ಬಗ್ಗೆಯೂ ವಿವರಿಸಿದ್ದಾರೆ. ಎಲ್ಲ ಮಹಜರು ಪ್ರ-ಕ್ರಿಯೆಯನ್ನು ವಿಡಿಯೊ ಚಿತ್ರೀಕರಣ ಮಾಡಲಾಗಿದೆ' ಎಂದು ತಿಳಿಸಿವೆ.

ಹೆಬ್ಬಾಳ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣದಲ್ಲಿ ಬಂಧಿಸಲಾಗಿರುವ ಐವರು ಶಂಕಿತರ ಕಸ್ಟಡಿ ಅವಧಿ ಬುಧವಾರ (ಜುಲೈ 26) ಮುಗಿಯಲಿದ್ದು, ಎಲ್ಲರನ್ನೂ ನ್ಯಾಯಾಲಯಕ್ಕೆ ಹಾಜರುಪಡಿಸಲು ಪೊಲೀಸರು ತಯಾರಿ ನಡೆಸಿದ್ದಾರೆ.

ಪುನಃ ಕಸ್ಟಡಿಗಾಗಿ ಕೋರಿಕೆ: 'ಐವರು ಶಂಕಿತರು, ಭಯೋತ್ಪಾದನಾ ಕೃತ್ಯಕ್ಕೆ ಸಂಚು ರೂಪಿಸಿದ್ದ ಬಗ್ಗೆ ಕೆಲ ಪುರಾವೆಗಳು ಸಿಕ್ಕಿವೆ. ಜೊತೆಗೆ, ಶಂಕಿತರನ್ನು ಮತ್ತಷ್ಟು ದಿನ ವಿಚಾರಣೆ ನಡೆಸಬೇಕಿದೆ. ಹೀಗಾಗಿ, ಪುನಃ ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಬುಧವಾರ ಮನವಿ ಮಾಡಲಾಗುವುದು' ಎಂದು ಮೂಲಗಳು ಹೇಳಿವೆ.

'ಪ್ರಮುಖ ಆರೋಪಿ ಕಸ್ಟಡಿಗಾಗಿ ಅರ್ಜಿ'

'ಸ್ಫೋಟಕ್ಕೆ ಸಂಚು ರೂಪಿಸಿದ್ದ ಪ್ರಕರಣದ ಪ್ರಮುಖ ಆರೋಪಿ ಟಿ. ನಾಸೀರ್, ಸದ್ಯ ಜೈಲಿನಲ್ಲಿದ್ದಾನೆ. ಬಾಡಿ ವಾರೆಂಟ್ ಮೂಲಕ ಈತನನ್ನು ಕಸ್ಟಡಿಗೆ ನೀಡುವಂತೆ ಕೋರಿ ನ್ಯಾಯಾಲಯಕ್ಕೆ ಬುಧವಾರ ಅರ್ಜಿ ಸಲ್ಲಿಸಲಾಗುವುದು' ಎಂದು ಪೊಲೀಸ್ ಮೂಲಗಳು ಹೇಳಿವೆ.


'ಬೆಂಗಳೂರಿನಲ್ಲಿ 2008 ರಲ್ಲಿ ಸಂಭವಿಸಿದ್ದ ಬಾಂಬ್ ಸ್ಫೋಟದ ಆರೋಪಿಯಾಗಿರುವ ಟಿ. ನಾಸೀರ್, ಲಷ್ಕರ್–ಎ–ತಯಬಾ ನಿಷೇಧಿತ ಉಗ್ರ ಸಂಘಟನೆಯ ದಕ್ಷಿಣ ಭಾರತದ ಕಮಾಂಡರ್ ಆಗಿದ್ದನೆಂದು ಗೊತ್ತಾಗಿದೆ. ಈತನನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಿದ ನಂತರವೇ ಮತ್ತಷ್ಟು ಮಾಹಿತಿ ಸಿಗಲಿದೆ' ಎಂದು ಮೂಲಗಳು ತಿಳಿಸಿವೆ.

ಎಷ್ಟು ಸ್ಥಾನಗಳಲ್ಲಾದರೂ ನಾವು ಗೆಲ್ಲಲಿ, ಚಿಂತೆಯಿಲ್ಲ: ಎಚ್‌.ಡಿ. ದೇವೇಗೌಡ

'ಜೆಡಿಎಸ್‌ನಿಂದ ಏಕಾಂಗಿ ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಯಾವ ಮೈತ್ರಿಕೂಟವನ್ನೂ ಸೇರುವುದಿಲ್ಲ. ಏಕಾಂಗಿಯಾಗಿ ಹೋರಾಟ ಮಾಡಲಿದೆ ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು ಹೇಳಿದರು.



'ನಾವು ಯಾವ ಪಕ್ಷದ ಜತೆಗೂ ಮೈತ್ರಿ ಮಾಡಿಕೊಳ್ಳುವುದಿಲ್ಲ. ಎಷ್ಟು ಸ್ಥಾ-ನಗಳಲ್ಲಾದರೂ ನಾವು ಗೆಲ್ಲಲಿ. ಅದರ ಬಗ್ಗೆ ಚಿಂತಿಸುವುದಿಲ್ಲ. ಏಕಾಂಗಿಯಾಗಿ ಸ್ಪರ್ಧೆ ಮಾಡುತ್ತೇವೆ' ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ವಿಧಾನಮಂಡಲದಲ್ಲಿ ವಿಷಯಾಧಾರಿತ ಹೋರಾಟ ನಡೆಸಲು ಬಿಜೆಪಿಗೆ ಬೆಂಬಲ ನೀಡುವುದು ಶಾಸಕಾಂಗ ಪಕ್ಷದ ನಾಯಕರ ತೀರ್ಮಾನಕ್ಕೆ ಬಿಟ್ಟಿದ್ದು. ಕುಮಾರಸ್ವಾಮಿ ಅವರನ್ನೇ ಬಿಜೆಪಿಯಿಂದ ಪ್ರತಿಪಕ್ಷದ ನಾಯಕರನ್ನಾಗಿ ಮಾಡುತ್ತಾರೆ ಎಂದು ಸುದ್ದಿ ಹಬ್ಬಿಸಲಾಗಿತ್ತು. ಈಗ ಚಿಕ್ಕಮ-ಗಳೂರಿನ ಒಬ್ಬರನ್ನು ಅಧ್ಯಕ್ಷರನ್ನಾಗಿ, ಯತ್ನಾಳ ಅವರನ್ನು ಪ್ರತಿಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಲು ಬಿಜೆಪಿಯಲ್ಲಿ ಒಂದು ಸುತ್ತಿನ ಸಭೆ ನಡೆದಿದೆ. ಆದರೂ ಜೆಡಿಎಸ್ ಬಗ್ಗೆ ಸುಳ್ಳು ಹಬ್ಬಿಸಲಾಗುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಕುಮಾರಸ್ವಾಮಿ ಮಾತ್ರ ಬಿಜೆಪಿ ಜತೆ ಸೇರಿ ಮುಖ್ಯಮಂತ್ರಿ ಆದವರೆ? ಬೇರೆ ಯಾರೂ ಆಗಿಲ್ಲವೆ? ರಾಮಕೃಷ್ಣ ಹೆಗಡೆ ಕೂಡ ಕೇಂದ್ರ ಮಂತ್ರಿ ಆಗಿರಲಿಲ್ಲವೆ' ಎಂದು ಪ್ರಶ್ನಿಸಿದರು.

ಕಾಂಗ್ರೆಸ್‌ನವರಿಂದಲೇ ವಿರೋಧ: 'ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ವಿಪಕ್ಷಗಳ ಮೈತ್ರಿಕೂಟದ ಸಭೆಗೆ ನಮಗೆ ಆಹ್ವಾನ ನೀಡಲು ಜೆಡಿಯು ನಾಯಕ ನಿತೀಶ್ ಕುಮಾರ್ ಬಯಸಿದ್ದರು. ಆದರೆ, ಕಾಂಗ್ರೆಸ್ ಪಕ್ಷದ ಸ್ಥಳೀಯ ಮುಖಂಡರ ಒಂದು ಬಣ ವಿರೋಧ ವ್ಯಕ್ತಪಡಿಸಿತು. ಹಾಗಾಗಿ ನಮಗೆ ಆಹ್ವಾನ ನೀಡಿಲ್ಲ' ಎಂದು ದೂರಿದರು.

'ನಾಳೆ ಬೆಳಿಗ್ಗೆಯೇ ಜೆಡಿಎಸ್ ಅಳಿಸಿ ಹಾಕುತ್ತೇವೆ ಎಂದು ಕೆಲವರು ಅಂದುಕೊಂಡಿದ್ದಾರೆ. ಅದು ಸಾಧ್ಯವಿಲ್ಲ' ಎಂದರು.

'ಪಕ್ಷ ಸಂಘಟನೆಗಾಗಿ ಶಾಸಕ ಜಿ.ಟಿ. ದೇವೇಗೌಡ ಅಧ್ಯಕ್ಷತೆಯಲ್ಲಿ 11 ಸದಸ್ಯರ ಸಮಿತಿ ರಚಿಸಲಾಗಿದೆ. ಎಚ್‌.ಡಿ. ಕುಮಾರಸ್ವಾಮಿ ವಿದೇಶ ಪ್ರವಾಸದಿಂದ ಹಿಂದಿರುಗಿದ ಬಳಿಕ ಪಕ್ಷ ಸಂಘಟನೆಗೆ ಕಾರ್ಯತಂತ್ರ ರೂಪಿಸುವ ಸಭೆ ನಡೆಯಲಿದೆ' ಎಂದು ಪ್ರಕಟಿಸಿದರು.

ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಸಿ.ಎಂ. ಇಬ್ರಾಹಿಂ, ವಿಧಾನ ಪರಿಷತ್ ಸದಸ್ಯರಾದ ಟಿ.ಎ. ಶರವಣ, ಕೆ.ಎ-.ತಿಪ್ಪೇಸ್ವಾಮಿ, ಮುಖಂಡರಾದ ಡಿ. ಕುಪೇಂದ್ರ ರೆಡ್ಡಿ, ರೂತ್ ಮನೋರಮಾ, ಎ.ಪಿ. ರಂಗನಾಥ್ ಪತ್ರಿಕಾಗೋಷ್ಠಿಯಲ್ಲಿದ್ದರು.

'ನೈತಿಕತೆ ಇದ್ದರೆ ನೈಸ್‌ನಿಂದ ಜಮೀನು ಹಿಂಪಡೆಯಲಿ'

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪತ್ರಕರ್ತರಿಗೆ ನೈತಿಕತೆಯ ಪಾಠ ಹೇಳಿದ್ದಾರೆ. ಮುಖ್ಯಮಂತ್ರಿಗೆ ನೈತಿಕತೆ ಇದ್ದರೆ ನೈಸ್ ಕಂಪನಿ ಸ್ವಾಧೀನದಲ್ಲಿರುವ 11,660 ಎಕರೆ ಹೆಚ್ಚುವರಿ ಜಮೀನನ್ನು ವಾಪಸ್ ಪಡೆಯಲಿ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಸವಾಲು ಹಾಕಿದರು.

ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರೆಸ್ ಕ್ಲಬ್‌ನಲ್ಲಿ ಸೋಮವಾರ ನಡೆದ ಸಮಾರಂಭದಲ್ಲಿ ಸಿದ್ದರಾಮಯ್ಯ ಅವರು ಪತ್ರಕರ್ತರನ್ನು ದ್ದೇಶಿಸಿ ಮಾಡಿದ್ದ ಭಾಷಣದ ಪತ್ರಿಕಾ ವರದಿಯನ್ನು ಪ್ರದರ್ಶಿಸಿದರು. 'ಪತ್ರಕರ್ತರು ನೈತಿಕವಾಗಿ ಸರಿ ಇರಬೇಕು ಎಂದು ಮುಖ್ಯಮಂತ್ರಿ ಹೇಳಿದ್ದಾರೆ. ನೈತಿಕತೆ ಇವರಿಗೂ ಇರಬೇಕಲ್ಲವೆ? ಹಾಗಿದ್ದರೆ ನೈಸ್ ಅಕ್ರಮದ ವಿರುದ್ಧ ಕಾಂಗ್ರೆಸ್ ಪಕ್ಷದವರೇ ಆದ ಟಿ.ಬಿ. ಜಯಚಂದ್ರ ನೇತೃತ್ವದ ಸದನ ಸಮಿತಿ ನೀಡಿರುವ ವರದಿ ಇದೆ. ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ ಅಧಿಕಾರಿಗಳ ಸಮಿತಿ ನೀಡಿರುವ ವರದಿಯೂ ಇದೆ. ಅನುಷ್ಠಾನಕ್ಕೆ ತರಲಿ' ಎಂದು ಆಗ್ರಹಿಸಿದರು.

'ನೈತಿಕತೆ ಕುರಿತು ನಿಮ್ಮ ಮಾತು ಹೃದಯದ ಅಂತರಾಳದಿಂದ ಬರಬೇಕು. ಅಧಿಕಾರ ಬರುತ್ತದೆ, ಹೋಗುತ್ತದೆ ಸಿದ್ದರಾಮಯ್ಯ ಅವರೇ. ನಾನು ಎಲ್ಲವನ್ನೂ ನೋಡಿದ್ದೇನೆ. ಹೃದಯದ ಅಂತರಾಳದಿಂದ ನೈತಿಕತೆ ಪ್ರದರ್ಶಿಸಿ, ಕೆಲಸ ಮಾಡಿದಾಗ ಉಳಿದವರಿಗೂ ಬುದ್ಧಿ ಹೇಳಬಹುದು' ಎಂದರು.

'ಡಿಸಿಎಂ ಮಾಡಿದ್ದೇ ಎಚ್‌ಡಿಕೆ'

'2004ರಲ್ಲಿ ಎಂ.ಪಿ. ಪ್ರಕಾಶ್ ಮತ್ತು ಪಿ.ಜಿ. ಆರ್ ಸಿಂಧ್ಯ ಅವರನ್ನು ಉಪ ಮುಖ್ಯಮಂತ್ರಿ ಮಾಡುವ ಪ್ರಸ್ತಾವ ಪಕ್ಷದ ಮುಂದೆ ಇತ್ತು. ಆದರೆ, ಎಚ್‌.ಡಿ. ಕುಮಾರಸ್ವಾಮಿ ಅವರು ಹಟ ಹಿಡಿದು ಸಿದ್ದರಾಮಯ್ಯ ಅವರನ್ನು ಉಪ ಮುಖ್ಯಮಂತ್ರಿ ಮಾಡಿಸಿದ್ದರು' ಎಂದು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಹೇಳಿದರು.

'ಸಿದ್ದರಾಮಯ್ಯ ಅವರು 2004ರಿಂದಲೇ ಕಾಂಗ್ರೆಸ್‌ನ ಅಹ್ಮದ್ ಪಟೇಲ್ ಜತೆ ಸಂಬಂಧ ಬೆಳೆಸಿಕೊಂಡಿದ್ದರು. ನಂತರದಲ್ಲಿ ಪಟ್ಟುಹಿಡಿದು ಅಬಕಾರಿ ಖಾತೆಯನ್ನೂ ಪಡೆದು-ಕೊಂಡಿದ್ದರು' ಎಂದರು.

ಎಂಜಿನಿಯರ್ ಅಮಾನತು

ಒಂದನೇ ಪುಟದಿಂದ...

'ನಿಮಗೆ ಮನುಷ್ಯತ್ವ ಇಲ್ವಾ? ಕತ್ತೆ ಕಾಯ್ತಿದ್ದೀರಾ? ಸಂಬಳ ಕೊಟ್ಟಿಲ್ವಾ? ಇನ್ನು ನಾಲ್ಕು ದಿನಗಳಲ್ಲಿ ಮಳೆ ಸೋರಿಕೆ ತಡೆಗಟ್ಟಬೇಕು' ಎಂದು ಸೂಚನೆ ನೀಡಿದರು. ಶಾಸಕ ರುದ್ರಪ್ಪ ಲಮಾಣಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ ಅವರನ್ನು, 'ನೀವು ಈ ಸಮಸ್ಯೆ ಬಗ್ಗೆ ಏಕೆ ಗಮನಹ-ರಿಸಿಲ್ಲ' ಎಂದು ಪ್ರಶ್ನಿಸಿದರು.

ಗುತ್ತಿಗೆದಾರ ಕಾಮಗಾರಿ ವಿಳಂಬ ಮಾಡಿದ ಬಗ್ಗೆ ಶಾಸಕ ರುದ್ರಪ್ಪ ಲಮಾಣಿ ಅವರು ಮುಖ್ಯಮಂತ್ರಿಯವರ ಗಮನಕ್ಕೆ ತಂದರು. 'ಕಳಪೆ ಕಾಮಗಾರಿ ಮತ್ತು ವಿಳಂಬ ಧೋರಣೆ ಮಾಡಿದ ಗುತ್ತಿಗೆ-ದಾರನನ್ನು ಕಪ್ಪು ಪಟ್ಟಿಗೆ ಏಕೆ ಸೇರಿಸಿಲ್ಲ' ಎಂದು ಅವರು ಪ್ರಶ್ನಿಸಿದರು.

ಪರಿಸ್ಥಿತಿ ಹೇಳಲು ಬಂದ ಎಂಜಿನಿಯರ್ ಅವರನ್ನು ಗದರಿಸಿದ ಮುಖ್ಯಮಂತ್ರಿ, 'ರೋಗಿಗಳ ಬೆಡ್ ಮೇಲೆ ಮಳೆ ನೀರು ಸೋರಿರುವುದು ಕಣ್ಣಿಗೆ ಕಾಣುತ್ತಿಲ್ಲವೇ? ದುರಸ್ತಿ ಕಾರ್ಯ ಕೈಗೊಳ್ಳಲು ಅನುದಾನದ ಕೊರತೆ ಇದೆಯೇ' ಎಂದು ಖಾರವಾಗಿ ಪ್ರಶ್ನಿಸಿದರು. ನಂತರ ಆಸ್ಪತ್ರೆ ಬಗ್ಗೆ ರೋಗಿಗಳು ಮತ್ತು ಸಂಬಂಧಿಕರಿಂದ ಮಾಹಿತಿ ಪಡೆದರು.

ಹಾವೇರಿ ಜಿಲ್ಲಾ ಆಸ್ಪತ್ರೆ ಅವ್ಯವಸ್ಥೆ ಕುರಿತು ಜುಲೈ 25ರ ಪ್ರಜಾವಾಣಿ ಸಂಚಿಕೆಯಲ್ಲಿ ವರದಿ ಪ್ರಕಟವಾಗಿತ್ತು.

'ಕೈ' ಸರ್ಕಾರದಲ್ಲಿ 'ಪತ್ರ' ತಲ್ಲಣ

ಒಂದನೇ ಪುಟದಿಂದ...

ಸಚಿವ ಸಂಪುಟ ಸಭೆಯ ಬಳಿಕ ಸಿಎಲ್‌ಪಿ ಸಭೆ: ಸಿಎಲ್‌ಪಿ ನಾಯಕ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಹೋಟೆಲ್ ರ‍್ಯಾಡಿಸನ್ ಬ್ಲೂನಲ್ಲಿ ಇದೇ 27ರಂದು ಸಂಜೆ ಶಾಸಕಾಂಗ ಪಕ್ಷದ ಸಭೆ ನಿಗದಿಯಾಗಿದೆ. ಈ ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡಾ ಭಾಗವಹಿಸಲಿದ್ದಾರೆ. ಸಭೆಗೂ ಮೊದಲು ಸಚಿವ ಸಂಪುಟ ಸಭೆ ನಡೆಯಲಿದೆ.

ಕ್ಷೇತ್ರಗಳ ಅಭಿವೃದ್ಧಿಗೆ ಪತ್ರ- ರಾಯರಡ್ಡಿ (ಕೊಪ್ಪಳ ವರದಿ): 'ಕ್ಷೇತ್ರಗಳಲ್ಲಿ ಅಭಿವೃದ್ಧಿ ಕೆಲಸಗಳಾಗಬೇಕು. ಸಚಿವರು ಮತ್ತು ಶಾಸಕರ ನಡುವೆ ಹೆಚ್ಚಿನ ಸ್ಪಂದನೆ ಇರಬೇಕು ಎಂಬ ಕಾರಣಕ್ಕಾಗಿ ಶಾಸಕ ಬಿ.ಆರ್. ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಬರೆದಿರುವ ಪತ್ರಕ್ಕೆ ಸಹಿ ಮಾಡಿದ್ದೇನೆ' ಎಂದು ಬಸವರಾಜ ರಾಯರಡ್ಡಿ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಪತ್ರ ಬರೆದಿರುವ ವಿಚಾರದಲ್ಲಿ ಮುಚ್ಚುಮರೆ ಏನೂ ಇಲ್ಲ. ಪಾಟೀಲರು ಶಾಸಕಾಂಗ ಪಕ್ಷದ ಸಭೆ ಕರೆಯಲು ಪತ್ರ ಬರೆದಿದ್ದಾರೆ. ನಾನೂ ಸೇರಿದಂತೆ ಅನೇಕ ಶಾಸಕರು ಸಹಿ ಮಾಡಿದ್ದೇವೆ' ಎಂದು ಹೇಳಿದರು.

'ವರ್ಗಾವಣೆ ವಿಚಾರವಾಗಿ ಕೆಲವು ಶಾಸಕರಿಗೆ ಅಸಮಾಧಾನ ಇರಬಹುದು. ಕೆಲವರು ಇದನ್ನು ಮುಕ್ತವಾಗಿ ಹೇಳುವುದಿಲ್ಲ. ನನಗಂತೂ ಏನೂ ಅಸಮಾಧಾ-ನವಿಲ್ಲ. ಸಿದ್ದರಾಮಯ್ಯ ಅವರು ಭಾರತದ ಉತ್ತಮ ಮುಖ್ಯಮಂತ್ರಿ. ಇದು ಸಹಜವಾಗಿಯೇ ವಿರೋಧ ಪಕ್ಷಕ್ಕೆ ಆಹಾರವಾ-ಗುತ್ತದೆ. ಇದರಲ್ಲಿ ಯಾವುದೇ ಆತಂಕಪಡುವ ಅಗತ್ಯವಿಲ್ಲ. ಸರ್ಕಾರಕ್ಕೆ ಹಾಗೂ ಮುಖ್ಯಮಂತ್ರಿಗೆ ಏನೂ ತೊಂದರೆಯಿಲ್ಲ' ಎಂದು ಹೇಳಿದರು.

ಸರ್ಕಾರಕ್ಕೆ ಬಾಲಗ್ರಹ ಪೀಡೆ: ಬೊಮ್ಮಾಯಿ

'ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಬಾಲಗ್ರಹ ಪೀಡೆ ಶುರುವಾಗಿದ್ದು, ಆಂತರಿಕ ಕಲಹ ಹೆಚ್ಚಾಗಿದೆ' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ.

'ಸಚಿವರ ಭ್ರಷ್ಟಾಚಾರ ಮತ್ತು ಅಭಿವೃದ್ಧಿ ಕಾರ್ಯಕ್ಕೆ ಅನುದಾನ ನೀಡದೇ ಇರುವುದರಿಂದ ಶಾಸಕರ ಅಸಮಾಧಾನ ಸ್ಫೋಟಗೊಳ್ಳುತ್ತಿದೆ' ಎಂದು ಸುದ್ದಿಗಾರರಿಗೆ ತಿಳಿಸಿದರು.

'ಗ್ಯಾರಂಟಿಗಳಿಗೆ ಹಣ ನೀಡುವುದಕ್ಕೆ ಅನುದಾನ ಇಲ್ಲ ಎನ್ನುತ್ತಿದ್ದಾರೆ, ಆದರೆ, ವರ್ಗಾವಣೆಯಲ್ಲಿ ಭಾರಿ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆಯುತ್ತಿರು-ವುದು ಸ್ಪಷ್ಟವಾಗಿದೆ. ಇದನ್ನು ಶಾಸಕರೇ ಬಹಿರಂಗವಾಗಿ ಹೇಳಿದ್ದಾರೆ. ಸಚಿವರ ವಿರುದ್ಧ ಕಾಂಗ್ರೆಸ್ ಶಾಸಕರು ಅಸಮಾಧಾನ ಹೊರ ಹಾಕಿದ್ದಾರೆ. ಮುಜುಗರಕ್ಕೆ ಒಳಗಾದ ಸಿದ್ದರಾಮಯ್ಯ ಅರ್ಧಸತ್ಯ ಹೇಳಿದ್ದಾರೆ' ಎಂದರು.

ಎಲ್ಲಾ ಊಹಾಪೋಹ. ಯಾವುದೇ ಪತ್ರ ಬರೆದಿಲ್ಲ. ಯಾವುದೇ ಅಸಮಾಧಾನವೂ ಇಲ್ಲ. ವರ್ಗಾವಣೆ ಅವಧಿ ಮುಗಿದಿದೆ. ಶಾಸಕರು ಅವರವರ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾರೆ

ಡಿ.ಕೆ. ಶಿವಕುಮಾರ್ ಉಪ ಮುಖ್ಯಮಂತ್ರಿ

ಡಿಕೆಶಿ- ಹರಿಪ್ರಸಾದ್ ಭೇಟಿ ಕುತೂಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಮಂಗಳವಾರ ರಾತ್ರಿ ಭೇಟಿ ಮಾಡಿ ಮಾತುಕತೆ ನಡೆಸಿರುವುದು ಕುತೂಹಲ ಮೂಡಿಸಿದೆ.

ಸಚಿವ ಸಂಪುಟದಲ್ಲಿ ಸ್ಥಾನ ಸಿಗದ ಕಾರಣಕ್ಕೆ ಇತ್ತೀಚೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಬಿ.ಕೆ. ಹರಿಪ್ರಸಾದ್ ಪರೋಕ್ಷವಾಗಿ ಅಸಮಾಧಾನ ಹೊರಹಾಕಿದ್ದರು. ಬಿಲ್ಲವ, ಈಡಿಗ ಸಮುದಾಯದ ಮುಖಂಡರ ಸಭೆಯಲ್ಲಿ ಮಾತನಾಡಿದ್ದ ಹರಿಪ್ರಸಾದ್, 'ನನಗೆ ಸಿಎಂ ಮಾಡುವುದೂ ಗೊತ್ತು. ಅಧಿಕಾರದಿಂದ ಇಳಿಸುವುದೂ ಗೊತ್ತು. ನಮ್ಮ ಸಮುದಾಯದವರು ರಾಜಕೀಯವಾಗಿ ಮುಂದೆ ಬರುತ್ತಿಲ್ಲ. ನಾವು ಯಾರದ್ದೋ ಷಡ್ಯಂತ್ರಕ್ಕೆ ಬಲಿಯಾಗುತ್ತಿದ್ದೇವೆ ಅನಿಸುತ್ತಿದೆ' ಎಂದಿದ್ದರು. ಈ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿತ್ತು.




ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರನ್ನು ಮಂಗಳವಾರ ಭೇಟಿ ಮಾಡಿ ಸಮಾಲೋಚನೆ ನಡೆಸಿದರು.


ಹರಿಪ್ರಸಾದ್ ಅವರ ಹೇಳಿಕೆ ಕಾಂಗ್ರೆಸ್ ವಲಯದಲ್ಲಿ ಆರೋಪ- ಪ್ರತ್ಯಾರೋಪಕ್ಕೆ ವಸ್ತುವಾಗುತ್ತಿದ್ದಂತೆ, ಹರಿಪ್ರಸಾದ್ ಅವರನ್ನು ಡಿ.ಕೆ. ಶಿವಕುಮಾರ್ ಭೇಟಿ ಮಾಡಿ ಕೆಲಹೊತ್ತು ಸಮಾಲೋಚನೆ ನಡೆಸಿದ್ದಾರೆ.

ಹಿರಿಯ ನಾಯಕನಾಗಿದ್ದರೂ ಸರ್ಕಾರದಲ್ಲಿ ಸೂಕ್ತ ಸ್ಥಾನಮಾನ ಸಿಕ್ಕಿಲ್ಲವೆಂಬ ಕಾರಣಕ್ಕೆ ಹರಿಪ್ರಸಾದ್ ಮುನಿಸಿಕೊಂಡಿದ್ದಾರೆ. 'ಮಂತ್ರಿ, ಸಿಎಂ ಸೇರಿ ಯಾವ ಅಧಿಕಾರದ ಮೇಲೂ ಲಾಬಿ ನಡೆಸಿಲ್ಲ. ಅದರ ಮೇಲೆ ಆಸೆಯೂ ಇಲ್ಲ. ಸಾಮಾಜಿಕ ನ್ಯಾಯದ ಪರ ನನ್ನ ಧ್ವನಿಯನ್ನು ಅಡಗಿಸಲು ಸಾಧ್ಯವಿಲ್ಲ' ಎಂದೂ ಹರಿಪ್ರಸಾದ್ ಅವರು ಸೋಮವಾರ ಟ್ವೀಟ್ ಮಾಡಿದ್ದರು.


ಪಕ್ಷದೊಳಗಿನ ಆಂತರಿಕ ವಿಚಾರಗಳ ಬಗ್ಗೆ ಹರಿಪ್ರಸಾದ್ ಮತ್ತು ಶಿವಕುಮಾರ್ ಚರ್ಚೆ ನಡೆಸಿದ್ದಾರೆ ಎಂದು ಗೊತ್ತಾಗಿದೆ. ಈ ಸಂದರ್ಭದಲ್ಲಿ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಮತ್ತು ಚಿತ್ರಕಲಾ ಪರಿಷತ್ ಅಧ್ಯಕ್ಷ ಬಿ.ಎಲ್. ಶಂಕರ್ ಜೊತೆಗಿದ್ದರು.



ಮರಳಿನ ಬ್ಯಾಟರಿಗಳಿಗೆ ಮರುಳಾಗಲೇ ಬೇಕು!



ಕ್ಷಮಾ ವಿ. ಭಾನುಪ್ರಕಾಶ್



ಒಂದೆಡೆ ಸಾಮಾಜಿಕ ಮಾಧ್ಯಮದ ಸಮೂಹ ಸನ್ನಿಗೆ ಒಳಗಾದವರಂತೆ ಎಲ್ಲರೂ ಹಠಾತ್ ಚಾರಣಿಗರಾಗಿ, ಪರಿಶುದ್ಧ ಪಶ್ಚಿಮ ಘಟ್ಟಗಳಲ್ಲೂ ಪ್ಲಾಸ್ಟಿಕ್ ವಸ್ತುಗಳನ್ನು ಎಸೆದು ಬರುವ ಸಾವಿರಾರು ಜನ; ಮತ್ತೊಂದೆಡೆ ಮನೆಯಲ್ಲೂ ದಿನನಿತ್ಯದ ಬಳಕೆಗೂ ಬಳಸಿ-ಬಿಸಾಡುವ ವಸ್ತುಗಳನ್ನು ಇಟ್ಟುಕೊಂಡು, ಕಸದ ಸಮಸ್ಯೆಗೆ ಹೊಸ ಭಾಷ್ಯ ಬರೆಯುವ ಮಂದಿ; ಇನ್ನು ಕೆಲವರು, 'ಐ ಲವ್ ನೇಚರ್' ಎಂದು ಎ.ಸಿ. ರೂಮ್‌ನಲ್ಲಿ ಕುಳಿತು ಹೇಳುತ್ತಾ, ಬಾಕ್ಸ್‌ಗಟ್ಟಲೇ ಟಿಶ್ಯೂ ಪೇಪರ್ ಬಳಸಿ ಬಿಸಾಡುವ ಜನ; ಇನ್ನೊಂದೆಡೆ, 'ಇನ್ನು ವಿದ್ಯುತ್ ವಾಹನಗಳು ಬಂದಾಯ್ತು, ಜಗತ್ತಿನ ಎಲ್ಲ ವಾಯುಮಾಲಿನ್ಯ, ಜಲಮಾಲಿನ್ಯ, ಭೂಮಾಲಿನ್ಯ ನಾಳೆಯಿಂದಲೇ ಮಾಯ' ಎಂಬ ಪೆದ್ದು ಆಶಾವಾದಿಗಳು. ಹೀಗಿರುವಾಗ, ಅರಣ್ಯರೋದನವಾದರೂ ಸರಿಯೇ, ತಮ್ಮ ವೈಜ್ಞಾನಿಕ ಸತ್ಯಾಂಶಗಳನ್ನು ಸಾರುತ್ತಾ, ವಿಜ್ಞಾನದಿಂದ ಜಗತ್ತಿಗೆ ಉತ್ತಮ ದಿನಗಳನ್ನು ನೀಡುವ ಪ್ರಯತ್ನದಲ್ಲಿರುವವರು - ತಮ್ಮ ಪಾಡಿಗೆ ತಾವು ಕಾರ್ಯನಿರತರಾಗಿರುವ ವಿಜ್ಞಾನಿಗಳು ಮಾತ್ರ!

ನಮ್ಮ ಸುತ್ತಲಿನ ಆಗುಹೋಗುಗಳನ್ನು ಗಮನಿಸುತ್ತಿದ್ದರೆ, ಅನೇಕ ಹೊಸ ವಿಷಯಗಳ ಕಲಿಕೆ ಸಾಧ್ಯ; ಅದನ್ನು ವೈಜ್ಞಾನಿಕ ಸಿದ್ಧಾಂತಗಳ ಕನ್ನಡಕದೊಳಗಿಂದ ನೋಡಿದಾಗ, ಹೊಸ ಹೊಳಹು ಲಭ್ಯವಾಗುತ್ತದೆ. ಇದು ಅನೇಕ ವಿಜ್ಞಾನಿಗಳ ಅನುಭವದ ಮಾತು ಕೂಡ. ಬಸ್‌ಸ್ಟಾಪ್‌ನಲ್ಲಿ ಕಡ್ಲೆಕಾಯಿ ಹುರಿಯುವವನು, 'ಬಾಂಡ್ಲೆಯಲ್ಲಿ ಮರಳನ್ನು ಯಾಕೆ ಬಳಸುತ್ತಾನೆ' ಎಂದು ನಿಮಗೆ ಗೊತ್ತು ತಾನೆ? ಮನೆಯಲ್ಲಿ ಮೈಕ್ರೋವೇವ್ ಓವನ್ ಇಲ್ಲದವರೂ ಕುಕ್ಕರ್‌ನಲ್ಲಿ ಕೇಕ್ ಮಾಡುವಾಗ, ತಳಕ್ಕೊಂದು ಪದರ ಮರಳನ್ನು ಏಕೆ ಬಳಸುತ್ತಾರೆ ಗೊತ್ತೇ? ಮರಳು ಬೇಗ ಬಿಸಿಯಾಗುವುದಿಲ್ಲ. ಆದರೆ ಬಿಸಿಯಾದ ನಂತರ ಅನೇಕ ಗಂಟೆಗಳ ಕಾಲ ಶಾಖವನ್ನು ಹಿಡಿದಿಟ್ಟುಕೊಂಡು, ಬಿಸಿಯಾಗೇ ಇರುತ್ತದೆ ಎಂಬುದು ಇವರಿಗೆಲ್ಲ ಗೊತ್ತು. ಅದನ್ನೇ ವೈಜ್ಞಾನಿಕ ತಳಹದಿಯಲ್ಲಿ ಗಮನಿಸಿದಾಗ, 'ಮರಳು' ಎಂಬುದು 'ಸೂಪರ್ ವಾಹಕ'ವಲ್ಲದ ವಸ್ತು.

'ಸೂಪರ್ ವಾಹಕ'ಗಳೆಂದರೆ ಶಕ್ತಿಯನ್ನು – ಅದು ವಿದ್ಯುತ್ ಆಗಲೀ, ಶಾಖವಾಗಲೀ – ತಮ್ಮೊಳಗೆ ಯಾವುದೇ ಅಡೆತಡೆಯಿಲ್ಲದಂತೆ ಹರಿಬಿಡುತ್ತವೆ. ಆದರೆ, ಮರಳು ಅದಕ್ಕೆ ತದ್ವಿರುದ್ಧ. ಬೇಗ ಶಾಖವನ್ನು ತನ್ನೊಳಗೆ ಸುಲಭವಾಗಿ ಹರಿಬಿಡುವುದಿಲ್ಲ. ತಡೆಯೊಡ್ಡುತ್ತದೆ. ಆದರೆ, ಆ ತಡೆಯೊಡ್ಡುವ ಪ್ರಕ್ರಿಯೆಯು ಮತ್ತಷ್ಟು ಶಾಖವನ್ನು ಉತ್ಪಾದಿಸುತ್ತಾ, ಮರಳನ್ನು ಬಿಸಿಮಾಡುತ್ತಾ ಸಾಗುತ್ತದೆ. ಹೀಗೆ ಬಿಸಿಯಾಗುತ್ತಾ ಸಾಗುವ ಮರಳು, ಈ ಶಾಖವನ್ನು ತನ್ನೊಡಲಲ್ಲಿ ಕಾಪಿಟ್ಟುಕೊಂಡು, ಶಾಖದ ಸಂಪನ್ಮೂಲವೇ ಆಗಿಬಿಡುತ್ತದೆ. ಇದನ್ನೇ ಬಳಸಿಕೊಂಡು ಬ್ಯಾಟರಿಯೊಂದನ್ನು ತಯಾರಿಸಿದ್ದಾರೆ ಫಿನ್ಲೆಂಡ್ ದೇಶದ ಎಂಜಿನಿಯರ್‌ಗಳು. 'ಪೋಲಾರ್ ನೈಟ್ ಎನರ್ಜಿ' ಎಂಬ ನವೀಕರಿಸಬಹುದಾದ ಇಂಧನವನ್ನು ತಯಾರಿಸುವ ಸಂಸ್ಥೆಯ ಭಾಗವಾದ, ವಿಲ್ಲೆ ಕಿವಿಯೋಜ ಹಾಗೂ ಅವರ ತಂಡದ ತಂತ್ರಜ್ಞಾನಿಗಳು, ಈ ಮರಳಿನ ಬ್ಯಾಟರಿಯನ್ನು ಕಳೆದ ವರ್ಷ ತಯಾರಿಸಿದ್ದಾರೆ. ಇವರು 4ಕ್ಕೆ 7 ಮೀಟರ್ ವಿಸ್ತೀರ್ಣದ ಬೃಹತ್ ಸ್ಟೀಲ್ ಪಾತ್ರೆಯಲ್ಲಿ, ಬರೋಬ್ಬರಿ 100 ಟನ್ ಮರಳನ್ನು ತುಂಬಿಸಿ, ಅದರ ಮೇಲೆ 600 ಡಿಗ್ರಿ ಸೆಲ್ಸಿಯಸ್‌ನಷ್ಟು ತಾಪಮಾನ ಹೊಂದಿರುವ ಬಿಸಿಮಾಡಲಾದ ಗಾಳಿಯನ್ನು ಹರಿಸುತ್ತಾರೆ. ಬಿಸಿಗಾಳಿಯಲ್ಲಿನ ತಾಪವು ನಿಧಾನವಾಗಿ ಮರಳಿಗೆ ವರ್ಗಾವಣೆಯಾಗುತ್ತದೆ. ಮರಳಿನ ಒಳಪದರದ ತಾಪಮಾನವು 600 ಡಿಗ್ರಿ ಸೆಲ್ಸಿಯಸ್‌ನಷ್ಟು ಆಯಿತೆಂದಾಗ, ಬ್ಯಾಟರಿ ಚಾರ್ಜ್ ಆಗಿದೆ ಎಂದರ್ಥ. ಆಗ, ಬಿಸಿಗಾಳಿಯ ತಾಪಮಾನ 200 ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆಯಾಗಿರುತ್ತದೆ. ಹೀಗೆ ಬಿಸಿಯಾದ ಮರಳಿನಿಂದ ಹೊರಬರುವ ಶಾಖವನ್ನು ಬಳಸಿ ನೀರನ್ನು ಕುದಿಸಿ, ಅದರಿಂದ ಹೊರಬರುವ ಆವಿಯನ್ನು, ಶಾಖವನ್ನು ಶಕ್ತಿಯಾಗಿ ವಿದ್ಯುತ್ ತಯಾರಿಸಲು, ಮನೆಗಳಿಗೆ, ಕಚೇರಿಗಳಿಗೆ ಕೇಂದ್ರೀಕೃತ ಶಾಖವ್ಯವಸ್ಥೆಯನ್ನು ತಯಾರಿಸಲು ಬಳಸಬಹುದು ಎಂದು ಸಾಬೀತು ಮಾಡಿತೋರಿಸಿದ್ದಾರೆ, ಈ ತಂತ್ರಜ್ಞಾನಿಗಳು.

> ಮರಳು ಬೇಗ ಬಿಸಿಯಾಗುವುದಿಲ್ಲ. ಆದರೆ ಬಿಸಿಯಾದ ನಂತರ ಅನೇಕ ಗಂಟೆಗಳ ಕಾಲ ಶಾಖವನ್ನು ಹಿಡಿದಿಟ್ಟುಕೊಂಡು, ಬಿಸಿಯಾಗೇ ಇರುತ್ತದೆ.

ಆದರೆ, ಇಲ್ಲಿ ಬಿಸಿ ಮಾಡಲಾದ ಗಾಳಿಯನ್ನೇ ಶಾಖ ಉತ್ಪಾದನೆಗೆ, ವಿದ್ಯುತ್ ತಯಾರಿಗೆ ಬಳಸಲಾಗದೇ? ಅಥವಾ ಆ ಬಿಸಿಗಾಳಿಯನ್ನೇ ಬಳಸಿ ನೀರನ್ನು ಕುದಿಸಿ, ಅದನ್ನೇ ಶಕ್ತಿಮೂಲವಾಗಿ ಬಳಸಬಾರದೇ? ನಡುವೆ, ಮರಳಿನ ಬ್ಯಾಟರಿ ಅದೇಕೆ? ಇಂಥ ಪ್ರಶ್ನೆಗಳು ಮೂಡಿದ್ದರೆ, ಅದಕ್ಕೆ ಉತ್ತರವೇನು ಗೊತ್ತೇ? ಈ ಹಿಂದೆ ಚರ್ಚಿಸಲಾದ ಮರಳಿನ 'ಸೂಪರ್‌ವಾಹಕ'ವಲ್ಲದ ಗುಣವೇ. ನೀರು ಮತ್ತು ಗಾಳಿ ಸುಲಭವಾಗಿ ಶಾಖವನ್ನು ಒಳಗೆ ಎಳೆದುಕೊಳ್ಳುತ್ತವೆ; ಹಾಗೇ ಅಷ್ಟೇ ಸುಲಭವಾಗಿ ಹೊರಹಾಕುತ್ತವೆ ಕೂಡ. ಮರಳು ಹಾಗಲ್ಲವಲ್ಲ, ಅದಕ್ಕೇ ಮರಳೇ ಈ ಬ್ಯಾಟರಿಯ ನಿರ್ಮಾಣಕ್ಕೆ ಸೂಕ್ತ ವಸ್ತು; ನೀರಾದರೆ, 100 ಡಿಗ್ರಿ ಸೆಲ್ಸಿಯಸ್‌ನಷ್ಟು ಕಾದ ತಕ್ಷಣವೇ ಕುದಿಯಲು, ಆವಿಯಾಗಲು ಪ್ರಾರಂಭಿಸುತ್ತದೆ. ಮರಳು 600 ಡಿಗ್ರಿ ಸೆಲ್ಸಿಯಸ್‌ನಷ್ಟು ಕಾಯಿಸಿದರೂ ಮರಳಾಗೇ ಉಳಿದು, ಶಾಖವನ್ನು ಹಿಡಿದಿಟ್ಟುಕೊಳ್ಳುತ್ತದೆ. ಅಷ್ಟೇ ಅಲ್ಲದೇ, ವಿದ್ಯುತ್ ವಾಹನಗಳಲ್ಲಿ, ಮೊಬೈಲ್‌ನಂತಹ ವಿದ್ಯುನ್ಮಾನ ಸಾಧನಗಳಲ್ಲಿ ಬಳಸುವಂತಹ ಸೋಡಿಯಂ, ಲಿಥಿಯಂನ ಬ್ಯಾಟರಿಗಳನ್ನು ತಯಾರಿಸುವಲ್ಲಿ, ಕಚ್ಚಾವಸ್ತುವಿಗಾಗಿ ಅದೆಷ್ಟು ಗಣಿಗಾರಿಕೆಯನ್ನು ಮಾಡಬೇಕು ಗೊತ್ತೇ? ಆ ಗಣಿಗಾರಿಕೆಯಿಂದ ಕಾಡುಗಳ ನಾಶ, ಭೂಸವಕಳಿ, ಅದರಿಂದ ಅತಿವೃಷ್ಟಿ, ಭೂಕುಸಿತ – ಇವೆಲ್ಲ ನಮ್ಮ ಕಣ್ಣಮುಂದೆಯೇ ನಡೆಯುತ್ತಿದೆ. ಇಂತಹ ಯಾವುದೇ ನಿಸರ್ಗವಿರೋಧಿ ತಂತ್ರಜ್ಞಾನವೂ 'ಮರಳು ಬ್ಯಾಟರಿ'ಯಲ್ಲಿ ಅಡಗಿಲ್ಲ.

ಮರಳು ನಮಗೆ ಪ್ರಕೃತಿಯಲ್ಲಿ ಯಥೇಚ್ಛವಾಗಿ ಲಭ್ಯವಿದೆ. ಮರಳು ಗಣಿಗಾರಿಕೆಯ ಕರಾಳಮುಖ ಪರಿಚಯವಿದೆಯಾದರೂ, ಕಟ್ಟಡ ನಿರ್ಮಾಣಕ್ಕೆ ಅವ್ಯಾಹತವಾಗಿ ಮರಳು ಬೇಕಾದ ಹಾಗಲ್ಲ ಇಲ್ಲಿ. ಒಮ್ಮೆ ತಂದ ಮರಳನ್ನು ಸದಾಕಾಲ ಬಳಸಬಹುದಾಗಿದೆ. ಯೂರೋಪ್, ಅಮೆರಿಕ ಖಂಡಗಳಷ್ಟೇ ಏಕೆ, ನಮ್ಮ ಭಾರತದ ಚಳಿಯೂರುಗಳಿಗೆ ಇದೊಂದು ವರದಾನ. ಮನೆಯಲ್ಲಿ ವಿದ್ಯುತ್ತಿನ, ಕಟ್ಟಿಗೆಯ 'ಹೀಟರ್'ಗಳನ್ನು ಬಳಸದೇ, ಕೇಂದ್ರೀಕೃತ ಉಷ್ಣ ಉತ್ಪಾದಕ ಘಟಕಗಳಿಂದ ಎಲ್ಲ ಮನೆಗಳೂ ಕಚೇರಿಗಳೂ ಬೆಚ್ಚಗಿರಬಹುದಾಗಿದೆ. ಕುಡಿಯುವ ನೀರನ್ನು ಬಿಸಿಯಾಗಿರಿಸಬಹುದಾಗಿದೆ. ಇದನ್ನು ಸಂಪೂರ್ಣವಾಗಿ ನವೀಕರಿಸಬಹುದಾದ ಶಕ್ತಿಯನ್ನು ಬಳಸಿ ಸಾಧ್ಯವಾಗಿಸಬಹುದಾಗಿದೆ ಎಂದು ಮರಳಿನ ಬ್ಯಾಟರಿಯ ತಯಾರಕರು ಈಗಾಗಲೇ ಫಿನ್ಲೆಂಡ್‌ನ ಕಂಕಾನ್ಪಾ ಎಂಬ ಪಟ್ಟಣದಲ್ಲಿ ಸಾಬೀತು ಪಡಿಸಿದ್ದಾರೆ. ಇದರಿಂದ ಹೊರಬರುವ ಶಾಖವನ್ನು ದೊಡ್ಡ ಕಾರ್ಖಾನೆಗಳಲ್ಲೂ ಉದ್ದಿಮೆಗಳಲ್ಲೂ ಬಳಸಬಹುದು ಕೂಡ. ಅದಕ್ಕೆ ದೊಡ್ಡ ವಿಸ್ತೀರ್ಣದ ಪಾತ್ರೆ, ಹೆಚ್ಚು ಮರಳು ಇದ್ದರೆ ಸಾಕು ಎನ್ನುತ್ತಾರೆ, ಈ ಸಂಶೋಧಕರು; ಇವರು ಮಾಲಿನ್ಯ, ಸಂಪನ್ಮೂಲಗಳ ಕೊರತೆ, ಹವಾಮಾನ ವೈಪರೀತ್ಯದಿಂದ ಬಳಲುತ್ತಿರುವ ಜಗತ್ತಿನಲ್ಲಿ ಭರವಸೆಯ ಹೊಸ ಆಶಾಕಿರಣವನ್ನು ಮೂಡಿಸಿದ್ದಾರೆ. ❖

ಎಂದಿಗೂ 'ಹಳತಾಗದ' ಲೋಹ







ನೇಸರ ಕಾಡನಕುಪ್ಪೆ

ಲೋಹದ ಬಳಕೆ ಎಲ್ಲಿ ಇಲ್ಲ ಹೇಳಿ? ಕಟ್ಟಡ ಕಾಮಗಾರಿ, ವಾಹನ ನಿರ್ಮಾಣ, ಆಭರಣ, ಅಡುಗೆಸಾಮಗ್ರಿಗಳಿಂದ ಹಿಡಿದು ನಮ್ಮ ಜೀವನದ ಎಲ್ಲ ಹಂತಗಳಲ್ಲೂ ಲೋಹಗಳು ಹಾಸು ಹೊಕ್ಕಾಗಿ ಸೇರಿಕೊಂಡುಬಿಟ್ಟಿದೆ. ಆದರೆ ಲೋಹಕ್ಕೆ ಇತರೆ ಎಲ್ಲ ಸಾಮಗ್ರಿಗಳಿಗೆ ಇರುವಂತೆ ಒಂದು ಪ್ರಮುಖವಾದ ಮಿತಿಯಿದೆ. ಅದೇನೆಂದರೆ ಕಾಲಾಂತರದಲ್ಲಿ ಲೋಹಗಳು ಹಳತಾಗಿ ಹಾಳಾಗುವುದು.
ಲೋಹ ಹಲವು ಬಗೆಗಳಲ್ಲಿ ಹಾಳಾಗಬಹುದು. ತುಕ್ಕು ಹಿಡಿದು ಇರುವಲ್ಲಿಯೇ ತಿಂದುಹೋಗಬಹುದು. ಹೊರೆ ಹೆಚ್ಚಾದರೆ ಬಿರುಕು ಮೂಡಬಹುದು. ಬಿಸಿಲು, ಗಾಳಿಗೆ ಸವೆಯಬಹುದು. ಏಟು ಬಿದ್ದು ಮುರಿಯಲೂಬಹುದು.

ಈ ತೊಂದರೆಗಳಿಗೆ ಈಗ ಇರುವ ಪರಿಹಾರವೇನು? ಆ ಲೋಹವನ್ನೇ ಬದಲಿಸಿ ಹೊಸತನ್ನು ಬಳಸುವುದು ಅಲ್ಲವೇ? ಇನ್ನು ಮುಂದೆಯೂ ಇದೇ ಪರಿಹಾರ ಬಳಕೆಯಾಗಬೇಕು ಎಂದೇನೂ ಇಲ್ಲ. ಏಕೆಂದರೆ ವಿಜ್ಞಾನಿಗಳು ಹೊಸ ಆವಿಷ್ಕಾರವೊಂದನ್ನು ಮಾಡಿದ್ದಾರೆ. ತನಗೆ ತಾನೇ ಗುಣಹೊಂದುವ ಈ ಲೋಹವು ಹಳತಾಗುವುದೇ ಇಲ್ಲ! ಹಾಗಾಗಿ ಲೋಹಗಳು ಹಾಳಾಗುವ ಸಮಸ್ಯೆಗೆ ಶಾಶ್ವತ ಪರಿಹಾರ ಸಿಗುವಂತಹ ಸಂಶೋಧನೆಯಾಗಿದೆ.




ಈ ಸಂಶೋಧನೆ ಹೊರಜಗತ್ತಿಗೆ ಬಂದಿದ್ದೇ ಆದಲ್ಲಿ ಕಟ್ಟಡಗಳು ಶಿಥಿಲ ಆಗುವುದೇ ಇಲ್ಲ! ಅಪಘಾತಗೊಂಡ ವಾಹನಗಳ ಭಾಗಗಳನ್ನು ಬದಲಿಸುವಂತೆಯೇ ಇಲ್ಲ. ಅಷ್ಟೇ ಏಕೆ? ಈಗಿನ ದಿನಗಳಲ್ಲಿ ಮಾನವನ ದೇಹದಲ್ಲಿ ವೈದ್ಯಕೀಯವಾಗಿ ಲೋಹದ ಬಳಕೆ ಇದೆ. ಉದಾಹರಣೆಗೆ: ಮೂಳೆ ಮುರಿದಾಗ, ಕೃತಕ ಅಂಗಗಳು, ಹಲ್ಲುಗಳ ಗುಣ ಪಡಿಸುವಿಕೆ ಇತ್ಯಾದಿ. ದೇಹದ ಅಗತ್ಯಕ್ಕೆ ತಕ್ಕಂತೆ ಬದಲಾಗುತ್ತ ಕೊಂಚವೂ ಹಾಳಾಗದೇ ಹೊಸತಂತೇ ಇರುವ ಸಾಧ್ಯತೆಗಳ ಸಂಶೋಧನೆ ಇದಾಗಿದೆ.

ಅಮೆರಿಕದ ಸ್ಯಾಂಡಿಯಾ ರಾಷ್ಟ್ರೀಯ ಪ್ರಯೋಗಾಲಯ ಹಾಗೂ ಟೆಕ್ಸಾಸ್ ಎ ಅಂಡ್ ಎಂ ವಿಶ್ವವಿದ್ಯಾಲಯದ ವಿಜ್ಞಾನಿಗಳು ಹೊಸ ಬಗೆಯ ಸಂಶೋಧನೆ ಮಾಡಿದ್ದಾರೆ.

ಡೆಮ್ಕೋವಿಕ್ಸ್ ಸಿದ್ಧಾಂತದ ಅಳವಡಿಕೆ

ಲೆಜೆಕ್ ಎಫ್ ಡೆಮ್ಕೋವಿಕ್ಸ್ ಅಮೆರಿಕದ ಒಡೆನ್ ಕಂಪ್ಯೂಟರೀಕೃತ ಎಂಜಿನಿಯರಿಂಗ್ ಸಂಸ್ಥೆಯ ಸಹಾಯಕ ನಿರ್ದೇಶಕ. ಇವರದು ವಸ್ತುವಿಜ್ಞಾನ ಕ್ಷೇತ್ರದಲ್ಲಿ ದೊಡ್ಡ ಹೆಸರು. ಇವರ 'ಡೆಮ್ಕೋವಿಕ್ಸ್ ಸಿದ್ಧಾಂತ'ದ ಪ್ರಕಾರ ಯಾವುದೇ ಲೋಹವೊಂದನ್ನು ಸತತ ಅಣು ಸೂಕ್ಷ್ಮ ಕಂಪನಕ್ಕೆ ಅಳವಡಿಸಿದರೆ ಅದರಲ್ಲಿರುವ ಬಿರುಕು, ಇತ್ಯಾದಿ ಸಮಸ್ಯೆಗಳು ತನಗೆ ತಾನೇ ಗುಣಹೊಂದುತ್ತವೆ. ಈ ಸಿದ್ಧಾಂತ ಇಷ್ಟು ದಿನಗಳ ಕಾಲ ಕೇವಲ ಕಾಗದದಲ್ಲಿ ಮಾತ್ರವೇ ಇತ್ತು. ಇದೀಗ ಸ್ಯಾಂಡಿಯಾ ರಾಷ್ಟ್ರೀಯ ಪ್ರಯೋಗಾಲಯ ಹಾಗೂ ಟೆಕ್ಸಾಸ್ ಎ ಅಂಡ್ ಎಂ ವಿಶ್ವವಿದ್ಯಾಲಯದ ವಿಜ್ಞಾನಿಗಳು ಈ ಸಿದ್ಧಾಂತವನ್ನು ಪ್ರಯೋಗಕ್ಕೆ ಒಳಪಡಿಸಿ ಸಾಬೀತುಪಡಿಸಿದ್ದಾರೆ.



ಸ್ಯಾಂಡಿಯಾ ರಾಷ್ಟ್ರೀಯ ಪ್ರಯೋಗಾಲಯ ಹಾಗೂ ಟೆಕ್ಸಾಸ್ ಎ ಅಂಡ್ ಎಂ ವಿಶ್ವವಿದ್ಯಾಲಯದ ಮುಖ್ಯ ವಿಜ್ಞಾನಿ ಬ್ರ್ಯಾಡ್ ಬಾಯ್ಸ್ ಮತ್ತು ಅವರ ತಂಡದ ವಿಜ್ಞಾನಿಗಳು ಬಿರುಕು ಬಿಟ್ಟ ಲೋಹದ ಹಾಳೆಯೊಂದನ್ನು ಈ ಪ್ರಯೋಗಕ್ಕೆ ಒಳಪಡಿಸಿದ್ದಾರೆ. ಈ ಲೋಹದ ಮೇಲೆ ಎಲೆಕ್ಟ್ರಾನಿಕ್ ದೂರದರ್ಶಕದ ಸಹಾಯದಿಂದ ಪ್ರಬಲ ಬೆಳಕನ್ನು ಸೆಕೆಂಡಿಗೆ 400 ಬಾರಿ ಹಾಯಿಸಿದ್ದಾರೆ. ಇದರ ಪರಿಣಾಮ ಅತ್ಯದ್ಭುತವಾಗಿ ವಿಜ್ಞಾನಿಗಳಿಗೆ ಕಂಡುಬಂದಿದೆ. ಈ ಪ್ರಕ್ರಿಯೆಯನ್ನು ಬಂದ್ ಮಾಡಿ ಲೋಹವನ್ನು ವೀಕ್ಷಿಸಿದಾಗ ಆ ಲೋಹದ ಮೇಲಿದ್ದ ಬಿರುಕುಗಳೆಲ್ಲಾ ಮುಚ್ಚಿಹೋಗಿದ್ದವು. ಅಲ್ಲದೇ ಲೋಹದ ಇತರ ಭಾಗಗಳಲ್ಲಿನ ಬಿರುಕುಗಳು ನಿಧಾನವಾಗಿ ಮುಚ್ಚಿಕೊಳ್ಳಲು ಶುರುವಾಗಿದ್ದವು.

'ಈ ಪ್ರಯೋಗದ ಮೂಲಕ ನಾವು ಡೆಮ್ಕೋವಿಕ್ಸ್ ಸಿದ್ಧಾಂತವನ್ನು ಸಾಬೀತು ಪಡಿಸಿದ್ದೇವೆ. ಈ ರೀತಿಯ ಪ್ರಯೋಗವನ್ನು ಜನಸಾಮಾನ್ಯರು ತಮ್ಮ ಮನೆಗಳಲ್ಲಿ ನಡೆಸಿದರೆ ಹಾನಿಯಾದ ಲೋಹ ಸರಿಯಾಗುತ್ತದೆ ಎಂದು ಅರ್ಥವಲ್ಲ. ಜನಸಾಮಾನ್ಯರು ಬಳಸಬಲ್ಲ ಸರಳ ಸಾಧನಗಳನ್ನು ನಾವು ತಯಾರಿಸಿಕೊಡುತ್ತೇವೆ. ಇಂತಹ ಸಾಧನಗಳನ್ನು ಅವರು ತಮ್ಮ ವಾಹನಗಳಿಗೆ ಅಳವಡಿಸಿಕೊಳ್ಳಬಹುದು. ಕಟ್ಟಡದಲ್ಲಿ ಇರಿಸಿಕೊಳ್ಳಬಹುದು. ದೇಹದಲ್ಲಿ ಬಳೆ, ಓಲೆ, ಗಡಿಯಾರದಂತೆ ಧರಿಸಬಹುದು' ಎಂದು ವ್ಯಾಖ್ಯಾನಿಸಿದ್ದಾರೆ.

'ಇದರಿಂದ ಹೊಸ ಲೋಹದ ಮೇಲಿನ ಅವಲಂಬನೆ ಕಡಿಮೆಯಾಗುತ್ತದೆ ಎಂಬ ವಿಶ್ವಾಸ ನಮಗಿದೆ. ಈಗಿನ ದಿನಗಳಲ್ಲಿ ಲೋಹವೂ ಸೇರಿದಂತೆ ಎಲ್ಲ ನೈಸರ್ಗಿಕ ಸಂಪನ್ಮೂಲಗಳ ಮರುಬಳಕೆಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಕಾರಣ ಬಹು ಸರಳ. ಸಂಪನ್ಮೂಲಗಳು ಖಾಲಿಯಾಗುತ್ತಿವೆ. ಆದರೆ, ಮಾನವ ಬೇಡಿಕೆ ಕಡಿಮೆಯಾಗಿಲ್ಲ. ಇದಕ್ಕೆ ಪರಿಹಾರ ಎಂಬಂತೆ ನಮ್ಮ ಸಂಶೋಧನೆಯು ದಾರಿ ತೋರಿಸಬಲ್ಲದು' ಎಂದು ವಿಜ್ಞಾನಿ ಬ್ರ್ಯಾಡ್ ಬಾಯ್ಸ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ❖

ಉಚಿತ AI ಆ್ಯಂಕರ್ ಸೃಷ್ಟಿ!

> ಕೃತಕ ಬುದ್ಧಿಮತ್ತೆಯುಳ್ಳ ಕೃತಕ ಆ್ಯಂಕರ್‌ಗಳು, ಭಾರತೀಯ ಭಾಷೆಗಳಿಗೆ ಸಂಬಂಧಿಸಿದಂತೆ ಇನ್ನೂ ಪ್ರಾಯೋಗಿಕ ಹಂತದಲ್ಲಷ್ಟೇ ಇವೆಯಾದರೂ, ಬೇಸಿಕ್ ಆಗಿರುವ ಎಐ ಅವತಾರಗಳನ್ನು ಅಂತರ್ಜಾಲದ ಮೂಲಕ ನಾವು ಕೂಡ ಸೃಷ್ಟಿಸಬಹುದು, ಅದೂ ಉಚಿತವಾಗಿ ಎಂಬುದು ಗೊತ್ತೇ?



ಅವಿನಾಶ್ ಬಿ.

ಈಗ ಎಲ್ಲೆಲ್ಲೂ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್' (ಎಐ) ಮಾತು. 'ಚಾಟ್‌ಜಿಪಿಟಿ' ಎಂಬ 'ಎಐ' ಆಧಾರಿತ ತಂತ್ರಜ್ಞಾನವೊಂದು ಬಂದು, ಅದರಿಂದ ನಮಗೆ ಬೇಕಿದ್ದನ್ನು ಪಠ್ಯರೂಪದಲ್ಲಿ ಬೇಕಾಗಿರುವುದನ್ನು ಸಾಧಿಸಿಕೊಳ್ಳಬಹುದು ಎಂಬುದು ಕೆಲವು ತಿಂಗಳ ಹಿಂದೆ ಸುದ್ದಿಯಾಗಿದ್ದರೆ, ಈಗಿನ ಟ್ರೆಂಡ್ 'ಎಐ ಆ್ಯಂಕರ್‌ಗಳು', ಎಂದರೆ 'ಸುದ್ದಿವಾಚಕ'ರು. ಈಗ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಕ್ಷೇತ್ರದಲ್ಲಾದ ಭರ್ಜರಿ ಸುಧಾರಣೆಗಳಾದ ಬಳಿಕದ ಬೆಳವಣಿಗೆ ಇದು. ಇವು ಮಾತನಾಡುವ ಬೊಂಬೆಗಳಂತೆ ಭೌತಿಕ ಶರೀರ ಹೊಂದಿಲ್ಲ. ಕೇವಲ ವಿಡಿಯೊ ಮೂಲಕ ಮಾತ್ರ ಕಾಣಿಸಿಕೊಳ್ಳಬಲ್ಲಂಥವು ಎಂಬುದನ್ನು ಗಮನಿಸಬೇಕು.

ಭಾರತೀಯ ಭಾಷೆಗಳಿಗೆ ಸಂಬಂಧಿಸಿದಂತೆ ಇನ್ನೂ ಪ್ರಾಯೋಗಿಕ ಹಂತದಲ್ಲಷ್ಟೇ ಇವೆಯಾದರೂ, ಬೇಸಿಕ್ ಆಗಿರುವ ಎಐ ಅವತಾರಗಳನ್ನು ಅಂತರ್ಜಾಲದ ಮೂಲಕ ನಾವು ಕೂಡ ಸೃಷ್ಟಿಸಬಹುದು; ಅದೂ ಉಚಿತವಾಗಿ ಎಂಬುದು ಗೊತ್ತೇ? ಅಂತರ್ಜಾಲದಲ್ಲಿ ಅದೆಷ್ಟೋ ವೆಬ್ ತಾಣಗಳು ಇದೀಗ ಆರ್ಟಿಫಿಶಿಯಲ್ ಇಂಟೆಲಿಜೆನ್ಸ್ ಆಧಾರಿತ ಪುರುಷ ಅಥವಾ ಮಹಿಳಾ 'ಕೃತಕ ಬುದ್ಧಿವಂತ'ರನ್ನು ತಯಾರಿಸಲು ನಮಗೆ ನೆರವು ನೀಡುತ್ತವೆ. ಇವುಗಳನ್ನೇ ಸದ್ಯಕ್ಕೆ ಹೆಚ್ಚಿನವರು 'ಆ್ಯಂಕರ್' ಎಂದು ಕರೆಯುತ್ತಾರೆ. ಆದರೆ, ಆ್ಯಂಕರ್ ಎಂದರೆ, ಕೇವಲ ಸುದ್ದಿ ಓದುವುದಷ್ಟೇ ಅಲ್ಲ; ಚರ್ಚೆಯಲ್ಲಿ ಭಾಗವಹಿಸುವ, ಪ್ರಶ್ನೆಗಳಿಗೆ ಉತ್ತರಿಸುವ, ಸಂವಹನ ಕೌಶಲ ಇರಬೇಕಾಗುತ್ತದಲ್ಲ. ಅದು ಈ 'ಎಐ ವರ್ಚುವಲ್' ಅವತಾರಗಳಿಗೆ ಇಲ್ಲ. ಈಗಿರುವ ಹೆಚ್ಚಿನವು ಒಂದೋ ಊಡಿಸಿದ ಮಾಹಿತಿಯನ್ನು (ಇಂಗ್ಲಿಷ್ ಆದರೆ ಸಲೀಸಾಗಿ) ಓದುತ್ತವೆ ಅಥವಾ ಅವುಗಳಿಗೆ ಸ್ಪಷ್ಟವಾದ ಕನ್ನಡಕ್ಕಾಗಿ ನಿಜವಾದ ಆ್ಯಂಕರ್‌ಗಳ ಧ್ವನಿಯನ್ನು ಊಡಿಸಲಾಗುತ್ತದೆ. ತುಟಿಯ ಚಲನೆಯಲ್ಲಿ ಕೊಂಚ ವ್ಯತ್ಯಾಸವನ್ನು ಗಮನಿಸಬಹುದು.

ಹೇಗೆ ಕೆಲಸ ಮಾಡುತ್ತದೆ?

ನಾವು ಈಗಾಗಲೇ ಸ್ಮಾರ್ಟ್ ಫೋನ್‌ಗಳಲ್ಲಿ ಗೂಗಲ್ ಅಸಿಸ್ಟೆಂಟ್, ಕೋರ್ಟನಾ, ಸಿರಿ ಮುಂತಾದ ಪಠ್ಯದಿಂದ ಧ್ವನಿ ('ಟೆಕ್ಸ್ಟ್ ಟು ಸ್ಪೀಚ್') ಹೊರಡಿಸಬಲ್ಲ ತಂತ್ರಜ್ಞಾನವನ್ನು ಬಳಸುತ್ತಿದ್ದೇವೆ. ಇದೇ ತಂತ್ರಜ್ಞಾನದ ಜೊತೆಗೆ, ಸ್ಕ್ರಿಪ್ಟ್ ತಯಾರಿಸಲು ನೆರವಾಗುವ ಚಾಟ್‌ಜಿಪಿಟಿಯಂಥ ಎಐ ತಂತ್ರಜ್ಞಾನ ಮತ್ತು ವಿಡಿಯೊ ತಯಾರಿಸಲು ಲಭ್ಯವಿರುವ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ - ಇವುಗಳ ಸಂಗಮದಿಂದ ಈ ವಿಡಿಯೊ ಆ್ಯಂಕರ್ ಕೆಲಸ ಮಾಡುತ್ತದೆ. ವಿಡಿಯೊದಲ್ಲಿರುವ ಮಾನವನ ಮುಖಕ್ಕೆ ನಮ್ಮ ಮುಖವನ್ನು ಕೂಡ ಅಳವಡಿಸಬಹುದು. ಇದನ್ನೇ ವೈಜ್ಞಾನಿಕ ಭಾಷೆಯಲ್ಲಿ 'ಡೀಪ್ ಫೇಕ್' ತಂತ್ರಜ್ಞಾನ ಎನ್ನುತ್ತಾರೆ. ಇದಕ್ಕೆ ನಮ್ಮ ಧ್ವನಿಯನ್ನೇ ಅಳವಡಿಸಬಹುದು ಅಥವಾ 'ವಾಯ್ಸ್ ಎಡಿಟಿಂಗ್' ಮೂಲಕ ನಮಗೆ ಬೇಕಾದಂತೆಯೂ ಧ್ವನಿ ತಿರುಚಬಹುದು. ಈಗಾಗಲೇ ಹಲವು ಚಲನಚಿತ್ರಗಳಲ್ಲಿ ಇವುಗಳ ಬಳಕೆಯಾಗಿವೆ. ವಿಡಿಯೊ ಗೇಮ್‌ಗಳಲ್ಲಂತೂ ಇವನ್ನು ಎಲ್ಲರೂ ನೋಡಿರುತ್ತೀರಿ.

ಇದೇ ಕಾರಣಕ್ಕೆ ಇತ್ತೀಚೆಗೆ ಅಮೆರಿಕದಲ್ಲಿ ಹಾಲಿವುಡ್ ಸಿನಿಮಾ ನಟ-ನಟಿಯರು ಮತ್ತು ಚಿತ್ರಬರಹಗಾರರು ('ಸ್ಕ್ರಿಪ್ಟ್ ರೈಟರ್'ಗಳು) ಭಾರಿ ದೊಡ್ಡ ಪ್ರತಿಭಟನೆಯನ್ನೇ ನಡೆಸಿದ್ದರು ಎಂಬುದು ನೆನಪಿರಲಿ. ಸಿನಿಮಾದಲ್ಲಿ ಆಧುನಿಕ ತಂತ್ರಜ್ಞಾನ ಹೊಸದೇನಲ್ಲ; ಆದರೆ ಖ್ಯಾತ ನಟ-ನಟಿಯರ ಮುಖವನ್ನು ಬಳಸಿಕೊಂಡಾಗ ಆತಂಕಗೊಂಡಿದ್ದಾರೆ. ಅದೇ ರೀತಿ ಕಥೆಗಳನ್ನು, ಡೈಲಾಗ್‌ಗಳನ್ನು ಚಾಟ್‌ಜಿಪಿಟಿಯಂಥ ಎಐ ಎಂಜಿನ್‌ಗಳ ಮೂಲಕ ಸಿದ್ಧಪಡಿಸಲಾಗುವುದರಿಂದ ಸ್ಕ್ರಿಪ್ಟ್ ಬರಹಗಾರರ ಉದ್ಯೋಗಕ್ಕೂ ಕುತ್ತಾಗಿದೆ.

ದುರ್ಬಳಕೆ: ಇತ್ತೀಚೆಗೆ ಸ್ನೇಹಿತನ ಮುಖವಾಡದ ಮೂಲಕ ವಿಡಿಯೊ ಕರೆ ಮಾಡಿ, ಸಾವಿರಾರು ರೂಪಾಯಿ ವಂಚಿಸಿದ ಪ್ರಕರಣವೊಂದು ಕೇರಳದಿಂದ ವರದಿಯಾಗಿತ್ತು. ಅದರಲ್ಲೂ ಬಳಸಿದ್ದು ಇದೇ 'ಡೀಪ್ ಫೇಕ್ ತಂತ್ರಜ್ಞಾನ'ವನ್ನೇ. ಸ್ನೇಹಿತರೇ ವಿಡಿಯೊ ಕರೆ ಮಾಡಿದರೂ ನಾವು ಎಚ್ಚರದಿಂದಿರಬೇಕಾಗುತ್ತದೆ.

ನಿಮ್ಮದೇ ಎಐ ಆ್ಯಂಕರ್ ಸೃಷ್ಟಿಸಿ

ನ್ಯೂಸ್ ಆ್ಯಂಕರ್‌ಗಳನ್ನು ಸೃಷ್ಟಿ ಮಾಡಿಕೊಡಬಲ್ಲ aistudios.com, hyperweb.ai, synthesia.io ಮುಂತಾದ ಸಾಕಷ್ಟು ವೆಬ್ ತಾಣಗಳಿವೆ. AIStudios ಅಥವಾ ಡೀಪ್‌ಬ್ರೈನ್ ತಾಣದಲ್ಲಿ ಒಂದು ನಿಮಿಷದ ಗ್ರೀನ್ ಸ್ಕ್ರೀನ್ ವಿಡಿಯೊವನ್ನು ಯಾವುದೇ ವಾಟರ್-ಮಾರ್ಕ್ ಇಲ್ಲದೆ ಉಚಿತವಾಗಿ ಪಡೆಯಬಹುದು. ಈ ವಿಡಿಯೊವನ್ನು ಎಡಿಟ್ ಮಾಡಿ ನಾವು ಕೂಡ ನಮ್ಮದೇ ಆ್ಯಂಕರ್ ಅನ್ನು ಲೋಕಕ್ಕೆ ಪರಿಚಯಿಸಬಹುದು. ಆದರೆ, ಹೆಚ್ಚಿನ 'ಬುದ್ಧಿಮತ್ತೆ'ಯ ಆ್ಯಂಕರ್‌ಗಳು ಎಂದರೆ, ನಮಗೆ ಬೇಕಾದಂತೆ ಒಂದಿಷ್ಟು ಮಾರ್ಪಾಟುಗಳನ್ನು ಮಾಡಬಹುದಾದ ಆ್ಯಂಕರ್‌ಗಳು ಬೇಕೆಂದಾದರೆ ಶುಲ್ಕ ಪಾವತಿಸಬೇಕಾಗುತ್ತದೆ.



AI ಸ್ಟುಡಿಯೋಸ್ ಅಥವಾ ಡೀಪ್‌ಬ್ರೈನ್ ತಾಣದಲ್ಲಿ 'ಕ್ರಿಯೇಟ್ ಎ ಫ್ರೀ ಎಐ ವಿಡಿಯೊ' ಎಂಬ ಬಟನ್ ಕಾಣಿಸುತ್ತದೆ. ಅದನ್ನು ಒತ್ತಿದ ತಕ್ಷಣ, ಯಾವ ವಿಷಯದ ಆ್ಯಂಕರ್ `ಬೇಕು ಎಂದು ಆಯ್ಕೆ ಮಾಡಿಕೊಳ್ಳಬೇಕು. ಮತ್ತು ಚಾಟ್‌ಜಿಪಿಟಿ ತಂತ್ರಜ್ಞಾನವು ಅಗತ್ಯವಾದ ಪಠ್ಯವನ್ನು ಅಲ್ಲೇ ಒದಗಿಸುತ್ತದೆ. ವಿಭಿನ್ನ ಬಗೆಯ ಎಐ ಅವತಾರಗಳು (ವಿಭಿನ್ನ ಹಾವ-ಭಾವದ, ಉಡುಗೆಯ ಎಐ ಮಾಡೆಲ್‌ಗಳು) ಕಾಣಿಸುತ್ತವೆ. ನಮಗೆ ಬೇಕಾದುದನ್ನು ಆಯ್ಕೆ ಮಾಡಿಕೊಂಡು, ಅಗತ್ಯವಿದ್ದರೆ ನಾಲ್ಕೈದು ಸ್ಲೈಡ್‌ಗಳನ್ನು ಬಳಸಬಹುದು. ಹಿನ್ನೆಲೆ ಚಿತ್ರ, ವಿಡಿಯೊ, ಶೀರ್ಷಿಕೆ, ಪಠ್ಯ - ಹೀಗೆ ಎಲ್ಲವನ್ನೂ ನಮಗೆ ಬೇಕಾದಂತೆ ಬದಲಿಸುವ, ಇಡೀ 'ಟೆಂಪ್ಲೇಟ್' (ಮೂಲ ಹಂದರ) ಅನ್ನೇ ಬದಲಾಯಿಸಿಕೊಳ್ಳುವ ಆಯ್ಕೆಯಿದೆ. ಪ್ರತೀ ಸ್ಲೈಡ್‌ಗೆ ಪಠ್ಯವನ್ನು ನಿರ್ದಿಷ್ಟ ಜಾಗದಲ್ಲಿ ಹಾಕಿದರೆ, ಇಂಗ್ಲಿಷ್ ಧ್ವನಿ ತಾನಾಗಿ ರಚನೆಯಾಗುತ್ತದೆ. ಕನ್ನಡಧ್ವನಿಯ ಆಯ್ಕೆಯಿದ್ದರೂ ಅದೀಗ ಪ್ರಾಯೋಗಿಕ ಹಂತದಲ್ಲಿದೆ.

ಒಂದು ನಿಮಿಷಕ್ಕಾಗುವಷ್ಟು ಪಠ್ಯವನ್ನು ಸಿದ್ಧಪಡಿಸಿದರೆ ಇಂಗ್ಲಿಷ್ ಧ್ವನಿಯ ವಿಡಿಯೊ ಉಚಿತವಾಗಿ ದೊರೆಯುತ್ತದೆ. ಕನ್ನಡಕ್ಕಾದರೆ ನಾವೇ ಪ್ರತ್ಯೇಕವಾಗಿ ಧ್ವನಿ ಕ್ಲಿಪ್‌ಗಳನ್ನು ರೆಕಾರ್ಡ್ ಮಾಡಿಕೊಂಡು ಆ ವಿಡಿಯೊಗೆ ಅಳವಡಿಸಬಹುದು. ಗ್ರೀನ್ ಸ್ಕ್ರೀನ್ ಹಿನ್ನೆಲೆಯ ವಿಡಿಯೊಗಳನ್ನೂ ಪಡೆಯಬಹುದು. ಇಲ್ಲಿ, ಮಾತನಾಡುವ ಕೃತಕ ಆ್ಯಂಕರ್‌ನ ತುಟಿಯ ಚಲನೆಯಲ್ಲಿ ವ್ಯತ್ಯಾಸವಿದೆಯಾದರೂ, ತಕ್ಷಣಕ್ಕೆ ಜನಸಾಮಾನ್ಯರಲ್ಲಿ ಅಚ್ಚರಿ ಮೂಡಿಸಲು ಇಷ್ಟು ಸಾಕು! synthesia.io ತಾಣದಲ್ಲಿ ಕಚೇರಿ ಇಮೇಲ್ ವಿಳಾಸ ಬೇಕಾಗುತ್ತದೆ ಮತ್ತು ಅದು ಕನ್ನಡವನ್ನು ಸ್ಪಷ್ಟವಾಗಿ ಸ್ವಯಂ ಓದುತ್ತದೆ.

ಎಲ್ಲ ಸಿದ್ಧವಾದ ಬಳಿಕ, ಬಲ ಮೇಲ್ಭಾಗದಲ್ಲಿರುವ 'ಎಕ್ಸ್‌ಪೋರ್ಟ್' ಎಂಬುದನ್ನು ಕ್ಲಿಕ್ ಮಾಡಿದಾಗ, 'ಸೈನ್‌ಅಪ್' ಅನ್ನು ಕೇಳುತ್ತದೆ. ಹೆಸರು, ಇಮೇಲ್ ವಿಳಾಸಗಳನ್ನೂ ಕೇಳುತ್ತದೆ. ಅವನ್ನು ತುಂಬಿದರಾಯಿತು. ಒಂದು ನಿಮಿಷದೊಳಗಿದ್ದರೆ, ವಿಡಿಯೊ ಡೌನ್‌ಲೋಡ್ ಆಯ್ಕೆ ಕಾಣಿಸುತ್ತದೆ. ಬೇಕಿದ್ದರೆ, ವಿಡಿಯೊ ಎಡಿಟಿಂಗ್ ಗೊತ್ತಿದ್ದರೆ ಇದನ್ನು ಮತ್ತಷ್ಟು ಆಪ್ತವಾಗಿಸಬಹುದು. ವಯಸ್ಸೇ ಆಗದ, ದಣಿವೂ ಇಲ್ಲದ, ನಿರ್ಭಾವುಕ ವಿಡಿಯೊ ಆ್ಯಂಕರ್ ಸಿದ್ಧ! 'ನಮ್ಮ ಮನೆಯ ಪ್ರಥಮ ಆ್ಯಂಕರ್' ಎಂದು ನೀವು ಸೋಷಿಯಲ್ ಮೀಡಿಯಾದಲ್ಲಿ ಹಂಚಿಕೊಂಡು ಸಂಭ್ರಮಿಸಬಹುದು. ❖

ಇಬ್ಬರು ಕಂದಮ್ಮ ಸೇರಿ ನಾಲ್ವರ ಸಾವು • ಕಲ್ಯಾಣ ಕರ್ನಾಟಕದಲ್ಲೂ ಉತ್ತಮ ಮಳೆ • ಕೆಲವೆಡೆ ಮನೆಗಳಿಗೆ ಹಾನಿ

ಧಾರಾಕಾರ ಮಳೆ: ನಿಲ್ಲದ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಧಾರಾಕಾರ ಮಳೆ ಮಂಗಳವಾರವೂ ಮುಂದುವರಿದಿದೆ. ಮಳೆ ಸಂಬಂಧಿ ಅವಘಡಗಳೂ ದಿನೇ ದಿನೇ ಹೆಚ್ಚುತ್ತಿದ್ದು, ರಾಜ್ಯದಲ್ಲಿ ಇಬ್ಬರು ಕಂದಮ್ಮಗಳು ಸೇರಿ ನಾಲ್ವರು ಮೃತಪಟ್ಟಿದ್ದಾರೆ. ಇಬ್ಬರು ಮಳೆ ನೀರಿಗೆ ಕೊಚ್ಚಿಕೊಂಡು ಹೋಗಿದ್ದಾರೆ.

ಹಲವೆಡೆ ಸೇತುವೆಗಳು ಮುಳುಗಡೆ, ರಸ್ತೆಗಳು ಜಲಾವೃತವಾಗಿವೆ. ಗುಡ್ಡ ಕುಸಿತವೂ ಮುಂದುವರಿದಿದೆ. ನದಿ ಪಾತ್ರದ ಹಲವು ಗ್ರಾಮಗಳಲ್ಲಿ ನೆರೆ ಪರಿಸ್ಥಿತಿ ನಿರ್ಮಾಣವಾಗಿದ್ದು, ಕೆಲ ಗ್ರಾಮಗಳು ಮುಳುಗಡೆಯಾಗಿವೆ.

ಮಳೆಗೆ ಮನೆಗೋಡೆ ಕುಸಿದ ಪರಿಣಾಮ ವಿಜಯಪುರ ತಾಲ್ಲೂಕಿನ ಕನ್ನೂರು ಗ್ರಾಮದ ವೃದ್ಧೆ ಶಿವಮ್ಮ ನೂರುಂದಪ್ಪ ಸಾವಳಗಿ (85), ಹಾವೇರಿ ಜಿಲ್ಲೆಯ ಗುತ್ತಲದ ಮಾಳಾಪುರದ ಬಾಲಕಿ ಭಾಗ್ಯ ಮಲ್ಲಪ್ಪ ಚಳ್ಳಮರದ (3), ದಾವಣಗೆರೆ ಜಿಲ್ಲೆಯ ಮಲೇಬೆನ್ನೂರಿನಲ್ಲಿ ಮಗು ಸ್ಫೂರ್ತಿ (1) ಮೃತಪಟ್ಟಿದ್ದಾರೆ. ಸ್ಫೂರ್ತಿಯ ಪೋಷಕರಾದ ಕೆಂಚಪ್ಪ, ಲಕ್ಷ್ಮಿದೇವಿ ಅವರಿಗೆ ಗಾಯಗಳಾಗಿದ್ದು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಹಾಸನ ಜಿಲ್ಲೆಯ ಅರಸೀಕೆರೆ ತಾಲ್ಲೂಕಿನ ಕಣಕಟ್ಟೆ ಹೋಬಳಿಯ ದೊಡ್ಡಮೇಟಿ ಕುರ್ಕೆ ಗ್ರಾಮದ ಕಾಲೊನಿಯಲ್ಲಿ ಮಳೆಯಿಂದಾಗಿ ಮನೆ ಕುಸಿದು ಗೌರಮ್ಮ (62) ಮೃತಪಟ್ಟಿದ್ದಾರೆ. ಕಾಲಿಗೆ ಗಾಯವಾಗಿರುವ ಪತಿ ನಟರಾಜ್ ಅವನ್ನು ಅರಸೀಕೆರೆಯ ತಾಲ್ಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ. ಮೂವರು ಮೊಮ್ಮಕ್ಕಳಿಗೂ ಸಣ್ಣಪುಟ್ಟ ಗಾಯಗಳಾಗಿವೆ.

ಬೀದರ್ ಜಿಲ್ಲೆ ಬಸವಕಲ್ಯಾಣ ತಾಲ್ಲೂಕಿನ ಧನ್ನೂರ (ಆರ್) ಗ್ರಾಮದಲ್ಲಿ ಮಲ್ಲಪ್ಪ ಶರಣಪ್ಪ ಕತೆಪನೋರ್ (25) ಎಂಬ ಯುವಕ ಸೋಮವಾರ ರಾತ್ರಿ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಹಳ್ಳದ ಬಳಿ ನಡೆದುಕೊಂಡು ಹೋಗುವಾಗ ನೀರಿನ ಸೆಳೆತಕ್ಕೆ ಕೊಚ್ಚಿಕೊಂಡು ಹೋಗಿದ್ದಾರೆ.

ಉಡುಪಿ ಜಿಲ್ಲೆ ಬೈಂದೂರು ತಾಲ್ಲೂಕು ಜಡ್ಕಲ್ ಗ್ರಾಮದ ಮಕ್ಕೆ ಕೊಳಕೆಹೊಳೆ ನಿವಾಸಿ ಸುರೇಶ (28) ಮನೆಯಿಂದ ನಾಪತ್ತೆಯಾಗಿದ್ದಾರೆ. ಜುಲೈ 22 ರಂದು ಮನೆಯಲ್ಲಿ ಮಲಗಿದ್ದರು. ಮರುದಿನ ಬೆಳಿಗ್ಗೆ ಮನೆಯವರು ಎದ್ದು ನೋಡಿದಾಗ ಸುರೇಶ ಇರಲಿಲ್ಲ. ಮನೆ ಪಕ್ಕದ ನದಿನೀರಿನಲ್ಲಿ ಕೊಚ್ಚಿ ಹೋಗಿರಬಹುದು ಎಂದು ಸಂಬಂಧಿಕರು ಶಂಕೆ ವ್ಯಕ್ತಪಡಿಸಿದ್ದು, ಕೊಲ್ಲೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಡುಪಿ ತಾಲ್ಲೂಕು ಅಲೆವೂರು ಗ್ರಾಮ ಪಂಚಾಯಿತಿ ಬಳಿ ಮರಬಿದ್ದು ಅನಿಲ್ ಕುಮಾರ್ ಎಂಬುವರಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಅರಶಿನಗುಂಡಿ ಜಲಪಾತದಲ್ಲಿ ಕೊಚ್ಚಿಹೋಗಿರುವ ಭದ್ರಾವತಿ ತಾಲ್ಲೂಕಿನ ಸುಣ್ಣದ ಹಳ್ಳಿ ಕೆ.ಎಚ್. ನಗರದ ಶರತ್ ಕುಮಾರ್ ಅವರ ಪತ್ತೆ ಕಾರ್ಯ ಮುಂದುವರಿದಿದೆ. ಮುಳುಗು ತಜ್ಞ ಈಶ್ವರ ಮಲ್ಪೆ ಅವರ ತಂಡದಿಂದ ಕಾರ್ಯಾಚರಣೆ ನಡೆಸಲಾಯಿತು. ಚಿತ್ರದುರ್ಗದ ಜ್ಯೋತಿರಾಜ್ ಯಾನೆ ಕೋತಿರಾಜ್ ನೇತೃತ್ವದಲ್ಲಿ ಪತ್ತೆ ಕಾರ್ಯಾ ಚರಣೆ ಮುಂದುವರಿದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕೃಷ್ಣೆಯಲ್ಲಿ ಏರುತ್ತಿರುವ ನೀರಿನ ಮಟ್ಟ: ಬೆಳಗಾವಿ ಜಿಲ್ಲಾ ವ್ಯಾಪ್ತಿಯಲ್ಲಿ ಕೃಷ್ಣಾ, ಮಲಪ್ರಭಾ, ಘಟಪ್ರಭಾ ಸೇರಿ ಎಲ್ಲ ನದಿಗಳಲ್ಲಿ ನೀರಿನ ಮಟ್ಟ ಏರಿಕೆಯಾಗಿದೆ. ನಿಪ್ಪಾಣಿ ಹಾಗೂ ಚಿಕ್ಕೋಡಿ ತಾಲ್ಲೂಕಿನ ನದಿತೀರದ ಗ್ರಾಮಗಳ ಜನರು ಎಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ. ಧಾರವಾಡ ಜಿಲ್ಲಾ ವ್ಯಾಪ್ತಿಯಲ್ಲಿ ಗಾಳಿ, ಮಳೆಗೆ ಒಟ್ಟು 129 ಮನೆಗಳಿಗೆ ಹಾನಿಯಾಗಿವೆ.

ತಗ್ಗಿದ ಮಳೆ- ನಿಲ್ಲದ ಭೂಕುಸಿತ: ಹಾಸನ ಜಿಲ್ಲೆಯ ಮಲೆನಾಡು ಭಾಗದಲ್ಲಿ ಮಳೆಯ ಆರ್ಭಟ ಸ್ವಲ್ಪ ಕಡಿಮೆಯಾಗಿದೆ. ಆದರೆ, ಭೂಕುಸಿತ ಘಟನೆಗಳು ಮುಂದುವರಿದಿವೆ. ನಾಲ್ಕು ಮನೆಗಳಿಗೆ ಪೂರ್ಣ ಹಾಗೂ ಎಂಟು ಮನೆಗಳಿಗೆ ಭಾಗಶಃ ಹಾನಿಯಾಗಿದೆ.

ಸಕಲೇಶಪುರ ತಾಲ್ಲೂಕಿನ ಗುಳಗಳಲೆ ಗ್ರಾಮದ ಬಳಿ ಕುಸಿದಿರುವ ರಾಷ್ಟ್ರೀಯ ಹೆದ್ದಾರಿಯ ತಡೆಗೋಡೆಯಿಂದ ಮಣ್ಣು ಕುಸಿಯಲು ಆರಂಭಿಸಿದೆ. ಚಳ್ಳ ಹಾಡ್ಯ ಬಳಿ ರಸ್ತೆಗೆ ಮಣ್ಣು ಕುಸಿದಿದ್ದರಿಂದ ಹಳ್ಳಿಬೈಲು, ಹಳ್ಳಿಬೈಲು ಕಾಲೊನಿ, ದಿನೇಕೆರೆ-ಹೆತ್ತೂರು ಮಾರ್ಗದ ರಸ್ತೆ ಸಂಪರ್ಕ ಕಡಿತವಾಗಿತ್ತು.

ಸಾಗರ ತಾಲ್ಲೂಕಿನ ಸೈದೂರು-ಸಾಗರ ನಡುವೆ ವರದಾ ನದಿ ಅಪಾಯಮಟ್ಟ ಮೀರಿ ಹರಿಯುತ್ತಿದ್ದು, ಸೇತುವೆ ಜಲಾವೃತವಾಗಿದೆ. ಇದರಿಂದ ಸೈದೂರು ಸೇರಿದಂತೆ ಸುತ್ತಲಿನ ಹಳ್ಳಿಗಳು ತಾಲ್ಲೂಕು ಕೇಂದ್ರದೊಂದಿಗಿನ ಸಂಪರ್ಕ ಕಳೆದುಕೊಂಡಿವೆ. ಗಾಜನೂರಿನ ತುಂಗಾ ಜಲಾಶಯದಿಂದ 60,455 ಕ್ಯುಸೆಕ್ ನೀರನ್ನು ನದಿಗೆ ಹರಿಸಲಾಗುತ್ತಿದೆ. ಶಿಕಾರಿಪುರದ ಅಂಜನಾಪುರ ಜಲಾಶಯ ಭರ್ತಿ ಆಗಿದ್ದು, ಕೋಡಿ ಬಿದ್ದಿದೆ.

ಕಲಬುರಗಿ ಜಿಲ್ಲೆಯ ವಿವಿಧೆಡೆ ಹಾಗೂ ನೆರೆಯ ತೆಲಂಗಾಣ ಪ್ರದೇಶದಲ್ಲಿ ಸೋಮವಾರ ತಡರಾತ್ರಿ ಸುರಿದ ಮಳೆಗೆ ಕಾಗಿಣಾ ಮತ್ತು ಇದರ ಉಪನದಿ ಮುಲ್ಲಾಮಾರಿ ಸೋಮವಾರ ಉಕ್ಕಿ ಹರಿದವು. 12 ಸೇತುವೆಗಳು ಮುಳುಗಿ, ಸಂಚಾರ ಸ್ಥಗಿತಗೊಂಡಿದೆ.



ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸದಲಗಾ ಬಳಿ ದೂಧಗಂಗಾ ನದಿ ಮೈದುಂಬಿಕೊಂಡು ಹರಿಯುತ್ತಿರುವುದು



ಸೇಡಂ ತಾಲ್ಲೂಕಿನ ಮಳಖೇಡಾ ಸೇತುವೆ ಕಾಗಿಣಾ ನದಿ ನೀರಿನಲ್ಲಿ ಮುಳುಗಿದೆ

9 ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್'

ಬೆಂಗಳೂರು: ರಾಜ್ಯದ ಹಲವೆಡೆ ಬುಧವಾರವೂ ಮಳೆಯಬ್ಬರ ಮುಂದುವರಿಯುವ ಸಾಧ್ಯತೆಯಿದ್ದು, ಹವಾಮಾನ ಇಲಾಖೆಯು 9 ಜಿಲ್ಲೆಗಳಿಗೆ 'ಆರೆಂಜ್ ಅಲರ್ಟ್' ಹಾಗೂ 6 ಜಿಲ್ಲೆಗಳಿಗೆ 'ಯೆಲ್ಲೋ ಅಲರ್ಟ್' ಘೋಷಿಸಿದೆ.

ಬೀದರ್, ಕಲಬುರಗಿ, ಬೆಳಗಾವಿ, ಉತ್ತರ ಕನ್ನಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಯಾದಗಿರಿ, ರಾಯಚೂರು, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ ಹಾಗೂ ಹಾಸನ ಜಿಲ್ಲೆಗೆ 'ಯೆಲ್ಲೋ ಅಲರ್ಟ್' ಘೋಷಿಸಲಾಗಿದೆ. ಈ ಜಿಲ್ಲೆಗಳಲ್ಲಿ ಹಲವೆಡೆ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಕರಾವಳಿಯಲ್ಲಿ ಬಿರುಗಾಳಿಯ ವೇಗವು ಗಂಟೆಗೆ 40–45 ಕಿ.ಮೀ.ನಿಂದ 55 ಕಿ.ಮೀ ವೇಗದಲ್ಲಿ ಬೀಸುವ ಸಾಧ್ಯತೆ ಇದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು ಎಂದು ಇಲಾಖೆ ಸೂಚಿಸಿದೆ. ಕರಾವಳಿ ಜಿಲ್ಲೆಗಳಲ್ಲಿ ಮುಂದಿನ ಒಂದು ವಾರ ಗುಡುಗು ಸಹಿತ ಭಾರಿ ಮಳೆ ಮುಂದುವರಿಯಲಿದೆ ಎಂದು ಇಲಾಖೆ ಹೇಳಿದೆ.

ಚಾರಣಕ್ಕೆ ನಿರ್ಬಂಧ

ಚಿಕ್ಕಮಗಳೂರು: ಜಿಲ್ಲೆಯ ಅಲ್ಲಲ್ಲಿ ಭೂ ಕುಸಿತ ಉಂಟಾಗುತ್ತಿದೆ. ಜಿಲ್ಲೆಗೆ ಬರಲು ಉದ್ದೇಶಿಸಿರುವ ಪ್ರವಾಸಿಗರು ತಮ್ಮ ಪ್ರವಾಸವನ್ನು ಮುಂದೂಡುವಂತೆ ಜಿಲ್ಲಾಡಳಿತ ಮನವಿ ಮಾಡಿದೆ. ಅತಿಯಾದ ಮಳೆಗೆ ಧರೆ ಕುಸಿತವಾಗುವ ಸಂಭವ ಇರುವುದರಿಂದ ಹೋಮ್‌ಸ್ಟೆ, ರೆಸಾರ್ಟ್, ಅರಣ್ಯ ಇಲಾಖೆ ವತಿಯಿಂದ ಕೈಗೊಳ್ಳುವ ಚಾರಣವನ್ನು ಸದ್ಯಕ್ಕೆ ಸ್ಥಗಿತಗೊಳಿಸಬೇಕು ಎಂದು ಜಿಲ್ಲಾಡಳಿತ ಸೂಚನೆ ನೀಡಿದೆ.

ಕೊಡಗಿನಲ್ಲಿ ಪ್ರವಾಹ ಪರಿಸ್ಥಿತಿ

ಮಡಿಕೇರಿ: ಕೊಡಗು ಜಿಲ್ಲೆಯಲ್ಲಿ ಉಕ್ಕಿ ಹರಿಯುತ್ತಿರುವ ಕಾವೇರಿ ನದಿಯಿಂದ, ಮಡಿಕೇರಿ ತಾಲ್ಲೂಕಿನ ಭಾಗಮಂಡಲ, ಬೇಂಗೂರು, ನಾಪೋಕ್ಲುವಿನ ಚರಿಯಪರಂಬು, ಕುಶಾಲನಗರದ ಸಾಯಿಬಡಾವಣೆ, ನೆಲ್ಲಹುದಿಕೇರಿ ಗ್ರಾಮದ ಬೆಟ್ಟದಕಾಡು ರಸ್ತೆ, ಪೊನ್ನಂಪೇಟೆ ಕಾನೂರು ಗ್ರಾಮದಲ್ಲಿ ಪ್ರವಾಹ ಪರಿಸ್ಥಿತಿ ಸೃಷ್ಟಿಯಾಗಿದೆ.

58 ವಿದ್ಯುತ್ ಕಂಬಗಳು ನೆಲಕ್ಕುರುಳಿ, 10 ಮನೆಗಳಿಗೆ ಹಾನಿಯಾಗಿದೆ. ನಾಪೋಕ್ಲುವಿನ ಬೇತು ಗ್ರಾಮದ ಬಳಿ ರಸ್ತೆಗೆ ಮಣ್ಣು ಕುಸಿದಿದೆ.

ಭಾಗಮಂಡಲ ಹೋಬಳಿಯ ಬೇಂಗೂರಿನ ದೋಣಿಕಡು ಎಂಬಲ್ಲಿ ರಸ್ತೆ ಸಂಪೂರ್ಣ ಜಲಾವೃತಗೊಂಡಿದ್ದು, ನಿವಾಸಿಗಳ ಸಂಚಾರಕ್ಕೆ ಅಗ್ನಿಶಾಮಕ ಪಡೆಯವರು ಫೈಬರ್ ದೋಣಿಯ ವ್ಯವಸ್ಥೆ ಕಲ್ಪಿಸಿದ್ದಾರೆ. ನಾಪೋಕ್ಲು ಸಮೀಪದ ಚೆರಿಯಪರಂಬು ಗ್ರಾಮವೂ ಜಲಾವೃತವಾಗಿದೆ.

ಮಡಿಕೇರಿ-ಮಂಗಳೂರು ಹೆದ್ದಾರಿಯಲ್ಲಿ ಮದೆನಾಡು ಸಮೀಪದ ಕತ್ರೋಜಿಯಲ್ಲಿ ನಿರಂತರವಾಗಿ ಮಣ್ಣು ಗುಡ್ಡದಿಂದ ಕೆಳಗಿಳಿಯುತ್ತಿದೆ. ಕೆಳಗೆ ಜರಿದ ಮಣ್ಣನ್ನು ತೆರವುಗೊಳಿಸಲಾಗುತ್ತಿದ್ದು, ವಾಹನ ಸಂಚಾರಕ್ಕೆ ತೊಂದರೆಯಾಗಿಲ್ಲ. ಮಡಿಕೇರಿಯ ಐಕೊಳ ಗ್ರಾಮದಲ್ಲಿ ಅಪಾಯದಲ್ಲಿ ಸಿಲುಕಿದ್ದ ಗರ್ಭಿಣಿ ಸೇರಿದಂತೆ 7 ಮಂದಿಯನ್ನು ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಸಿಬ್ಬಂದಿ ರಕ್ಷಿಸಿದ್ದಾರೆ.

ಮಳೆ ಪ್ರಮಾಣ (ಸೆಂ.ಮೀ ಗಳಲ್ಲಿ)

ಸ್ಥಳ	ಮಳೆ ಪ್ರಮಾಣ
ಸಾವೇಹಕ್ಲು(ಶಿವಮೊಗ್ಗ)	23
ಮಂಡೆಕೋಲು(ದಕ್ಷಿಣ ಕನ್ನಡ)	22
ಅರಂತೋಡು(ದಕ್ಷಿಣ ಕನ್ನಡ)	19
ಬೆಳ್ಳಾರೆ(ದಕ್ಷಿಣ ಕನ್ನಡ)	18
ಆಗುಂಬೆ (ಶಿವಮೊಗ್ಗ)	18
ಕೆರ್ಗಾಲು(ಉಡುಪಿ)	18
ಸಂಪಾಜೆ(ದಕ್ಷಿಣ ಕನ್ನಡ)	17
ತೆಕ್ಕಾರು(ದಕ್ಷಿಣ ಕನ್ನಡ)	17
ದೇವಚಳ್ಳ(ದಕ್ಷಿಣ ಕನ್ನಡ)	16
ಕೊಂಬಾರು(ದಕ್ಷಿಣ ಕನ್ನಡ)	16
ಹಳ್ಳಿಹೊಳೆ(ಉಡುಪಿ)	16
ಪಡುವರಿ(ಉಡುಪಿ)	16
ಯಸಳೂರು(ಹಾಸನ)	16
ಕೆಮ್ರಾಜೆ(ದಕ್ಷಿಣ ಕನ್ನಡ)	15
ನೆರಿಯ(ದಕ್ಷಿಣ ಕನ್ನಡ)	15
ಸೋಮೇಶ್ವರ(ದಕ್ಷಿಣ ಕನ್ನಡ)	15
ಯಡ್ತರೆ(ಉಡುಪಿ)	15
ಗೋಳಿಹೊಳೆ(ಉಡುಪಿ)	15
ಶಿರೂರು(ಉಡುಪಿ)	15

* ಸೋಮವಾರ ಬೆಳಿಗ್ಗೆ 8.30ರಿಂದ ಮಂಗಳವಾರ ಬೆಳಿಗ್ಗೆ 8.30ರವರೆಗಿನ ಮಾಹಿತಿ

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯೊ

ಭೂ ಕುಸಿತ ತಡೆಗೆ ₹ 20 ಕೋಟಿ ನೀಡಲು ಸಿದ್ಧ: ಕೃಷ್ಣ ಬೈರೇಗೌಡ

ಮಡಿಕೇರಿ: 'ಜಿಲ್ಲೆಯಲ್ಲಿ ಭೂಕುಸಿತ ಸಾಧ್ಯತೆಯುಳ್ಳ ಸ್ಥಳಗಳ ಪಟ್ಟಿಯನ್ನು ಜಿಯೊಲಜಿಕಲ್ ಸರ್ವೆ ಆಫ್ ಇಂಡಿಯಾ (ಜಿಎಸ್‌ಐ) ಕೊಟ್ಟಿದ್ದು, ಕುಸಿತ ತಡೆಯಲು ₹ 20 ಕೋಟಿ ನೀಡಲು ಸರ್ಕಾರ ಸಿದ್ಧವಿದೆ. ಬೇಗನೇ ಪ್ರಸ್ತಾವ ಸಲ್ಲಿಸುವಂತೆ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ನಗರದಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ಬಳಿಕ ಸುದ್ದಿಗಾರರೊಂದಿಗೆ ಮಾತಾಡಿ, 'ಕೊಡಗು ಜಿಲ್ಲಾಧಿಕಾರಿ ಖಾತೆಯಲ್ಲಿ ₹ 56 ಕೋಟಿ ಇದೆ. ರಾಜ್ಯದ ಎಲ್ಲ ಜಿಲ್ಲಾಧಿಕಾರಿಗಳ ಖಾತೆಯಲ್ಲಿ ಒಟ್ಟು ₹ 540 ಕೋಟಿ ಇದೆ. ಇನ್ನಷ್ಟು ಹಣ ನೀಡಲು ಸಿದ್ಧ' ಎಂದರು.

'ಪ್ರಾಕೃತಿಕ ವಿಕೋಪದಡಿ ಈ ಹಿಂದಿನ ವರ್ಷಗಳಲ್ಲಿ ನೀಡಿರುವ ಅನುದಾನವನ್ನು ಬಳಸದೆ ಉಳಿಸಿಕೊಂಡಿರುವುದು ಸರಿಯಲ್ಲ. ತಿಂಗಳ ಒಳಗೆ ಆಗಿರುವ ಕೆಲಸ ಪರಿಶೀಲಿಸಿ ಬಿಲ್ ಪಾವತಿಸಬೇಕು. ಕಾಮಗಾರಿ ಆಗಿರದಿದ್ದರೆ ಈ ವರ್ಷದ ಪ್ರಾಕೃತಿಕ ವಿಕೋಪದಡಿ ಪರಿಹಾರ ಕಾಮಗಾರಿ ಕೈಗೊಳ್ಳಬೇಕು ಎಂದು ಸೂಚಿಸಲಾಗಿದೆ' ಎಂದರು.

ಮಳೆ ಹಾನಿ ಪ್ರದೇಶಗಳಿಗೆ ಭೇಟಿ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ರಾಜ್ಯದಲ್ಲಿ ಮಳೆಯಿಂದ ಹಾನಿಯಾದ ಪ್ರದೇಶಗಳಿಗೆ ಸಚಿವರ ತಂಡಗಳು ಭೇಟಿ ನೀಡಿ ಪರಿಶೀಲನೆ ನಡೆಸಲಿವೆ. ಕೃಷ್ಣ ಬೈರೇಗೌಡ ಕೊಡಗಿಗೆ ಭೇಟಿ ನೀಡಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಹಾವೇರಿಯಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅದಕ್ಕೆ ಹಾವೇರಿಗೆ ಮೊದಲು ಭೇಟಿ ನೀಡಿದ ನಂತರ ಉಡುಪಿ, ಮಂಗಳೂರು, ಉತ್ತರ ಕನ್ನಡ ಜಿಲ್ಲೆಗಳಿಗೆ ಭೇಟಿ ನೀಡುವೆ' ಎಂದು ಅವರು ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಜೂನ್ ತಿಂಗಳಲ್ಲಿ ಮುಂಗಾರು ಮಳೆ ಕೊರತೆಯಾಗಿತ್ತು. ಈಗ ರಾಜ್ಯದೆಲ್ಲೆಡೆ ಉತ್ತಮ ಮಳೆಯಾಗುತ್ತಿದೆ. ಕಾಂಗ್ರೆಸ್ ಸರ್ಕಾರ ಬಂದರೆ ಬರ ಆವರಿಸುತ್ತದೆ ಎಂಬುದು ಸುಳ್ಳು. ಮೂಢನಂಬಿಕೆಗಳಲ್ಲಿ ನನಗೆ ನಂಬಿಕೆ ಇಲ್ಲ. ಪ್ರಕೃತಿಯಲ್ಲಿ ಪ್ರವಾಹ, ಮಳೆ ಕೊರತೆ ಆಗುವುದು ಸ್ವಾಭಾವಿಕ. ಹವಾಮಾನ ಬದಲಾವಣೆ ವಿಶ್ವದ ಎಲ್ಲಡೆ ಆಗುತ್ತಿದೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	102.35	49,280	5,067
ಹಾರಂಗಿ	2,859	2,852.30	10,528	13,000
ಕಬಿನಿ	2284.00	2,281.36	25,750	20,000
ಹೇಮಾವತಿ	2,922	2,906.25	25,888	200
ಲಿಂಗನಮಕ್ಕಿ	1,819	1,778.90	67,317	-
ಸೂಪಾ (ಮೀ)	564	539.50	43,563	-
ಮಾಣಿ	595	578.68	7,619	-
ತುಂಗಭದ್ರಾ	1,633	1,606.78	66,250	205
ಮಲಪ್ರಭಾ	2079.5	2,057.10	19,106	194
ಘಟಪ್ರಭಾ	2175	2,133.58	34,938	100
ಭದ್ರಾ	186	152.90	31,425	175
ಆಲಮಟ್ಟಿ (ಮೀ)	519.60	516.32	1,41,672	15,000
ನಾರಾಯಣಪುರ (ಮೀ)	492.25	487.82	13,681	-

* ನೆಲಮಟ್ಟದಿಂದ

ಕ್ರೀಡಾ ತರಬೇತುದಾರ ವಿಶ್ವನಾಥ್ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಡಿವಿಎಸ್ ಇಂಡಿಪೆಂಡೆಂಟ್ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ನಿವೃತ್ತ ನಿರ್ದೇಶಕ, ಅಥ್ಲೆಟಿಕ್ಸ್ ತರಬೇತುದಾರ ಎಂ.ಜಿ. ವಿಶ್ವನಾಥ್ (70) ಮಂಗಳವಾರ ಬೆಳಿಗ್ಗೆ ರೈಲಿನಡಿ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆಗೆ ಕಾರಣ ತಿಳಿದುಬಂದಿಲ್ಲ.



ವಿಶ್ವನಾಥ್

ಶಿವಮೊಗ್ಗದ ವಿನೋಬ ನಗರದ ಬಳಿ ಬೆಳಿಗ್ಗೆ ವಾಯುವಿಹಾರಕ್ಕೆ ತೆರಳಿದ್ದ ಅವರು, ಶಿವಮೊಗ್ಗ- ತಾಳಗುಪ್ಪ ನಡುವೆ ಸಂಚರಿಸುವ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ರೈಲ್ವೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದು, ತನಿಖೆ ಮುಂದುವರಿದಿದೆ.

ಮಲೆನಾಡಿನ ಅಥ್ಲೆಟಿಕ್ಸ್ ವಲಯದಲ್ಲಿ 'ನಡೆದಾಡುವ ಎನ್‌ಸೈಕ್ಲೊಪಿಡಿಯಾ' ಎಂದು ಹೆಸರಾಗಿದ್ದ ವಿಶ್ವನಾಥ್, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ತರಬೇತುದಾರ (ಕೋಚ್) ಆಗಿ ಕೆಲಸ ಮಾಡಿದ್ದರು. ಪ್ಯಾರಾ ಒಲಿಂಪಿಕ್ಸ್ ಸಂದರ್ಭದಲ್ಲೂ ತರಬೇತುದಾರರಾಗಿ ಆಗಿ ಸೇವೆ ಸಲ್ಲಿಸಿದ್ದರು.

ವಿಶ್ವನಾಥ್ ಅವರ ಬಳಿ ತರಬೇತಿ ಪಡೆದ ಅನೇಕ ಅಥ್ಲೀಟ್‌ಗಳು ರಾಷ್ಟ್ರ ಹಾಗೂ ರಾಜ್ಯಮಟ್ಟದ ಕ್ರೀಡಾಕೂಟಗಳಲ್ಲಿ ಪಾಲ್ಗೊಂಡಿದ್ದಾರೆ. ಕ್ರೀಡಾ ನಿಯಮಗಳ ಬಗ್ಗೆ ಕನ್ನಡದಲ್ಲಿ ಹಲವು ಪುಸ್ತಕಗಳನ್ನು ಬರೆದಿದ್ದ ಅವರು, ದೈಹಿಕ ಶಿಕ್ಷಣ ಉಪನ್ಯಾಸಕರಿಗೆ ಮಾರ್ಗದರ್ಶಕರೂ ಆಗಿದ್ದರು. ಉಪನ್ಯಾಸಕ ವೃತ್ತಿಯಿಂದ ವಿಶ್ವನಾಥ್ 2012ರಲ್ಲಿ ನಿವೃತ್ತರಾಗಿದ್ದರು. ವಿಶ್ವನಾಥ್ ಅವರಿಗೆ ಪತ್ನಿ ಹಾಗೂ ಪುತ್ರ ಇದ್ದಾರೆ.

ಶೌಚಾಲಯದಲ್ಲಿ ವಿಡಿಯೊ; ಸಾಕ್ಷ್ಯಗಳಿಲ್ಲ– ಎಸ್‌ಪಿ

ಮುಸ್ಲಿಂ ವಿದ್ಯಾರ್ಥಿನಿಯರಿಂದ ತಪ್ಪೊಪ್ಪಿಗೆ, ಮೂವರ ಅಮಾನತು: ಆಡಳಿತ ಮಂಡಳಿ ಸ್ಪಷ್ಟನೆ

ಪ್ರಜಾವಾಣಿ ವಾರ್ತೆ

ಉಡುಪಿ: 'ನಗರದ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ಮೊಬೈಲ್ ಇಟ್ಟು ಚಿತ್ರೀಕರಣ ನಡೆಸಿ ವಾಟ್ಸ್ ಆ್ಯಪ್ ಗ್ರೂಪ್‌ನಲ್ಲಿ ಹಂಚಿಕೊಂಡಿರುವ ಬಗ್ಗೆ ಯಾವುದೇ ಸಾಕ್ಷ್ಯ ಲಭ್ಯವಾಗಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹಾಕೆ ಅಕ್ಷಯ್ ಮಚ್ಚೀಂದ್ರ ಹೇಳಿದರು.



ಹಾಕೆ ಅಕ್ಷಯ್ ಮಚ್ಚೀಂದ್ರ

'ಘಟನೆ ನಡೆದ ಬಳಿಕ ಕಾಲೇಜಿಗೆ ತೆರಳಿ ವಿಡಿಯೊ ಚಿತ್ರೀಕರಣ ಮಾಡಿದ ವಿದ್ಯಾರ್ಥಿನಿಯರ ಮೊಬೈಲ್‌ಗಳನ್ನು ಪರಿಶೀಲಿಸಲಾಗಿದ್ದು, ಘಟನೆಗೆ ಸಂಬಂಧಿಸಿದ ವಿಡಿಯೊ ಹಾಗೂ ಫೋಟೊ ಲಭ್ಯವಾಗಿಲ್ಲ. ಸಂತ್ರಸ್ತೆಯಾಗಲೀ, ಕಾಲೇಜು ಆಡಳಿತ ಮಂಡಳಿಯಾಗಲಿ ದೂರು ನೀಡಿಲ್ಲ. ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಳ್ಳಲು ವಿಡಿಯೊ ಸಾಕ್ಷ್ಯಗಳು ಲಭ್ಯವಿಲ್ಲ, ಸಾಕ್ಷ್ಯಗಳಿದ್ದವರು ಪೊಲೀಸ್ ಇಲಾಖೆಗೆ ನೀಡಿದರೆ ತನಿಖೆ ನಡೆಸುತ್ತೇವೆ' ಎಂದು ಎಸ್‌ಪಿ ಹೇಳಿದರು.

'ಸಹಪಾಠಿಗಳು ತಮಾಷೆಗೆ ವಿಡಿಯೊ ಮಾಡಿ ನಂತರ ಡಿಲೀಟ್ ಮಾಡಿದ್ದಾಗಿ ಸಂತ್ರಸ್ತೆ ತಿಳಿಸಿದ್ದರಿಂದ ಕಾಲೇಜು ಆಡಳಿತ ಮಂಡಳಿಯ ಹಂತದಲ್ಲಿಯೇ ಪ್ರಕರಣ ಇತ್ಯರ್ಥ ಮಾಡಿಕೊಳ್ಳಲಾಗಿದೆ. ಇದರ ನಡುವೆ ಸಾಮಾಜಿಕ ಜಾಲತಾಣದಲ್ಲಿ ಉಡುಪಿಯ ಕಾಲೇಜಿನ ಮಹಿಳಾ ಶೌಚಾಲಯದಲ್ಲಿ ಹಿಡನ್ ಕ್ಯಾಮೆರಾ ಇಟ್ಟು ಚಿತ್ರೀಕರಣ ಮಾಡಲಾಗಿದೆ ಎಂದು ನಕಲಿ ವಿಡಿಯೊ ಹರಿಬಿಡಲಾಗಿದೆ. ಹಳೆಯ ವಿಡಿಯೊವನ್ನು ಎಡಿಟ್ ಮಾಡಿ, ಧ್ವನಿ ಸೇರಿಸಿ ಉಡುಪಿ ಕಾಲೇಜಿನಲ್ಲಿ ನಡೆದಿರುವ ಘಟನೆ ಎಂದು ಬಿಂಬಿಸಲಾಗುತ್ತಿದ್ದು ಸತ್ಯಾಸತ್ಯತೆ ಅರಿಯದೆ ಸಾರ್ವಜನಿಕರಿಗೆ ತಪ್ಪು ಮಾಹಿತಿ ನೀಡಬಾರದು' ಎಂದು ಎಸ್‌ಪಿ ಎಚ್ಚರಿಕೆ ನೀಡಿದರು.

ಯಾರಿಗೂ ಬೆದರಿಕೆ ಹಾಕಿಲ್ಲ: ಘಟನೆ ಸಂಬಂಧ ರಶ್ಮಿ ಸಾಮಂತ್ ಎಂಬವರು ಟ್ವೀಟ್ ಮಾಡಿದ್ದರಿಂದ ಅವರ ಖಾತೆ ಪರಿಶೀಲಿಸಲಾಗಿದೆ. ಕುಟುಂಬದ ಸದಸ್ಯರ ಬಳಿ ಮಾಹಿತಿ ಪಡೆಯಲಾಗಿದೆ. ದುರುದ್ದೇಶಪೂರಿತವಾಗಿ ಯಾರ ಬಳಿಯೂ ಮಾಹಿತಿ ಪಡೆದಿಲ್ಲ, ಬೆದರಿಕೆಯನ್ನೂ ಹಾಕಿಲ್ಲ ಎಂದು ಎಸ್‌ಪಿ ಸ್ಪಷ್ಟನೆ ನೀಡಿದರು.

ಆಡಳಿತ ಮಂಡಳಿ ಹೇಳಿದ್ದೇನು: 'ಕಾಲೇಜಿನ ಶೌಚಾಲಯದೊಳಗೆ ಮೊಬೈಲ್ ಇಟ್ಟು ಚಿತ್ರೀಕರಣ ನಡೆಸಿರುವ ವಿಚಾರ ತಿಳಿಯುತ್ತಿದ್ದಂತೆ ವಿಚಾರಣೆ ನಡೆಸಲಾಗಿದ್ದು ತಮಾಷೆಗಾಗಿ ವಿಡಿಯೊ ಮಾಡಿರುವುದಾಗಿ, ಮತ್ತೆ ಇಂತಹ ಕೃತ್ಯ ಎಸಗುವುದಿಲ್ಲ ಎಂದು ಮೂವರು ಮುಸ್ಲಿಂ ವಿದ್ಯಾರ್ಥಿನಿಯರು ತಪ್ಪೊಪ್ಪಿಗೆ ಪತ್ರ ಬರೆದು ಕೊಟ್ಟಿದ್ದಾರೆ. ನಿಯಮಗಳ ಪ್ರಕಾರ ಮೂವರನ್ನೂ ಅಮಾನತು ಮಾಡಲಾಗಿದೆ' ಎಂದು ನೇತ್ರಜ್ಯೋತಿ ಶಿಕ್ಷಣ ಸಂಸ್ಥೆಗಳ ನಿರ್ದೇಶಕಿ ರಶ್ಮಿ ಕೃಷ್ಣಪ್ರಸಾದ್ ಮಾಧ್ಯಮಗಳಿಗೆ ಸ್ಪಷ್ಟನೆ ನೀಡಿದರು.

'ಆರೋಪಿತ ವಿದ್ಯಾರ್ಥಿನಿಯರ ಮೊಬೈಲ್ ಪರಿಶೀಲಿಸಲಾಗಿದ್ದು ಘಟನೆಯ ವಿಡಿಯೊಗಳು ಲಭ್ಯವಾಗಿಲ್ಲ. ವಿದ್ಯಾರ್ಥಿನಿಯರ ಮೊಬೈಲ್‌ಗಳನ್ನು ಪೊಲೀಸರಿಗೆ ಒಪ್ಪಿಸಲಾಗಿದ್ದು ಹೆಚ್ಚಿನ ತನಿಖೆ ನಡೆಸುವಂತೆ ಮೌಖಿಕವಾಗಿ ತಿಳಿಸಲಾಗಿದೆ' ಎಂದು ಅವರು ತಿಳಿಸಿದರು.

'ವಿಡಿಯೊ ಮಾಡಿರುವ ವಿಚಾರ ತಿಳಿದ ಕೂಡಲೇ ಸಂತ್ರಸ್ತೆ ಸ್ನೇಹಿತೆಯರ ಮೊಬೈಲ್‌ನಿಂದ ದೃಶ್ಯಾವಳಿಯನ್ನು ಡಿಲೀಟ್ ಮಾಡಿಸಿದ್ದಾರೆ. ತಮ್ಮ ಭವಿಷ್ಯ ಹಾಗೂ ಸಹಪಾಠಿಗಳ ಭವಿಷ್ಯದ ದೃಷ್ಟಿಯಿಂದ ಪೊಲೀಸ್ ಠಾಣೆಗೆ ದೂರು ನೀಡದಿರಲು ನಿರ್ಧರಿಸಿದ್ದಾರೆ' ಎಂದು ಸ್ಪಷ್ಟಪಡಿಸಿದರು.

ರಶ್ಮಿ ಸಾಮಂತ್ ಕುಟುಂಬಸ್ಥರನ್ನು ಭೇಟಿ ಮಾಡಿದ ಶಾಸಕ ಯಶ್‌ಪಾಲ್

ಸಾಮಾಜಿಕ ಕಾರ್ಯಕರ್ತೆ ರಶ್ಮಿ ಸಾಮಂತ್ ಅವರ ಮನೆಗೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಭೇಟಿನೀಡಿ ಕುಟುಂಬದ ಸದಸ್ಯರ ಜತೆ ಚರ್ಚಿಸಿದರು.

ಬಳಿಕ ಮಾತನಾಡಿ, 'ಉಡುಪಿಯ ನೇತ್ರ ಜ್ಯೋತಿ ಶಿಕ್ಷಣ ಸಂಸ್ಥೆಯ ಶೌಚಾಲಯದಲ್ಲಿ ಹಿಂದೂ ವಿದ್ಯಾರ್ಥಿನಿಯರ ಖಾಸಗಿ ವಿಡಿಯೊಗಳನ್ನು ಚಿತ್ರೀಕರಿಸಿ ಸಮಾಜಘಾತುಕ ಶಕ್ತಿಗಳ ಕೈಗೆ ಕೊಟ್ಟು ವಿದ್ಯಾರ್ಥಿನಿಯ ಜೀವನ ಹಾಳು ಮಾಡುವ ಪ್ರಯತ್ನದಲ್ಲಿ ಭಾಗಿಯಾಗಿರುವ ಮುಸ್ಲಿಂ ವಿದ್ಯಾರ್ಥಿನಿಯರ ವಿರುದ್ಧ ಕ್ರಮಕ್ಕೆ ಸರ್ಕಾರ ಹಿಂದೇಟು ಹಾಕುತ್ತಿದೆ. ತಪ್ಪಿತಸ್ಥರನ್ನು ಕಾನೂನಿನ ಕಟಕಟೆಗೆ ತಂದು ಸಂತ್ರಸ್ತೆಗೆ ನ್ಯಾಯ ಕೊಡಿಸುತ್ತೇನೆ. ಪ್ರಕರಣದ ಬಗ್ಗೆ ಧ್ವನಿ ಎತ್ತಿದ ರಶ್ಮಿ ಸಾಮಂತ್ ಅವರಿಗೆ ಪೊಲೀಸ್ ಇಲಾಖೆ ಕಿರುಕುಳ ನೀಡಿರುವ ಬಗ್ಗೆ ವರದಿ ಕೇಳಲಾಗಿದೆ. ರಶ್ಮಿ ಹಾಗೂ ಅವರ ಕುಟುಂಬಕ್ಕೆ ತೊಂದರೆ ಕೊಟ್ಟರೆ ಸುಮ್ಮನಿರುವುದಿಲ್ಲ' ಎಂದು ತಿಳಿಸಿದರು.

ಟ್ವೀಟ್‌ನಲ್ಲಿ ಏನಿದೆ?

'ಉಡುಪಿಯ ಕಾಲೇಜಿನ ಶೌಚಾಲಯದಲ್ಲಿ ಕ್ಯಾಮೆರಾ ಇರಿಸಿ ನೂರಾರು ಹಿಂದೂ ಯುವತಿಯರ ಚಿತ್ರೀಕರಣ ಮಾಡಿರುವವರ ವಿರುದ್ಧ ಯಾರೂ ಮಾತನಾಡುತ್ತಿಲ್ಲ. ವಿಡಿಯೊ ಹಾಗೂ ಫೋಟೋಗಳು ನಿರ್ದಿಷ್ಟ ಸಮುದಾಯದ ಗ್ರೂಪ್‌ಗಳೊಂದಿಗೆ ಹಂಚಿಕೊಳ್ಳಲಾಗಿದೆ' ಎಂದು ಬರೆದುಕೊಂಡಿದ್ದಾರೆ. ಮತ್ತೊಂದು ಟ್ವೀಟ್‌ನಲ್ಲಿ '1992ರಲ್ಲಿ ನಗ್ನ ವಿಡಿಯೊಗಳನ್ನು ಬಿಡುಗಡೆ ಮಾಡುವುದಾಗಿ ಬ್ಲಾಕ್ ಮೇಲ್ ಮಾಡಿ ನೂರಾರು ಯುವತಿಯರ ಮೇಲೆ ಅತ್ಯಾಚಾರ ಎಸಗಲಾಗಿತ್ತು. ಅಜ್ಮೀರ್‌ನಲ್ಲಿ ನಡೆದ ಕೃತ್ಯ ಉಡುಪಿಯಲ್ಲೂ ನಡೆಯುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ' ಎಂದು ಬರೆದುಕೊಂಡಿದ್ದಾರೆ.

ಗುಡಿಸಲಲ್ಲಿದ್ದ ಮಗು ಸಾವು

ಪ್ರಜಾವಾಣಿ ವಾರ್ತೆ

ಕೋರ (ತುಮಕೂರು): ಗೊಲ್ಲ ಸಂಪ್ರದಾಯದ ಪ್ರಕಾರ ಹೆರಿಗೆ ನಂತರ ಬಾಣಂತಿ ಜೊತೆಗೆ ಬೆಳ್ಳಾವಿ ಹೋಬಳಿ ಮಲ್ಲೇನಹಳ್ಳಿ ಊರಾಚೆ ಜಮೀನಿನ ಗುಡಿಸಲಿನಲ್ಲಿ ಇಡಲಾಗಿದ್ದ ನವಜಾತ ಶಿಶು ಅನಾರೋಗ್ಯದಿಂದ ಸಾವನ್ನಪ್ಪಿದೆ.

ಶೀತ ಮತ್ತು ಉಸಿರಾಟ ತೊಂದರೆಯಿಂದ ಬಳಲುತ್ತಿದ್ದ ಮಗುವನ್ನು ಮೂರು ದಿನಗಳ ಹಿಂದೆ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನವಜಾತ ಶಿಶುಗಳ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ನೀಡಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮಗು ಮರುದಿನವೇ ಮೃತಪಟ್ಟಿದೆ.

ಮಗು ಮೃತಪಟ್ಟ ನಂತರವೂ ತಾಯಿಯನ್ನು ಹಟ್ಟಿಯ ಒಳಗಡೆ ಬಿಟ್ಟುಕೊಂಡಿಲ್ಲ. ಮೂರು ದಿನಗಳಿಂದ ಸುರಿಯುತ್ತಿರುವ ಜಡಿ ಮಳೆಯನ್ನು ಲೆಕ್ಕಿಸದೆ ಊರಾಚೆಯ ಗುಡಿಸಲಿನಲ್ಲಿಯೇ ಒಂಟಿಯಾಗಿ ಇರಿಸಲಾಗಿದೆ.

ಗೊಲ್ಲ ಸಮುದಾಯದ ಈ ಮಹಿಳೆ ಕಳೆದ ತಿಂಗಳು ಅವಳಿ ಮಕ್ಕಳಿಗೆ ಜನ್ಮ ನೀಡಿದ್ದರು. ಅವಧಿಗೂ ಮುನ್ನ ಜನಿಸಿದ್ದರಿಂದ ಒಂದು ಮಗು ಆಗಲೇ ಮೃತಪಟ್ಟಿತ್ತು. ನಂತರ ಬಾಣಂತಿ ಮತ್ತು ಮತ್ತೊಂದು ಮಗುವನ್ನು ಗ್ರಾಮದ ಹೊರ ವಲಯದ ಗುಡಿಸಲಿನಲ್ಲಿ ಇಡಲಾಗಿತ್ತು.

'ನೇಣಿಗೇರಿಸಲು ಪರ್ಯಾಯ ಕ್ರಮ ಪರಿಶೀಲನೆಗೆ ತಜ್ಞರ ಸಮಿತಿ ರಚಿಸಿ'

ನವದೆಹಲಿ(ಪಿಟಿಐ): ಮರಣದಂಡನೆ ಶಿಕ್ಷೆಯ ಅಪರಾಧಿಗಳನ್ನು ನೇಣಿಗೆ ಏರಿಸಲು ಸದ್ಯ ಬಳಕೆಯಲ್ಲಿರುವ ಕ್ರಮವನ್ನು ಪರಿಶೀಲಿಸಿ ಸಲಹೆ ನೀಡಲು ತಜ್ಞರ ಸಮಿತಿ ರಚನೆಗೆ ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಅವರು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

ಸುಪ್ರಿಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಪೀಠಕ್ಕೆ ಹಿರಿಯ ವಕೀಲ ಸೋನಿಯಾ ಮಾಥೂರ್ ಮಂಗಳವಾರ ಈ ಮಾಹಿತಿ ನೀಡಿದರು.

ಗೃಹಲಕ್ಷ್ಮಿ ಯೋಜನೆ ನೋಂದಣಿಗೆ ಮಹಿಳೆಯರ ಪರದಾಟ

ಶೂನ್ಯ ಗೌರವಧನ: ಪ್ರತಿನಿಧಿಯಾಗಲು ನಿರಾಸಕ್ತಿ!

• ಕೊಂಡ್ಲಹಳ್ಳಿ ಜಯಪ್ರಕಾಶ

ಮೊಳಕಾಲ್ಮುರು: ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ನೋಂದಣಿಗೆ ನೆರವಾಗಲು ಪ್ರಜಾಪ್ರತಿನಿಧಿಗಳನ್ನು ನೇಮಿಸುವುದಾಗಿ ಸರ್ಕಾರ ಹೇಳಿತ್ತು. ಆದರೆ, ಗೌರವಧನ ಸಿಗುವುದಿಲ್ಲ ಎಂಬ ಕಾರಣಕ್ಕೆ ಪ್ರಜಾಪ್ರತಿನಿಧಿಯಾಗಿ ಕೆಲಸ ಮಾಡಲು ಯಾರೂ ಆಸಕ್ತಿ ತಾಳದಿರುವುದು ಸಮಸ್ಯೆ ಹೆಚ್ಚಿಸಿದೆ.

ಪ್ರಜಾ ಪ್ರತಿನಿಧಿಯನ್ನು ನೇಮಿಸಿ, ಮನೆಮನೆಗೆ ತೆರಳಿ ನೋಂದಣಿ ಮಾಡಿಕೊಳ್ಳಲು ಸರ್ಕಾರ ಉದ್ದೇಶಿಸಿತ್ತು. ಪ್ರತಿ ಫಲಾನುಭವಿಯ ನೋಂದಣಿಗೆ ಗ್ರಾಮ ಒನ್, ಕರ್ನಾಟಕ ಒನ್ ಕೇಂದ್ರದ ಸಿಬ್ಬಂದಿಗೆ ಸರ್ಕಾರ ₹12 ನೀಡುತ್ತಿದೆ. ಪ್ರಜಾ ಪ್ರತಿನಿಧಿಗಳಾಗುವ ಆಸಕ್ತರಿಗೂ ಗೌರವಧನ ನೀಡುತ್ತಿಲ್ಲ. ಪುಕ್ಕಟೆಯಾಗಿ ಕೆಲಸ ಮಾಡಲು ಯಾರೂ ಇಚ್ಛಿಸುತ್ತಿಲ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮೂಲಗಳು ತಿಳಿಸಿವೆ.

ಯೋಜನೆ ನೋಂದಣಿ ಬಗ್ಗೆ ಮಾಹಿತಿ ನೀಡುವವರು ಇಲ್ಲದ್ದರಿಂದ ಮಹಿಳೆಯರು ಸಮಸ್ಯೆ ಎದುರಿಸುತ್ತಿದ್ದಾರೆ. ಹೀಗಾಗಿ ನೂಕು ನುಗ್ಗಲು ಉಂಟಾಗುತ್ತಿದೆ. ಯಾರನ್ನು ಸಂಪರ್ಕಿಸಿದರೆ ಪರಿಹಾರ ದೊರೆಯಲಿದೆ ಎಂಬ ಮಾಹಿತಿ ಕೊರತೆಯೂ ಜನರಲ್ಲಿದೆ.

ಮಳೆ, ಸರ್ವರ್ ಬ್ಯುಸಿ, ವಿದ್ಯುತ್ ಕಡಿತ, ಮೊಬೈಲ್‌ಗಳಿಗೆ ಬಾರದ ಮೆಸೇಜ್, ಆಧಾರ್ ಕಾರ್ಡ್‌ಗೆ ಪ್ಯಾನ್ ಲಿಂಕ್ ಆಗದಿರುವಂತಹ ಹಲವು ಸಮಸ್ಯೆಗಳಿಂದಾಗಿ ಫಲಾನುಭವಿ ಮಹಿಳೆಯರು ಕಷ್ಟಪಡುತ್ತಿದ್ದಾರೆ.

ಪಡಿತರ ಕಾರ್ಡ್ ಹೊಂದಿರುವ ಮಹಿಳೆಯರೆಲ್ಲರೂ ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳಾಗಲು ಅರ್ಹರು. ಇದುವರೆಗೆ ಶೇ 25ರಷ್ಟು ಮಹಿಳೆಯರ ನೋಂದಣಿ ಆಗಿದೆ. ನೋಂದಣಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಬಾಪೂಜಿ ಸೇವಾ ಕೇಂದ್ರಗಳು, ಗ್ರಾಮ ಒನ್ ಕೇಂದ್ರಗಳನ್ನು ಸಂಪರ್ಕಿಸಬಹುದು ಎಂದು ತಾಲ್ಲೂಕು ಶಿಶು ಅಭಿವೃದ್ಧಿ ಅಧಿಕಾರಿ ನವೀನ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಗೌರವಧನ ಹೆಚ್ಚಳಕ್ಕೆ ಮನವಿ: ಗ್ರಾಮ ಒನ್, ಕರ್ನಾಟಕ ಒನ್ ಕೇಂದ್ರಗಳವರಿಗೆ ನೋಂದಣಿಗೆ ನೀಡಲಾಗುವ ಗೌರವ ಧನವನ್ನು ಹೆಚ್ಚಿಸಬೇಕು ಎಂದು ಗ್ರಾಮ ಒನ್ ಸಿಬ್ಬಂದಿ ಮನವಿ ಮಾಡಿದ್ದಾರೆ.

'ನೋಂದಣಿ ಮಾಡಿಸಲು ಯಾವುದೇ ಶುಲ್ಕ ಪಡೆಯಬಾರದು ಎಂದು ಸರ್ಕಾರ ತಿಳಿಸಿದೆ. ಆದರೆ, ಅನೇಕ ಕಡೆ ಹಣ ಪಡೆಯಲಾಗು ತ್ತಿದೆ ಎಂದು ಆರೋಪಿಸಿ ಜಿಲ್ಲಾಧಿಕಾರಿ ಕಚೇರಿಗೆ ಕೆಲವು ಗ್ರಾಮಸ್ಥರು ದೂರು ಸಲ್ಲಿಸಿದ್ದಾರೆ. ಆದರೆ, ನಮಗೆ ನೀಡಲಾಗುವ ಗೌರವಧನ ಸಾಕಾಗುವುದಿಲ್ಲ' ಎಂದು ಸಿಬ್ಬಂದಿಯೊಬ್ಬರು ಹೇಳಿದ್ದಾರೆ.



ಮೊಳಕಾಲ್ಮುರಿನ ಕೋಟೆ ಬಡಾವಣೆಯ ಸೇವಾ ಕೇಂದ್ರದಲ್ಲಿ ನೋಂದಣಿ

ಗೌರವಧನ ನೀಡುವುದಿಲ್ಲ ಎಂಬ ಕಾರಣಕ್ಕೆ ಪ್ರಜಾಪ್ರತಿನಿಧಿಗಳು ಸಿಗುತ್ತಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತರಲು ಮನವಿ ಮಾಡಲಾಗುವುದು

ನವೀನ್, ಶಿಶು ಅಭಿವೃದ್ಧಿ ಅಧಿಕಾರಿ

ನ್ಯಾಯಬೆಲೆ ಅಂಗಡಿಯಲ್ಲಿ ಇ–ಕೆವೈಸಿ ಆಗಿದೆ ಎನ್ನುತ್ತಾರೆ. ಸೇವಾ ಕೇಂದ್ರದಲ್ಲಿ ಆಗಿಲ್ಲ ಎನ್ನುತ್ತಾರೆ. ಸರ್ಕಾರ ಇದಕ್ಕೆ ಮಾರ್ಗೋಪಾಯ ಸೂಚಿಸಿಲ್ಲ ಎಂದು ಹೇಳುತ್ತಿರುವುದು ನೋಂದಣಿಗೆ ತೊಂದರೆಯಾಗಿದೆ

ನಾಗರಾಜ್, ಕೊಂಡ್ಲಹಳ್ಳಿ ಗ್ರಾಮಸ್ಥ

ಮೆಸೇಜ್ ಅಗತ್ಯವಿಲ್ಲ..

'ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಸಲು ಆಧಾರ್ ಕಾರ್ಡ್‌ನಲ್ಲಿ ನಮೂದಾಗಿರುವ ಮೊಬೈಲ್ ಸಂಖ್ಯೆಗೆ ಮೆಸೇಜ್ ಬರುತ್ತದೆ. ಮೆಸೇಜ್‌ನಲ್ಲಿರುವ ದಿನಾಂಕ ಮತ್ತು ನಿಗದಿಪಡಿಸಿದ ಕೇಂದ್ರದಲ್ಲಿ ನೋಂದಣಿ ಮಾಡಿಸಬೇಕು' ಎಂಬುದಾಗಿ ಹೇಳಲಾಗುತ್ತಿದೆ. ಆದರೆ ಸೇವಾ ಕೇಂದ್ರಗಳಲ್ಲಿ ಜನರು ನೇರವಾಗಿ ನೋಂದಣಿ ಮಾಡಿಸಬಹುದು. ಮೆಸೇಜ್‌ಗಾಗಿ ಕಾಯುವ ಅಗತ್ಯವಿಲ್ಲ ಎಂದು ಮೂಲಗಳು ತಿಳಿಸಿವೆ.

ಚಿನ್ನದ ಒಡವೆಗಾಗಿ ಅಜ್ಜ, ಅಜ್ಜಿ ಕೊಂದವನ ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ತನ್ನ ಅಜ್ಜ-ಅಜ್ಜಿಯನ್ನು ಕೊಂದು ಅವರ ಬಂಗಾರದ ಒಡವೆಗಳನ್ನು ಕದ್ದು ನಗರದಲ್ಲಿ ಮಾರಾಟ ಮಾಡಲು ಯತ್ನಿಸುತ್ತಿದ್ದ ಆರೋಪಿಯನ್ನು ಬಂದರು ಠಾಣೆಯ ಪೊಲೀಸರು ಸೋಮವಾರ ಬಂಧಿಸಿದ್ದಾರೆ.



ಅಹಮ್ಮದ್ ಅಕ್ಮಲ್

'ಕೇರಳದ ತ್ರಿಶ್ಶೂರ್ ಜಿಲ್ಲೆಯ ವೈಲತ್ತೂರು ಪನಾಂಗೈಲ್ ಹೌಸ್‌ನ ನಿವಾಸಿ ಅಹಮ್ಮದ್ ಅಕ್ಮಲ್ (27) ಬಂಧಿತ ಆರೋಪಿ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಆರೋಪಿಯಿಂದ ಮುತ್ತು ಪೋಣಿಸಿದ ಎರಡು ಎಳೆಯ ಚಿನ್ನದ ಸರ, ಸಣ್ಣ ಪದಕವಿರುವ ಚಿನ್ನದ ಸರ, ಮೂರು ಕಿವಿಯೋಲೆಗಳು, ಐದು ಉಂಗುರಗಳು, ಎರಡು ಬಳೆಗಳು, ಪಾಸ್‌ಪೋರ್ಟ್ ಹಾಗೂ ಇತರ ದಾಖಲೆಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

'ರಥಬೀದಿಯಲ್ಲಿ ಅನುಮಾನಾಸ್ಪದವಾಗಿ ತಿರುಗುತ್ತಿದ್ದ ವ್ಯಕ್ತಿ ಚಿನ್ನಾಭರಣಗಳನ್ನು ಮಾರಾಟ ಮಾಡಲು ಯತ್ನಿಸುತ್ತಿರುವ ಬಗ್ಗೆ ಸೋಮವಾರ ಬೆಳಿಗ್ಗೆ ಬಂದರು ಠಾಣೆಯ ಪೊಲೀಸರಿಗೆ ಮಾಹಿತಿ ಬಂದಿತ್ತು. ಠಾಣಾಧಿಕಾರಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ತೆರಳಿ ಆ ವ್ಯಕ್ತಿಯನ್ನು ವಶಕ್ಕೆ ಪಡೆದಿದ್ದರು. ತಾನು ಕೇರಳದ ತ್ರಿಶ್ಶೂರ್ ಜಿಲ್ಲೆಯವನು ಎಂದು ಆತ ತಿಳಿಸಿದ್ದ. ಆತನ ವರ್ತನೆಯಿಂದ ಅನುಮಾನಗೊಂಡು, ಮತ್ತಷ್ಟು ವಿಚಾರಣೆ ನಡೆಸಿದಾಗ, ಅಜ್ಜ ಅಜ್ಜಿಯನ್ನು ಕೊಂದು ಚಿನ್ನಾಭರಣಗಳೊಂದಿಗೆ ಬಂದಿರುವುದನ್ನು ಆತ ಒಪ್ಪಿಕೊಂಡ' ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಯು ಈ ಹಿಂದೆ ಕಾಸರಗೋಡಿನಲ್ಲಿ ನಡೆದಿದ್ದ ದರೋಡೆ ಪ್ರಕರಣವೊಂದರಲ್ಲಿ ಆರೋಪಿಯಾಗಿದ್ದ. ಆತ ನಗರದ ಶ್ರೀನಿವಾಸ ಕಾಲೇಜಿನ ಹಳೆವಿದ್ಯಾರ್ಥಿ. ನಗರದ ಚಿನ್ನಾಭರಣ ಮಳಿಗೆಗಳ ಬಗ್ಗೆ ಆತನಿಗೆ ಚೆನ್ನಾಗಿ ತಿಳಿದಿತ್ತು. ಹಾಗಾಗಿಯೇ ಚಿನ್ನಾಭರಣಗಳನ್ನು ಮಾರಾಟ ಮಾಡಲು ಇಲ್ಲಿಗೆ ಬಂದಿದ್ದ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.



ಆರೋಪಿಯಿಂದ ವಶಪಡಿಸಿಕೊಂಡ ಚಿನ್ನಾಭರಣಗಳು ಹಾಗೂ ಚಾಕು

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



❦ ಸುಭಾಷಿತ ❦

ಅಂಜಿದರೆ ಅಮರುವುದು ಮಂಜು; ಅಂಜಿಕೆ ಮಂಜು,
ದಿಟ್ಟತನ ದಾರಿ ಪಂಜು.

–ಕೆ.ಎಸ್. ನರಸಿಂಹಸ್ವಾಮಿ

ಸಾಂಸ್ಕೃತಿಕ ಪ್ರಶಸ್ತಿಗಳಿಗೆ ಷರತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಅಣಕ

ದೇಶದ ಉನ್ನತ ಸಾಂಸ್ಕೃತಿಕ ಸಂಸ್ಥೆಗಳು ಹಾಗೂ ಅಕಾಡೆಮಿಗಳ ಕಾರ್ಯವೈಖರಿಯಲ್ಲಿ ಪ್ರಮುಖ ಬದಲಾವಣೆಗಳನ್ನು ಸೂಚಿಸಿ ಸಂಸದೀಯ ಸಮಿತಿಯೊಂದು ನೀಡಿರುವ ವರದಿಯು ಸಾಂಸ್ಕೃತಿಕ ಕ್ಷೇತ್ರವನ್ನು ಸರ್ಕಾರದ ನಿಯಂತ್ರಣದಲ್ಲಿ ಇರಿಸಿಕೊಳ್ಳುವ ಉದ್ದೇಶ ಹೊಂದಿರುವಂತಿದೆ. ವಿವಿಧ ಕಾರಣಗಳನ್ನು ನೀಡಿ ಪ್ರಶಸ್ತಿಗಳನ್ನು ಮರಳಿಸುವ ಮನೋಭಾವದ ಬರಹಗಾರರನ್ನು, ಸಾಂಸ್ಕೃತಿಕ ಅಕಾಡೆಮಿಗಳ ಪ್ರಶಸ್ತಿ- ಪುರಸ್ಕಾರಗಳಿಂದ ದೂರವಿಡುವುದಕ್ಕೆ ಅವಕಾಶ ಕಲ್ಪಿಸುವ ಶಿಫಾರಸು ವರದಿಯಲ್ಲಿದೆ. ಇದು ಸಾಂಸ್ಕೃತಿಕ ವಲಯದಲ್ಲಿ ರಾಜಕೀಯ ಹಸ್ತಕ್ಷೇಪಕ್ಕೆ ಅವಕಾಶ ಕಲ್ಪಿಸಲಿದೆ. ಸಾರಿಗೆ, ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಕ್ಷೇತ್ರಗಳ ಕುರಿತ ಸ್ಥಾಯಿ ಸಮಿತಿ ನೀಡಿರುವ ವರದಿಯು ರಾಜಕೀಯ ಪ್ರತಿಭಟನೆಯ ಭಾಗವಾಗಿ ಪ್ರಶಸ್ತಿ ಹಿಂತಿರುಗಿಸುವುದನ್ನು ನಿರ್ಬಂಧಿಸಬೇಕೆಂದು ಹೇಳಿದೆ. 'ರಾಷ್ಟ್ರೀಯ ಅಕಾಡೆಮಿಗಳು ಮತ್ತು ಇತರೆ ಸಾಂಸ್ಕೃತಿಕ ಸಂಸ್ಥೆಗಳ ಕಾರ್ಯನಿರ್ವಹಣೆ' ಶೀರ್ಷಿಕೆಯ ವರದಿ, ಇನ್ನು ಮುಂದೆ ಪ್ರಶಸ್ತಿಗಳನ್ನು ಸ್ವೀಕರಿಸುವವರಿಂದ, 'ರಾಜಕೀಯ ಕಾರಣಕ್ಕಾಗಿ ಸಾಂಸ್ಕೃತಿಕ ಪ್ರಶಸ್ತಿಗಳನ್ನು ಹಿಂತಿರುಗಿಸುವುದಿಲ್ಲ ಹಾಗೂ ಪ್ರಶಸ್ತಿಗಳಿಗೆ ಅಗೌರವ ತೋರುವಂತೆ ವರ್ತಿಸುವುದಿಲ್ಲ' ಎಂದು ಹೇಳಿಕೆ ಪಡೆಯುವಂತೆ ಶಿಫಾರಸು ಮಾಡಿದೆ. ಕನ್ನಡ ಲೇಖಕ ಎಂ.ಎಂ. ಕಲಬುರ್ಗಿ ಅವರ ಕೊಲೆಯ ನಂತರ ವಿವಿಧ ಭಾಷೆಗಳ 39 ಲೇಖಕರು ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ಹಿಂತಿರುಗಿಸಿರುವುದನ್ನು ವರದಿ ನೆನಪಿಸಿದೆ. ಸಾಂಸ್ಕೃತಿಕ ಪುರಸ್ಕಾರಗಳ ಸಮಗ್ರತೆ ಹಾಗೂ ಘನತೆಯನ್ನು ಉಳಿಸುವ ದೃಷ್ಟಿಯಿಂದ ಪ್ರಶಸ್ತಿಗಳನ್ನು ರಾಜಕೀಯ ದಾಳಗಳಾಗದಂತೆ ನೋಡಿಕೊಳ್ಳಬೇಕಾಗಿದೆ ಎಂದು ಸಮಿತಿ ಅಭಿಪ್ರಾಯಪಟ್ಟಿದೆ. ಪುರಸ್ಕೃತರು ಭವಿಷ್ಯದಲ್ಲಿ ಯಾವುದೇ ಸಮಯದಲ್ಲಿ ಪ್ರಶಸ್ತಿಯನ್ನು ಅವಮಾನಿಸುವಂತಿಲ್ಲ ಹಾಗೂ ರಾಜಕೀಯ ಪ್ರತಿಭಟನೆಯ ಸಂಕೇತದ ರೂಪದಲ್ಲಿ ಪ್ರಶಸ್ತಿಗಳನ್ನು ಹಿಂತಿರುಗಿಸುವಂತಿಲ್ಲ ಎಂದು ಶಿಫಾರಸು ಮಾಡಿರುವ ವರದಿ, ಪ್ರಶಸ್ತಿ ಮರಳಿಸುವವರನ್ನು ಮುಂದಿನ ವರ್ಷಗಳಲ್ಲಿ ಅಂತಹ ಪ್ರಶಸ್ತಿಗಳಿಗೆ ಪರಿಗಣಿಸಬಾರದು ಎಂದೂ ಅಭಿಪ್ರಾಯಪಟ್ಟಿದೆ.



ಷರತ್ತುಬದ್ಧ ಪ್ರಶಸ್ತಿಗಳು ನೀಡುವವರಿಗೂ ಪಡೆಯುವವರಿಗೂ ಶೋಭೆ ತರುವುದಿಲ್ಲ

ಷರತ್ತು- ನಿರ್ಬಂಧಗಳ ಮೂಲಕ ಪ್ರಶಸ್ತಿಯ ಘನತೆಯನ್ನು ಸಂರಕ್ಷಿಸಲು ಮುಂದಾಗುವುದೇ ಪುರಸ್ಕಾರವೊಂದರ ವರ್ಚಸ್ಸನ್ನು ಕುಗ್ಗಿಸುವ ಮೊದಲ ಹಂತ ಎನ್ನುವುದನ್ನು ಸಮಿತಿ ಮರೆತಂತಿದೆ; ಈ ನಡವಳಿಕೆ ಪ್ರಜಾಪ್ರಭುತ್ವದ ಅಣಕವಾಗಿದೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಪ್ರಯತ್ನವೂ ಆಗಿದೆ. ಪ್ರಶಸ್ತಿಗಳನ್ನು ಹಿಂತಿರುಗಿಸುವುದು ಕೂಡ ಪ್ರತಿಭಟನೆಯ ಒಂದು ರೂಪ ಹಾಗೂ ಅದು ಪ್ರಜಾಪ್ರಭುತ್ವ ನೀಡಿರುವ ಹಕ್ಕು. ಆ ಹಕ್ಕನ್ನು ಮೊಟಕುಗೊಳಿಸುವ ಯಾವುದೇ ಪ್ರಯತ್ನಕ್ಕೆ ಕೈಹಾಕುವುದು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು. ಬರಹಗಾರರು ಹಾಗೂ ಕಲಾವಿದರು ನಿರಾಕರಿಸಲಾಗದಂತಹ ಘನತೆಯನ್ನು ಪ್ರಶಸ್ತಿಗಳು ಪಡೆಯಬೇಕೇ ಹೊರತು, ಸಲ್ಲದ ಷರತ್ತುಗಳನ್ನು ವಿಧಿಸಿ ಅವುಗಳ ಘನತೆಯನ್ನು ಕುಗ್ಗಿಸಬಾರದು. ಷರತ್ತುಬದ್ಧ ಪ್ರಶಸ್ತಿಗಳು ನೀಡುವವರಿಗೂ ಪಡೆಯುವವರಿಗೂ ಶೋಭೆ ತರುವುದಿಲ್ಲ. ಪ್ರಸ್ತುತ, ಪ್ರಶಸ್ತಿಗಳನ್ನು ಷರತ್ತುಗಳ ಚೌಕಟ್ಟಿನಲ್ಲಿ ಇರಿಸಲು ಹೊರಟಿರುವವರು, ರಾಜಕೀಯ ಅಭಿಪ್ರಾಯಗಳನ್ನು ಸಾಂಸ್ಕೃತಿಕ ಕ್ಷೇತ್ರದ ಸಾಧಕರು ಹೊಂದಿರಬಾರದು ಅಥವಾ ಅವರ ಅಭಿಪ್ರಾಯಗಳು ಸರ್ಕಾರದ ವಿರುದ್ಧ ಇರಬಾರದು ಎಂದು ಹೇಳಲು ಹೊರಟಂತಿದೆ. ಸ್ವಾಯತ್ತ ಸಂಸ್ಥೆಗಳಾದ ಅಕಾಡೆಮಿಗಳು ಸರ್ಕಾರದ ನಿಯಂತ್ರಣದಲ್ಲಿರಬೇಕು ಎನ್ನುವ ಅಪೇಕ್ಷೆ ಸರಿಯಾದುದಲ್ಲ. ಪ್ರಶಸ್ತಿ ಪಡೆಯುವ ವ್ಯಕ್ತಿ ಸರ್ಕಾರಕ್ಕೆ ನಿಷ್ಠನಾಗಿರಬೇಕೆಂದು ಬಯಸುವುದೂ ಸರಿಯಲ್ಲ. ಆರೋಗ್ಯಕರ ಸಮಾಜವು ಬರಹಗಾರರು ಮತ್ತು ಕಲಾವಿದರನ್ನು ವಿಮರ್ಶಕರ ರೂಪದಲ್ಲಿ ನೋಡಬೇಕೇ ಹೊರತು ಭಟ್ಟಂಗಿಗಳನ್ನಾಗಿ ಅಲ್ಲ. ಲೇಖಕ ಅಥವಾ ಕಲಾವಿದನೊಬ್ಬ ಪ್ರಶಸ್ತಿಯನ್ನು ಮರಳಿಸಲು ನಿರ್ಧರಿಸಿದಾಗ, ಆ ಪರಿಸ್ಥಿತಿ ಸರ್ಕಾರದ ಆತ್ಮಾವಲೋಕನಕ್ಕೆ ಕಾರಣವಾಗಬೇಕೇ ವಿನಾ ಕೆರಳುವಿಕೆಗೆ ಅಲ್ಲ. ಆರೋಗ್ಯ, ಅಭಿರುಚಿ ಹಾಗೂ ಸೃಜನಶೀಲತೆಯನ್ನು ಸಮಾಜ ಹೊಂದುವಲ್ಲಿ ಮಹತ್ವದ ಕೊಡುಗೆ ನೀಡುವ ಬರಹಗಾರರು ಹಾಗೂ ಕಲಾವಿದರಿಗೆ ಪ್ರಶಸ್ತಿ- ಪುರಸ್ಕಾರಗಳನ್ನು ನೀಡುವುದು ಅವರಿಗೆ ಮಾಡುತ್ತಿರುವ ಉಪಕಾರವೆಂದು ಸರ್ಕಾರ ಅಥವಾ ಸಾಂಸ್ಕೃತಿಕ ಸಂಸ್ಥೆಗಳು ಭಾವಿಸಲೂಬಾರದು. ಕಲೆ ಮತ್ತು ಸಂಸ್ಕೃತಿಯ ಪೋಷಣೆ ಸರ್ಕಾರದ ಕರ್ತವ್ಯವಾಗಿದೆ. ಗಣತಂತ್ರ ವ್ಯವಸ್ಥೆಯಲ್ಲಿ ಸರ್ಕಾರವು ಸಾಂಸ್ಕೃತಿಕ ಪರಿಚಾರಿಕೆಯನ್ನು ಮಾಡಬಹುದೇ ಹೊರತು, ನಿಯಂತ್ರಣವನ್ನು ತರುವುದಕ್ಕೆ ಅವಕಾಶವಿಲ್ಲ. ಪ್ರಶಸ್ತಿ ಪುರಸ್ಕೃತರು ತಮ್ಮ ವೈಚಾರಿಕತೆ ಮತ್ತು ರಾಜಕೀಯ ಪ್ರಜ್ಞೆಯನ್ನು ಅಮಾನತಿನಲ್ಲಿಡಬೇಕೆಂದು ಬಯಸುವುದು ಯಾವುದೇ ಸರ್ಕಾರಕ್ಕೆ ಶೋಭಿಸುವುದಿಲ್ಲ. ಷರತ್ತುಬದ್ಧ ಪ್ರಶಸ್ತಿಗಳನ್ನು ನೀಡುವ ಬದಲು, ಅವುಗಳನ್ನು ನೀಡದಿರುವುದರಲ್ಲೇ ಸರ್ಕಾರಕ್ಕೆ ಗೌರವವಿದೆ, ಸಾಹಿತ್ಯಿಕ-ಸಾಂಸ್ಕೃತಿಕ ಕ್ಷೇತ್ರದ ಒಳಿತೂ ಇದೆ.

ಕಲಿಕೆಯಲ್ಲಿ ಕನ್ನಡ ಮಾಧ್ಯಮದ ಮರುಹುಟ್ಟಿಗೆ ಏನು ಬೇಕು?

ಹಿಗ್ಗಿತ್ತು ಕನ್ನಡ, ಕುಗ್ಗುತ್ತಿದೆ ಕನ್ನಡ!



ವಿಶ್ಲೇಷಣೆ

ವಸಂತ ಶೆಟ್ಟಿ

ರಾಜ್ಯ ಸರ್ಕಾರವು ಗ್ರಾಮ ಪಂಚಾಯಿತಿಗೊಂದು ಇಂಗ್ಲಿಷ್ ಮಾಧ್ಯಮ ಶಾಲೆ ಆರಂಭಿಸಬೇಕು ಎಂದು ಕಾಂಗ್ರೆಸ್ ಶಾಸಕ ಶಿವಲಿಂಗೇಗೌಡ ಅವರು ಸರ್ಕಾರವನ್ನು ಒತ್ತಾಯಿಸಿದ ಸುದ್ದಿ ಕಳೆದ ವಾರ ಬಂತು. ನಗರ ಪ್ರದೇಶಗಳಲ್ಲಿ ಬೇಕಾದಷ್ಟು ಇಂಗ್ಲಿಷ್ ಶಾಲೆಗಳಿವೆ, ಹಳ್ಳಿಗಳಲ್ಲೇ ಇಲ್ಲ. ಹೀಗಾಗಿ ಜನರ ಬೇಡಿಕೆಗೆ ಸರ್ಕಾರ ಸ್ಪಂದಿಸಬೇಕು ಅನ್ನುವುದು ಅವರ ವಾದವಾಗಿತ್ತು. ಈ ವಿಷಯದಲ್ಲಿ ರಾಜ್ಯದ ಮೂರೂ ಪ್ರಮುಖ ಪಕ್ಷಗಳ ಜನಪ್ರತಿನಿಧಿಗಳಲ್ಲಿ ಯಾವ ಅಭಿಪ್ರಾಯಭೇದವೂ ಇದ್ದಂತಿಲ್ಲ. ಎಡ-ನಡು-ಬಲ ಪಂಥದ ಒಲವಿನ ಎಲ್ಲ ನಾಯಕರಲ್ಲೂ ಇದೊಂದು ವಿಷಯದಲ್ಲಿ 'ಇಂಗ್ಲಿಷೇ ಪರಿಹಾರ' ಅನ್ನುವ ಕುರುಡು ನಂಬಿಕೆ ಆಳವಾಗಿ ಬೇರೂರಿದೆ.

ಮಕ್ಕಳ ಮೊದಲ ಹಂತದ ಕಲಿಕೆಯು ತಾಯ್ನುಡಿ ಇಲ್ಲವೇ ಸ್ಥಳೀಯ ನುಡಿಯಲ್ಲಿ ಆಗಬೇಕು ಅನ್ನುವ ನಿಲುವಿಗೆ ಸುಪ್ರೀಂ ಕೋರ್ಟ್‌ನಲ್ಲಿ ಸೋಲುಂಟಾಗಿ ದಶಕ ಸಮೀಪಿಸುತ್ತಿದೆ. ಈಗ ತಾಯ್ನುಡಿಯಲ್ಲಿ ಕಲಿಕೆಯ ಪರವಾಗಿ ಮಾತನಾಡುವುದೇ ವ್ಯರ್ಥ ಅನ್ನುವಷ್ಟರ ಮಟ್ಟಿಗೆ ಇಂಗ್ಲಿಷ್ ಮಾಧ್ಯಮದ ವ್ಯಾಮೋಹ ಹಳ್ಳಿ-ಪಟ್ಟಣಗಳನ್ನು ಆವರಿಸಿದೆ. 25 ವರ್ಷಗಳ ಹಿಂದೆ ನಾಡಿನ ಶೇಕಡ 85ರಷ್ಟು ಮಕ್ಕಳು ಕನ್ನಡ ಮಾಧ್ಯಮದಲ್ಲೇ ಕಲಿಯುತ್ತಿದ್ದರು. ಈಗ ಅದು ಶೇ 50ರ ಆಸುಪಾಸಿಗೆ ಇಳಿದಿದೆ. ಇಷ್ಟು ವ್ಯಾಪಕವಾಗಿ ಇಂಗ್ಲಿಷ್ ಮಾಧ್ಯಮದತ್ತ ಹೊರಳಿಕೊಂಡ ಪರಿಣಾಮವಾಗಿ ಕರ್ನಾಟಕಕ್ಕೆ ವಿಜ್ಞಾನ- ತಂತ್ರಜ್ಞಾನದಲ್ಲಿ ಅದೆಷ್ಟು ನೊಬೆಲ್ ಪ್ರಶಸ್ತಿಗಳು ಬಂದಿವೆ? ಮೈಕ್ರೊಸಾಫ್ಟ್, ಆ್ಯಪಲ್, ಓಪನ್ ಎಐ ತರಹದ ಜಗತ್ತನ್ನೇ ಆಳುವಂತಹ ಯಾವ ಸಂಸ್ಥೆಯನ್ನು ಕನ್ನಡದ ಮಕ್ಕಳು ಕಟ್ಟಿ ಮೆರೆದಿದ್ದಾರೆ? ಪಶ್ಚಿಮದ ದೇಶಗಳ ದೊಡ್ಡ ಕಾರ್ಪೊರೇಟ್ ಸಂಸ್ಥೆಗಳ ಕೆಳದರ್ಜೆಯ ಕೆಲಸಗಳನ್ನು ಕಡಿಮೆ ವೆಚ್ಚಕ್ಕೆ ಭಾರತದಿಂದ ಮಾಡಿಸಿಕೊಡುವ ಐ.ಟಿ. ಹೊರಗುತ್ತಿಗೆ ಉದ್ಯಮದ ಯಶಸ್ಸು ಭಾರತವನ್ನು, ಕರ್ನಾಟಕವನ್ನು ಪ್ರಗತಿಯ ತುತ್ತತುದಿಗೆ ಕೊಂಡೊಯ್ಯುವ ಬಲ ಹೊಂದಿದೆಯೇ? ಇಂತಹ ಪ್ರಶ್ನೆಗಳನ್ನು ಚರ್ಚಿಸುವುದು ಯಾರಿಗೂ ಯಾಕೆ ಬೇಡವಾಗಿದೆ? ಚಾಟ್ ಜಿಪಿಟಿ ನಂತರ ಕೃತಕ ಬುದ್ಧಿಮತ್ತೆ (ಎ.ಐ) ಕ್ಷೇತ್ರದಲ್ಲಿ ಆಗುತ್ತಿರುವ ಕ್ಷಿಪ್ರ ಬದಲಾವಣೆಗಳು ಇನ್ನು ಐದೇ ಐದು ವರ್ಷಗಳಲ್ಲಿ ಐ.ಟಿ. ಹೊರಗುತ್ತಿಗೆ ಉದ್ಯಮದ ಈಗಿನ ಸ್ವರೂಪವನ್ನು ತಲೆಕೆಳಗು ಮಾಡುವ ಎಲ್ಲ ಸೂಚನೆಗಳು ಇವೆ. ಹೀಗಿರುವಾಗ ಎ.ಐ. ಪ್ರವರ್ಧಮಾನಕ್ಕೆ ಬಂದ ನಂತರದ ಕಾಲದಲ್ಲಿ ನಮ್ಮ ಮಕ್ಕಳಿಗೆ ಒಳ್ಳೆಯ ಬದುಕು ಕಟ್ಟಿಕೊಡಬಲ್ಲ ಕಲಿಕೆಯ ಮತ್ತು ದುಡಿಮೆಯ ಆಯ್ಕೆಗಳೇನು ಅನ್ನುವ ಬಗ್ಗೆ ಯೋಚಿಸಲು ಶುರು ಮಾಡಿದರಷ್ಟೇ ನಾವು ಕಲಿಕೆಯನ್ನು ಮತ್ತು ಕಲಿಕೆಯಲ್ಲಿ ನಮ್ಮ ಭಾಷೆಗಳ ಪಾತ್ರವೇನು ಅನ್ನುವುದನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗಬಹುದು.

ಮಕ್ಕಳ ಕಲಿಕೆಗೆ ಯಾವ ನುಡಿಯಾಗಬೇಕು ಅನ್ನುವುದಕ್ಕೆ ಸರಳ ವಿವರಣೆಯೊಂದಿದೆ. ಮಗು ಮನೆಯಲ್ಲಿ ಮೊದಲ ಮೂರು ವರ್ಷ ಮನೆಯವರಿಂದ ಒಂದಿಷ್ಟು, ತದನಂತರ ಮನೆಯಾಚೆಯ ಅಂಗಳದಲ್ಲಿ ತನ್ನ ಓರಗೆಯ ಮಕ್ಕಳಿಂದ ಇನ್ನೊಂದಿಷ್ಟು ಪದಗಳನ್ನು ಪಡೆದುಕೊಳ್ಳುತ್ತದೆ. ಅದರ ಮುಂದಿನ ಹೆಜ್ಜೆಯೇ ಶಾಲೆ. ಮಗು ಅದಾಗಲೇ ಕಲಿತಿರುವ ನುಡಿ ಮತ್ತು ಪದಸಂಪತ್ತಿನ ಬುನಾದಿಯ ಮೇಲೆ ಹೊಸ ವಿಷಯಗಳನ್ನು, ಓದು-ಬರಹವನ್ನು ಕಲಿಸುತ್ತ ಹೋಗುವುದು ಮಗುವಿನ ಬೌದ್ಧಿಕ ವಿಕಾಸ ಸರಿಯಾಗಿ ಆಗಲು, ಮಕ್ಕಳಲ್ಲಿ ಸಮಸ್ಯೆ ಬಗೆಹರಿಸುವ ಕಲೆ, ವಸ್ತುನಿಷ್ಠವಾಗಿ ಯೋಚಿಸುವ ಶಕ್ತಿ ಪಡೆಯಲು ಇರುವ ಹೆಚ್ಚು ಪರಿಣಾಮಕಾರಿಯಾದ ದಾರಿ. ಈ ಮಾದರಿಯನ್ನೇ ಜಗತ್ತಿನ ಎಲ್ಲ ಮುಂದುವರಿದ ದೇಶಗಳಲ್ಲೂ ಪಾಲಿಸಲಾಗುತ್ತಿದೆ. ಈ ಸತ್ಯಕ್ಕೆ ಮುಖ ತಿರುಗಿಸಿ ಮಕ್ಕಳನ್ನು ಬಾಯಿಪಾಠದ ಕುಲುಮೆಯಲ್ಲಿ ಬೇಯಿಸುವ ಇಂಗ್ಲಿಷ್ ಮಾಧ್ಯಮವನ್ನೇ ಮಕ್ಕಳ ಏಳಿಗೆಯ ಸಾಧನ ಎಂಬಂತೆ ಎಲ್ಲರೂ ನೋಡುವಂತಾಗಿರುವುದು ಈ ಹೊತ್ತಿನ ದುರಂತ. ಸಾಮಾನ್ಯ ಜನರಲ್ಲಿ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಯುವುದರ ಉಪಯೋಗಕ್ಕೂ, ಇಂಗ್ಲಿಷ್‌ನಲ್ಲೇ ಮಕ್ಕಳು ಎಲ್ಲವನ್ನೂ ಕಲಿಯಲು ಹೋಗಿ ಆಗುವ ತೊಂದರೆಗಳಿಗೂ ಇರುವ ವ್ಯತ್ಯಾಸದ ಬಗ್ಗೆ ಅರಿವಿಲ್ಲ. ಆದರೆ ಜನಪ್ರತಿನಿಧಿಗಳಾದವರು ಯುನೆಸ್ಕೊ, ಪಿಸಾ (PISA), ಏಸರ್ (ASER) ತರಹದ ವರದಿಗಳು ಈ ಬಗ್ಗೆ ಏನು ಹೇಳಿವೆ, ಜಗತ್ತಿನಾದ್ಯಂತ ಕಲಿಕೆಯ ವಿಷಯದಲ್ಲಿ ಮಕ್ಕಳ ನುಡಿಯ ಪಾತ್ರದ ಬಗ್ಗೆ ಆಗಿರುವ ಅರಕೆಗಳೇನು ಎಂದು ತಿಳಿಯುವ ಕನಿಷ್ಠ ಪ್ರಯತ್ನವನ್ನಾದರೂ ಮಾಡಬೇಕಲ್ಲವೇ?

ಕಲಿಕೆಯ ಮಾಧ್ಯಮದ ವಿಷಯವನ್ನು 'ಉಳ್ಳವರಿಗೆ ಇಂಗ್ಲಿಷ್ ಮಾಧ್ಯಮ, ಬಡವರಿಗೆ ಮಾತ್ರ ಕನ್ನಡ ಉಳಿಸುವ ಹೊರೆ' ಬಗೆಯ ಭಾವನಾತ್ಮಕವಾದ ವಾದಗಳು ಕನ್ನಡವೊಂದನ್ನೇ ಬಲ್ಲ ಈ ಮಕ್ಕಳ ಕಲಿಕೆಗೆ ಕನ್ನಡ ಯಾಕೆ ಮುಖ್ಯ ಅನ್ನುವ ಪ್ರಶ್ನೆಯನ್ನು ಮರೆಮಾಚುವಂತೆ ಮಾಡಿವೆ. ತಂದೆ- ತಾಯಿ- ಶಿಕ್ಷಕರು- ಪರಿಸರ ಮತ್ತು ಮಗುವಿನ ನಾಲಿಗೆಯ ಮೇಲಿನ ಭಾಷೆಯಾದ ಕನ್ನಡದಲ್ಲಿ ಕಲಿಸುವುದು ಪರಿಣಾಮಕಾರಿಯೋ ಇಲ್ಲವೇ ಇಲ್ಲೆಲ್ಲೂ ಇಲ್ಲದ ಇಂಗ್ಲಿಷಿನಲ್ಲೋ ಅನ್ನುವ ಪ್ರಶ್ನೆ ಚರ್ಚಿಸಬೇಕಾದ ಪ್ರಶ್ನೆಯಲ್ಲವೇ? ಸಮಾನತೆಯ ನೆಲೆಯ ಶಿಕ್ಷಣ ಎಂದು ಮಾತನಾಡಿದಾಗ ಅದನ್ನು ನಿಜಕ್ಕೂ ಸಾಧ್ಯವಾಗಿಸುವ ಶಕ್ತಿ ಇರುವ ಏಕೈಕ ಸಾಧನವಾದ ನುಡಿಯ ಕುರಿತು ಮಾತನಾಡಲು ಹಿಂಜರಿಕೆ ಯಾಕೆ? ಇನ್ನೊಂದೆಡೆ ಇದು ಭಾರತದ ಯುಗ, ಭಾರತೀಯ ನಾಗರಿಕತೆಯ ಪುನರುಜ್ಜೀವನದ ಹೊತ್ತು ಈಗ ಬಂದಿದೆ ಎಂದು ಸಂಭ್ರಮಿಸುವ ಜನರಿಗೂ ಇಂತಹ ನಾಗರಿಕತೆಯ ಬುನಾದಿಯೇ ಭಾರತದ ನುಡಿಗಳು ಅನ್ನುವುದು ಯಾಕೆ ಕಾಣಿಸಲ್ಲ? ಮಕ್ಕಳನ್ನೆಲ್ಲ ಇಂಗ್ಲಿಷಿನಲ್ಲಿ ಓದಿಸಿ, ಪಶ್ಚಿಮದ ಸೇವೆಗೆ ಕಳಿಸಿದರೆ ನಾಗರಿಕತೆಯ ಪುನರುಜ್ಜೀವನ ಇಂಗ್ಲಿಷಿನಲ್ಲಿ ಆಗಲಿದೆಯೇ? ಪಶ್ಚಿಮದ ಎಲ್ಲ ಮುಂದುವರಿದ ದೇಶಗಳಿಗೂ ಕಲಿಕೆಯಲ್ಲಿ ಯಾವ ನುಡಿಯಿರಬೇಕು ಅನ್ನುವ ಪ್ರಶ್ನೆ ಎಂದೋ ಬಗೆಹರಿದಿದ್ದರೆ ವಸಾಹತುಶಾಹಿಗೆ ಒಳಪಟ್ಟಿದ್ದ ಮೂರನೆಯ ಜಗತ್ತಿನ ದೇಶಗಳಲ್ಲಿ ಮಾತ್ರ ಇದಕ್ಕೆ ವಿರುದ್ಧವಾದ ನಂಬಿಕೆ ಇರುವುದು ವಸಾಹತುಶಾಹಿಗೆ ಸಿಕ್ಕ ಗೆಲುವೇ ಅನ್ನಬಹುದು.

ಕನ್ನಡ ಮಾಧ್ಯಮದ ಕುಸಿತದ ದೂರಗಾಮಿ ಪರಿಣಾಮಗಳು ಈಗಾಗಲೇ ಗೋಚರಿಸಲು ಶುರುವಾಗಿವೆ. ಪತ್ರಿಕೆಗಳ ವರದಿಗಾರಿಕೆಗೆ ಸರಿಯಾಗಿ ಕನ್ನಡ ಬರೆಯಬಲ್ಲ ಅಭ್ಯರ್ಥಿಗಳು ಸಿಗುವುದೇ ಕಷ್ಟವಾಗುತ್ತಿದೆಯೆಂದರೆ ಬರವಣಿಗೆಯ ನುಡಿಯಾಗಿ ಕನ್ನಡ ಯಾವುದೆಲ್ಲ ಶಕ್ತಿಯನ್ನು ಇಪ್ಪತ್ತನೆಯ ಶತಮಾನದಲ್ಲಿ ಪಡೆದುಕೊಂಡಿತ್ತೋ ಅದನ್ನು ಕಳೆದುಕೊಳ್ಳುತ್ತ ಮತ್ತೆ 18ನೇ ಶತಮಾನದ ಹಿಂದೆ ಇದ್ದಂಥ ಮಾತಿನ ನುಡಿ ಮಾತ್ರ ಆಗುವತ್ತ ಚಲಿಸುತ್ತಿದೆಯೇನೋ ಅನ್ನಿಸುತ್ತದೆ. ಸಿನಿಮಾ, ಸಾಹಿತ್ಯ, ರಂಗಭೂಮಿ, ಮಾಧ್ಯಮ, ಆಡಳಿತ ಹೀಗೆ ಎಲ್ಲೆಲ್ಲಿ ಕನ್ನಡದ ಹರವು ಹಿಗ್ಗಿತ್ತೋ ಅದೆಲ್ಲವೂ ಮತ್ತೆ ಕುಗ್ಗಲು ಶುರುವಾಗಿದೆ ಅನ್ನಿಸುತ್ತದೆ.

ಸರ್ಕಾರ ಈಗ ಕನ್ನಡ ಮಾಧ್ಯಮದ ಬಗ್ಗೆ ಬದ್ಧತೆ ತೋರಿಸಬೇಕಿದೆ. ಮೊದಲಿಗೆ, ಮಕ್ಕಳ ಕಲಿಕೆಗೆ ತಾಯ್ನುಡಿ ಹೇಗೆ ಪೂರಕ ಎಂಬುದನ್ನು ಮನದಟ್ಟಾಗಿಸುವುದರ ಜೊತೆಗೆ ತಾಯ್ನುಡಿಯಲ್ಲೇ ಕಲಿತು ದೊಡ್ಡ ಯಶಸ್ಸು ಪಡೆದ ಸಾವಿರಾರು ಸಾಧಕರನ್ನು ಪರಿಚಯಿಸುವಂತಹ ಜನಜಾಗೃತಿಯ ಅಭಿಯಾನವೊಂದನ್ನು ಹಮ್ಮಿಕೊಳ್ಳಬೇಕು. ಇದೊಂದು ಸಾರ್ವಜನಿಕ ಹಿತಾಸಕ್ತಿಯ ವಿಷಯವೆಂದು ಭಾವಿಸಬೇಕು. ಕನ್ನಡ ಮಾಧ್ಯಮದ ವಿಜ್ಞಾನ ಮತ್ತು ಗಣಿತದ ಪಠ್ಯದಲ್ಲಿ ಬಳಸಿರುವ ಪದಗಳನ್ನು ಇನ್ನಷ್ಟು ಸರಳಗೊಳಿಸುವುದು, ಇಂಗ್ಲಿಷ್ ಅನ್ನು ಒಂದು ಆಡುನುಡಿಯಾಗಿ ಕೇಳು-> ಮಾತನಾಡು-> ನೋಡು-> ಬರೆ ಅನ್ನುವ ಕ್ರಮದಲ್ಲಿ ಹೇಳಿಕೊಡುವುದನ್ನು ಈಗಿರುವ ಏರ್ಪಾಡಿನಲ್ಲೇ ಸರಿಯಾಗಿ ಜಾರಿಗೆ ತರಬೇಕು. ಇದರ ಜೊತೆ ಜೊತೆಯಲ್ಲೇ ನಗರ ಪ್ರದೇಶಗಳಲ್ಲಿ ಒಳ್ಳೆಯ ಗುಣಮಟ್ಟದ ಕನ್ನಡ ಮಾಧ್ಯಮ ಶಾಲೆಗಳನ್ನು ಆರಂಭಿಸುವ ಉತ್ಸಾಹ ಇರುವ ಜನರಿಗೆ, ಸಂಘ-ಸಂಸ್ಥೆಗಳಿಗೆ ಸರ್ಕಾರದ ಎಲ್ಲ ಪ್ರೋತ್ಸಾಹ ದೊರೆಯುವಂತಹ ನೀತಿಯೊಂದನ್ನು ಘೋಷಿಸಬಹುದು. ನಗರ ಪ್ರದೇಶಗಳಲ್ಲಿ ಮಧ್ಯಮ ವರ್ಗದ ಪಾಲಕರು ಇಷ್ಟಪಟ್ಟು ಮಕ್ಕಳನ್ನು ಕಳಿಸುವಂತಹ ಕನ್ನಡ ಮಾಧ್ಯಮ ಶಾಲೆಗಳು ಬಂದಲ್ಲಿ ಅದರ ಪರಿಣಾಮ ಕೆಳಹಂತಕ್ಕೂ ಹರಡಲಿದೆ. ಕನ್ನಡ ಕಾವಲು ಸಮಿತಿಯ ಅಧ್ಯಕ್ಷರಾಗಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಇಂತಹದೊಂದು ದೂರದರ್ಶಿತ್ವವನ್ನು ಕನ್ನಡ ಮಾಧ್ಯಮ ಶಾಲೆಗಳ ವಿಚಾರದಲ್ಲಿ ಎದುರು ನೋಡಬಹುದೇ?



ಚುರುಮುರಿ



'ಕಾಂಟ್ರ್ಯಾಕ್ಟ್' ಪ್ರಶಸ್ತಿ!

• ಗುರು ಪಿ.ಎಸ್.

'ಎಲ್ಲಿಗೆ ಹೋಗ್ತಿದೀಯಾ ಮುದ್ದಣ್ಣ?'

ಬಗಲಲ್ಲಿ ಒಂದು ಫೈಲ್ ಹಿಡ್ಕೊಂಡು ಹೊರಟಿದ್ದ ಮುದ್ದಣ್ಣನನ್ನು ಕಂಡು ಕುತೂಹಲದಿಂದ ಕೇಳಿದ ವಿಜಿ.

'ವಿಧಾನಸೌಧದ ಕಡೆಗೆ'.

'ಏನು ಅಕಾಡೆಮಿಗಳ ಸದಸ್ಯನೋ, ಅಧ್ಯಕ್ಷನೋ ಆಗೋ ಪ್ಲಾನ್ ಇದೆಯಾ?'

'ಛೇ, ಅಷ್ಟೊಂದು ಆಸೆ ಏನೂ ಇಲ್ಲ'.

'ವಿರೋಧಪಕ್ಷದ ನಾಯಕ ಏನಾದರೂ ಆಗಬೇಕಂತಿದೀಯಾ' ಕಾಲೆಳೆದ ವಿಜಿ.

'ಅದೂ ಅಲ್ಲ. ಹಲವಾರು ಕವನಗಳನ್ನು ಬರೆದು, ಕನ್ನಡ ಸಾಹಿತ್ಯಕ್ಕೆ ಅಪಾರ ಕೊಡುಗೆ ನೀಡಿರುವ ನನಗೆ ರಾಜಕೀಯ ಆಗಿಬರಲ್ಲ'.

'ಓಹ್, ನೀನು ಕವಿನಾ! ಎಷ್ಟು ಕೃತಿಗಳು ಪ್ರಕಟವಾಗಿವೆ?'

'ಹಲವಾರು ಕವನಗಳನ್ನು ಬರೆದಿದ್ದೇನೆ. ಆದರೆ, ಪ್ರಕಟ ಆಗಿಲ್ಲ ಅಷ್ಟೇ. ನನಗೆ ಪ್ರಚಾರ ಅಂದರೆ ಆಗಿಬರಲ್ಲ' ಹೇಳಿದ ಮುದ್ದಣ್ಣ.

'ಮತ್ತೆ, ಶಾಸಕರಿಗೆ ತರಬೇತಿ ಕೊಡೋದಕ್ಕೆ ಏನಾದರೂ ಹೋಗ್ತಿದೀಯಾ?'

'ಅದೆಲ್ಲ ಇಲ್ಲಪ್ಪ. ಕಾಂಟ್ರ್ಯಾಕ್ಟ್‌ಗೆ ಸಹಿ ಮಾಡಿ, ಲೆಟರ್ ಕೊಡೋಕೆ ಹೋಗ್ತಿದೀನಿ'

'ಯಾವ ಕಾಂಟ್ರ್ಯಾಕ್ಟ್, ಯಾವ ಲೆಟರ್?'

'ನನಗೆ ಮುಂದೆ ಭಾರತರತ್ನ ಆಗಲೀ, ಪದ್ಮ ಪ್ರಶಸ್ತಿಗಳೇ ಆಗಲೀ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯೇ ಆಗಲೀ ಕೊಟ್ಟರೆ ಅದನ್ನು ಯಾವುದೇ ಕಾರಣಕ್ಕೂ ವಾಪಸ್ ಕೊಡೋದಿಲ್ಲ ಅಂತಾ ಲೆಟರ್ ಕೊಡೋಕೆ ಹೊರಟಿದೀನಿ?'

'ಅದಕ್ಕೆ ನೀನು ಬೆಂಗಳೂರಿನ ವಿಧಾನಸೌಧಕ್ಕಲ್ಲ, ದೆಹಲಿಗೆ ಹೋಗಬೇಕು. ಎಲ್ಲಿಗೆ ಹೋಗಬೇಕು ಅಂತಾನೇ ಗೊತ್ತಿಲ್ಲ, ನಿನಗೆ ಪ್ರಶಸ್ತಿ ಬೇರೆ ಕೊಡ್ತಾರೆ... ಅದ್ ಸರಿ. ಈವರೆಗೆ ಎಷ್ಟು ಅವಾರ್ಡ್ ತೆಗೆದುಕೊಂಡಿದ್ದೀಯಾ?' ಎಂದು ಕೇಳಿದ.

'ಒಂದೂ ಇಲ್ಲ...' ಸ್ವಲ್ಪವೂ ಹಿಂಜರಿಕೆ ಇಲ್ಲದೆ ಹೇಳಿದ ಮುದ್ದಣ್ಣ.

'ನಿನ್ನ ಆತ್ಮವಿಶ್ವಾಸ ಮೆಚ್ಚಬೇಕು' ನಕ್ಕ ವಿಜಿ.

'ಹಾಗಲ್ಲ. ಪ್ರಶಸ್ತಿ ವಾಪಸ್ ಕೊಡಲ್ಲ ಅಂತಾ ಲೆಟರ್ ಕೊಟ್ಟ ಮೇಲಾದರೂ ಅವಾರ್ಡ್ ಕೊಡ್ತಾರೇನೋ ಅನ್ನೋ ಆಸೆ' ಎನ್ನುತ್ತಾ ದೆಹಲಿಗೆ ರೈಲು ಟಿಕೆಟ್ ಬುಕ್ ಮಾಡೋಕೆ ಹೊರಟ ಮುದ್ದಣ್ಣ !

ದಿನದ ಟ್ವೀಟ್


ಕ್ರೀಡೆಗಿಂತ ದೊಡ್ಡವರಲ್ಲ



ಬಾಂಗ್ಲಾದೇಶ ಮಹಿಳಾ ಕ್ರಿಕೆಟ್ ತಂಡದ ಎದುರು ಹರ್ಮನಪ್ರೀತ್ ಕೌರ್ ತೋರಿದ ವರ್ತನೆಯು ಅಸಹ್ಯವಾದದ್ದು. ಕ್ರೀಡೆಗಿಂತ ಯಾರೂ ದೊಡ್ಡವರಲ್ಲ. ಈ ಮೂಲಕ ಅವರು ಭಾರತದ ಕ್ರಿಕೆಟ್‌ಗೆ ಕಳಂಕ ಮೆತ್ತಿದ್ದಾರೆ. ಅವರ ವಿರುದ್ಧ ಬಿಸಿಸಿಐ ಕಠಿಣ ಶಿಸ್ತು ಕ್ರಮ ಜರುಗಿಸಬೇಕು.

ಮದನ್‌ಲಾಲ್, 1983ರ ವಿಶ್ವಕಪ್ ವಿಜೇತ ಕ್ರಿಕೆಟ್ ತಂಡದ ಆಟಗಾರ

ಕಿಡಿನುಡಿ



ಕಾಂಗ್ರೆಸ್ ಪಕ್ಷದವರಿಗೆ ಬೇಕಾದಾಗ, ದರ್ದು ಇದ್ದಾಗ ನಾವು ಜಾತ್ಯತೀತರು. ಅವರಿಗೆ ಬೇಡವಾದಾಗ ಜಾತ್ಯತೀತರಲ್ಲ. 1983ರಲ್ಲಿ ಜನತಾ ಪಕ್ಷವು ಬಿಜೆಪಿ ಬೆಂಬಲದಲ್ಲಿ ರಚಿಸಿದ್ದ ಸರ್ಕಾರದಲ್ಲಿ ಸಿದ್ದರಾಮಯ್ಯ ಅವರು ಕನ್ನಡ ಕಾವಲು ಸಮಿತಿ ಅಧ್ಯಕ್ಷರಾಗಿರಲಿಲ್ಲವೇ?

ಎಚ್.ಡಿ. ದೇವೇಗೌಡ, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ

25 ವರ್ಷಗಳ ಹಿಂದೆ

ಭಾನುವಾರ, 26-7-1998

• ಕಾವೇರಿ ಉಸ್ತುವಾರಿ ಪ್ರಾಧಿಕಾರ ವಿರೋಧಿಸಲು ರಾಜ್ಯ ನಿರ್ಧಾರ

ಬೆಂಗಳೂರು, ಜುಲೈ 25– ಕಾವೇರಿ ನದಿ ನೀರಿನ ಹಂಚಿಕೆ ಸಂಬಂಧ ನ್ಯಾಯಮಂಡಲಿ ನೀಡಿರುವ ಮಧ್ಯಂತರ ಆದೇಶವನ್ನು ಜಾರಿಗೊಳಿಸಲು ಶಾಸನಬದ್ಧ ಉಸ್ತುವಾರಿ ಪ್ರಾಧಿಕಾರ ರಚಿಸಬೇಕೆಂಬ ಪ್ರಸ್ತಾವನೆಯನ್ನು ಪ್ರಬಲವಾಗಿ ವಿರೋಧಿಸಲು ಕರ್ನಾಟಕ ನಿರ್ಧರಿಸಿದೆ.

ಆದರೆ, ಲಭ್ಯವಿರುವ ನೀರನ್ನು ಹಂಚಿಕೊಳ್ಳಲು ಸಂಬಂಧಪಟ್ಟ ರಾಜ್ಯಗಳ ಪ್ರತಿನಿಧಿಗಳನ್ನು ಒಳಗೊಂಡ ಸಮನ್ವಯ ಸಮಿತಿ ರಚಿಸುವುದಾದರೆ ಅದಕ್ಕೆ ತನ್ನ ಅಭ್ಯಂತರವಿಲ್ಲ ಎಂಬುದನ್ನು ಕೇಂದ್ರ ಸರ್ಕಾರ ಮತ್ತು ಸುಪ್ರೀಂ ಕೋರ್ಟ್‌ಗೆ ತಿಳಿಸಲು ಕರ್ನಾಟಕ ತೀರ್ಮಾನಿಸಿದೆ.

• ಚಂದ್ರಿಕಾ ಅವರಿಗೆ ಆನೆಮರಿ ಕೊಡುಗೆ

ನವದೆಹಲಿ, ಜುಲೈ 25– ಕೊಲಂಬೊದಲ್ಲಿ ಈ ತಿಂಗಳ 29ರಿಂದ 31ರವರೆಗೆ ನಡೆಯುವ ಹತ್ತನೇ ಸಾರ್ಕ್ ಶೃಂಗ ಸಮ್ಮೇಳನದಲ್ಲಿ ಭಾಗವಹಿಸಲಿರುವ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಲಂಕಾದ ಅಧ್ಯಕ್ಷೆ ಚಂದ್ರಿಕಾ ಕುಮಾರ ತುಂಗೆ ಅವರಿಗೆ ಭಾರತ-ಶ್ರೀಲಂಕಾ ಸ್ನೇಹ ಸಂಕೇತವಾಗಿ ಮೈಸೂರಿನ ಮರಿ ಆನೆಯೊಂದನ್ನು ಅರ್ಪಿಸಲಿರುವುದು ಸಮ್ಮೇಳನದ ಒಂದು ವಿಶೇಷ ಕಾರ್ಯಕ್ರಮ.

ವಾಜಪೇಯಿ ಅವರು 28ರಂದು ಚಂದ್ರಿಕಾ ಅವರನ್ನು ಅಧ್ಯಕ್ಷರ ಭವನದಲ್ಲಿ ಭೇಟಿಯಾಗಲಿದ್ದಾರೆ. ಅಲ್ಲಿ ನಡೆಯುವ ವಿಶೇಷ ಸಮಾರಂಭದಲ್ಲಿ ಮರಿ ಆನೆಯನ್ನು ಚಂದ್ರಿಕಾ ಅವರಿಗೆ ನೀಡಲಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 26-7-1973

• ಫೋನ್ ಮಾಡಲು ಗುಂಡಿ ಒತ್ತುವ ಸಾಧನ: ಐಟಿಐ ಸಾಧನೆ

ಬೆಂಗಳೂರು, ಜುಲೈ 25– ಫೋನ್ ಮಾಡಲು ಡಯಲ್ ಮಾಡುವ ಬದಲು ಗುಂಡಿ ಒತ್ತುವುದು.

ಸುಧಾರಿತ ವ್ಯವಸ್ಥೆಯೊಂದನ್ನು ನಗರದಲ್ಲಿರುವ ಐ.ಟಿ.ಐ.ನ ಸಂಶೋಧನೆ ಮತ್ತು ಅಭಿವೃದ್ಧಿ ಶಾಖೆ ರೂಪಿಸಿದೆ. ಮುಂದುವರಿದ ದೇಶಗಳಲ್ಲಿ ಈಗಾಗಲೇ ಬಳಕೆಗೆ ಬಂದಿರುವ ಗುಂಡಿ ಒತ್ತುವ ಟೆಲಿಫೋನ್ ದೂರದ ಕರೆಗಳಿಗೆ ತುಂಬಾ ಸಹಾಯವಾಗುತ್ತದೆ.

• ಫ್ರಾನ್ಸ್‌ನಿಂದ ಮತ್ತಷ್ಟು ಅಣ್ವಸ್ತ್ರ ಸ್ಫೋಟ

ಪ್ಯಾರಿಸ್, ಜುಲೈ 25– ದಕ್ಷಿಣ ಪೆಸಿಫಿಕ್‌ನಲ್ಲಿ ಮತ್ತಷ್ಟು ಅಣ್ವಸ್ತ್ರ ಪ್ರಯೋಗಗಳನ್ನು ನಡೆಸಲಾಗುವುದೆಂದು ಫ್ರಾನ್ಸಿನ ವಿದೇಶಾಂಗ ಸಚಿವ ಮೈಕೇಲ್ ಜೋಬರ್ಟ್ ತಿಳಿಸಿದ್ದಾರೆ.

ಫ್ರಾನ್ಸ್ ಜೊತೆ ರಾಜತಾಂತ್ರಿಕ ಬಾಂಧವ್ಯ ಕಡಿದುಕೊಳ್ಳುವ ಪೆರು ನಿರ್ಧಾರ ಫ್ರಾನ್ಸಿನ ಮೇಲೆ ಯಾವ ಪರಿಣಾಮವನ್ನೂ ಬೀರದೆಂದೂ ಪ್ರಸಕ್ತ ವಿವಾದಾತ್ಮಕ ಪರೀಕ್ಷಾ ಸ್ಫೋಟಗಳನ್ನು ಮುಂದುವರಿಸಿಕೊಂಡು ಹೋಗುವುದನ್ನು ಫ್ರಾನ್ಸ್ ನಿಲ್ಲಿಸದೆಂದೂ ಅವರು ನಿನ್ನೆ ತಿಳಿಸಿದರು.

• ನ್ಯಾಯಾಲಯದ ತೀರ್ಪಿಗೆ ಅಧ್ಯಕ್ಷ ನಿಕ್ಸನ್ ಬದ್ಧ

ವಾಷಿಂಗ್ಟನ್, ಜುಲೈ 25– ವಾಟರ್‌ಗೇಟ್ ಪ್ರಕರಣದಲ್ಲಿ ಅಧ್ಯಕ್ಷ ನಿಕ್ಸನ್ ಅವರು ತಮ್ಮ ಸಾಕ್ಷ್ಯ ನೀಡುವುದನ್ನು ತಡೆಹಿಡಿದಿರುವುದರಿಂದ ಆ ಸಂಬಂಧದಲ್ಲಿ ನ್ಯಾಯಾಲಯ ನೀಡುವ ತೀರ್ಪಿನಂತೆ ಅವರು ನಡೆದುಕೊಳ್ಳುವರು ಎಂದು ಶ್ವೇತಭವನವು ನಿನ್ನೆ ತಿಳಿಸಿತು.

ಸಂಗತ

ಮೈಕ್ರೊ ಪ್ಲಾಸ್ಟಿಕ್‌ನ ಮೆಗಾ ಜಗತ್ತು

ಮೈಕ್ರೊ ಪ್ಲಾಸ್ಟಿಕ್ ಕಣಗಳು ಕೆರೆ– ಕಾಲುವೆ, ನದಿ, ಗಾಳಿ, ಆಹಾರ, ಮಣ್ಣು ಮತ್ತು ಅಂತರ್ಜಲಕ್ಕೂ ಸೇರಿಕೊಂಡು ಮನುಷ್ಯನ ಆರೋಗ್ಯದ ಮೇಲೆ ದಾಳಿ ಮಾಡುತ್ತವೆ

• ಶಿಶಿರ ವಸಿಷ್ಠ

ಪ್ಲಾಸ್ಟಿಕ್ ಹಾವಳಿಯ ಕುರಿತು ಮಾತು ಬಂದಾಗಲೆಲ್ಲ ಅದರ ನಿಯಂತ್ರಣ, ರೀಸೈಕಲಿಂಗ್ ಬಗ್ಗೆಯೂ ಪ್ರಸ್ತಾಪವಾಗುತ್ತದೆ. ಇಂಥಿಂಥ ಬಗೆಯ ಪ್ಲಾಸ್ಟಿಕ್ ಉತ್ಪನ್ನಗಳಿಂದ ಭೂಮಿಗೆ, ವಾತಾವರಣಕ್ಕೆ, ಜೀವಿಲೋಕಕ್ಕೆ ತೊಂದರೆಯಾಗುತ್ತದೆ ಎಂಬ ಮಾಹಿತಿ ನಮಗೆ ಗೊತ್ತೇ ಇದೆ. ಇದು ಕಾಣುವ ಪ್ಲಾಸ್ಟಿಕ್‌ನ ಬಗ್ಗೆ ನಮಗಿರುವ ತಿಳಿವಳಿಕೆ ಮತ್ತು ಕಾಳಜಿ. ಆದರೆ ನಮ್ಮ ಬರಿಗಣ್ಣಿಗೆ ಕಾಣಿಸದೆ ಸೃಷ್ಟಿಯ ಚರಾಚರಗಳಲ್ಲೂ ಇರುವ ಮೈಕ್ರೊ ಪ್ಲಾಸ್ಟಿಕ್‌ನ ಬಗ್ಗೆ ನಮಗೆ ಹೆಚ್ಚು ಗೊತ್ತಿಲ್ಲ.

ಈಗ ಮೈಕ್ರೊ ಪ್ಲಾಸ್ಟಿಕ್ ಇರದಿರುವ ಸ್ಥಳವೇ ಇಲ್ಲ. ಗಾಳಿ, ನೀರು, ಮಣ್ಣಿನಲ್ಲೆಲ್ಲಾ ಸಮೃದ್ಧವಾಗಿ ಜಾಗ ಮಾಡಿಕೊಂಡಿರುವ ಮೈಕ್ರೊಪ್ಲಾಸ್ಟಿಕ್ ಎಲ್ಲ ಬಗೆಯ ಜೀವಿಗಳ ಜೀವನ ಕ್ರಮದ ಮೇಲೆ ಅಡ್ಡ ಪರಿಣಾಮಗಳನ್ನು ಮಾಡುತ್ತಿದೆ. 25 ಮೈಕ್ರಾನ್‌ನಿಂದ ಐದು ಮಿಲಿಮೀಟರ್ ವ್ಯಾಸವಿರುವ ಪ್ಲಾಸ್ಟಿಕ್ ಅನ್ನು ಮೈಕ್ರೊಪ್ಲಾಸ್ಟಿಕ್ ಎನ್ನುತ್ತೇವೆ. ಕೃತಕ ಎಳೆಗಳನ್ನು ತೊಳೆದು ಒಣಗಿಸುವಾಗ (ಯಂತ್ರಗಳಲ್ಲಿ) ಅಥವಾ ಪ್ಲಾಸ್ಟಿಕ್ ವಸ್ತುಗಳು ಸೂರ್ಯನ ಶಾಖ, ಬೆಳಕು, ಗಾಳಿ ಮತ್ತು ಮಳೆಗೆ ಒಡ್ಡಿಕೊಂಡಾಗ ಮೈಕ್ರೊ ಪ್ಲಾಸ್ಟಿಕ್‌ಗಳು ವಾತಾವರಣಕ್ಕೆ ಬಿಡುಗಡೆಗೊಳ್ಳುತ್ತವೆ. ಹಸಿ ಪೈಪುಗಳು, ಚಹಾ ಚೀಲಗಳು, ಸಿಗರೇಟ್ ತುದಿ, ಟಯರ್, ಪಾತ್ರೆ ತೊಳೆಯುವ, ಬಟ್ಟೆ ಒಗೆಯುವ ಯಂತ್ರಗಳಿಂದ ಹೊಮ್ಮುವ ಮೈಕ್ರೊ ಪ್ಲಾಸ್ಟಿಕ್ ಕಣಗಳು ಕೆರೆ- ಕಾಲುವೆ, ನದಿ, ಗಾಳಿ, ಆಹಾರ, ಮಣ್ಣು ಮತ್ತು ಅಂತರ್ಜಲಕ್ಕೂ ಸೇರಿಕೊಂಡು ಮನುಷ್ಯನ ಆರೋಗ್ಯದ ಮೇಲೆ ನೇರ ದಾಳಿ ಮಾಡುತ್ತವೆ.

2014ರಲ್ಲಿ ನಡೆದ ಅಧ್ಯಯನದ ಪ್ರಕಾರ ಆ ವರ್ಷ 51 ಸಹಸ್ರಕೋಟಿ ಮೈಕ್ರೊಪ್ಲಾಸ್ಟಿಕ್ ತುಂಡುಗಳು ವಿಶ್ವದ ಸಾಗರಗಳನ್ನು ಪ್ರವೇಶಿಸಿದ್ದವಂತೆ. ಇದು ನಮ್ಮ ಆಕಾಶಗಂಗೆಯ ನಕ್ಷತ್ರಗಳ ಸಂಖ್ಯೆಗಿಂತ 500 ಪಟ್ಟು ಹೆಚ್ಚು! ಇದು ಕೇವಲ ಒಂದು ವರ್ಷದ ಲೆಕ್ಕ. ಪ್ಲಾಸ್ಟಿಕ್ ಬಳಕೆ ಶುರುವಾಗಿ 400 ವರ್ಷಗಳಾಗಿವೆ. ಅಂದರೆ ನೀವೇ ಲೆಕ್ಕ ಮಾಡಿಕೊಳ್ಳಿ. ಇದುವರೆಗೆ ಅದೆಷ್ಟು ಮೈಕ್ರೊಪ್ಲಾಸ್ಟಿಕ್ ಕಣಗಳನ್ನು ನಾವು ಸಾಗರದೊಡಲಿಗೆ ಸುರಿದಿದ್ದೇವೆ ಎಂಬುದು ತಿಳಿಯುತ್ತದೆ. ಪ್ಲಾಸ್ಟಿಕ್‌ನ ಉತ್ಪಾದನೆ ಮತ್ತು ಬಳಕೆ ಹೆಚ್ಚಿದಂತೆಲ್ಲ ಮೈಕ್ರೊಪ್ಲಾಸ್ಟಿಕ್‌ನ ಹಾವಳಿಯೂ ಏರುತ್ತಿದೆ. ಈಗಾಗಲೇ ನಡೆದಿರುವ ಹಲವು ಅಧ್ಯಯನಗಳ ಪ್ರಕಾರ ಸಾಗರ ಸೇರುವ ಮೈಕ್ರೊಪ್ಲಾಸ್ಟಿಕ್ ಕಣಗಳು ಮೀನುಗಳ ದೇಹ ಪ್ರವೇಶಿಸಿ ಅತ್ಯಂತ ಹಾನಿಕಾರಕ ವಿಷಮಯ ರಾಸಾಯನಿಕಗಳನ್ನು ಉತ್ಪಾದಿಸುತ್ತಿವೆ. ಅದರಲ್ಲೂ ಸಾಗರದ ಮೀನು ಸೇರುವ ಪಾಲಿಬ್ರೊಮೈಡ್ ಡೈ ಫೀನೈಲ್ ಈಥರ್ ಎನ್ನುವ ರಾಸಾಯನಿಕವು ಮನುಷ್ಯನ ಕಿಣ್ವ ಮತ್ತು ವರ್ಣತಂತುಗಳನ್ನು ಜಖಂಗೊಳಿಸುವ ಸಾಧ್ಯತೆ ಇದೆ.

ಮೈಕ್ರೊಪ್ಲಾಸ್ಟಿಕ್ ಹಾವಳಿ ಮೀನುಗಳಿಗಷ್ಟೇ ಸೀಮಿತವಾಗಿಲ್ಲ. ನಾವು ತಿನ್ನುವ ಉಪ್ಪು, ಚಹಾ, ಬಿಯರ್, ವೈನ್, ಸಕ್ಕರೆ, ಗಜ್ಜರಿ, ಸೇಬು, ಅಕ್ಕಿ, ಶೇಂಗಾ, ಜೇನುತುಪ್ಪ, ಮೂಲಂಗಿ, ಸೊಪ್ಪು, ಚಿಕನ್, ಪ್ರಾನ್ ಮತ್ತು ಏಡಿಗಳಲ್ಲೆಲ್ಲಾ ಮೈಕ್ರೊಪ್ಲಾಸ್ಟಿಕ್ ಪ್ರವೇಶಿಸಿದೆ. ಇಟಲಿಯ ಕಟಾನಿಯ ವಿಶ್ವವಿದ್ಯಾಲಯದ ಸಂಶೋಧಕರು ಸೇಬು, ನೆಲಗಡಲೆ, ಬ್ರಕೋಲಿ, ಕ್ಯಾರೆಟ್, ಉಪ್ಪಿನಲ್ಲಿ ಮೈಕ್ರೊ ಪ್ಲಾಸ್ಟಿಕ್ ಪದಾರ್ಥವನ್ನು ಪತ್ತೆ ಹಚ್ಚಿದ್ದಾರೆ. ನಾವು ಬಳಸುವ ಬಾಟಲಿ ನೀರಿನಲ್ಲಿ ಮೈಕ್ರೊ ಪ್ಲಾಸ್ಟಿಕ್ ತುಂಡುಗಳಿರುವುದು ಪತ್ತೆಯಾಗಿದೆ.

ನಮ್ಮ ಸಾಮಾನ್ಯ ಆಹಾರ ಕ್ರಮದಂತೆ ಪ್ರತಿ ವಾರ 5 ರಿಂದ 10 ಗ್ರಾಂ ಮೈಕ್ರೊ ಪ್ಲಾಸ್ಟಿಕ್ ಪದಾರ್ಥ ನಮ್ಮ ದೇಹ ಸೇರುತ್ತಿದೆ. ಕಳೆದ ವರ್ಷ ಎನ್ವಿರಾನ್‌ಮೆಂಟಲ್ ಇಂಟರ್‌ನ್ಯಾಷನಲ್‌ನವರು ನೀಡಿರುವ ವರದಿ ಎಲ್ಲರನ್ನೂ ಬೆಚ್ಚಿ ಬೀಳಿಸುವಂತಿದೆ. ತಮ್ಮ ಸಂಶೋಧನಾ ಸಂಸ್ಥೆಯ ಸದಸ್ಯರ ರಕ್ತ ಪರೀಕ್ಷೆ ನಡೆಸಿದಾಗ ಶೇ 77ಕ್ಕಿಂತ ಹೆಚ್ಚು ಜನರ ದೇಹದಲ್ಲಿ ಹೆಚ್ಚಿನ ಪ್ರಮಾಣದ ಮೈಕ್ರೊಪ್ಲಾಸ್ಟಿಕ್ ಇರುವುದು ಪತ್ತೆಯಾಗಿತ್ತು.



ಮೈಕ್ರೊ ಪ್ಲಾಸ್ಟಿಕ್ ಯಾವ ಮೂಲಗಳಿಂದ ಉತ್ಪತ್ತಿಗೊಳ್ಳುತ್ತದೆ ಎಂಬುದನ್ನು ಆಧರಿಸಿ ಅದರಲ್ಲಿನ ರಾಸಾಯನಿಕ ಪದಾರ್ಥಗಳು ವ್ಯತ್ಯಾಸಗೊಳ್ಳುತ್ತವೆ. ಕೆಲವು ಹಾನಿಕಾರಕ ರಾಸಾಯನಿಕಗಳು ಮಾನವನ ಮೆದುಳು, ಮೂತ್ರ ಜನಕಾಂಗ, ಯಕೃತ್ತಿನ ಕಾರ್ಯಕ್ಷಮತೆಯ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟು ಮಾಡಬಹುದು. ಮಹಿಳೆ- ಪುರುಷ ಇಬ್ಬರಲ್ಲೂ ಬಂಜೆತನ ತರಬಲ್ಲವು ಎಂದು ಅಧ್ಯಯನಗಳಿಂದ ಗೊತ್ತಾಗಿದೆ. ಸಕ್ಕರೆ ಕಾಯಿಲೆ (ಟೈಪ್ 2), ಹೃದಯ ಬೇನೆ, ಕ್ಯಾನ್ಸರ್, ಹಾರ್ಮೋನುಗಳ ಅಸಮತೋಲನ, ಡಿಎನ್‌ಎ ಗಾಸಿ, ಉರಿಯೂತ ಮತ್ತು ಭ್ರೂಣ ಬೆಳವಣಿಗೆಯಲ್ಲಿನ ನ್ಯೂನತೆಗಳಿಗೂ ಮೈಕ್ರೊಪ್ಲಾಸ್ಟಿಕ್ ಕಾರಣವಾಗುತ್ತಿದೆ. ಪ್ಲಾಸ್ಟಿಕ್‌ನಿಂದ ಬಚಾವಾಗುವ ಯಾವುದೇ ಸೂಚನೆಗಳು ಸದ್ಯಕ್ಕೆ ಗೋಚರಿಸುತ್ತಿಲ್ಲ. ಅದರ ಬದಲಿಗೆ ಪ್ಲಾಸ್ಟಿಕ್ ಅವಲಂಬನೆ ದಿನೇ ದಿನೇ ಹೆಚ್ಚುತ್ತಿದೆ. ಇದು, ನಿಜಕ್ಕೂ ಕಳವಳಪಡುವಂಥ ವಿದ್ಯಮಾನ.

ಇದರಿಂದ ತಪ್ಪಿಸಿಕೊಳ್ಳಲು ಮೈಕ್ರೊವೇವ್‌ನಲ್ಲಿ ಆಹಾರ ಸಂಸ್ಕರಿಸದಿರುವುದು, ಮೈಕ್ರೊ ಪ್ಲಾಸ್ಟಿಕ್ ಯುಕ್ತ ಸೌಂದರ್ಯ ಸಾಧನಗಳನ್ನು ಬಳಸದಿರುವುದು, ಪ್ಲಾಸ್ಟಿಕ್‌ಬಾಟಲಿಯಲ್ಲಿ ಶೇಖರಿಸಿದ ನೀರನ್ನು ಕುಡಿಯದಿರುವುದು, ಏಕಬಳಕೆಯ ಪ್ಲಾಸ್ಟಿಕ್ ಕೈಚೀಲ, ವಸ್ತುಗಳನ್ನು ಸಂಪೂರ್ಣ ನಿಷೇಧಿಸುವುದು, ಸಾಮಾನ್ಯ ಒಗೆತಕ್ಕಿಂತ 40 ಪಟ್ಟು ಹೆಚ್ಚು ಮೈಕ್ರೊ ಪ್ಲಾಸ್ಟಿಕ್ ಬಿಡುಗಡೆ ಮಾಡುವ ವಾಷಿಂಗ್ ಮಷೀನ್‌ಗಳನ್ನು ಬಳಸದೆ ಕೈಯಲ್ಲಿ ಬಟ್ಟೆ ಒಗೆಯುವುದು, ಮನೆಯ ಒಳಾಂಗಣ ಮತ್ತು ಪೀಠೋಪಕರಣಗಳ ದೂಳನ್ನು ಆಗಾಗ ತೆಗೆಯುವುದು, ಸಾವಯವ ಬಟ್ಟೆಗಳನ್ನು ಧರಿಸುವುದು ಮಾಡಬೇಕು.

ವಾಚಕರ ವಾಣಿ

ಎಲ್ಲದಕ್ಕೂ ಲಿಂಕ್: ಹುಚ್ಚು ಹಿಡಿವ ಪರಿಸ್ಥಿತಿ!

ರೈತರು ಬೆಳೆವಿಮೆಗಾಗಿ ಆರ್‌ಟಿಸಿ ಜೊತೆ ಆಧಾರ್ ಲಿಂಕ್ ಮಾಡಬೇಕಂತೆ! ಅಕ್ಷರಸ್ಥರಿಗೇ ಕಷ್ಟಕರವಾದ ಇಂಥ ಹೊಸಹೊಸ ತಂತ್ರಗಳು ಬಹುಜನರ ಮತ್ತು ನಿರಕ್ಷರಿಗಳ ಪಾಲಿಗೆ ಬಹುದೊಡ್ಡ ಸಂಕಷ್ಟವಾಗಿ ಪರಿಣಮಿಸಿವೆ.

ರಾಜ್ಯದಲ್ಲಿ ಈಗಾಗಲೇ ಅತಿವೃಷ್ಟಿಯಿಂದ ಹೈರಾಣಾಗಿರುವ ಜನಸಾಮಾನ್ಯರು ಈಗ 'ಎಲ್ಲದಕ್ಕೂ ಆ ಲಿಂಕ್, ಈ ಲಿಂಕ್ ಮಾಡಿಸಲೇಬೇಕು. ಇಲ್ಲವಾದಲ್ಲಿ ಸೌಲಭ್ಯವಿಲ್ಲ' ಎನ್ನುವ ಅನಿಷ್ಟ ಧೋರಣೆಯಿಂದ ಬೇಸತ್ತಿದ್ದಾರೆ. ಲಿಂಕ್ ಮಾಡಿಸಲು ಸರತಿ ಸಾಲಿನಲ್ಲಿ ನಿಂತರೂ ಕೆಲಸವಾಗದೇ ಜನ ಒಂದು ರೀತಿಯಲ್ಲಿ ಶೋಚನೀಯ ಸ್ಥಿತಿ ಎದುರಿಸಬೇಕಾಗಿದೆ. ಸರ್ಕಾರದಿಂದ ಕನಿಷ್ಠ ಮೂಲಸೌಕರ್ಯ ಪಡೆಯಲು ಜನಸಾಮಾನ್ಯರು ನಿತ್ಯದ ಕೆಲಸಗಳನ್ನು ಬಿಟ್ಟು ಹೀಗೆ ಸರದಿಯಲ್ಲಿ ನಿಲ್ಲಬೇಕಾಗಿರುವುದು ದುರಂತ.

ಕೇಂದ್ರವಾಗಲೀ, ರಾಜ್ಯ ಸರ್ಕಾರವಾಗಲೀ ಜನರಿಗೆ ಮೂಲಸೌಲಭ್ಯ ತಲುಪಿಸಲು ಸರಳ ಮಾರ್ಗ ಕೈಗೊಳ್ಳಲು ಆಗುವುದಿಲ್ಲವೇ?

ವಿಜಯಕಾಂತ ಪಾಟೀಲ, ಹಾನಗಲ್, ಹಾವೇರಿ

ಕಾಳಜಿ ಮೆಚ್ಚುವಂಥದ್ದು

ಇತ್ತೀಚೆಗೆ ಹೊಸದುರ್ಗದಿಂದ ಬೆಂಗಳೂರಿಗೆ ಪ್ರಯಾಣಿಸುತ್ತಿದ್ದ ಪ್ರಯಾಣಿಕರೊಬ್ಬರಿಗೆ ಎದೆನೋವು ಕಾಣಿಸಿಕೊಂಡಿದ್ದನ್ನು ಗಮನಿಸಿದ ಬಸ್‌ನ ನಿರ್ವಾಹಕಿ ತಕ್ಷಣವೇ ಚಾಲಕನ ಗಮನಕ್ಕೆ ತಂದಿದ್ದಾರೆ. ಅಷ್ಟೇ ಅಲ್ಲ, ಬಸ್ಸನ್ನು ಎಲ್ಲೂ ನಿಲ್ಲಿಸದೇ ಸೀದಾ ಆಸ್ಪತ್ರೆಗೇ ತೆಗೆದುಕೊಂಡು ಆ ವ್ಯಕ್ತಿಗೆ ಚಿಕಿತ್ಸೆ ಕೊಡಿಸಿದ್ದಾರೆ.

ಆ ಪ್ರಯಾಣಿಕ ಉಳಿಯಲಿಲ್ಲವಾದರೂ ಆ ಸಂದರ್ಭದಲ್ಲಿ ಬಸ್‌ನ ಸಿಬ್ಬಂದಿ ತೋರಿದ ಕಾಳಜಿ ಮೆಚ್ಚುವಂತಹುದು. ಇಂತಹ ಮಾನವೀಯ ಮನಸು ಎಲ್ಲಾ ನಿರ್ವಾಹಕ-ಚಾಲಕರಿಗೆ ಇರಬೇಕಾದದ್ದು ಅಗತ್ಯ.

ಸಾ.ಮ.ಶಿವಮಲ್ಲಯ್ಯ, ಸಾಸಲಾಪುರ, ಕನಕಪುರ

ವರ್ಷಧಾರೆ: ಮುನ್ನೆಚ್ಚರಿಕೆ ಅಗತ್ಯ

ಇತ್ತೀಚಿನ ವರ್ಷಗಳಲ್ಲಿ ರಾಜ್ಯದಲ್ಲಿ ಒಮ್ಮೆಗೇ ಸುರಿವ ಭಾರಿ ಮಳೆಯಿಂದಾಗಿ ಹಲವೆಡೆ ಅನಾಹುತಗಳು ಸಂಭವಿಸುತ್ತಿವೆ. ಅದರಲ್ಲೂ ಉತ್ತರ ಕರ್ನಾಟಕ, ಕರಾವಳಿ, ಕೊಡಗು ಪ್ರದೇಶ ಸಮಸ್ಯೆಗಳನ್ನು ಎದುರಿಸುತ್ತಿವೆ. ಹಲವೆಡೆ ಭೂಕುಸಿತ, ಸಂಪರ್ಕ ಸೇತುವೆಗಳ ಮುಳುಗಡೆ, ಮನೆಕುಸಿತದಿಂದ ಜೀವಹಾನಿ, ಕೃಷಿ ಭೂಮಿ ಮುಳುಗಡೆ... ಹೀಗೆ ಕೆಲವು ಸಮಸ್ಯೆಗಳನ್ನು ಜನರು ಎದುರಿಸುವಂತಾಗಿದೆ.

ಈ ಬಗೆಯ ತೊಂದರೆಗಳು ಮರುಕಳಿಸುತ್ತಲೇ ಇವೆ. ಮಳೆಗಾಲದ ಆರಂಭಕ್ಕೂ ಮೊದಲೇ ಸ್ಥಳೀಯ ಆಡಳಿತ, ಜನಪ್ರತಿನಿಧಿಗಳು ಗಮನ ಹರಿಸಿದರೆ ಎಷ್ಟೋ ಜನರ ಜೀವ ಉಳಿದೀತು. ಮುಂಜಾಗ್ರತಾ ಕ್ರಮವಾಗಿ ತಗ್ಗು ಪ್ರದೇಶದ ಜನರ ಸ್ಥಳಾಂತರ, ಕಾಳಜಿ ಕೇಂದ್ರ ತೆರೆಯಲು ಅಗತ್ಯ ಸಿದ್ಧತೆ, ಕುಸಿದು ಬೀಳುವ ಹಂತದಲ್ಲಿರುವ ಮನೆಗಳನ್ನು ಗುರುತಿಸುವುದು, ಭೂಕುಸಿತ, ರಸ್ತೆ ಸಂಪರ್ಕ ಕಡಿತವಾಗುವ ಪ್ರದೇಶಗಳನ್ನು ಮೊದಲೇ ಪರಿಶೀಲಿಸಿ, ಹೆಚ್ಚಿನ ಅನಾಹುತ ಆಗದಂತೆ ನೋಡಿಕೊಳ್ಳಬಹುದು. ಆ ಮೂಲಕ ಜನರನ್ನು ಮಳೆಗಾಲದ ಅವಘಡಗಳಿಂದ ರಕ್ಷಿಸಲು ಸಾಧ್ಯವಾಗಬಹುದು.

ಪ್ರಸಾದ್ ಜಿ.ಎಂ., ಮೈಸೂರು

ಮನೆಯಿಂದಲೇ ನೋಂದಣಿಗೆ ಅವಕಾಶ ಕಲ್ಪಿಸಿ

ಕಾಂಗ್ರೆಸ್ ನೇತೃತ್ವದ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ 'ಗೃಹಲಕ್ಷ್ಮಿ' ಯೋಜನೆಗೆ ಕಳೆದ ವಾರ ಚಾಲನೆ ನೀಡಿದ ದಿನದಿಂದ ಇಲ್ಲಿಯವರೆಗೂ, ಸೇವಾ ಕೇಂದ್ರಗಳ ಮುಂದೆ ಮಳೆ, ಗಾಳಿ, ಚಳಿ ಎನ್ನದೇ ಮಹಿಳೆಯರು, ಮಕ್ಕಳು, ವಯೋವೃದ್ಧರು ಬೆಳಿಗ್ಗೆ ನಾಲ್ಕು ಗಂಟೆಗೇ ಸುರಿವ ಮಳೆಯಲ್ಲೇ ಕೊಡೆ ಹಿಡಿದು ಸರತಿಗೆ ನಿಲ್ಲುತ್ತಿದ್ದಾರೆ.

ಇನ್ನೊಂದೆಡೆ, ನಿರ್ದಿಷ್ಟ ಸೇವಾ ಕೇಂದ್ರಗಳಲ್ಲಿಯೇ ನೋಂದಣಿ ಮಾಡಿಸಬೇಕಾಗಿರುವುದರಿಂದ ಪ್ರತಿನಿತ್ಯವೂ ಜನವೋ ಜನ. ಇನ್ನೊಂದೆಡೆ ಆಗಾಗ ಕೈ ಕೊಡುವ ಸರ್ವರ್ ಸಮಸ್ಯೆ. ಪ್ರತಿನಿತ್ಯ ಜನಸಂದಣಿ ಹೆಚ್ಚಿರುವುದರಿಂದ ಸೇವಾ ಕೇಂದ್ರಗಳಲ್ಲಿ ಕಾರ್ಯ ನಿರ್ವಹಿಸುವವರಿಗೂ ದಿನೇದಿನೇ ಒತ್ತಡ ಹೆಚ್ಚಾಗುತ್ತಿದೆ. ರಾಜ್ಯ ಸರ್ಕಾರವು 'ಗೃಹಲಕ್ಷ್ಮಿ' ಯೋಜನೆಯನ್ನೂ 'ಗೃಹಜ್ಯೋತಿ' ಯೋಜನೆ ಮಾದರಿಯಲ್ಲೇ ಮನೆಯಿಂದಲೇ ನೋಂದಣಿ ಮಾಡಲು ಅವಕಾಶ ಕಲ್ಪಿಸಬೇಕು. ಇಲ್ಲದಿದ್ದರೆ ಕನಿಷ್ಠ ಸೇವಾಕೇಂದ್ರಗಳಲ್ಲಾದರೂ ತಾತ್ಕಾಲಿಕವಾಗಿ ಹೆಚ್ಚುವರಿ ಕೌಂಟರ್‌ಗಳನ್ನು ತೆರೆದು ಜನಜಂಗುಳಿ ತಪ್ಪಿಸಬೇಕಿದೆ.

ಮುರುಗೇಶ ಡಿ., ದಾವಣಗೆರೆ

ಭಿಕ್ಷುಕರ ಹಾವಳಿಗೆ ಕೊನೆಯಿಲ್ಲವೇ?

ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಭಿಕ್ಷುಕರ ಹಾವಳಿ ಹೆಚ್ಚಿದೆ. ಟ್ರಾಫಿಕ್ ಸಿಗ್ನಲ್‌ಗಳು ಮತ್ತು ದೇವಸ್ಥಾನಗಳ ಬಳಿಯಂತೂ ಇವರ ಹಾವಳಿ ಮತ್ತಷ್ಟು ಅಧಿಕ. ಇವರಲ್ಲಿ ಹೆಚ್ಚಿನವರು ಗಟ್ಟಿಮುಟ್ಟಾಗಿಯೇ ಇರುತ್ತಾರೆ. ಕೆಲಸ ಮಾಡುವ ಇರಾದೆ ಇದ್ದರೆ ಬೆಂಗಳೂರಿನಲ್ಲಿ ಇವರಿಗೆ ಕೆಲಸ ಸಿಕ್ಕೇ ಸಿಗುತ್ತದೆ. ಮನೆಗೆಲಸಕ್ಕೆ ಕರೆದರೂ ಇವರು ಬರುವುದಿಲ್ಲ. ಭಿಕ್ಷಾಟನೆಯೇ ಲಾಭದಾಯಕ ಅಂತ ಪರಿಗಣಿಸಿ ಅದನ್ನೇ ಕಾಯಂ ಉದ್ಯೋಗ ಮಾಡಿಕೊಂಡಂತೆ ಕಾಣಿಸುತ್ತಾರೆ. ಮತ್ತೊಂದು ಸಂಗತಿಯೆಂದರೆ ಭಿಕ್ಷೆ ಬೇಡುವಾಗ ಪುಟ್ಟ ಮಕ್ಕಳನ್ನೂ ಬಳಸಿಕೊಳ್ಳಲಾಗುತ್ತಿದೆ. ಈ ಕಂದಮ್ಮಗಳು ಸದಾ ನಿದ್ದೆಯ ಮಂಪರಿನಲ್ಲಿಯೇ ಇರುತ್ತವೆ!

ರಾಜ್ಯ ಸರ್ಕಾರವು ಬಡಜನರಿಗೆ ಪಡಿತರ ಮೂಲಕ ಉಚಿತವಾಗಿ ಅಕ್ಕಿ ನೀಡುತ್ತಿದೆ. ಮನೆಯೊಡತಿಗೆ ತಿಂಗಳಿಗೆ ₹ 2 ಸಾವಿರ ನೀಡುವ ಯೋಜನೆಯನ್ನೂ ಜಾರಿಗೊಳಿಸಿದೆ. ಅಲ್ಲದೇ ಮಹಿಳೆಯರ ಸಂಚಾರಕ್ಕೆ ಉಚಿತ ಬಸ್ ಸೌಲಭ್ಯವನ್ನೂ ಕಲ್ಪಿಸಿದೆ. ಗ್ರಾಮೀಣ ಪ್ರದೇಶಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯೂ ಜಾರಿಯಲ್ಲಿದೆ. ಇಷ್ಟೆಲ್ಲಾ ಕೊಟ್ಟರೂ ಭಿಕ್ಷೆ ಬೇಡುವುದು ತರವಲ್ಲ. ಭಿಕ್ಷಾಟನೆಯು ಸಾಮಾಜಿಕ ಪಿಡುಗು ಎಂಬುದಾಗಿ ಪರಿಗಣಿಸಿ, ಸರ್ಕಾರವು ಇಂಥವರ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕಿದೆ.

ಆರ್.ಅಶ್ವತ್ಥನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೆ ತರಲು ಸರ್ಕಾರ ಪ್ರಯತ್ನಿಸಬೇಕು ಎಂದು ಹೇಳಿರುವ 35ನೇ ವಿಧಿಗೆ ಸಂವಿಧಾನ ರಚನಾ ಸಭೆಯಲ್ಲಿ ಯುನೈಟೆಡ್ ಪ್ರಾವಿನ್ಸ್‌ನ ಪ್ರತಿನಿಧಿ ಮೊಹಮ್ಮದ್ ಇಸ್ಮಾಯಿಲ್ ಖಾನ್ ತಿದ್ದುಪಡಿಯನ್ನು ಸೂಚಿಸಿದ್ದರು. 'ಯಾವುದೋ ಒಂದು ಕಾನೂನಿಗಾಗಿ ಈಗಾಗಲೇ ಇರುವ ತಮ್ಮ ವೈಯಕ್ತಿಕ ಕಾನೂನನ್ನು ಬಿಟ್ಟುಕೊಡುವಂತೆ ಯಾವುದೇ ಗುಂಪು, ವರ್ಗ ಅಥವಾ ಸಮುದಾಯದ ಜನರ ಮೇಲೆ ಹೇರಿಕೆ ಮಾಡಬಾರದು' ಎಂಬುದು ಆ ತಿದ್ದುಪಡಿಯಾಗಿತ್ತು. ಈ ಪ್ರಸ್ತಾವದ ಮೇಲೆ ಸುದೀರ್ಘ ಚರ್ಚೆ ನಡೆದಿತ್ತು. ಎಲ್ಲಾ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ಮುಂದಿಟ್ಟ ನಂತರ ಬಿ.ಆರ್.ಅಂಬೇಡ್ಕರ್ ಅವರು ಚರ್ಚೆಯನ್ನು ಕೊನೆಗೊಳಿಸಿದ್ದರು. 'ಏಕರೂಪ ನಾಗರಿಕ ಸಂಹಿತೆಯನ್ನು ತರಲು ಸರ್ಕಾರ ಪ್ರಯತ್ನಿಸಬೇಕು ಎಂದಷ್ಟೇ ಹೇಳಲಾಗಿದೆ. ಇಂಥದ್ದೊಂದು ಕಾನೂನು ಇದೆ ಎಂದ ಮಾತ್ರಕ್ಕೆ ಸರ್ಕಾರವು ಅದನ್ನು ಜಾರಿಗೊಳಿಸಲೇಬೇಕು ಎಂದೇನಿಲ್ಲ' ಎಂದು ಅವರು ಹೇಳಿದ್ದರು. ಆ ಮೂಲಕ 35ನೇ ವಿಧಿಯನ್ನು (ಈಗ 44ನೇ ವಿಧಿ) ಸಂವಿಧಾನದ ನಾಲ್ಕನೇ ಭಾಗದಲ್ಲಿ ಉಳಿಸಿಕೊಳ್ಳಲಾಯಿತು

ನಿರ್ದೇಶಕ ತತ್ವಗಳಲ್ಲಿ ಉಳಿದ ಯುಸಿಸಿ

• ಸುಕೃತ ಎಸ್.

'ಬುಡಕಟ್ಟುಗಳು ಏನಾಗಬೇಕು?'

ನಮ್ಮ ಹಿಂದುಳಿದ ವರ್ಗಗಳಿಗೆ ನಾವು ಯಾವ ರೀತಿಯಲ್ಲಿ ರಕ್ಷಣೆ ನೀಡಿದ್ದೇವೆ ನೋಡಿ. ಆಸ್ತಿ ವಿಷಯದಲ್ಲಿ ಬೇರೆ ಯಾವ ಸಮುದಾಯಕ್ಕೂ ನೀಡದಂಥ ರಕ್ಷಣೆಯನ್ನು ನಾವು ಹಿಂದುಳಿದ ವರ್ಗಗಳಿಗೆ ನೀಡಿದ್ದೇವೆ. ಜಾರ್ಖಂಡ್ ಮತ್ತು ಸಂತಾಲ್ ಪರಗಣಾಗಳಲ್ಲಿ ನಾವು ಆದಿವಾಸಿಗಳಿಗೆ ವಿಶೇಷ ರಕ್ಷಣೆ ನೀಡಿದ್ದೇವೆ.

ಅಸ್ಸಾಂ ಬುಡಕಟ್ಟು ಸಮುದಾಯವನ್ನೇ ನೋಡಿ, ಅವರ ಸ್ಥಿತಿ ಹೇಗಿದೆ? ಆಧುನಿಕತೆಗೆ ತೆರೆದುಕೊಂಡ ಬಾಂಬೆ ಜನರಿಗೆ ಅನ್ವಯಿಸುವ ಕಾನೂನನ್ನೇ ಈ ಬುಡಕಟ್ಟು ಜನರಿಗೆ ಅನ್ವಯಿಸಲು ಸಾಧ್ಯವಿದೆಯೇ? ಏಕರೂಪ ನಾಗರಿಕ ಸಂಹಿತೆ ಬರಬೇಕು ಎನ್ನುವುದು ಅಪೇಕ್ಷಣೀಯವೇ ಆಗಿದೆ. ಆದರೆ, ಅದಕ್ಕೆ ಈಗಿನದ್ದು ಸೂಕ್ತ ಕಾಲವಲ್ಲ. ಭಾರತವು ಸಂಪೂರ್ಣವಾಗಿ ಸಾಕ್ಷರತೆ ಹೊಂದಬೇಕು, ಜನರು ಆಧುನೀಕರಣಗೊಳ್ಳಬೇಕು, ಅವರ ಆರ್ಥಿಕ ಸ್ಥಿತಿಗಳು ಸುಧಾರಿಸಬೇಕು.. ದೇಶವು ಇಂಥ ಸ್ಥಿತಿಗೆ ತಲುಪಿದಾಗ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿ.

ಅಲ್ಪಸಂಖ್ಯಾತರ ಆತಂಕ ಸರಿಯಾದುದುದೇ ಆಗಿದೆ. ಜಾತ್ಯತೀತ ದೇಶವೆಂದರೆ, ಅದು ಧರ್ಮ ವಿರೋಧಿ ಅಲ್ಲ; ಬದಲಿಗೆ ಧರ್ಮ ನಿರಪೇಕ್ಷವಾದುದು. ಈ ಕಾನೂನಿನ ಕುರಿತು ಸದಸ್ಯರು, ಜನರು ಎತ್ತಿರುವ ಪ್ರಶ್ನೆಗಳ ಬಗ್ಗೆ ಸಂವಿಧಾನ ಕರಡು ರಚನಾ ಸಮಿತಿಯು ಗಮನಹರಿಸಬೇಕು. ಜೊತೆಗೆ, ಈ ಸಮಸ್ಯೆಗೆ ಅಂಬೇಡ್ಕರ್ ಅವರಂಥ ಮೇಧಾವಿಯು ಪರಿಹಾರ ಕಂಡುಹಿಡಿಯುತ್ತಾರೆ ಎಂಬ ನಂಬಿಕೆ ಇದೆ.

ಹುಸೇನ್ ಇಮಾಮ್, ಸಂವಿಧಾನ ರಚನಾ ಸಭೆಯಲ್ಲಿ ಬಿಹಾರ ಕ್ಷೇತ್ರದ ಪ್ರತಿನಿಧಿ

'ಷರಿಯಾ ಕಾನೂನನ್ನೇ ಬದಲಾಯಿಸಿದ್ದ ಖಿಲ್ಜಿ'

ವೈಯಕ್ತಿಕ ಕಾನೂನುಗಳು ಧರ್ಮದ ಭಾಗ ಎನ್ನುವುದನ್ನು ಬ್ರಿಟಿಷ್ ಆಳ್ವಿಕೆ ಹಾಗೂ ಬ್ರಿಟಿಷ್ ನ್ಯಾಯಾಲಯಗಳು ಜನರ ಮನಸ್ಸಿನಲ್ಲಿ ಆಳವಾಗಿ ಬೇರೂರಿಸಿವೆ. ಇದರಿಂದ ನಾವು ಹೊರ ಬರಬೇಕಿದೆ.

ಷರಿಯಾ ಕಾನೂನಿನಲ್ಲಿ ಅಲ್ಲಾವುದ್ದೀನ್ ಖಿಲ್ಜಿಯು ಹಲವು ಬದಲಾವಣೆಗಳನ್ನು ಮಾಡಿದ. ದೆಹಲಿಯ ಖಾಜಿಗಳು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು. 'ನಾನೊಬ್ಬ ಅಜ್ಞಾನಿ ಮನುಷ್ಯ. ನಾನು ದೇಶವನ್ನು ಎಷ್ಟು ಸಾಧ್ಯವೋ ಅಷ್ಟು ಮುತುವರ್ಜಿಯಿಂದ ಆಳುತ್ತಿದ್ದೇನೆ. ನನ್ನ ಅಜ್ಞಾನ ಮತ್ತು ನನ್ನ ಆಡಳಿತಕ್ಕೆ ಇರುವ ಒಳ್ಳೆಯ ಉದ್ದೇಶವನ್ನು ಗಮನಿಸಿ ದೇವರು ನನ್ನನ್ನು ಕ್ಷಮಿಸುತ್ತಾನೆ' ಎಂದು ಖಿಲ್ಜಿಯು ದೆಹಲಿಯ ಖಾಜಿಗಳಿಗೆ ಉತ್ತರಿಸಿದ್ದನು. ವೈಯಕ್ತಿಕ ಕಾನೂನು ಸೇರಿದಂತೆ ಇತರೆ ಕಾನೂನುಗಳು ಧರ್ಮದ ಭಾಗ ಎಂಬುದನ್ನು ಖಿಲ್ಜಿಯೇ ನಿರಾಕರಿಸಿರುವಾಗ, ಆಧುನಿಕ ಸರ್ಕಾರವಾದ ನಾವು ಯಾಕಾಗಿ ವೈಯಕ್ತಿಕ ಕಾನೂನುಗಳು ಧರ್ಮದ ಭಾಗ ಎಂದು ಪರಿಗಣಿಸಬೇಕು?

ಕನ್ಹಯ್ಯಾಲಾಲ್ ಮಾಣಿಕ್‌ಲಾಲ್ ಮುನ್ಷಿ, ಸಂವಿಧಾನ ರಚನಾ ಸಭೆಯಲ್ಲಿ ಬಾಂಬೆ ಕ್ಷೇತ್ರದ ಪ್ರತಿನಿಧಿ

'ಮುಸ್ಲಿಮರಿಗೇಕೆ ನಂಬಿಕೆ ಇಲ್ಲ?'

ವಿವಾಹ, ಉತ್ತರಾಧಿಕಾರ ಸೇರಿದಂತೆ ಕೆಲವು ಕಾನೂನುಗಳ ಕುರಿತು ದೇಶದ ಹಲವು ಜನರಲ್ಲಿ ಭಿನ್ನಾಭಿಪ್ರಾಯಗಳಿವೆ. ಈ ಎಲ್ಲವನ್ನು ಏಕರೂಪ ಮಾಡಲು ಈ ಕಾನೂನನ್ನು ರೂಪಿಸಲಾಗಿದೆ.

ಈಗ ಹಿಂದೂ ಕಾನೂನನ್ನೇ ನೋಡಿ. ಇದನ್ನು ರೂಪಿಸಿದವರು, ಬೇರೆ ಧರ್ಮದ ಕಾನೂನನ್ನು ಇಲ್ಲಿ ಸೇರಿಸಿಕೊಂಡಿದ್ದಾರೆ. ಇದೇ ರೀತಿ ಉತ್ತರಾಧಿಕಾರದ ಕಾನೂನನ್ನು ರೋಮನ್ ಹಾಗೂ ಇಂಗ್ಲಿಷ್ ದೇಶಗಳಿಂದ ಪಡೆದುಕೊಳ್ಳಲಾಗಿದೆ. ಅಭಿವೃದ್ಧಿ ಹೊಂದಬೇಕು ಎಂದಾದರೆ ಎಲ್ಲರಿಂದಲೂ ಪಡೆದುಕೊಳ್ಳಬೇಕಾಗುತ್ತದೆ.

ಈ ದೇಶದ ಬಹುಸಂಖ್ಯಾತರು ಮಾತ್ರವೇ ಬೇರೆ ಧರ್ಮದ ವಿಷಯಗಳನ್ನು ತಮ್ಮೊಳಗೆ ಸ್ವೀಕರಿಸುವ ಗುಣವನ್ನು ಹೊಂದಿದ್ದಾರೆ. ಅವರು ಅಲ್ಪಸಂಖ್ಯಾತರಿಂದಲೂ ಪಾಠ ಕಲಿಯುತ್ತಾರೆ.

ಏಕರೂಪವಾಗಿಸುವ ಬಗ್ಗೆ ಬ್ರಿಟಿಷರ ನ್ಯಾಯಶಾಸ್ತ್ರ ಬುನಾದಿ ಹಾಕಿಕೊಟ್ಟಿದೆ. ನಾವು ಈ ದಿಸೆಯಲ್ಲಿ ಮುಂದಡಿ ಇಡುತ್ತಿದ್ದೇವೆಯಷ್ಟೇ. ವಿದೇಶಿ ಸರ್ಕಾರಕ್ಕಿಂತ ದೇಶೀಯವಾದ ಸರ್ಕಾರದ ಕುರಿತು ನಿಮಗೆ ಯಾಕಿಷ್ಟು ಅವಿಶ್ವಾಸ? ಎಲ್ಲಾ ಜನರ ನಂಬಿಕೆಯನ್ನು ಒಟ್ಟಿಗೆ ತೆಗೆದುಕೊಂಡು ಹೋಗುತ್ತಿರುವ ಪ್ರಜಾಪ್ರಭುತ್ವವಾದಿ ಸರ್ಕಾರದ ಕುರಿತು ಮುಸ್ಲಿಮರಿಗೆ ಯಾಕೆ ನಂಬಿಕೆ ಇಲ್ಲ?

ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್, ಸಂವಿಧಾನ ರಚನಾ ಸಭೆಯಲ್ಲಿ ಮದ್ರಾಸ್ ಕ್ಷೇತ್ರದ ಪ್ರತಿನಿಧಿ

'ಸಂಹಿತೆಗೆ ಒಪ್ಪಿಗೆ ಸ್ವಯಂಪ್ರೇರಿತ ಆಗಿರಬೇಕು'



ಏಕರೂಪ ನಾಗರಿಕ ಸಂಹಿತೆಯ ಕುರಿತು ಹೇಳಲಾಗಿರುವ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಈ ದೇಶಕ್ಕೆ ಏಕರೂಪ ನಾಗರಿಕ ಸಂಹಿತೆ ಬೇಕೆ ಬೇಡವೇ ಎನ್ನುವ ಪ್ರಶ್ನೆಯು ಯೋಗ್ಯವೇ? ಇಲ್ಲವೇ? ಎನ್ನುವುದರ ಕುರಿತು ನಾನು ಈ ವೇಳೆ ಮಾತನಾಡುತ್ತಿಲ್ಲ. ಈ ಬಗ್ಗೆ ಕೆ.ಎಂ. ಮುನ್ಷಿ ಹಾಗೂ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮಾತನಾಡಿದ್ದಾರೆ. ಕೆಲವು ಮೂಲಭೂತ ಹಕ್ಕುಗಳಿಗೆ ತಿದ್ದುಪಡಿಗಳು ಮಂಡನೆಯಾದಾಗ ಈ ವಿಷಯದಲ್ಲಿ ಪೂರ್ಣ ಹೇಳಿಕೆ ನೀಡುವುದು ನನಗೆ ಸಾಧ್ಯವಾಗಬಹುದು. ಹಾಗಾಗಿ, ಈಗ ಈ ಕುರಿತು ಏನನ್ನೂ ಹೇಳುವುದಿಲ್ಲ.

ಭಾರತದಂಥ ದೊಡ್ಡ ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿ ಮಾಡಲು ಸಾಧ್ಯವಿದೆಯೇ ಎಂದು ಹುಸೇನ್ ಅವರು ಪ್ರಶ್ನಿಸಿದ್ದಾರೆ. ಈ ಪ್ರಶ್ನೆ ನನಗೆ ಆಶ್ಚರ್ಯ ತಂದಿದೆ. ಅಪರಾಧ ಕಾನೂನುಗಳಿವೆ, ಆಸ್ತಿ ವರ್ಗಾವಣೆ ಕಾನೂನಿದೆ, ನೆಗೋಶಿಯಬಲ್ ಇನ್‌ಸ್ಟ್ರುಮೆಂಟ್ಸ್ ಕಾಯ್ದೆ ಇದೆ. ಹೀಗೆ ಹೇಳುತ್ತಾ ಹೋದರೆ ಇನ್ನೂ ಹಲವು ಕಾಯ್ದೆಗಳನ್ನು ಉಲ್ಲೇಖಿಸಬಹುದು. ಈ ಎಲ್ಲಾ ಕಾಯ್ದೆಗಳು ದೇಶದಾದ್ಯಂತ ಎಲ್ಲರಿಗೂ ಏಕರೂಪವಾಗಿವೆ. ಮದುವೆ ಮತ್ತು ಉತ್ತರಾಧಿಕಾರದ ಕಾನೂನುಗಳಿಗೆ ಮಾತ್ರ ನಮಗೆ ಏಕರೂಪ ಕಾನೂನು ತರಲು ಸಾಧ್ಯವಾಗಿಲ್ಲ. ಇದೇ ಕಾರಣಕ್ಕಾಗಿ ಈಗ 35ನೇ ವಿಧಿಯ ಮೂಲಕ ಮದುವೆ ಹಾಗೂ ಉತ್ತರಾಧಿಕಾರದ ಕಾನೂನನ್ನು ಏಕರೂಪಗೊಳಿಸಲು ಹೊರಟಿರುವುದು; ಬದಲಾವಣೆ ತರಲು ಇಚ್ಛಿಸಿರುವುದು. ಆದ್ದರಿಂದ, ದೇಶದಾದ್ಯಂತ ಏಕರೂಪ ನಾಗರಿಕ ಸಂಹಿತೆ ತರಲು ಸಾಧ್ಯವೇ ಅನ್ನುವ ಪ್ರಶ್ನೆಗೆ ನನ್ನ ಉತ್ತರ, ನಾವು ಈಗಾಗಲೇ ಏಕರೂಪ ಕಾನೂನನ್ನು ಜಾರಿಗೊಳಿಸಿದ್ದೇವೆ.

> **ಏಕರೂಪ ನಾಗರಿಕ ಸಂಹಿತೆ ತರುವ ಉದ್ದೇಶದಿಂದ ಹಿಂದೂ ಕಾನೂನುಗಳಿಂದ ಹಲವು ಅಂಶಗಳನ್ನು ಇಲ್ಲಿ ಪಡೆದುಕೊಳ್ಳಲಾಗಿದೆ. ಹಿಂದೂಗಳ ಕಾನೂನು ಎನ್ನುವ ಕಾರಣಕ್ಕಾಗಿ ಅವುಗಳನ್ನು ಪಡೆದುಕೊಂಡಿಲ್ಲ. ಬದಲಿಗೆ ಅವು ಎಲ್ಲ ಕಡೆಯೂ ಸೂಕ್ತವಾಗುತ್ತವೆ ಎನ್ನುವ ದೃಷ್ಟಿಯಿಂದ ಪಡೆದುಕೊಳ್ಳಲಾಗಿದೆ**

ದೇಶದಾದ್ಯಂತ ಮುಸ್ಲಿಂ ವೈಯಕ್ತಿಕ ಕಾನೂನು ಏಕರೂಪವಾಗಿದೆ. ಇದನ್ನು ಬದಲಾಯಿಸಲು ಸಾಧ್ಯವಿಲ್ಲ ಎಂದು ಕೆಲವು ಸದಸ್ಯರು ಹೇಳುತ್ತಿದ್ದಾರೆ. ಈ ಹೇಳಿಕೆಯನ್ನು ನಾನು ಒಪ್ಪುವುದಿಲ್ಲ. 1935ರವರೆಗೆ ವಾಯವ್ಯ ಪ್ರಾಂತ್ಯದ ಜನರು ಷರಿಯಾ ಕಾನೂನನ್ನು ಅನುಸರಿಸುತ್ತಿರಲಿಲ್ಲ. ಉತ್ತರಾಧಿಕಾರ ಹಾಗೂ ಇತರೆ ವಿಷಯಗಳಲ್ಲಿ ಅವರು ಹಿಂದೂ ಕಾನೂನುಗಳನ್ನೇ ಅನುಸರಿಸುತ್ತಿದ್ದರು. ನಂತರದ ವರ್ಷಗಳಲ್ಲಿ ಹಿಂದೂ ಕಾನೂನುಗಳನ್ನು ರದ್ದುಗೊಳಿಸಿ, ಷರಿಯಾ ಕಾನೂನನ್ನು ಇಲ್ಲಿ ಜಾರಿಗೆ ತರಲಾಯಿತು.

ದೇಶದಾದ್ಯಂತ ಇರುವ ಮುಸ್ಲಿಮರನ್ನು ಷರಿಯಾ ಕಾನೂನಿನ ಅಡಿಯಲ್ಲಿ ತರಲು ಆಡಳಿತವು 1937ರಲ್ಲಿ ಆದೇಶ ನೀಡಿತು. ಅಲ್ಲಿಯವರೆಗೆ ಭಾರತದ ಹಲವು ಪ್ರದೇಶಗಳಲ್ಲಿ ಅಂದರೆ, ಮಧ್ಯ ಪ್ರಾಂತ್ಯ, ಬಾಂಬೆ ಪ್ರಾಂತ್ಯ ಹಾಗೂ ಯುನೈಟೆಡ್ ಪ್ರಾಂತ್ಯದಲ್ಲಿ ಮುಸ್ಲಿಮರು ಉತ್ತರಾಧಿಕಾರದ ವಿಷಯದಲ್ಲಿ ಹಿಂದೂ ಕಾನೂನುಗಳನ್ನೇ ಅನುಸರಿಸುತ್ತಿದ್ದರು.

ಉತ್ತರ ಮಲಬಾರ್‌ನಲ್ಲಿ ಮರುಮಗತ್ತಾಯಂ ಕಾನೂನು ಜಾರಿಯಲ್ಲಿದೆ. ಈ ಕಾನೂನನ್ನು ಅಲ್ಲಿನ ಮುಸ್ಲಿಮರೂ ಸೇರಿ ಎಲ್ಲ ಧರ್ಮದವರೂ ಅನುಸರಿಸುತ್ತಿದ್ದಾರೆ ಎಂದು ಕರುಣಾಕರ ಮೆನನ್ ಅವರು ನನ್ನ ಬಳಿ ಹೇಳಿದ್ದರು. ಮರುಮಗತ್ತಾಯಂ ಕಾನೂನು ಮಾತೃಪ್ರಧಾನ ಕಾನೂನಾಗಿದೆ. ಹೀಗಿರುವಾಗ ಮುಸ್ಲಿಮರ ಕಾನೂನುಗಳನ್ನು ಬದಲಾಯಿಸಲು ಸಾಧ್ಯವಿಲ್ಲ ಎಂಬ ಹೇಳಿಕೆಯು ಉಪಯೋಗಕ್ಕೆ ಬಾರದ್ದು.



ಏಕರೂಪ ನಾಗರಿಕ ಸಂಹಿತೆ ತರುವ ಉದ್ದೇಶದಿಂದ ಹಿಂದೂ ಕಾನೂನುಗಳಿಂದ ಹಲವು ಅಂಶಗಳನ್ನು ಇಲ್ಲಿ ಪಡೆದುಕೊಳ್ಳಲಾಗಿದೆ. ಹಿಂದೂಗಳ ಕಾನೂನು ಎನ್ನುವ ಕಾರಣಕ್ಕಾಗಿ ಅವುಗಳನ್ನು ಪಡೆದುಕೊಂಡಿಲ್ಲ. ಬದಲಿಗೆ ಅವು ಎಲ್ಲ ಕಡೆಯೂ ಸೂಕ್ತವಾಗುತ್ತವೆ ಎನ್ನುವ ದೃಷ್ಟಿಯಿಂದ ಪಡೆದುಕೊಳ್ಳಲಾಗಿದೆ. ಆದ್ದರಿಂದ ಮುಸ್ಲಿಂ ಸಮುದಾಯದ ಭಾವನೆಗಳಿಗೆ ಸಂವಿಧಾನ ರಚನಾ ಸಮಿತಿಯವರು ಧಕ್ಕೆ ತಂದಿದ್ದಾರೆ ಎಂದುಕೊಳ್ಳಬೇಕಾಗಿಲ್ಲ.

ನಾನು ಮುಸ್ಲಿಂ ಸಮುದಾಯದವರಿಗೆ ಭರವಸೆಯನ್ನು ನೀಡಲು ಬಯಸುತ್ತೇನೆ. ಅವರ ಭಾವನೆಗಳನ್ನು ಅರ್ಥ ಮಾಡಿಕೊಳ್ಳಬಲ್ಲೆ. ಅವರು 35ನೇ ವಿಧಿಯನ್ನು ಅತಿಯಾಗಿ ಓದಿಕೊಂಡಿದ್ದಾರೆ. ಏಕರೂಪ ನಾಗರಿಕ ಸಂಹಿತೆಯನ್ನು ತರಲು ಸರ್ಕಾರ ಪ್ರಯತ್ನಿಸಬೇಕು ಎಂದಷ್ಟೇ ಹೇಳಲಾಗಿದೆ. ಇಂಥದೊಂದು ಕಾನೂನು ಇದೆ ಎಂದ ಮಾತ್ರಕ್ಕೆ ಸರ್ಕಾರವು ಅದನ್ನು ಜಾರಿಗೊಳಿಸಬೇಕು ಎಂದೇನಿಲ್ಲ.

ತಾನು ಈ ಏಕರೂಪ ನಾಗರಿಕ ಸಂಹಿತೆಗೆ ಒಳಪಡುತ್ತೇನೆ ಎಂದು ವ್ಯಕ್ತಿಯು ಘೋಷಿಸಿಕೊಂಡರೆ ಅಂಥವರನ್ನು ಈ ಕಾನೂನಿಗೆ ಒಳಪಡಿಸುವ ಕಾರ್ಯವನ್ನು ಭವಿಷ್ಯದ ಸರ್ಕಾರಗಳು ನಡೆಸಬಹುದು. ಇದು ಏಕರೂಪ ನಾಗರಿಕ ಸಂಹಿತೆಯ ಜಾರಿಯ ಮೊದಲ ಹೆಜ್ಜೆಯಾಗಲಿದೆ. ಜೊತೆಗೆ ಅದು ಸಂಪೂರ್ಣ ಸ್ವಯಂಪ್ರೇರಿತ ಆಗಿರಬೇಕು. ಇದನ್ನು ಮಾದರಿ ನಡೆ ಎನ್ನಲಾಗದು, ಆದರೆ ಸಂಸತ್ತು ಈ ವ್ಯವಸ್ಥೆಯನ್ನು ಅನುಸರಿಸಬಹುದು.

ವಾಯವ್ಯ ಪ್ರಾಂತ್ಯದಿಂದ ಆಚೆಗೆ ಬೇರೆ ಪ್ರಾಂತ್ಯಗಳಲ್ಲಿ ಷರಿಯಾ ಕಾನೂನನ್ನು ಜಾರಿ ಮಾಡಲು ಹೊರಟಾಗ ಇದೇ ರೀತಿಯ ವ್ಯವಸ್ಥೆಗೆ ಅನುಕೂಲ ಮಾಡಿಕೊಡಲಾಗಿತ್ತು. ಯಾರೆಲ್ಲಾ ಷರಿಯಾ ಕಾನೂನನ್ನು ಒಪ್ಪಲು ಬಯಸುತ್ತಾರೋ ಅವರೆಲ್ಲರೂ ಅಧಿಕಾರಿಗಳ ಬಳಿ ಹೋಗಿ ತಾವು ಈ ಕಾನೂನನ್ನು ಪಾಲಿಸುವುದಾಗಿ ಘೋಷಿಸಿಕೊಳ್ಳಬೇಕಿತ್ತು. ಹೀಗೆ ಘೋಷಿಸಿಕೊಂಡ ಬಳಿಕ ಆತ ಹಾಗೂ ಆತನ ಉತ್ತರಾಧಿಕಾರಿಯು ಇದನ್ನೇ ಪಾಲಿಸಬೇಕಿತ್ತು.

ಇದೇ ರೀತಿಯ ವ್ಯವಸ್ಥೆಯನ್ನು ರೂಪಿಸಲಿಕ್ಕೆ ಸರ್ಕಾರಕ್ಕೆ ಸಾಧ್ಯವಿದೆ. ಆದ್ದರಿಂದ ಈ ವಿಧಿಯ ಕುರಿತು ನನ್ನ ಸ್ನೇಹಿತರು ವ್ಯಕ್ತಪಡಿಸಿದ ಆತಂಕವು ಅರ್ಥಹೀನವಾದುದು. ಹಾಗಾಗಿ, ಈ ತಿದ್ದುಪಡಿಗಳಲ್ಲಿ ಯಾವುದೇ ವಾದವಿಲ್ಲ. ಆದ್ದರಿಂದ ನಾನು ಇದನ್ನು ವಿರೋಧಿಸುತ್ತೇನೆ.

ಬಿ. ಆರ್. ಅಂಬೇಡ್ಕರ್
ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷ

ಆಧಾರ: ಲೋಕಸಭೆಯ ಡಿಜಿಟಲ್ ಗ್ರಂಥಾಲಯದ 'ಸಂವಿಧಾನ ರಚನಾ ಸಭೆಯ ಸಂಸದೀಯ ಚರ್ಚೆಗಳು'

ಸಿನಿ ಬಿಟ್ಸ್



ರಾಷ್ಟ್ರಮಟ್ಟದಲ್ಲಿ 'ಹಾಸ್ಯ ಚಕ್ರವರ್ತಿ' ನೆನಪು

ಕನ್ನಡ ಚಿತ್ರರಂಗದ ಹಾಸ್ಯ ಚಕ್ರವರ್ತಿ ದಿವಂಗತ ಟಿ.ಆರ್.ನರಸಿಂಹರಾಜು ಅವರಿಗೆ ನೂರು ತುಂಬಿದೆ. ಈ ಹಿನ್ನೆಲೆಯಲ್ಲಿ ಹಲವು ಸಂಘಟನೆಗಳ ಜೊತೆಗೂಡಿ ಅವರ ಜನ್ಮಶತಮಾನೋತ್ಸವವನ್ನು ಆಚರಿಸಲು ಅವರ ಕುಟುಂಬ ನಿರ್ಧರಿಸಿದೆ. ಈ ಕಾರ್ಯಕ್ರಮದ ಮೊದಲ ಹಂತದಲ್ಲಿ 'ಹಾಸ್ಯಚಕ್ರವರ್ತಿ ಪ್ರಶಸ್ತಿ' ಅನಾವರಣ ಕಾರ್ಯಕ್ರಮ ನಡೆಯಲಿದೆ. ಆಗಸ್ಟ್ 12ರಂದು ಅರಮನೆ ಮೈದಾನದಲ್ಲಿ ಜನ್ಮ ಶತಮಾನೋತ್ಸವದ ಮೊದಲ ಕಾರ್ಯಕ್ರಮ ನಡೆಯಲಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಕಾರ್ಯಕ್ರಮದಲ್ಲಿ ಭಾಗಿಯಾಗುವ ಸಾಧ್ಯತೆ ಇದೆ ಎಂದು ನರಸಿಂಹರಾಜು ಅವರ ಮೊಮ್ಮಗ ಅವಿನಾಶ್ ಹೇಳಿದರು. 'ಜನ್ಮ ಶತಮಾನೋತ್ಸವದ ಅಂಗವಾಗಿ ರಾಷ್ಟ್ರ ಮಟ್ಟದ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದ್ದು, ಹಾಸ್ಯ ಕಲಾವಿದರೊಬ್ಬರಿಗೆ ನರಸಿಂಹರಾಜು ಅವರ ಹೆಸರಿನಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಲಿದ್ದೇವೆ. ಜೊತೆಗೆ ರಾಷ್ಟ್ರ ಮಟ್ಟದ ಹಾಸ್ಯ ಚಿತ್ರಗಳ ಪ್ರಶಸ್ತಿ, ಎಲ್ಲ ಭಾಷೆಯವರೂ ಒಳಗೊಂಡಂತೆ ಆಯಾ ಭಾಷೆಯ ಉತ್ತಮ ಹಾಸ್ಯ ಚಿತ್ರ, ಉತ್ತಮ ಹಾಸ್ಯ ಕಲಾವಿದ, ಉತ್ತಮ ಹಾಸ್ಯ ಬರಹಗಾರ, ಉತ್ತಮ ಹಾಸ್ಯ ಚಿತ್ರನಿರ್ದೇಶಕ ಪ್ರಶಸ್ತಿಯನ್ನು ನೀಡಲಿದ್ದೇವೆ. ಈ ಕಾರ್ಯಕ್ರಮ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ನಡೆಯಲಿದೆ' ಎಂದರು.

'ಆ.18ರಿಂದ ರಾಜ್ಯದಾದ್ಯಂತ ಪ್ರವಾಸದ ಮೂಲಕ ಈಗಿನ ಯುವಪೀಳಿಗೆಗೆ ನರಸಿಂಹರಾಜು ಅವರ ಸಿನಿಜೀವನದ ಪರಿಚಯ ಮಾಡಿಕೊಡಲಿದ್ದೇವೆ. ಎರಡು ಎಲ್‌ಇಡಿ ಟ್ರಕ್‌ಗಳು ಅವರ ಚಿತ್ರದ ತುಣುಕುಗಳನ್ನು, ಅವರ ಕುರಿತು ಮಾಡಿರುವ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಿವೆ. ಸಂಚಾರಿ ತಂಡದಿಂದ ನರಸಿಂಹರಾಜು ಅವರ ಜೀವನಾಧಾರಿತ ನಾಟಕ ಹಾಗೂ ಅವರ ನಟನೆಯ ಸಿನಿಮಾಗಳ ಪ್ರದರ್ಶನ ನಡೆಯಲಿದೆ. ನರಸಿಂಹರಾಜು ಅವರ ಹೆಸರಿನಲ್ಲಿ ರಾಜ್ಯಮಟ್ಟದ ಅಂತರಕಾಲೇಜು ನಾಟಕ ಸ್ಪರ್ಧೆ ನಡೆಯಲಿದ್ದು, ನರಸಿಂಹರಾಜು ಅವರು ನಟಿಸಿದ ನಾಟಕಗಳನ್ನೇ ತಂಡಗಳು ಮರುಸೃಷ್ಟಿ ಮಾಡಬೇಕು. ನರಸಿಂಹರಾಜು ಅವರ ಹೆಸರಿನಲ್ಲಿ ರಾಜದ ಆಯ್ದ ಜಿಲ್ಲೆಗಳಲ್ಲಿ ವೃತ್ತಿ ಮತ್ತು ಹವ್ಯಾಸಿ ನಾಟಕೋತ್ಸವದ ಜೊತೆಗೆ ರಾಷ್ಟ್ರ ಮಟ್ಟದ ಹಾಸ್ಯ ಕಿರುಚಿತ್ರೋತ್ಸವ ಆಯೋಜಿಸಲಿದ್ದೇವೆ' ಎಂದು ಅವಿನಾಶ್ ಮಾಹಿತಿ ನೀಡಿದರು.


ಸೆ.15ಕ್ಕೆ ಮತ್ತೆ ಬರ್ತಾನೆ 'ಬುದ್ಧಿವಂತ'!

ಸದ್ಯ 'UI' ಚಿತ್ರದ ಶೂಟಿಂಗ್‌ನಲ್ಲಿ ತೊಡಗಿಸಿಕೊಂಡಿರುವ ಸ್ಯಾಂಡಲ್‌ವುಡ್‌ನ ರಿಯಲ್ ಸ್ಟಾರ್ ಉಪೇಂದ್ರ 'ಬುದ್ಧಿವಂತ'ನಾಗಿ ಮತ್ತೊಮ್ಮೆ ತೆರೆಮೇಲೆ ಬರಲು ಸಜ್ಜಾಗಿದ್ದಾರೆ. ಅವರ ನಟನೆಯ 'ಬುದ್ಧಿವಂತ-2' ಯಾವಾಗ ರಿಲೀಸ್ ಎನ್ನುವ ಕುತೂಹಲಕ್ಕೆ ತೆರೆಬಿದ್ದಿದೆ. ಚಿತ್ರವು ಸೆ.15ರಂದು ತೆರೆಕಾಣಲಿದೆ.

'ಬುದ್ಧಿವಂತ' ಸಿನಿಮಾ ಮೂಲಕ ಹಲವು ರೂಪದಲ್ಲಿ ಪ್ರೇಕ್ಷಕರನ್ನು ರಂಜಿಸಿದ್ದ ಉಪೇಂದ್ರ, ಬುದ್ಧಿವಂತನಾಗಿ ಮತ್ತೆ ಬರುತ್ತಿರುವುದಕ್ಕೆ ಪ್ರೇಕ್ಷಕರು ಕಾಯುತ್ತಿದ್ದಾರೆ.

ಸೆ.18 ಉಪೇಂದ್ರ ಅವರ ಜನ್ಮದಿನ. ಈ ಸಂದರ್ಭದಲ್ಲೇ ಸಿನಿಮಾ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ನಾಯಕಿಯರಾಗಿ ಸೋನಲ್ ಮೊಂತೆರೋ ಹಾಗೂ ಮೇಘನರಾಜ್ ನಟಿಸಿದ್ದಾರೆ. ಶ್ರೀನಗರ ಕಿಟ್ಟಿ ಅವರು ವಿಶೇಷ ಪಾತ್ರದಲ್ಲಿದ್ದಾರೆ.

ನಿರ್ಮಾಪಕ ಟಿ.ಆರ್ ಚಂದ್ರಶೇಖರ್, ತಮ್ಮ ಕ್ರಿಸ್ಟಲ್ ಪಾರ್ಕ್ ಸಿನಿಮಾಸ್ ಲಾಂಛನದಲ್ಲಿ ನಿರ್ಮಾಣ ಮಾಡಿರುವ ಚಿತ್ರ 'ಬುದ್ಧಿವಂತ 2'. ಜೈದೇವ್ ನಿರ್ದೇಶನದ ಈ ಚಿತ್ರಕ್ಕೆ ಗುರುಕಿರಣ್ ಸಂಗೀತ ನೀಡಿದ್ದಾರೆ. ಎಸ್. ನವೀನ್ ಕುಮಾರ್ ಛಾಯಾಚಿತ್ರಗ್ರಹಣ, ಕೆ.ಎಂ. ಪ್ರಕಾಶ್ ಸಂಕಲನ ಹಾಗೂ ರವಿವರ್ಮ, ವಿಕ್ರಮ್ ಅವರ ಸಾಹಸ ನಿರ್ದೇಶನ ಈ ಚಿತ್ರಕ್ಕಿದೆ.


ಉಪೇಂದ್ರ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

ಯುವಕ ಜೆ.ಎಲ್. ನೆಹರೂ ಅವರು ತಮ್ಮ ತಾಯಿ ಥುಸ್ಸು ರೆಹಮಾನ್ ಭಾಯಿ ಅವರೊಂದಿಗೆ ಇದ್ದಾರೆ ಎನ್ನಲಾದ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಸಂಖ್ಯೆಯಲ್ಲಿ ಹಂಚಿಕೆ ಆಗುತ್ತಿದೆ. 'ನೆಹರೂ ಅವರ ತಂದೆ ಮೋತಿಲಾಲ್ ನೆಹರೂ ಅವರಿಗೆ ಒಟ್ಟು ಐವರು ಹೆಂಡಿರಿದ್ದರು. ಅವರಲ್ಲಿ ಮುಸ್ಲಿಂ ಮಹಿಳೆ ರೆಹಮಾನ್ ಭಾಯಿ ಅವರೂ ಒಬ್ಬರು. ಇವರು ಮೋತಿಲಾಲ್ ಅವರ ಎರಡನೇ ಪತ್ನಿ' ಎಂದೂ ಹೇಳಲಾಗುತ್ತಿದೆ. ಆದರೆ, ಇದು ಸುಳ್ಳು ಸುದ್ದಿ.



ಮೋತಿಲಾಲ್ ಹಾಗೂ ಅವರ ಎರಡನೇ ಪತ್ನಿ ಸ್ವರೂಪ್ ರಾಣಿ (ಥುಸ್ಸು, ಕಾಶ್ಮೀರಿ ಪಂಡಿತರ ಒಂದು ಪಂಗಡ) ಅವರ ಮೊದಲನೇ ಮಗ ಜವಾಹರಲಾಲ ನೆಹರೂ. ದಂಪತಿಗೆ ನೆಹರೂ ಅವರೂ ಸೇರಿ ವಿಜಯಲಕ್ಷ್ಮಿ ಪಂಡಿತ್ ಮತ್ತು ಕೃಷ್ಣಾ ನೆಹರೂ ಎಂಬ ಮೂವರು ಮಕ್ಕಳಿದ್ದಾರೆ. ಮಗುವಿಗೆ ಜನ್ಮ ನೀಡುವ ವೇಳೆಯಲ್ಲಿ ಮಗು ಹಾಗೂ ಮೋತಿಲಾಲ್ ಅವರ ಮೊದಲ ಪತ್ನಿ ಸಾವನ್ನಪ್ಪುತ್ತಾರೆ. ಆಗ ಸ್ವರೂಪ್ ರಾಣಿ ಅವರನ್ನು ಮೋತಿಲಾಲ್ ಅವರು ಮದುವೆ ಆಗುತ್ತಾರೆ. ಬಿ. ಆರ್. ನಂದಾ ಅವರು ಬರೆದ 'ದಿ ನೆಹರೂಸ್: ಮೋತಿಲಾಲ್ ಅಂಡ್ ಜವಾಹರ್‌ಲಾಲ್' ಎಂಬ ಪುಸ್ತಕದಲ್ಲಿ ಈ ಮಾಹಿತಿ ಇದೆ. ಪತ್ರಕರ್ತೆ ಸಾಗರಿಕ ಘೋಷ್ ಅವರು 'ಇಂದಿರಾ: ಇಂಡಿಯಾಸ್ ಮೋಸ್ಟ್ ಪವರ್‌ಫುಲ್ ಪ್ರೈಮ್ ಮಿನಿಸ್ಟರ್' ಎಂಬ ಪುಸ್ತಕ ಬರೆದಿದ್ದಾರೆ. ಮೋತಿಹಾಲ್ ಅವರಿಗೆ ಐವರು ಪತ್ನಿಯರಿದ್ದರು ಎಂಬುದನ್ನು ಇವರೂ ನಿರಾಕರಿಸುತ್ತಾರೆ. ಆದ್ದರಿಂದ, ನೆಹರೂ ಅವರು ತಮ್ಮ ತಾಯಿ ಸ್ವರೂಪ್ ರಾಣಿ ಅವರೊಂದಿಗೆ ಇರುವ ಫೋಟೊವನ್ನು ತಪ್ಪಾಗಿ ಹಂಚಿಕೆ ಮಾಡಲಾಗುತ್ತಿದೆ. ನೆಹರೂ ಅವರ ತಾಯಿ ಮುಸ್ಲಿಂ ಎಂಬುದು ಸುಳ್ಳು ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ಬೀಗಕ್ಕೊಂದೇ ಕೈ

ಮೆಣಸು ಹಿಪ್ಪಲಿ ಶುಂಠಿ ಜೀರಿಗೆಗಳೆಲ್ಲ ಸರಿ |
ಅನುವಪ್ಪುದೊಂದೊಂದು ರೋಗಕೊಂದೊಂದು ||
ನಿನಗಮಂತೆಯೆ ನೂರು ನೀತಿಸೂತ್ರಗಳಿರಲು |
ಅನುವನರಿವುದೆ ಜಾಣು – ಮಂಕುತಿಮ್ಮ || 935 ||

ಪದ-ಅರ್ಥ: ಅನುವಪ್ಪುದೊಂದೊಂದು = ಅನುವು(ಹೊಂದಿಕೆ) + ಅಪ್ಪುದು(ಇರುವುದು) + ಒಂದೊಂದು, ರೋಗಕೊಂದೊಂದು = ರೋಗಕೆ + ಒಂದೊಂದು, ನಿನಗಮಂತೆಯೆ = ನಿನಗಮ್(ನಿನಗೂ) + ಅಂತೆಯೆ, ಅನುವನರಿವುದೆ = ಅನುವನು(ಹೊಂದಿಕೆಯಾದದ್ದನ್ನು) + ಅರಿವುದೆ, ಜಾಣು = ಬುದ್ಧಿವಂತಿಕೆ.

ವಾಚ್ಯಾರ್ಥ: ಮೆಣಸು, ಹಿಪ್ಪಲಿ, ಶುಂಠಿ, ಜೀರಿಗೆಗಳೆಲ್ಲ ಔಷಧಿಗಳಾಗಿ ಒಂದೊಂದು ರೋಗಕ್ಕೆ ಸರಿಯಾಗಿ ಹೊಂದುತ್ತವೆ. ನಿನಗೂ ಹಾಗೆಯೇ ನೂರಾರು ನೀತಿ ಸೂತ್ರಗಳು ಲಭ್ಯವಿವೆ. ಯಾವುದು ನಿನಗೆ ಹೊಂದುತ್ತದೆಂಬುದನ್ನು ತಿಳಿದು ಆರಿಸಿಕೊಳ್ಳುವುದು ಜಾಣತನ.

ವಿವರಣೆ: ಗೌಡರು ಏಳುವರ್ಷದ ಮಗ ಕಿಟ್ಟಣ್ಣನನ್ನು ಕರೆದುಕೊಂಡು ವೈದ್ಯರ ಬಳಿಗೆ ಹೋಗಿ ದಬಾಯಿಸಿದರು, "ಏನ್ ಡಾಕ್ಟ್ರೆ? ಒಂದು ವಾರದಿಂದ ನೀವೇ ಕೊಟ್ಟ ಔಷಧಿಯನ್ನು ಕೊಡ್ತಾನೇ ಇದ್ದೀವಿ, ಜ್ವರಾ ಕಡಿಮೆಯಾಗ್ತಾನೇ ಇಲ್ಲ. ಸರಿಯಾಗಿ ನೋಡಿ". ವೈದ್ಯರು ಹುಡುಗನನ್ನು ನೋಡಿದರು. ಅವನನ್ನು ನೋಡಿದ ನೆನಪೇ ಬರುತ್ತಿಲ್ಲ. "ಗೌಡರೇ, ನಾನು ಕೊಟ್ಟ ಔಷದಿ ಚೀಟಿಯನ್ನು ಕೊಡಿ" ಎಂದು ಕೇಳಿ ಇಸಿದುಕೊಂಡರು. ಅವರ ಮೇಲೆ ರೋಗಿಯ ಹೆಸರು ಪುಟ್ಟಣ್ಣ, ವಯಸ್ಸು ಹನ್ನೆರಡು ವರ್ಷ ಎಂದು ಬರೆದಿತ್ತು. "ಅಲ್ರೀ, ಇದು ನಿಮ್ಮ ಹಿರಿಯ ಮಗನಿಗೆ ಕೊಟ್ಟದ್ದು. ಅದೂ ಭೇದಿ ನಿಲ್ಲಿಸುವುದಕ್ಕೆ ಕೊಟ್ಟದ್ದು. ಈ ಹುಡುಗನಿಗೆ ಬಂದದ್ದು ಜ್ವರ". ಗೌಡರ ಕೋಪ ಮೇಲೇರಿತು. "ಏನಾದರೇನು, ಒಂದೇ ತಾಯಿಯ ಮಕ್ಕಳಲ್ಲವೇ?". ಹಿರಿಯ ಮಗನಿಗೆ ಭೇದಿಗೆ ಕೊಟ್ಟ ಔಷಧವನ್ನು ಕಿರಿಯ ಮಗನ ಜ್ವರಕ್ಕೆ ಕೊಟ್ಟರೆ ಹೇಗೆ ಕಡಿಮೆಯಾದೀತು?. ಪ್ರತಿಯೊಂದು ರೋಗಕ್ಕೆ ಅದಕ್ಕೇ ಆದ ವಿಶೇಷ ಔಷಧಿ ಇರುತ್ತದೆ, ವ್ಯಕ್ತಿಯಿಂದ ವ್ಯಕ್ತಿಗೆ, ಬೇರೆ ಬೇರೆ ವಯಸ್ಸಿಗೆ ಅದು ಬದಲಾಗುತ್ತದೆ ಎಂದು ತಿಳಿಸಲು ವೈದ್ಯರು ತುಂಬ ಕಷ್ಟಪಟ್ಟರು. ಕಗ್ಗ ತಿಳಿಸುತ್ತದೆ, ಮೆಣಸು, ಹಿಪ್ಪಲಿ, ಶುಂಠಿ, ಜೀರಿಗೆಗಳೆಲ್ಲ ಔಷಧಿಗಳೇ. ಆದರೆ ಅವು ಒಂದೇ ರೋಗಕ್ಕಲ್ಲ. ಒಂದೊಂದು ರೋಗಕ್ಕೆ ಒಂದೊಂದು ಔಷಧಿಯಾಗುತ್ತದೆ. ಅಂತೆಯೇ ಪ್ರಪಂಚದಲ್ಲಿ ನೂರಾರು ನೀತಿಗಳು, ಯುಕ್ತಿಗಳು ಇವೆ. ಅವೆಲ್ಲ ವಿಭಿನ್ನ ಜನರಿಗೆ, ವಿಭಿನ್ನ ಪರಿಸ್ಥಿತಿಗಳಲ್ಲಿ ಪ್ರಯೋಜನವಾಗಲಿ ಎಂದು ಮಾಡಲ್ಪಟ್ಟ ಯೋಜನೆಗಳು. ಅವು ಆಯಾ ಪರಿಸ್ಥಿತಿಗೆ ಸರಿ. ನಾವು ನೀತಿ ಇದೆಯಲ್ಲ ಎಂದು ಕಣ್ಣು ಕಟ್ಟಿಕೊಂಡು ಬಳಸದೇ ನನ್ನ ಪರಿಸ್ಥಿತಿಗೆ, ಮನಸ್ಥಿತಿಗೆ ಅದು ಹೊಂದುತ್ತದೆಯೋ ಎಂದು ಪರೀಕ್ಷಿಸಿ ಪ್ರಯೋಗಿಸುವುದು ಜಾಣತನ. ಪ್ರತಿಯೊಂದು ಬೀಗಕ್ಕೂ ಬೇರೆಯದೇ ಕೀಲೀಕೈ ಅಲ್ಲವೆ? ಒಂದರ ಕೈಯನ್ನು ಮತ್ತೊಂದು ಬೀಗಕ್ಕೆ ಬಳಸಿದರೆ ಹೇಗೆ ತೆರೆದೀತು ? ಕಗ್ಗ ಹೇಳುತ್ತದೆ ಯಾವ ನೀತಿಯನ್ನು, ಯುಕ್ತಿಯನ್ನು ನಮ್ಮ ಜೀವನಕ್ಕೆ ಅನ್ವಯಿಸಿಕೊಳ್ಳಬೇಕು ಎಂಬುದನ್ನು ತಿಳಿದು ಅನುಸರಿಸುವುದು ಜಾಣತನ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜುಲೈ 26, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷಋತು ತಿಥಿ: ಅಧಿಕ ಶ್ರಾವಣ ಶುದ್ಧಅಷ್ಟಮಿ ಗಂ. 15-53 ನಕ್ಷತ್ರ: ಸ್ವಾತಿ ಗಂ. 25-10 ಯೋಗ: ಸಾಧ್ಯಾ ಗಂ. 14-39 ಕರಣ: ಬವ ಗಂ. 15-53, ಕರ್ಕಾಟಕ ಮಾಸದ 09 ನೇ ದಿನ,
ಮಳೆನಕ್ಷತ್ರ: ಪುಷ್ಯ 2. ರಾಹುಕಾಲ : ಮಧ್ಯಾಹ್ನ 12-00 - 01-30
ಸೂರ್ಯೋದಯ : 06-18 ಸೂರ್ಯಾಸ್ತ : 06-56
ಮುಸ್ಲಿಂ ದಿನಾಂಕ : 07 ಮೊಹರಮ್
ಅದೃಷ್ಟ ಸಂಖ್ಯೆ : 10, 5

ಮೇಷ: ನಿಮ್ಮ ಮೇಲೆ ಪ್ರೀತಿ ತೋರಿಸಲು ಶುರು ಮಾಡಿದ ನಂತರ ಬುದ್ಧಿಯು ಕಪಟವಾದದ್ದು ಎಂದು ನೀವು ಅರಿಯಬೇಕು. ಮಕ್ಕಳ ಮನೆಯಲ್ಲಿ ಪುಣ್ಯದ ಫಲವಾಗಿ ಸುಖ ಸಮೃದ್ಧಿಗಳಿರುತ್ತವೆ.

ವೃಷಭ: ಕೆಲಸದ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲಿಕ್ಕಾಗಿ ಹಲವಾರು ತರಬೇತಿಗಳನ್ನು ನೀವೇ ತೆಗೆದುಕೊಳ್ಳಲು ಯೋಚನೆ ನಡೆಸುವಿರಿ. ರಿಯಾಯಿತಿಯ ವಸ್ತ್ರ ಖರೀದಿಯಿಂದಾಗಿ ಹಣವನ್ನು ಉಳಿತಾಯ ಮಾಡುವಿರಿ.

ಮಿಥುನ: ದೊಡ್ಡ ದೊಡ್ಡ ಕಂಪನಿಗಳಲ್ಲಿ ಕೆಲಸ ಹೊಂದಬೇಕೆಂಬ ಮಹತ್ವಾಕಾಂಕ್ಷೆ ಹೊಂದಿರುವವರು ಸಣ್ಣ ಕಂಪನಿಗಳಲ್ಲಿ ಉದ್ಯೋಗ ಅನುಭವವನ್ನು ಹೊಂದಿದ ನಂತರ ಅಂಥ ಪ್ರಯತ್ನವನ್ನು ಮಾಡುವುದು ಸೂಕ್ತವಾದದ್ದು.

ಕರ್ಕಾಟಕ: ಮನೆಯಲ್ಲಿ ದೇವರ ಪ್ರಾರ್ಥನೆಯನ್ನು ನಡೆಸಿದ ನಂತರ ದೊರೆತ ಸಂತಾನಭಾಗ್ಯದ ಫಲವಾಗಿ ಹರ್ಷ ತುಂಬಿರುತ್ತದೆ. ಔದ್ಯೋಗಿಕವಾಗಿ ಅನುಭವಸ್ಥರಿಂದ ಕೇಳಿ ಪಡೆದ ಸಲಹೆ ಸೂಚನೆಗಳಿಂದಾಗಿ ಅಭಿವೃದ್ಧಿ ಹೊಂದುವಿರಿ.

ಸಿಂಹ: ಕಲ್ಪಿಸಿಕೊಳ್ಳಲು ಸಾಧ್ಯವಾಗದೇ ಇರುವ ರೀತಿಯಲ್ಲಿ ವಿವಾಹವು ನಿಗದಿಯಾಗುವ ಸಾಧ್ಯತೆ ಇರುವುದು. ಒಬ್ಬ ವ್ಯಕ್ತಿಯು ನಿಮ್ಮ ಮೇಲೆ ನಂಬಿಕೆ ಇಟ್ಟು ಮಾಡಿದಂಥ ಉಪಕಾರವನ್ನು ಮರೆಯಬೇಡಿ.

ಕನ್ಯಾ: ನಿಶ್ಚಿತ ಕಾರ್ಯಗಳು ಪ್ರಕೃತಿಯಲ್ಲಿನ ಅನಿಶ್ಚಿತ ಬದಲಾವಣೆಗಳಿಂದಾಗಿ ಹಿಂದುಮುಂದಾಗಬಹುದು. ವಾತಾವರಣದ ಫಲವಾಗಿ ಮಂಡಿ ಹಾಗೂ ಸಂದುಗಳಲ್ಲಿ ನೋವು ಕಾಣಿಸುವುದು. ಆಹಾರದಲ್ಲಿ ಅದನ್ನು ಸರಿಪಡಿಸಿಕೊಳ್ಳಿ.

ತುಲಾ: ಬದಲಾದ ನಿಮ್ಮ ವೇಳಾಪಟ್ಟಿಗೆ ಸರಿಯಾಗುವಂತೆ ನಡೆದುಕೊಳ್ಳುವ ಪತ್ನಿಯ ಮೇಲೆ ಗೌರವ ಹೆಚ್ಚಾಗುವುದು. ಫಲದಾಯಿಕೆಯಾದ ರಾಜರಾಜೇಶ್ವರಿಯನ್ನು ಪ್ರಾರ್ಥಿಸಿ , ಅಭೀಷ್ಟಗಳನ್ನು ನೆರವೇರಿಸಿಕೊಳ್ಳಿ.

ವೃಶ್ಚಿಕ: ಬೆಲೆಬಾಳುವ ವಸ್ತುವಿನ ಖರೀದಿಯಿಂದ ಮನೆಯಲ್ಲಿ ತಾಯಿ ಅಥವಾ ಹಿರಿಯರು ಮುನಿಸಿಕೊಳ್ಳುವರು. ನಿಮ್ಮ ಕೆಲಸಕ್ಕೆ ಅನಿರೀಕ್ಷಿತ ಬದಲಾವಣೆ ಬರಬಹುದು. ಕೃಷಿ ಚಟುವಟಿಕೆಗಳು ವೃಷ್ಟಿಯಿಂದ ಚುರುಕುಗೊಳ್ಳುವವು.

ಧನು: ಕಾರಣಾಂತರದಿಂದ ಸಿಕ್ಕಂಥ ಬಿಡುವಿನ ಸಮಯ ಸದುಪಯೋಗ ಪಡಿಸಿಕೊಳ್ಳುವಿರಿ. ಜೊತೆ ಸ್ಪರ್ಧಿಸುತ್ತಿದ್ದವರಿಗೆ ಎಚ್ಚರ ತಪ್ಪಿದಲ್ಲಿ ಜಯ ಸಿಗುವುದು. ಅಧಿಕ ಕೊಬ್ಬಿನ ಅಂಶದ ಆಹಾರವನ್ನು ತ್ಯಜಿಸಿ.

ಮಕರ: ಪ್ರವಾಸಕ್ಕಾಗಿ ಹೋದ ಪ್ರದೇಶದಲ್ಲಿ ಕೆಲವು ತೊಂದರೆಗಳಾಗುವಂಥ ಸಂದರ್ಭಗಳಿವೆ. ಮನೆಬದಿಯ ಜವಾಬ್ದಾರಿಗಳು ಅಣ್ಣನ ಅನಾರೋಗ್ಯದಿಂದ ಹೆಚ್ಚಾಗುವುದು. ನಟನೆ ಮಾಡುವವರಿಗೆ ಉತ್ತಮ ಅವಕಾಶಗಳಿವೆ.

ಕುಂಭ: ಪ್ರಕೃತಿಸಹಜವಾದ ಅವಿನಾಭಾವ ಸಂಬಂಧಗಳನ್ನು ಕಂಡು ನಿಮ್ಮಲ್ಲಿನ ಸಾಹಿತ್ಯ ಅಥವಾ ಚಿತ್ರಕಲಾ ಪ್ರಜ್ಞೆಯು ಎಚ್ಚೆತ್ತುಕೊಳ್ಳುವುದು. ಪತಿ ಪತ್ನಿಯರಲ್ಲಿ ಸಾಮರಸ್ಯ ಇರುವುದು. ಅಧಿಕಾರಿಗಳಿಂದ ಪ್ರಶಂಸೆ ಮಾತು ಕೇಳುವಿರಿ.

ಮೀನ: ವಾತ ಅಥವಾ ಪಿತ್ತದಿಂದ ಉಂಟಾದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಪ್ರಾಣಾಯಾಮ ಯೋಗದಂಥ ಮಾರ್ಗ ಉತ್ತಮವಾದುದು. ಬಂಧು ಮಿತ್ರರಲ್ಲಿ ಕಲಹಗಳು ಆಗದಂತೆ ಎಚ್ಚರವಹಿಸಿರಿ.

ಪದಬಂಧ 5391

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಅಂಗೈ ರೇಖೆಗಳನ್ನು ನೋಡಿ ಭವಿಷ್ಯ ಹೇಳುವುದು (6)
4. ದೊಡ್ಡ ಗಲಾಟೆ (4)
5. ವಿರಳವಾಗಿ ಕಾಣುತ್ತಿರುವ ರಕ್ತ (3)
7. ಮರಿ ಬಿದ್ದಿರುವ ಆಳವಾದ ಗುಂಡಿ (3)
10. ಕುದುರೆಯನ್ನೇರುವ ಬಳೆ (3)
11. ಈತ ತಿರುಪೆ ಬೇಡುವವನು (3)
13. ಅದೇ ತಾನೆ ಮೂಡುತ್ತಿರುವ ಸೂರ್ಯ (4)
15. ಪ್ರೇಮಿಗಳ ಹುಸಿ ಜಗಳ (6)

ಮೇಲಿಂದ ಕೆಳಕ್ಕೆ
1. ಅರಳೆ ಹಿಡಿದವನ ಸಮೀಪ! (3)
2. ಕೆರಳಿದವನ ಮೆಟ್ಟು ! (2)
3. ತಪಸ್ಸು ಮಾಡುವವಳು (4)
6. ಈಕೆ ತೆಳ್ಳನೆಯ ಹೊಟ್ಟೆಯವಳು (4)
7. ಕದಕ್ಕೆ ತಾಕಿಸಿರುವ ಕೆನ್ನೆ (3)
8. ಯತಿಗೆ ಸಿಕ್ಕಿರುವ ರಿಬೇಟ್! (4)
9. ಅಕ್ಕಪಕ್ಕ ಎಂದು ಹೀಗೆ ಹೇಳ (4)
12. ಜಗಳಕ್ಕೊಂದು ಪರ್ಯಾಯ ಪದ (3)
14. ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ! (2)

1					2	■	■	3
	■	■	■	■	4			
5		6	■	■	■	■	■	
■	■		■	7		8	■	
■	■		■		■		■	■
9	■	10			■		■	■
	■	■	■	■	■	11		12
13			14	■	■	■	■	
	■	■	15					

5390ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಒಸಗೆ 4.ಮಸಣ
5.ತಹನಾಮೆ 6.ಹಳವಂಡ
8.ಟೆಗಂ 10.ಉಪಾ
13.ತಳಪಾಯ 14.ಪರಿಹಾರ
15.ಗಾಚಾರ 16.ಸಮರ

ಮೇಲಿಂದ ಕೆಳಕ್ಕೆ:
1.ಗ್ರಾಮಕೈಗಾರಿಕೆ
2.ಒಣಹರಟೆ 3.ಇನಾಮು
5.ತಡಸಲು 7.ಉದರಂಭರಣ
9.ಗಂಡಾಂತರ 11.ಪಾಳೆಯಗಾರ
12.ಅರಿವು

ಸುಡೊಕು 5777


7		4		5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6			9	1	7		
				2			6	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5776 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ಷೇರುಪೇಟೆ ವಹಿವಾಟು 29



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,672
ಇಂದಿನ ಅಂತ್ಯ	19,680
▲	8
ದಿನದ ಕನಿಷ್ಠ	19,729

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹445
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹445

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1865(1840)
ಸೋಯಾ (ರಿಫೈನ್ಡ್)	₹985(975)
ಸೂರ್ಯಕಾಂತಿ (ರಿಫೈನ್ಡ್)	₹980(975)
ಪಾಮೋಲಿನ್	₹890(890)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹128

ಭಾರತದಲ್ಲಿ ಶೇ 6.1ರಷ್ಟು ಬೆಳವಣಿಗೆ: ಐಎಂಎಫ್

ವಾಷಿಂಗ್ಟನ್ (ಪಿಟಿಐ): ಭಾರತದ ಅರ್ಥವ್ಯವಸ್ಥೆಯು ಈ ವರ್ಷದಲ್ಲಿ ಶೇಕಡ 6.1ರಷ್ಟು ಬೆಳವಣಿಗೆ ಸಾಧಿಸಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿಸಿದೆ. ಇದು ಸಂಸ್ಥೆಯು ಈ ಹಿಂದೆ ಮಾಡಿದ್ದ ಅಂದಾಜಿಗಿಂತ ಶೇ 0.2ರಷ್ಟು ಹೆಚ್ಚು.

2022ರ ಕೊನೆಯ ತ್ರೈಮಾಸಿಕದಲ್ಲಿ ಕಂಡುಬಂದ ನಿರೀಕ್ಷೆಗೂ ಮೀರಿದ ಆರ್ಥಿಕ ಬೆಳವಣಿಗೆಯ ಕಾರಣದಿಂದಾಗಿ ಅಂದಾಜು ಪರಿಷ್ಕರಿಸಲಾಗಿದೆ ಎಂದು ಐಎಂಎಫ್ ಹೇಳಿದೆ. ಐಎಂಎಫ್ ವರದಿ ಪ್ರಕಾರ ಜಾಗತಿಕ ಆರ್ಥಿಕ ಬೆಳವಣಿಗೆಯು ಈ ವರ್ಷದಲ್ಲಿ ಹಾಗೂ ಮುಂದಿನ ವರ್ಷದಲ್ಲಿ ಶೇ 3ರಷ್ಟು ಇರಲಿದೆ.

ಕೇಂದ್ರ ಜವಳಿ ಸಚಿವಾಲಯದ ಕಾರ್ಯದರ್ಶಿ ರಚನಾ ಶಾ ಹೇಳಿಕೆ

ಬಟ್ಟೆಗಳಿಗೆ 'ಇಂಡಿಯಾಸೈಜ್' ಅಳತೆ ಶೀಘ್ರ

ನವದೆಹಲಿ (ಪಿಟಿಐ): ಭಾರತೀಯರ ದೇಹಕ್ಕೆ ಹೆಚ್ಚು ಸೂಕ್ತವಾಗಿ ಹೊಂದಿಕೆಯಾಗುವ, ಸಿದ್ಧ ಉಡುಪುಗಳ ತಯಾರಿಯಲ್ಲಿ ಬಳಕೆ ಮಾಡಬೇಕಿರುವ 'ಇಂಡಿಯಾಸೈಜ್' ಅಳತೆಗೋಲನ್ನು ಶೀಘ್ರದಲ್ಲಿಯೇ ಅಂತಿಮಗೊಳಿಸಲಾಗುವುದು ಎಂದು ಕೇಂದ್ರ ಜವಳಿ ಸಚಿವಾಲಯದ ಕಾರ್ಯದರ್ಶಿ ರಚನಾ ಶಾ ಹೇಳಿದ್ದಾರೆ.

ಇದು ಅಂತಿಮಗೊಂಡು, ಬಳಕೆ ಶುರುವಾದ ನಂತರದಲ್ಲಿ ಭಾರತೀಯರು ತಮ್ಮ ದೇಹಕ್ಕೆ ಹೆಚ್ಚು ಸೂಕ್ತವಾಗುವ ಅಳತೆಯನ್ನು ಹೊಂದಿರುವ ಸಿದ್ಧ ಉಡುಪುಗಳನ್ನು ಖರೀದಿಸಬಹುದು



ಎಂದು ಅವರು ಹೇಳಿದ್ದಾರೆ. ಈಗ ದೇಶದಲ್ಲಿ ಸಿದ್ಧ ಉಡುಪುಗಳನ್ನು ಮಾರಾಟ ಮಾಡುವ ದೇಶಿ ಹಾಗೂ ಅಂತರರಾಷ್ಟ್ರೀಯ ಬ್ರ್ಯಾಂಡ್‌ಗಳು ಅಮೆರಿಕ ಹಾಗೂ ಬ್ರಿಟನ್ನಿನ ಅಳತೆಗೋಲು ಆಧರಿಸಿ, 'ಸ್ಮಾಲ್', 'ಮೀಡಿಯಂ' ಮತ್ತು 'ಲಾರ್ಜ್' ಗಾತ್ರದ ಬಟ್ಟೆಗಳನ್ನು ಮಾರುಕಟ್ಟೆಗೆ ತರುತ್ತಿವೆ.

ಆದರೆ ಪಾಶ್ಚಿಮಾತ್ಯರ ದೇಹಕ್ಕೂ, ಭಾರತೀಯರ ದೇಹಕ್ಕೂ ವ್ಯತ್ಯಾಸವಿದೆ. ಇದರ ಪರಿಣಾಮವಾಗಿ, ಈಗಿನ ಕೆಲವು ಬ್ರ್ಯಾಂಡ್‌ಗಳ ಬಟ್ಟೆಗಳು ಭಾರತೀಯರಿಗೆ ಸರಿಹೊಂದುತ್ತಿಲ್ಲ ಎಂಬ ದೂರುಗಳಿವೆ. 'ಇಂಡಿಯಾಸೈಜ್ ವ್ಯವಸ್ಥೆಯು ಶೀಘ್ರದಲ್ಲಿಯೇ ಜಾರಿಗೆ ಬರುತ್ತದೆ ಎಂದು ಆಶಿಸುತ್ತಿದ್ದೇವೆ' ಎಂದು ಶಾ ಅವರು ಹೇಳಿದ್ದಾರೆ.

ಜವಳಿ ಸಚಿವಾಲಯವು 'ಇಂಡಿಯಾಸೈಜ್' ಯೋಜನೆಗೆ ಈ ಹಿಂದೆ ಅನುಮೋದನೆ ನೀಡಿದೆ. ಭಾರತೀಯ ಸಿದ್ಧ ಉಡುಪು ಉದ್ಯಮವು ಭಾರತೀಯರ ದೇಹಕ್ಕೆ ಸರಿಹೊಂದುವ ಸಿದ್ಧ ಉಡುಪು ತಯಾರಿಸಲು ನೆರವಾಗುವ ಉದ್ದೇಶವನ್ನು ಇದು ಹೊಂದಿದೆ.

ದೇಶದಾದ್ಯಂತ 25 ಸಾವಿರಕ್ಕೂ ಹೆಚ್ಚು ಪುರುಷರು ಹಾಗೂ ಮಹಿಳೆಯರ ದೇಹದ ಅಳತೆಯನ್ನು ಈ ಯೋಜನೆಯ ಅಡಿಯಲ್ಲಿ 3-ಡಿ ತಂತ್ರಜ್ಞಾನ ಬಳಸಿ ಪಡೆಯಲಾಗುತ್ತದೆ. ದೇಶಿ ಹಾಗೂ ವಿದೇಶಿ ಸಿದ್ಧ ಉಡುಪು ತಯಾರಕರು ಭಾರತೀಯರಿಗೆ ಸರಿಹೊಂದುವ ಬಟ್ಟೆ ತಯಾರಿಸಲು ಈ ಅಳತೆಯು ನೆರವಾಗಲಿದೆ.

ಟಾಟಾ ಮೋಟರ್ಸ್‌ಗೆ ಲಾಭ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯ ಜೂನ್ ತ್ರೈಮಾಸಿಕದ ಲಾಭವು ₹3,300 ಕೋಟಿ ಆಗಿದೆ. ಟಾಟಾ ಮೋಟರ್ಸ್‌ನ ಅಂಗಸಂಸ್ಥೆಯಾಗಿರುವ ಜಾಗ್ವರ್ ಲ್ಯಾಂಡ್ ರೋವರ್ಸ್‌ನ ವಹಿವಾಟುಗಳಲ್ಲಿನ ಸುಧಾರಣೆಯು ಲಾಭ ಗಳಿಕೆಗೆ ನೆರವಾಗಿದೆ.

ಕಂಪನಿಯು ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ₹4,950 ಕೋಟಿ ನಷ್ಟ ಅನುಭವಿಸಿತ್ತು. ಜೂನ್ ತ್ರೈಮಾಸಿಕದಲ್ಲಿ ಕಂಪನಿಯ ಕಾರ್ಯಾಚರಣೆ ವರಮಾನವು ₹1.01 ಲಕ್ಷ ಕೋಟಿ ಆಗಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹71 ಸಾವಿರ ಕೋಟಿ ಆಗಿತ್ತು.

ಬಜಾಜ್ ಆಟೊ ಲಾಭ ಏರಿಕೆ

ಮುಂಬೈ (ಪಿಟಿಐ): ಬಜಾಜ್ ಆಟೊ ಕಂಪನಿಯ ತೆರಿಗೆ ನಂತರದ ಲಾಭವು ಜೂನ್ ತ್ರೈಮಾಸಿಕದಲ್ಲಿ ಶೇ 42ರಷ್ಟು ಹೆಚ್ಚಾಗಿದ್ದು, ₹1,665 ಕೋಟಿಗೆ ತಲುಪಿದೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯ ಲಾಭವು ₹1,173 ಕೋಟಿ ಆಗಿತ್ತು. ಕಂಪನಿಯ ಕಾರ್ಯಾಚರಣೆ ವರಮಾನವು ಜೂನ್ ತ್ರೈಮಾಸಿಕದಲ್ಲಿ ಶೇ 29ರಷ್ಟು ಹೆಚ್ಚಾಗಿದ್ದು ₹10,310 ಕೋಟಿಗೆ ತಲುಪಿದೆ. ಇದು ಹಿಂದಿನ ವರ್ಷದ ಜೂನ್ ತ್ರೈಮಾಸಿಕದಲ್ಲಿ ₹8,005 ಕೋಟಿ ಆಗಿತ್ತು.

ಮುಂಬೈ ಧಾರಣೆ

ಶೇಂಗಾ

25–7-2023

ಜಾವಾ 70/80(ಹೊಸ)	12600-12700
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	12100-12200
ದಪ್ಪ ಗುಜರಾತ್(ಹೊಸ)	12900-13000

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1875(1850)
ಒಂದು ವಾರದ ಡೆಲಿವರಿ	1870(1845)
ಸೋಯಾ ಕಚ್ಚಾ	950(935)
ಪಾಮ್ ವಾರದ ಡೆಲಿವರಿ	888(888)
ಸೂರ್ಯಕಾಂತಿ ಎಣ್ಣೆ ಕಚ್ಚಾ	940(930)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

58850(59150)

ಬೆಳ್ಳಿ ಕೆ.ಜಿ 73900(74100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	500-550
ನಡುಗೋಲು	600-650
ರಾಶಿ	700-800
ರಾಶಿ ಉತ್ತಮ	900-950
ಜರಡಿ	1,000 - 1,050
ಹೆರಕಿದ್ದು	1,300-1,400
ಹಸಿರು ಸಾಧಾರಣ	1,000-1,100
ಹಸಿರು ಉತ್ತಮ	1,250-1,350
ಹಸಿರು ಅತಿ ಉತ್ತಮ	1,600-1,800
ಕಾಳುಮೆಣಸು	- 600
ಅಡಿಕೆ	
ಬಂಟ್ವಾಳ	
ಕೋಕ	12,500-25,000
ಹೊಸತು	27,500-43,200
ಹಳತು	46,000-48,000
ಸಾಗರ	
ಬಿಳಿಗೋಟು	32,169-33,999
ಚಾಲಿ	37,899-39,699
ಕೋಕ	28,680-36,989
ಕೆಂಪುಗೋಟು	36,989-36,989
ರಾಶಿ	34,899-53,209
ಸಿಪ್ಪೆಗೋಟು	20,712-22,699
ಶಿವಮೊಗ್ಗ	
ಬೆಟ್ಟೆ	38,579-54,309
ಗೊರಬಲು	18,040-43,569
ರಾಶಿ	35,055-56,212
ಸರಕು	52,259-80,696
ಸಿದ್ದಾಪುರ	
ಬಿಳಿಗೋಟು	31,699-34,699
ಚಾಲಿ	39,599-41,000
ಕೋಕ	23,699-34,599
ಕೆಂಪುಗೋಟು	36,811-36,811
ರಾಶಿ	51,369-52,819
ತಟ್ಟಿಬೆಟ್ಟೆ	46,299-48,699
ಶಿರಸಿ	
ಬೆಟ್ಟೆ	41,499-48,099
ಬಿಳಿಗೋಟು	28,018-36,399
ಚಾಲಿ	37,018-41,599
ಕೆಂಪುಗೋಟು	28,299-37,299
ರಾಶಿ	44,399-52,199
ಯಲ್ಲಾಪುರ	
ಆಪಿ	68,269-68,269
ಬಿಳಿಗೋಟು	26,899-35,600
ಚಾಲಿ	36,869-41,249
ಕೋಕ	20,212-35,399
ಕೆಂಪುಗೋಟು	32,000-36,461
ರಾಶಿ	46,009-53,869
ತಟ್ಟಿಬೆಟ್ಟೆ	41,398-48,299

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14,000	14,300	14,000	163 ಸೆಂಟ್ಸ್
ಎಸಿ	7,140	7,100	7,000	
ಆರ್‌ಪಿ	10,100	10,200	10,200	ಲಂಡನ್
ಆರ್‌ಸಿ	6,225	246	5,900	- ಡಾಲರ್ಸ್ 2649

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹223-455
ದ್ವಿತಳಿ (ಬಿ.ವಿ)	₹180-598

ಕೊಬ್ಬರಿ ಧಾರಣೆ

ಅರಸೀಕೆರೆ	₹8200-10008
ಕೆ.ಆರ್.ಪೇಟೆ (ಇತರ)	₹7719-7719
ತಿಪಟೂರು	₹7500-9101

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಹೆಸರು ಬೇಡ

● **ಪ್ರಶ್ನೆ: ನಾನು ಹಿರಿಯ ನಾಗರಿಕ. ನನ್ನ ಪಿಂಚಣಿ ಮೊತ್ತ ₹5.54 ಲಕ್ಷ. ನಾನು ಬ್ಯಾಂಕಿಗೆ ಫಾರಂ 15 ಕೊಡಲು ಯೋಚಿಸಿದ್ದೇನೆ. ಇದಲ್ಲದೆ ನನಗೆ ಬಡ್ಡಿ ಆದಾಯವೂ ಇದೆ. ಇದು ವರ್ಷಕ್ಕೆ ₹3.25 ಲಕ್ಷ. ನಾನು ಫಾರಂ 15 ಸಲ್ಲಿಸಿದರೆ ತೆರಿಗೆ ಶೂನ್ಯವಾಗಬಹುದೇ?**

ಉತ್ತರ: ಹಿರಿಯ ನಾಗರಿಕರು ಬ್ಯಾಂಕಿಗೆ ಫಾರಂ 15 ಎಚ್ ಸಲ್ಲಿಸುವ ಮೂಲಕ ತೆರಿಗೆ ಕಡಿತದಿಂದ ವಿನಾಯಿತಿ ಪಡೆಯಬಹುದು. ಆದರೆ ಈ ರೀತಿ ಫಾರಂ ಸಲ್ಲಿಸುವ ಮೊದಲು ಕೆಲವು ಮಾಹಿತಿಯನ್ನು ಗಮನಿಸಬೇಕು.

1) ನೀವು ಸಲ್ಲಿಸುವ ಮಾಹಿತಿ ಸ್ವಯಂ ಘೋಷಿತ ಮಾಹಿತಿಯಾಗಿರುತ್ತದೆಯೇ ವಿನಾ ಅದು ಪ್ರಮಾಣ ಪತ್ರವಲ್ಲ. ಆದರೂ ಇದು ನಿಜವಾಗಿ ಮಾಡಬೇಕಾದ ತೆರಿಗೆ ಕಡಿತವನ್ನು ಅಸಹಜವಾಗಿ ತಡೆಯದಂತೆ ಇರಲಿ. ನೀವು ಫಾರಂ 15 ಎಚ್ ಸಲ್ಲಿಸಿದ್ದೀರಿ ಎಂದಮಾತ್ರಕ್ಕೆ ಅಂತಹ ಆದಾಯ, ತೆರಿಗೆಯಿಂದ ಸಂಪೂರ್ಣ ಮುಕ್ತ ಎಂದರ್ಥವಲ್ಲ.

2) ಇಂತಹ ಘೋಷಣೆಯನ್ನು ಬ್ಯಾಂಕಿಗೆ ಸಲ್ಲಿಸುವ ಮೊದಲು, ಆ ವರ್ಷಕ್ಕೆ ಸಂಬಂಧಿಸಿ ಈಗಾಗಲೇ ಫಾರಂ 15 ಎಚ್ ಅನ್ನು ಇತರೆಡೆಗಳಲ್ಲೂ ಸಲ್ಲಿಸಿದ್ದರೆ, ಅಂತಹ ಎಲ್ಲ ಫಾರಂಗಳ ಒಟ್ಟು ಮಾಹಿತಿ ಪರಿಗಣಿಸಿ ನೀವು ವಿವರ ಭರ್ತಿ ಮಾಡಬೇಕು.

3) ಈ ರೀತಿ ಫಾರಂ ಸಲ್ಲಿಸುವ ಮೊದಲು ನಿಮ್ಮ ಒಟ್ಟಾರೆ ನಿರೀಕ್ಷಿತ ಆದಾಯವು ತೆರಿಗೆ ಮಿತಿಯೊಳಗೆ ಇದೆಯೇ ಎಂಬ ಬಗ್ಗೆ ಖಚಿತಪಡಿಸಿಕೊಳ್ಳಿ. ಒಂದು ವೇಳೆ ನಿಮ್ಮ ಆದಾಯವು ತೆರಿಗೆ ವಿನಾಯಿತಿ ಮೊತ್ತಕ್ಕಿಂತ ಅಧಿಕವಿದ್ದು, ನೀವು ತೆರಿಗೆಗೊಳಪಡುವುದಿದ್ದರೆ, ಇಂತಹ ಸಲ್ಲಿಕೆಗಳು ನೆರವಾಗಲಾರವು.

ನಿಮ್ಮ ಪಿಂಚಣಿ ಆದಾಯಕ್ಕೆ ಸಂಬಂಧಪಟ್ಟು, ₹50,000ದ ಮೂಲ ತೆರಿಗೆ ಕಡಿತ ಮಾಡಿಯೂ ₹5.04 ಲಕ್ಷದ ಪಿಂಚಣಿ ಆದಾಯ ಇದೆ. ಅಲ್ಲದೆ, ಬ್ಯಾಂಕ್ ಬಡ್ಡಿಯೂ ₹3.25 ಲಕ್ಷ ಇದೆ. ಹೀಗೆ ಒಟ್ಟು ಆದಾಯ ₹8.29 ಲಕ್ಷ. ಹಳೆಯ ತೆರಿಗೆ ಪದ್ಧತಿ ಅನುಸರಿಸಿ ತೆರಿಗೆ ಕಟ್ಟುವುದಿದ್ದರೂ, ಸೆಕ್ಷನ್ 80 ಟಿಟಿಬಿ ಅಡಿ ಹಿರಿಯ ನಾಗರಿಕರಿಗೆ ₹50,000ದ ಬಡ್ಡಿ ಆದಾಯದಿಂದ ಕಡಿತ ಪಡೆದರೂ ₹3 ಲಕ್ಷದ ಮೇಲಿನ ಆದಾಯ ತೆರಿಗೆಗೊಳಪಡುತ್ತದೆ. ಹೊಸ ತೆರಿಗೆ ಪದ್ಧತಿ ಅನುಸರಿಸಿದರೂ ನಿಮ್ಮ ಒಟ್ಟು ಆದಾಯ ₹7 ಲಕ್ಷ ಮೀರುವ ನಿರೀಕ್ಷೆ ಇರುವುದರಿಂದ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 87ಎ ಅಡಿ ಸಿಗುವ ರಿಬೇಟ್ ಪಡೆಯಲು ಸಾಧ್ಯವಿಲ್ಲ. ಹೀಗಾಗಿ ನೀವು ತೆರಿಗೆಯಿಂದ ಪೂರ್ಣ ಮುಕ್ತರಲ್ಲ. ₹3.25 ಲಕ್ಷದ ಮೇಲೆ ಮಾಡುವ ತೆರಿಗೆ ಕಡಿತ ಮುಂದಿನ ಒಟ್ಟು ತೆರಿಗೆ ಪಾವತಿಗೆ ಬಳಸಿಕೊಳ್ಳಬಹುದು ಹಾಗೂ ಹೂಡಿಕೆಗಳು ಇಲ್ಲದಿದ್ದರೆ ನಿಮಗೆ ಹೊಸ ತೆರಿಗೆ ಪದ್ಧತಿಯೇ ಸೂಕ್ತವಾಗಬಹುದು.

ಗೋಪಾಲಕೃಷ್ಣ, ಮೈಸೂರು

● **ಪ್ರಶ್ನೆ: ನಾನು ಸರ್ಕಾರಿ ಸ್ವಾಮ್ಯದ ಸಂಸ್ಥೆಯೊಂದರಲ್ಲಿ ಉದ್ಯೋಗ ಮಾಡಿ ನಿವೃತ್ತಿಯಾಗಿದ್ದೇನೆ. ಪಿಂಚಣಿ ಪಡೆಯುತ್ತಿದ್ದೇನೆ. ಇದಲ್ಲದ ಬೇರೆ ಆದಾಯ ನನಗಿಲ್ಲ. 2004ರಲ್ಲಿ ನಾನೊಂದು ನಿವೇಶನ ಖರೀದಿಸಿದ್ದೆ. ಈಗ ನಾನು ವಾಸಿಸುತ್ತಿರುವ ಮನೆ ಬಹಳ ಶಿಥಿಲವಾಗಿದೆ. ಈ ಮನೆಯನ್ನು ಒಡೆದು ಹೊಸದಾಗಿ ಮನೆ ನಿರ್ಮಿಸಲು ಯೋಚಿಸಿದ್ದೇನೆ. ನಾನು ನಿವೇಶನ ಮಾರಾಟ ಮಾಡಿ ಬಂದ ಹಣದಿಂದ ಮನೆ ನಿರ್ಮಿಸಬಹುದೇ? ಬಂಡವಾಳ ವೃದ್ಧಿ ತೆರಿಗೆ ಬರುತ್ತದೆಯೇ? ಎಷ್ಟು ವರ್ಷದೊಳಗೆ ಮನೆ ನಿರ್ಮಿಸಬೇಕು?**

ಉತ್ತರ: ಆಸ್ತಿ ಅಥವಾ ಜಮೀನು ಮಾರಾಟದಿಂದ ಬರುವ ಬಂಡವಾಳ ಲಾಭದ ಮೇಲಿನ ತೆರಿಗೆಯು ಅದರ ಲಾಭದ ಸ್ವರೂಪದ ಮೇಲೆ ನಿರ್ಧಾರವಾಗುತ್ತದೆ. ಯಾವುದೇ ಸ್ಥಿರಾಸ್ತಿಯನ್ನು ಎರಡು ವರ್ಷಕ್ಕಿಂತ ಅಧಿಕ ಸಮಯ ಖರೀದಿದಾರರ ಹೆಸರಲ್ಲಿ ಹೊಂದಿದಾಗ ಅಂತಹ ಆಸ್ತಿ ದೀರ್ಘಾವಧಿ ಬಂಡವಾಳ ಆಸ್ತಿಯಾಗಿ ಪರಿಗಣಿತವಾಗುತ್ತದೆ. ಮಾರಾಟ ಮಾಡಿದಾಗ ಬರುವ ಸ್ಥಿರ ಆಸ್ತಿಯ ಮೇಲಿನ ಲಾಭ, ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 112 ಅಡಿಯಲ್ಲಿ ಹಣದುಬ್ಬರ ಸೂಚ್ಯಂಕ ಪ್ರಯೋಜನದೊಂದಿಗೆ ಶೇ 20ರ ಮೂಲ ತೆರಿಗೆಗೆ ಒಳಪಡುತ್ತದೆ.

ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54ರ ಪ್ರಕಾರ, ಮಾರಾಟ ಆದಾಗಿನಿಂದ ಎರಡು ವರ್ಷದೊಳಗೆ ಹೊಸ ಮನೆ ಖರೀದಿ ಮಾಡಬಹುದು ಅಥವಾ ಮೂರು ವರ್ಷದೊಳಗೆ ಹೊಸ ಮನೆ ನಿರ್ಮಾಣ ಮಾಡಬಹುದು. ನಿರ್ಮಾಣ ಕೆಲಸದ ಆರಂಭ ಇನ್ನೂ ನಿರ್ಧಾರವಾಗದಿದ್ದರೆ, ಆಸ್ತಿ ಮಾರಾಟದಿಂದ ಬಂದ ಮೊತ್ತವನ್ನು 'ಕ್ಯಾಪಿಟಲ್ ಗೇನ್ಸ್ ಅಕೌಂಟ್ ಸ್ಕೀಂ' ಖಾತೆಯಲ್ಲಿ (ಇದನ್ನು ನಿಗದಿತ ಬ್ಯಾಂಕ್ ಶಾಖೆಗಳಲ್ಲಿ ತೆರೆಯಬಹುದು) ಇರಿಸಿ, ಮೇಲೆ ಉಲ್ಲೇಖಿಸಿರುವ ಸಮಯದೊಳಗೆ ಮನೆ ಖರೀದಿಗೆ ಅಥವಾ ನಿರ್ಮಾಣಕ್ಕೆ ಉಪಯೋಗಿಸಲು ಅವಕಾಶವಿದೆ.

ನೀವು 2004ರಲ್ಲೇ ನಿವೇಶನ ಖರೀದಿಸಿರುವುದರಿಂದ ಅದರ ಮಾರಾಟದಿಂದ ಬರುವ ಲಾಭ-ನಷ್ಟ, ದೀರ್ಘಾವಧಿ ಬಂಡವಾಳ ಲಾಭ ಅಥವಾ ನಷ್ಟ ಆಗಿರುತ್ತದೆ. ನೀವು ನಿವೇಶನ ಖರೀದಿ ಮಾಡಿದ ದಾಖಲೆಗಳ ಆಧಾರದ ಮೇಲೆ, ಖರೀದಿ ಹಾಗೂ ಮಾರಾಟ ಮಾಡುವ ವರ್ಷಕ್ಕೆ ಅನ್ವಯಿಸುವ ಹಣದುಬ್ಬರ ಸೂಚ್ಯಂಕ ಗೊತ್ತುಮಾಡಿ. ಅದರ ಆಧಾರದ ಮೇಲೆ ನಿಮ್ಮ ನಿವೇಶನದ ಪ್ರಸ್ತುತ ಮೌಲ್ಯ ಏನೆಂಬುದನ್ನು ನಿರ್ಧರಿಸಿ ಮಾರಾಟ ಬೆಲೆಗೆ ಇರುವ ವ್ಯತ್ಯಾಸದ ಆಧಾರದ ಮೇಲೆ ಲಾಭ-ನಷ್ಟ ನಿರ್ಣಯವಾಗುತ್ತದೆ. ನಿಮ್ಮ ವಿಚಾರದಲ್ಲಿ ತೆರಿಗೆ ಲೆಕ್ಕ ಹಾಕಲು, ಅಗತ್ಯ ದಾಖಲೆ ಹಾಗೂ ಖರೀದಿ-ಮಾರಾಟ ಮೌಲ್ಯದ ಮಾಹಿತಿಯೊಂದಿಗೆ ಪ್ರತ್ಯೇಕ ತೆರಿಗೆ ಸಲಹೆ ಪಡೆದುಕೊಳ್ಳಿ. ತೆರಿಗೆ ವಿಚಾರಕ್ಕೆ ಸಂಬಂಧಪಟ್ಟು, ಹಳೆಯ ಮನೆ ಒಡೆದು ಹೊಸ ಮನೆಯ ನಿರ್ಮಾಣಕ್ಕೆ ಅವಕಾಶವಿದೆ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್:businessdesk@prajavani.co.in

ಸಿಮೆಂಟ್ ಕಾರ್ಖಾನೆ: ಗುತ್ತಿಗೆ ಕಾರ್ಮಿಕರ ವೇತನ ಪರಿಷ್ಕರಣೆಗೆ ಸೂಚನೆ

ಕಲಬುರಗಿ: 'ಸಿಮೆಂಟ್ ವೇತನ ಮಂಡಳಿ ನಿಗದಿಪಡಿಸಿದ ವೇತನವನ್ನು ಸಿಮೆಂಟ್ ಕಾರ್ಖಾನೆಗಳಲ್ಲಿ ಕೆಲಸ ಮಾಡುವ ಗುತ್ತಿಗೆ ಕಾರ್ಮಿಕರಿಗೂ ಪಾವತಿಸಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಕೇಂದ್ರ ಕಾರ್ಮಿಕ ಇಲಾಖೆ ಆದೇಶಿಸಿದೆ' ಎಂದು ಅಲ್ಟ್ರಾ ಟೆಕ್ ಸಿಮೆಂಟ್ ಗುತ್ತಿಗೆ ಕಾರ್ಮಿಕರ ಸಂಘದ ಸಂಸ್ಥಾಪಕ ಅಧ್ಯಕ್ಷ ರಮಾಕಾಂತ ಕುಲಕರ್ಣಿ ಹೇಳಿದ್ದಾರೆ.

'ವೇತನ ಮಂಡಳಿ ನಿಗದಿಪಡಿಸಿದ ಸಂಬಳಕ್ಕಾಗಿ ದಶಕಗಳಿಂದ ಹೋರಾಟ ಮಾಡಿಕೊಂಡು ಬರಲಾಗುತ್ತಿತ್ತು. ನಮ್ಮ ಹೋರಾಟಕ್ಕೆ ಕಾರ್ಮಿಕ ಇಲಾಖೆ ಸ್ಪಂದಿಸಿದೆ. ಸಿಮೆಂಟ್ ಕಾರ್ಖಾನೆಗಳಲ್ಲಿ ಕಾಯಂ ಕಾರ್ಮಿಕರ ಸಮನಾಗಿ ಗುತ್ತಿಗೆ ಕಾರ್ಮಿಕರಿಗೂ ವೇತನ ನೀಡಲು ಅಗತ್ಯ ಕ್ರಮ ತೆಗೆದುಕೊಳ್ಳಬೇಕು ಎಂದು ಎಲ್ಲ ರಾಜ್ಯಗಳ ಮುಖ್ಯಸ್ಥರಿಗೆ ಆದೇಶ ಪತ್ರದಲ್ಲಿ ನಿರ್ದೇಶಿಸಲಾಗಿದೆ' ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವೀಸಾ: 2ನೇ ಕಾರ್ಯಕ್ರಮಕ್ಕೆ ಬ್ರಿಟನ್ ಚಾಲನೆ

ಲಂಡನ್(ಪಿಟಿಐ): ಬ್ರಿಟನ್- ಭಾರತ ಯುವ ವೃತ್ತಿಪರರ ಯೋಜನೆಯಡಿ ಭಾರತೀಯರಿಗೆ ವಿಶೇಷ ವೀಸಾ ನೀಡುವ ಎರಡನೇ ಕಾರ್ಯಕ್ರಮಕ್ಕೆ ಮಂಗಳವಾರ ಚಾಲನೆ ನೀಡಲಾಗಿದೆ.

ಈ ಬಗ್ಗೆ ನವದೆಹಲಿಯಲ್ಲಿರುವ ಬ್ರಿಟಿಷ್ ಹೈಕಮಿಷನ್ ಟ್ವೀಟ್ ಮಾಡಿದೆ.

'18ರಿಂದ 30 ವರ್ಷ ವಯೋಮಾನದ, ಪದವೀಧರರಿಗೆ ವೀಸಾ ನೀಡುವ ಈ ಕಾರ್ಯಕ್ರಮ ಜುಲೈ 27ರಂದು ಮುಕ್ತಾಯಗೊಳ್ಳುವುದು. ಬ್ರಿಟನ್‌ನಲ್ಲಿ ಎರಡು ವರ್ಷಗಳ ಕಾಲ ವಾಸಿಸಲು, ಉದ್ಯೋಗ ಹೊಂದಲು ಅಥವಾ ಅಧ್ಯಯನ ಕೈಗೊಳ್ಳಲು ಈ ಕಾರ್ಯಕ್ರಮ ಭಾರತೀಯರಿಗೆ ಅವಕಾಶ ಒದಗಿಸುತ್ತದೆ' ಎಂದು ಹೇಳಿದೆ.

ಕಳೆದ ವರ್ಷ ನವೆಂಬರ್‌ನಲ್ಲಿ ಇಂಡೊನೇಷ್ಯಾದಲ್ಲಿ ನಡೆದಿದ್ದ ಜಿ-20 ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹಾಗೂ ಬ್ರಿಟನ್ ಪ್ರಧಾನಿ ರಿಷಿ ಸುನಕ್ ಅವರು ಈ ಸಂಬಂಧ ಒಪ್ಪಂದಕ್ಕೆ ಸಹಿ ಹಾಕಿದ್ದರು.

ಭಾರತದಲ್ಲಿ ವಾಸಿಸಲು ಹಾಗೂ ಉದ್ಯೋಗ ಕೈಗೊಳ್ಳಲು ಬ್ರಿಟನ್ ಪ್ರಜೆಗಳಿಗೂ ಇಂತಹ ವೀಸಾ ನೀಡಲಾಗುತ್ತದೆ.

ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ)ವೇಗ ನೀಡುವ ಪ್ರಯತ್ನ ಭಾಗವಾಗಿ ಈ ಕಾರ್ಯಕ್ರಮ ರೂಪಿಸಲಾಗಿದೆ ಎನ್ನಲಾಗುತ್ತಿದೆ. ಎಫ್‌ಟಿಎಗೆ ಸಂಬಂಧಿಸಿ ಉಭಯ ದೇಶಗಳ ನಡುವೆ ಈಗಾಗಲೇ 11 ಸುತ್ತುಗಳ ಮಾತುಕತೆ ನಡೆದಿದೆ.

ಚೀನಾ: ಸಚಿವ ಕ್ವಿನ್ ವಜಾ, ವಾಂಗ್ ಯಿಗೆ ಪಟ್ಟ



ವಾಂಗ್ ಯಿ

ಬೀಜಿಂಗ್ (ರಾಯಿಟರ್ಸ್): ಹಿರಿಯ ರಾಜತಾಂತ್ರಿಕ ಅಧಿಕಾರಿ ವಾಂಗ್ ಯಿ ಅವರನ್ನು ನೂತನ ವಿದೇಶಾಂಗ ಸಚಿವರಾಗಿ ಚೀನಾ ಆಡಳಿತ ಮಂಗಳವಾರ ನೇಮಕ ಮಾಡಿದೆ.

ಪ್ರಸ್ತುತ ವಿದೇಶಾಂಗ ಸಚಿವರಾಗಿದ್ದ ಕ್ವಿನ್ ಗಾಂಗ್ ಅವರು ಒಂದು ತಿಂಗಳಿಂದ ಕರ್ತವ್ಯವಿಮುಖರಾಗಿದ್ದು, ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ. ಈ ಕಾರಣದಿಂದ ಅವರನ್ನು ಕೈಬಿಟ್ಟು ಈಹಿಂದೆ ವಿದೇಶಾಂಗ ಸಚಿವರಾಗಿದ್ದ ವಾಂಗ್ ಯಿ ಅವರನ್ನೇ ನೇಮಿಸಲಾಗಿದೆ.

ಅಧ್ಯಕ್ಷ ಷಿ ಜಿನ್‌ಪಿಂಗ್ ಅವರ ಆಪ್ತರಾಗಿರುವ 57 ವರ್ಷದ ಕ್ವಿನ್ ಗಾಂಗ್ ಅಮೆರಿಕದ ರಾಜತಾಂತ್ರಿಕರಾಗಿದ್ದರು. ಕಳೆದ ಡಿಸೆಂಬರ್‌ನಲ್ಲಿ ವಿದೇಶಾಂಗ ಸಚಿವರಾಗಿದ್ದರು. ಆದರೆ, ಜೂನ್ 25ರಿಂದ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ. ಅನಾರೋಗ್ಯದ ಕಾರಣ ಕರ್ತವ್ಯದಿಂದ ದೂರವುಳಿದಿದ್ದಾರೆ ಎಂದು ಸಚಿವಾಲಯ ಸ್ಪಷ್ಟನೆ ನೀಡಿದ್ದರೂ, ವಿವರಗಳನ್ನು ನೀಡಿರಲಿಲ್ಲ. ಇದು ರಾಜಕೀಯವಾಗಿ ಹಲವು ಊಹಾಪೋಹಗಳಿಗೆ ಆಸ್ಪದವಾಗಿತ್ತು.

ವಾಂಗ್ ಯಿ ಅವರು 2013-2022ರವರೆಗೆ ರಾಜತಾಂತ್ರಿಕರಾಗಿದ್ದರು. ಜೊಹಾನಸ್‌ಬರ್ಗ್‌ನಲ್ಲಿ ನಡೆದಿದ್ದ ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ರಾಷ್ಟ್ರೀಯ ಭದ್ರತಾ ಸಲಹೆಗಾರರ ಸಭೆಯಲ್ಲಿ ಕ್ವಿನ್ ಅನುಪಸ್ಥಿತಿಯಲ್ಲಿ ಚೀನಾ ಪ್ರತಿನಿಧಿಸಿದ್ದರು.

ವಿದೇಶಾಂಗ ಸಚಿವ ಸ್ಥಾನದಿಂದ ಕ್ವಿನ್ ಅವರ ಪದಚ್ಯುತಿಗೆ ಕಾರಣಗಳನ್ನು ಸರ್ಕಾರದ ಅಧಿಕೃತ ಮಾಧ್ಯಮವೂ ವರದಿ ಮಾಡಿಲ್ಲ.

ಅಜಿತ್ ಡೊಭಾಲ್– ವಾಂಗ್ ಯಿ ಭೇಟಿ

ಜೊಹಾನಸ್‌ಬರ್ಗ್ (ಪಿಟಿಐ): ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಅವರು ಚೀನಾದ ಉನ್ನತ ರಾಜತಾಂತ್ರಿಕ ಅಧಿಕಾರಿ ವಾಂಗ್ ಯಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ನೆಮ್ಮದಿಯ ಪುನರ್‌ಸ್ಥಾಪನೆಗೆ ಇನ್ನಷ್ಟು ಪ್ರಯತ್ನಿಸಬೇಕಾದ ಅಗತ್ಯವಿದೆ ಮತ್ತು ಉಭಯ ದೇಶಗಳ ನಡುವೆ ಸಹಜ ದ್ವಿಪಕ್ಷೀಯ ಸಂಬಂಧ ಮುಂದುವರಿಕೆಗೆ ಇರುವ ಅಡೆತಡೆಗಳನ್ನು ನಿವಾರಿಸಬೇಕಿದೆ ಎಂದು ಅಭಿಪ್ರಾಯಪಟ್ಟರು. ದಕ್ಷಿಣ ಆಫ್ರಿಕಾದಲ್ಲಿ ಸೋಮವಾರ ಬ್ರಿಕ್ಸ್ (ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ಆಫ್ರಿಕಾ) ದೇಶಗಳ ಸಭೆ ನಡೆದ ನಂತರ ಭಾರತ-ಚೀನಾ ದೇಶಗಳ ನಾಯಕರು ಭೇಟಿಯಾಗಿ ಚರ್ಚಿಸಿದರು.

ಹೊಸ ಕಾನೂನು ಜಾರಿಗೆ ಶಿಫಾರಸು



ಜೋ ಬೈಡನ್

ವಾಷಿಂಗ್ಟನ್ (ಎಪಿ): ಮಾನಸಿಕ ಆರೋಗ್ಯದ ಚಿಕಿತ್ಸೆಗೆ ನೀಡುವ ನೆರವನ್ನು ಹೆಚ್ಚಿಸಲು ವಿಮಾ ಕಂಪನಿಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ ಅಧ್ಯಕ್ಷ ಜೋ ಬೈಡನ್ ಸರ್ಕಾರ ಮಂಗಳವಾರ ನೂತನ ನಿಯಮಗಳನ್ನು ಘೋಷಿಸಿದೆ.

ಹೊಸ ನಿಯಮಾವಳಿ ಅಸ್ತಿತ್ವಕ್ಕೆ ಬಂದರೆ, ಗ್ರಾಹಕರಿಗೆ ದೈಹಿಕ ಮತ್ತು ಮಾನಸಿಕ ಆರೋಗ್ಯ ಸೌಲಭ್ಯಗಳು ಸಮಾನವಾಗಿ ಲಭ್ಯವಿವೆಯೇ ಎಂಬ ಬಗ್ಗೆ ವಿಮೆದಾರರು ಅಧ್ಯಯನ ಮಾಡಬೇಕಾಗುತ್ತದೆ.

ವಿಮೆದಾರರು ಮಾನಸಿಕ ಮತ್ತು ದೈಹಿಕ ಆರೋಗ್ಯ ಚಿಕಿತ್ಸೆ ಎರಡಕ್ಕೂ ಸಮಾನ ರಕ್ಷಣೆ ಒದಗಿಸಬೇಕು ಎಂದು ಕಾಯ್ದೆಯೊಂದು ಹೇಳುತ್ತದೆ. ಆದಾಗ್ಯೂ ವಿಮಾ ಕಂಪನಿಗಳು ಸಮಾನ ಪ್ರಾತಿನಿಧ್ಯ ನೀಡುತ್ತಿಲ್ಲ ಎಂದು ಆಡಳಿತ ಮತ್ತು ವಕೀಲರು ವಾದಿಸುತ್ತಾರೆ.

ಫೇಸ್‌ಬುಕ್‌ನಲ್ಲಿ ಪರಿಚಯ: ಇಸ್ಲಾಂ ಧರ್ಮಕ್ಕೆ ಮತಾಂತರ

ಪಾಕ್ ಗೆಳೆಯನನ್ನು ವರಿಸಿದ ಭಾರತದ ಅಂಜು

ಪೇಶಾವರ (ಪಿಟಿಐ): ಭಾರತದಿಂದ ಪಾಕಿಸ್ತಾನಕ್ಕೆ ತೆರಳಿದ್ದ ವಿವಾಹಿತ ಮಹಿಳೆ ಅಂಜು ಅವರು ಮಂಗಳವಾರ ತನ್ನ ಫೇಸ್‌ಬುಕ್ ಗೆಳೆಯನನ್ನು ಮದುವೆ ಆಗಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮದುವೆಗೂ ಮುನ್ನ ಅಂಜು ಇಸ್ಲಾಂ ಧರ್ಮಕ್ಕೆ ಮತಾಂತರಗೊಂಡು, ತಮ್ಮ ಹೆಸರನ್ನು ಫಾತಿಮಾ ಎಂದು ಬದಲಾಯಿಸಿಕೊಂಡಿದ್ದಾರೆ ಎಂದೂ ಹೇಳಿವೆ.

ಎರಡು ಮಕ್ಕಳ ತಾಯಿಯಾಗಿರುವ 34 ವರ್ಷದ ಅಂಜು ಅವರು 29 ವರ್ಷದ ಫೇಸ್‌ಬುಕ್ ಗೆಳೆಯ ನಸ್ರುಲ್ಲಾ ಅವರನ್ನು ಭೇಟಿಯಾಗಲು ಪಾಕಿಸ್ತಾನದ ಖೈಬರ್ ಪಖ್ತುಂಕ್ವಾ ಪ್ರಾಂತ್ಯದ ಅಪ್ಪರ್ ದಿರ್ ಜಿಲ್ಲೆಯಲ್ಲಿರುವ ಆತನ ಮನೆಗೆ ತೆರಳಿದ್ದರು.

ಸ್ಥಳೀಯ ನ್ಯಾಯಾಲಯದಲ್ಲಿ ಬಿಗಿ ಭದ್ರತೆಯ ನಡುವೆ ಅಂಜು ಮತ್ತು ನಸ್ರುಲ್ಲಾ ಅವರು ಮದುವೆಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ.



ಪಾಕಿಸ್ತಾನದ ಖೈಬರ್ ಪಖ್ತುಂಕ್ವಾ ಪ್ರಾಂತ್ಯದ ಅಪ್ಪರ್ ದಿರ್ ಜಿಲ್ಲೆಯ ಪ್ರೇಕ್ಷಣೀಯ ಸ್ಥಳಕ್ಕೆ ಭೇಟಿ ನೀಡಿದ ಅಂಜು ಮತ್ತು ನಸ್ರುಲ್ಲಾ –ಪಿಟಿಐ ಚಿತ್ರ

'ಅಂಜು ಮತ್ತು ನಸ್ರುಲ್ಲಾ ಅವರು ಕುಟುಂಬ ಸದಸ್ಯರ ಜೊತೆಗೆ ನ್ಯಾಯಾಲಯಕ್ಕೆ ಬಂದಿದ್ದರು ಮತ್ತು ಅಲ್ಲಿ ವಿವಾಹಿತರಾಗಿದ್ದಾರೆ' ಎಂದು ಮಲಕಂದ್ ವಿಭಾಗದ ಡಿಐಜಿ ನಾಸಿರ್ ಮೆಹಮೂದ್ ಸತ್ತಿ ಅವರು ಖಚಿತಪಡಿಸಿರುವುದಾಗಿ 'ಜಿಯೊ ನ್ಯೂಸ್' ವರದಿ ಮಾಡಿದೆ.

'ತಾನು ಸ್ವ ಇಚ್ಛೆಯಿಂದ ಪಾಕಿಸ್ತಾನಕ್ಕೆ ಬಂದಿದ್ದು, ಇಲ್ಲಿ ಖುಷಿಯಾಗಿದ್ದೇನೆ' ಎಂದು ಅಂಜು ನ್ಯಾಯಾಲಯಕ್ಕೆ ತಿಳಿಸಿರುವುದಾಗಿಯೂ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಪಾಕಿಸ್ತಾನದಲ್ಲಿ ತಾನು ಸುರಕ್ಷಿತವಾಗಿರುವುದಾಗಿ ಹೇಳಿರುವ ಕಿರು ವಿಡಿಯೊವೊಂದನ್ನು ಅಂಜು ಮದುವೆಗೂ ಮುನ್ನ ಹಂಚಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಕಾನೂನುಬದ್ಧವಾಗಿಯೇ ಇಲ್ಲಿಗೆ ಬಂದಿದ್ದೇನೆ' ಎಂದು ವಿಡಿಯೋದಲ್ಲಿ ಹೇಳಿರುವ ಅವರು, ನನ್ನ ಸಂಬಂಧಿಕರಿಗೆ ಮತ್ತು ಮಕ್ಕಳಿಗೆ ಕಿರುಕುಳ ನೀಡಬೇಡಿ ಎಂದು ಮಾಧ್ಯಮದವರಿಗೆ ಮನವಿ ಮಾಡಿದ್ದಾರೆ ಎಂದಿವೆ. ರಾಜಸ್ಥಾನದ ಅಲ್ವಾರ್ ಜಿಲ್ಲೆಯ ಅಂಜು ಅವರಿಗೆ 15 ವರ್ಷದ ಮಗಳು ಹಾಗೂ ಆರು ವರ್ಷದ ಮಗನಿದ್ದಾನೆ.

'ಆಕೆ ಸತ್ತಂತೆ' (ಗ್ವಾಲಿಯರ್ ವರದಿ): 'ನಮ್ಮ ಪಾಲಿಗೆ ಆಕೆ ಸತ್ತಂತೆ. ಇಬ್ಬರು ಮಕ್ಕಳ ಭವಿಷ್ಯವನ್ನು ಅವಳು ಹಾಳುಗೆಡುವಿದಳು' ಎಂದು ಅಂಜು ಅವರ ತಂದೆ ಗಯಾ ಪ್ರಸಾದ್ ಥಾಮಸ್ ಪ್ರತಿಕ್ರಿಯಿಸಿದ್ದಾರೆ.

'ಅವಳು ಮೊದಲು ಪತಿಗೆ ವಿಚ್ಛೇದನ ನೀಡಬೇಕಿತ್ತು. ಇನ್ನು ನಮ್ಮ ಪಾಲಿಗೆ ಆಕೆ ಇಲ್ಲದಂತೆಯೇ ಸರಿ' ಎಂದಿದ್ದಾರೆ.

ಅಡಕತ್ತರಿಗೆ ಎನ್‌ಡಿಎ ಸಿಲುಕಿಸಲು ರಣತಂತ್ರ: ಸುದೀರ್ಘ ಚರ್ಚೆಗೆ ಸಿದ್ಧವೆಂದ ಕೇಂದ್ರ ಸರ್ಕಾರ

ಅವಿಶ್ವಾಸಕ್ಕೆ 'ಇಂಡಿಯಾ' ಸಜ್ಜು

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಂಗಾರು ಅಧಿವೇಶನದ ನಾಲ್ಕನೇ ದಿನವಾದ ಮಂಗಳವಾರವೂ ಸಂಸತ್‌ನಲ್ಲಿ ಮಣಿಪುರದಲ್ಲಿನ ಹಿಂಸಾಚಾರ ಪ್ರಕರಣ ಪ್ರತಿಧ್ವನಿಸಿತು.

ಪ್ರಧಾನಿ ನರೇಂದ್ರ ಮೋದಿ ಅವರು ಈ ಸಂಬಂಧ ಹೇಳಿಕೆ ನೀಡಬೇಕೆಂಬ ವಿರೋಧ ಪಕ್ಷಗಳ ಬಿಗಿಪಟ್ಟು ಸಡಿಲಗೊಳ್ಳಲಿಲ್ಲ. ಹಾಗಾಗಿ, ಬಿಜೆಪಿ ಮತ್ತು 'ಇಂಡಿಯಾ' ನಡುವಿನ ಗದ್ದಲವು ಉಭಯ ಸದನಗಳ ಕಲಾಪವನ್ನು ನುಂಗಿ ಹಾಕಿತು. ಕೋಲಾಹಲ ಮುಂದುವರಿದಿದ್ದರಿಂದ ಬುಧವಾರಕ್ಕೆ ಕಲಾಪವನ್ನು ಮುಂದೂಡಲಾಯಿತು.

ಮೋದಿ ಹೇಳಿಕೆ ನೀಡಬೇಕು ಎಂಬುದು ಪ್ರತಿಪಕ್ಷಗಳ ಮುಖ್ಯ ಬೇಡಿಕೆಯಾಗಿದೆ. ಇದಕ್ಕೆ ಒಪ್ಪಿಗೆ ನೀಡಲು ಕೇಂದ್ರ ಸರ್ಕಾರ ನಿರಾಕರಿಸಿದೆ. ಹಾಗಾಗಿ, ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ಎನ್‌ಡಿಎ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪಣ ತೊಟ್ಟಿರುವ 'ಇಂಡಿಯಾ'ವು, ಲೋಕಸಭೆಯಲ್ಲಿ ಅವಿಶ್ವಾಸ ನಿರ್ಣಯ ಮಂಡನೆಗೆ ರಣತಂತ್ರ ರೂಪಿಸಿದೆ. ಬಳಿಕ ರಾಜ್ಯಸಭೆಯಲ್ಲಿಯೂ ಇದೇ ತಂತ್ರ ಹೂಡಲು ತೀರ್ಮಾನಿಸಿದೆ ಎಂದು ಮೂಲಗಳು ತಿಳಿಸಿವೆ.

ಬೆಳಿಗ್ಗೆ ನಡೆದ 'ಇಂಡಿಯಾ' ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಈ ಕುರಿತು ತೃಣಮೂಲ ಕಾಂಗ್ರೆಸ್ ಹಾಗೂ ಡಿಎಂಕೆ ನಾಯಕರ ಜೊತೆ ಔಪಚಾರಿಕವಾಗಿ ಚರ್ಚಿಸಿದರು. ಉಳಿದ ಪ್ರತಿಪಕ್ಷಗಳ ಮುಂದೆಯೂ ಈ ಪ್ರಸ್ತಾವ ಮಂಡಿಸಲು ನಿರ್ಧರಿಸಿದ್ದಾರೆ.

ಕಲಾಪ ಆರಂಭಕ್ಕೂ ಮೊದಲು ಬೆಳಿಗ್ಗೆ 10ಗಂಟೆಗೆ ಈ ಕುರಿತು ಸದಸ್ಯರು ಲಿಖಿತ ಸೂಚನೆ ನೀಡಬೇಕಿದೆ. ಕನಿಷ್ಠ 50 ಸದಸ್ಯರು ಈ ಪ್ರಸ್ತಾವನೆಯನ್ನು ಅಂಗೀಕರಿಸಬೇಕಿದೆ. ಬಳಿಕ ಇದು ಸಮರ್ಪಕವಾಗಿದ್ದರೆ ಸ್ಪೀಕರ್ ಅವರು ಪ್ರಸ್ತಾವನೆಯ ಚರ್ಚೆಗೆ ದಿನಾಂಕ ನಿಗದಿಪಡಿಸುತ್ತಾರೆ. ಹಾಗಾಗಿ, ವಿಳಂಬ ಮಾಡದೆ ಬುಧವಾರವೇ ಈ ಪ್ರಕ್ರಿಯೆಗೆ ಚಾಲನೆ ನೀಡಲು ಪ್ರತಿಪಕ್ಷಗಳು ನಿರ್ಧರಿಸಿವೆ ಎಂದು ಮೂಲಗಳು ತಿಳಿಸಿವೆ. 'ಈ ಸಂಬಂಧ ಪ್ರಕ್ರಿಯೆಗಳು ನಡೆಯುತ್ತಿವೆ' ಎಂದು ಪ್ರತಿಪಕ್ಷದ ನಾಯಕರೊಬ್ಬರು ತಿಳಿಸಿದ್ದಾರೆ. ಈ ನಡುವೆ ತನ್ನ ಸದಸ್ಯರಿಗೆ ಕಾಂಗ್ರೆಸ್ ವಿಪ್ ಜಾರಿಗೊಳಿಸಿದೆ. 'ನಾವು ಎಲ್ಲಾ ಮಾರ್ಗಗಳನ್ನು ಅನುಸರಿಸಿದ್ದೇವೆ. ಸದ್ಯಕ್ಕೆ ನಮ್ಮ ಮುಂದಿರುವುದು ಇದೊಂದೇ ಆಯ್ಕೆ. ದೇಶದ ಜನರಿಗೆ ವಾಸ್ತವಾಂಶವನ್ನು ಮನವರಿಕೆ ಮಾಡಿಕೊಡಲು ಇದು ಬಿಟ್ಟರೆ ಬೇರೆ ದಾರಿ ಇಲ್ಲ. ಅದಕ್ಕಾಗಿ ಈ ಹಾದಿ ತುಳಿದಿದ್ದೇವೆ. ಮೋದಿ ಸದನಕ್ಕೆ ಬಂದು ಹೇಳಿಕೆ ನೀಡುತ್ತಾರೆಂಬ ನಂಬಿಕೆಯಿದೆ' ಎಂದು 'ಇಂಡಿಯಾ'ದ ನಾಯಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಲೋಕಸಭೆಯ ಕಲಾಪದಲ್ಲಿ ಮಂಗಳವಾರ ವಿಪಕ್ಷಗಳ ಸದಸ್ಯರ ಪ್ರತಿಭಟನೆ ನಡುವೆಯೇ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾತನಾಡಿದರು –ಪಿಟಿಐ ಚಿತ್ರ

ವಿಪಕ್ಷ ನಾಯಕರಿಗೆ ಅಮಿತ್ ಶಾ ಪತ್ರ

ನವದೆಹಲಿ (ಪಿಟಿಐ): ಮಣಿಪುರ ವಿಷಯಕ್ಕೆ ಸಂಬಂಧಿಸಿದಂತೆ ನಿಮ್ಮ ಅಪೇಕ್ಷೆಯಂತೆಯೇ ಸಂಸತ್‌ನಲ್ಲಿ ಸುದೀರ್ಘ ಚರ್ಚೆ ನಡೆಸಲು ಸರ್ಕಾರ ಸಿದ್ಧವಿದೆ ಎಂದು ವಿರೋಧ ಪಕ್ಷಗಳ ನಾಯಕರಿಗೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಪತ್ರ ಬರೆದಿದ್ದಾರೆ.

ಲೋಕಸಭೆಯಲ್ಲಿ ಮಂಡನೆಯಾದ ಬಹು ರಾಜ್ಯಗಳ ಸಹಕಾರ ಸಂಘಗಳ (ತಿದ್ದುಪಡಿ) ಮಸೂದೆಗೆ ಸಂಬಂಧಿಸಿದಂತೆ ನಡೆದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, 'ಮಣಿಪುರ ವಿಷಯದಲ್ಲಿ ಸರ್ಕಾರ ಏನನ್ನೂ ಬಚ್ಚಿಟ್ಟಿಲ್ಲ. ನಮಗೆ ಅದರ ಭಯವೂ ಇಲ್ಲ. ನೀವು ಇಚ್ಛಿಸುವಷ್ಟು ಅವಧಿವರೆಗೂ ಚರ್ಚೆಗೆ ಸಿದ್ಧವಿದ್ದೇವೆ' ಎಂದು ಪುನರುಚ್ಚರಿಸಿದರು.

ಬಳಿಕ ಧ್ವನಿ ಮತದ ಮೂಲಕ ಮಸೂದೆಗೆ ಅಂಗೀಕಾರ ನೀಡಲಾಯಿತು.

ಚರ್ಚೆಗೆ ಮಲ್ಲಿಕಾರ್ಜುನ ಖರ್ಗೆ ಪಟ್ಟು



ನವದೆಹಲಿ (ಪಿಟಿಐ): ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ 27 ಸಂಸದರು ನಿಯಮ 267ರ ಅಡಿ ಚರ್ಚೆಗೆ ರಾಜ್ಯಸಭೆಯಲ್ಲಿ ಅವಕಾಶ ನೀಡುವಂತೆ ನೋಟಿಸ್ ಸಲ್ಲಿಸಿದ್ದಾರೆ. ಇದರನ್ವಯ ಸದನದಲ್ಲಿ ಎಲ್ಲಾ ವಿಷಯಗಳನ್ನು ಬದಿಗೊತ್ತಿ ನಿರ್ದಿಷ್ಟ ವಿಷಯ ಕುರಿತು ಚರ್ಚಿಸಬೇಕಾಗುತ್ತದೆ.

ಆದರೆ, ಕೇಂದ್ರ ಸರ್ಕಾರವು ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದೆ. ನಿಯಮ 176ರ ಅಡಿ ಚರ್ಚೆಗೆ ಸಿದ್ಧವಿರುವುದಾಗಿ ಹೇಳಿದೆ. ಇದು ಅಲ್ಪಾವಧಿಯ ಚರ್ಚೆಗೆ ಅವಕಾಶ ಕಲ್ಪಿಸುವುದರಿಂದ 'ಇಂಡಿಯಾ' ತೀವ್ರ ವಿರೋಧ ವ್ಯಕ್ತಪಡಿಸಿದೆ. ಸಂಘರ್ಷದ ಬಗ್ಗೆ ಮೋದಿ ನಿರ್ಲಕ್ಷ್ಯವಹಿಸಿರುವುದು ಆಘಾತಕಾರಿಯಾಗಿದೆ. ಹಿಂಸಾಚಾರ ನಿಯಂತ್ರಿಸುವಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಸೋತಿದ್ದಾರೆ. ಅವರು ಅಲ್ಲಿಗೆ ಭೇಟಿ ನೀಡಿದ ಹೊರತಾಗಿಯೂ ಶಾಂತಿ ಪುನರ್ ಸ್ಥಾಪಿಸುವ ಪ್ರಕ್ರಿಯೆಗಳು ಸಾಕಾರಗೊಂಡಿಲ್ಲ ಎಂದು ನೋಟಿಸ್‌ನಲ್ಲಿ ದೂರಲಾಗಿದೆ.

> **ಪ್ರಮುಖ ಮಸೂದೆಗಳ ಬಗ್ಗೆ ರಚನಾತ್ಮಕ ಚರ್ಚೆ ಇಲ್ಲದೆ ಅಂಗೀಕರಿಸಲು ಸರ್ಕಾರಕ್ಕೆ ಇಷ್ಟವಿಲ್ಲ. ಹಾಗಾಗಿ, ವಿಪಕ್ಷಗಳು ಚರ್ಚೆಯಲ್ಲಿ ಪಾಲ್ಗೊಳ್ಳಬೇಕಿದೆ**
> **ಪ್ರಲ್ಹಾದ ಜೋಶಿ,** ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ

ಮಣಿಪುರದ ಬಗ್ಗೆ ಮಾತನಾಡಲು ಖರ್ಗೆ ಆಗ್ರಹ

'ಕಾಂಗ್ರೆಸ್ ಭಾರತ ಮಾತೆ ಜೊತೆಗಿದೆ'

ನವದೆಹಲಿ (ಪಿಟಿಐ): ಪ್ರತಿಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಟೀಕಿಸಿರುವ ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ನಾಯಕರು ವಾಗ್ದಾಳಿ ನಡೆಸಿದ್ದಾರೆ.

'ನೀವು ಬಯಸಿದ ರೀತಿಯಲ್ಲಿ ನಮ್ಮನ್ನು ಕರೆಯಿರಿ. ಆದರೆ ನಾವು 'ಇಂಡಿಯಾ'. ಮಣಿಪುರದಲ್ಲಿ ನಮ್ಮ ಪರಿಕಲ್ಪನೆಯ ಭಾರತವನ್ನು ಮರುನಿರ್ಮಾಣ ಮಾಡುತ್ತೇವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಟ್ವೀಟ್ ಮಾಡಿದ್ದಾರೆ.

'ಮಣಿಪುರಕ್ಕೆ ಆಗಿರುವ ಗಾಯವನ್ನು ವಾಸಿ ಮಾಡಲು ನಾವು ನೆರವಾಗುತ್ತೇವೆ. ಅಲ್ಲಿನ ಪ್ರತಿ ಮಹಿಳೆ ಮತ್ತು ಮಗುವಿನ ಕಣ್ಣೀರು ಒರೆಸುತ್ತೇವೆ. ಮಣಿಪುರದ ಜನರಿಗೆ ಶಾಂತಿ ಮತ್ತು ಪ್ರೀತಿಯನ್ನು ಮರಳಿ ತರುತ್ತೇವೆ' ಎಂದೂ ರಾಹುಲ್ ಗಾಂಧಿ ಹೇಳಿದ್ದಾರೆ.

ರಾಜ್ಯಸಭೆಯಲ್ಲಿ ಮಾತನಾಡಿದ, ವಿರೋಧ ಪಕ್ಷದ ನಾಯಕರೂ ಆಗಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, 'ನಾವು ಹೊತ್ತಿ ಉರಿಯುತ್ತಿರುವ ಮಣಿಪುರದ ಬಗ್ಗೆ ಮಾತನಾಡುತ್ತಿದ್ದೇವೆ. ಆದರೆ, ಪ್ರಧಾನಿ ಮೋದಿ ಈಸ್ಟ್ ಇಂಡಿಯಾ (ಕಂಪನಿ) ಕುರಿತು ಮಾತನಾಡುತ್ತಿದ್ದು, 'ಇಂಡಿಯಾ' ಅಂದರೆ ಈಸ್ಟ್ ಇಂಡಿಯಾ ಕಂಪನಿ ಎಂಬುದಾಗಿ ಹೇಳುತ್ತಿದ್ದಾರೆ' ಎಂದು ಹೇಳಿದ್ದಾರೆ.

ಬಳಿಕ, ಈ ಮಾತುಗಳನ್ನೇ ಬಳಸಿ ಹಿಂದಿಯಲ್ಲಿ ಟ್ವೀಟ್ ಮಾಡಿರುವ ಅವರು, 'ಕಾಂಗ್ರೆಸ್ ಪಕ್ಷ ಯಾವಾಗಲೂ 'ಮದರ್ ಇಂಡಿಯಾ', ಅಂದರೆ, ಭಾರತ ಮಾತಾ ಜೊತೆಗಿದೆ' ಎಂದಿದ್ದಾರೆ.

> **ಈಸ್ಟ್ ಇಂಡಿಯಾ ಕಂಪನಿ ಮತ್ತು ಬ್ರಿಟಿಷರಿಗೆ ಸಹಾಯ ಮಾಡಿದ ಸಿದ್ಧಾಂತದೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವ ಅವರಿಗೇ (ಬಿಜೆಪಿ) ಯಾವುದೇ ಗೊತ್ತುಗುರಿ ಇಲ್ಲ**
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

'ಬಿಜೆಪಿ ಸ್ಥಾಪಕರು' ಬ್ರಿಟಿಷರ ಗುಲಾಮರಾಗಿದ್ದವರು. ಶಬ್ದಾಡಂಬರದಿಂದ ಕೂಡಿದ ನಿಮ್ಮ ಮಾತುಗಳ ಮೂಲಕ ದೇಶದ ಗಮನವನ್ನು ಬೇರೆಡೆ ಸೆಳೆಯುವುದನ್ನು ನಿಲ್ಲಿಸಿ ಪ್ರಧಾನ ಮಂತ್ರಿಗಳೇ' ಎಂದೂ ಟ್ವೀಟ್ ಮಾಡಿದ್ದಾರೆ.

'ಇಂಡಿಯಾ ಅಂದರೆ ಭಾರತ. ಅದು ಒಳ್ಳೆಯದೋ, ಕೆಟ್ಟದ್ದೋ ಎಂಬ ಬಗ್ಗೆ ಮಾತನಾಡುವ ಮೂಲಕ ಪ್ರಧಾನ ಮಂತ್ರಿ ಸ್ಥಾನಕ್ಕಿರುವ ಗೌರವವನ್ನು ಗೌಣ ಮಾಡಬೇಡಿ. ಸಂಸತ್‌ನಲ್ಲಿ ಮಣಿಪುರದ ಬಗ್ಗೆ ಮಾತನಾಡಿ' ಎಂದು ಖರ್ಗೆ ಟೀಕಿಸಿದ್ದಾರೆ.

ವಿಡಿಯೊ ಸಂದೇಶವೊಂದನ್ನು ಸಹ ಹಂಚಿಕೊಂಡಿರುವ ಖರ್ಗೆ, 'ಹೆಸರಿನಲ್ಲಿ ಏನೂ ಇಲ್ಲ ಎಂದು ಹೇಳುತ್ತಿರುವ ಪ್ರಧಾನಿ ಮೋದಿ ಅವರು ನಮ್ಮ ಮೈತ್ರಿಕೂಟದ ಹೆಸರು 'ಇಂಡಿಯಾ' ಎಂದಿರುವುದರಿಂದ ಯಾಕೆ ತಬ್ಬಿಬ್ಬುಗೊಂಡಿದ್ದಾರೆ' ಎಂದು ಪ್ರಶ್ನಿಸಿದ್ದಾರೆ.

'ಮೊದಲು ಪಟ್ನಾ, ನಂತರ ಬೆಂಗಳೂರಿನಲ್ಲಿ ನಡೆದ ವಿಪಕ್ಷಗಳ ಸಭೆ ಯಶಸ್ಸಿನಿಂದ ಬಿಜೆಪಿಯವರು ಗಾಬರಿಯಾಗಿದ್ದಾರೆ. ತಮ್ಮಲ್ಲಿ ಮನೆ ಮಾಡಿರುವ ಭಯದಿಂದಾಗಿಯೇ ಅವರು ಈಸ್ಟ್ ಇಂಡಿಯಾ ಕಂಪನಿ, ಇಂಡಿಯನ್ ಮುಜಾಹಿದೀನ್ ನೆನಪು ಮಾಡಿಕೊಂಡಿದ್ದಾರೆ' ಎಂದು ಖರ್ಗೆ ಕುಟುಕಿದ್ದಾರೆ. 'ಮಣಿಪುರದಲ್ಲಿನ ಪರಿಸ್ಥಿತಿ ಬಗ್ಗೆ ಪ್ರಧಾನಿ ಸಂಸತ್‌ನಲ್ಲಿ ಮಾತನಾಡಬೇಕು. ನಿಯಮ 267ರಡಿ ಚರ್ಚೆ ನಡೆಸಲು ನಾವು ಮನವಿ ಮಾಡಿದ್ದೇವೆ. ಚರ್ಚೆ ನಂತರ ಮತ ಚಲಾವಣೆಯೂ ನಡೆಯಲಿದೆ' ಎಂದು ಹೇಳಿದ್ದಾರೆ.

> **26 ವಿರೋಧ ಪಕ್ಷಗಳು ಸೇರಿಸಿ ರಚಿಸಿಕೊಂಡಿರುವ ಮೈತ್ರಿಕೂಟ 'ಇಂಡಿಯಾ'ದಿಂದಾಗಿ ಪ್ರಧಾನಿ ನರೇಂದ್ರ ಮೋದಿ ಗಾಬರಿಯಾಗಿರುವುದು ಸ್ಪಷ್ಟ**
> **ಜೈರಾಮ್ ರಮೇಶ್**
> ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

'ಮಣಿಪುರದಲ್ಲಿ ನಡೆಯುತ್ತಿರುವುದನ್ನು ರಾಜಸ್ಥಾನ, ಛತ್ತೀಸಗಡ, ಪಶ್ಚಿಮ ಬಂಗಾಳ ಮತ್ತು ಉತ್ತರ ಪ್ರದೇಶಗಳಲ್ಲಿನ ನಡೆದ ಘಟನೆಗಳೊಂದಿಗೆ ಹೋಲಿಕೆ ಮಾಡಲಾಗದು. ಇತರ ರಾಜ್ಯಗಳಲ್ಲಿನ ಘಟನೆಗಳ ಕುರಿತು ಆಯಾ ರಾಜ್ಯ ಸರ್ಕಾರಗಳು ತ್ವರಿತವಾಗಿ ಕ್ರಮ ಕೈಗೊಳ್ಳಬಹುದು. ಆದರೆ, ಇಡೀ ಮಣಿಪುರವೇ ಹೊತ್ತಿ ಉರಿಯುತ್ತಿದೆ. ಈಗ ಮೇಘಾಲಯ ಮತ್ತು ಮಿಜೋರಾಂನಲ್ಲಿಯೂ ಉದ್ವಿಗ್ನತೆ ಮನೆ ಮಾಡುತ್ತಿದೆ' ಎಂದು ಖರ್ಗೆ ಹೇಳಿದ್ದಾರೆ.

'ಇಂಡಿಯಾ' ಟೀಕಿಸಿದ ಮೋದಿ

ಒಂದನೇ ಪುಟದಿಂದ...

ಆಗಸ್ಟ್ 15ರಂದು ದೇಶದ ಉದ್ದಗಲಕ್ಕೂ 'ಹರ್ ಘರ್ ತಿರಂಗಾ' ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಪಕ್ಷದ ನಾಯಕರಿಗೆ ಮೋದಿ ಸೂಚಿಸಿದರು.

ದೇಶದ ವಿವಿಧ ಭಾಗಗಳಿಂದ ವಿವಿಧ ಸಸಿಗಳನ್ನು ತಂದು ನೆಡುವ ಮೂಲಕ 'ಅಮೃತ ವನ' ರೂಪಿಸುವ ಯೋಜನೆ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಪಕ್ಷದ ಮುಖಂಡರು ಹೇಳಿದ್ದಾರೆ.

'ಹೊಸ ಉದಯ': 'ಜಗತ್ತು ಭಾರತದ ಬಗ್ಗೆ ಭರವಸೆ ಹಾಗೂ ಆಶಾಭಾವದಿಂದ ನೋಡುತ್ತಿದೆ. ದೇಶದ ಕುರಿತ ಸದ್ಯದ ವಾತಾವರಣ ಹೊಸ ಉದಯವನ್ನು ಸಾರುವಂತಿದೆ ಎಂಬುದಾಗಿ ಮೋದಿ ಸಭೆಯಲ್ಲಿ ಬಣ್ಣಿಸಿದರು' ಎಂದು ಸಂಸದೀಯ ಪಕ್ಷದ ಸಭೆ ಬಳಿಕ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಸುದ್ದಿಗಾರರಿಗೆ ತಿಳಿಸಿದರು.



ಬಿಜೆಪಿ ಸಂಸದೀಯ ಪಕ್ಷದ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಕೇಂದ್ರ ಹಿಂದುಳಿದ ವರ್ಗಗಳ ಪಟ್ಟಿಗೆ ತೆಲಂಗಾಣದ ವೀರಶೈವರು

ಆಯೋಗದ ಶಿಫಾರಸಿಗೆ ಕಾಯುತ್ತಿರುವ ಕೇಂದ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ವೀರಶೈವ ಲಿಂಗಾಯತರನ್ನು ಕೇಂದ್ರದ ಇತರ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಗೆ ಸೇರಿಸುವಂತೆ ತೆಲಂಗಾಣ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿದೆ ಎಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ರಾಜ್ಯ ಸಚಿವರಾದ ಪ್ರತಿಮಾ ಭೌಮಿಕ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಮಂಗಳವಾರ ಲಿಖಿತ ಉತ್ತರ ನೀಡಿರುವ ಅವರು, 'ಈ ಪ್ರಸ್ತಾವವನ್ನು ಹಿಂದುಳಿದ ವರ್ಗಗಳ ರಾಷ್ಟ್ರೀಯ ಆಯೋಗಕ್ಕೆ ಕಳುಹಿಸಲಾಗಿದೆ. ಆಯೋಗದ ಶಿಫಾರಸಿಗಾಗಿ ಕಾಯುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

ವೀರಶೈವ ಲಿಂಗಾಯತರು/ಲಿಂಗ ಬಲಿಜರನ್ನು ಕೇಂದ್ರದ ಒಬಿಸಿ ಪಟ್ಟಿಗೆ ಸೇರಿಸುವಂತೆ ಆಂಧ್ರ ಪ್ರದೇಶ ಹಾಗೂ ತಮಿಳುನಾಡು ಸರ್ಕಾರಗಳು ಶಿಫಾರಸು ಮಾಡಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಭಾರತದ ಜನಸಂಖ್ಯೆ 139 ಕೋಟಿ

ನವದೆಹಲಿ(ಪಿಟಿಐ): ಜಗತ್ತಿನಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿರುವ ರಾಷ್ಟ್ರಗಳ ಪೈಕಿ ಒಂದಾಗಿರುವ ಭಾರತದ ಜನಸಂಖ್ಯೆ ಈ ವರ್ಷದ ಜುಲೈ 1ಕ್ಕೆ ಅನ್ವಯಿಸಿದಂತೆ ಅಂದಾಜು 139 ಕೋಟಿಯಷ್ಟಿದೆ ಎಂದು ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ತಿಳಿಸಿದೆ. ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು, ಲೋಕಸಭೆಯಲ್ಲಿ ಜನಸಂಖ್ಯೆ ವಿವರದ ಬಗ್ಗೆ ಕೇಳಿದ ಪ್ರಶ್ನೆಗೆ ನೀಡಿರುವ ಲಿಖಿತ ಉತ್ತರದಲ್ಲಿ ಈ ಮಾಹಿತಿ ನೀಡಿದ್ದಾರೆ. ನೆರೆಯ ಚೀನಾ ದೇಶದ ಜನಸಂಖ್ಯೆಯು ಜುಲೈ 1ಕ್ಕೆ ಅನ್ವಯಿಸಿದಂತೆ ಅಂದಾಜು ಒಟ್ಟು 142.56 ಕೋಟಿಯಷ್ಟಿದೆ (ಒಟ್ಟು 142,56,71,000) ಎಂದು ವಿವರಿಸಿದ್ದಾರೆ.

ಮಸೂದೆಗೆ ಅಸ್ತು

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಸಂಬಂಧ ಹೊರಡಿಸಿರುವ ಸುಗ್ರೀವಾಜ್ಞೆಗೆ ಕಾಯ್ದೆಯ ರೂಪವನ್ನು ನೀಡಲು ಮಂಡಿಸಲಿರುವ ಮಸೂದೆಗೆ ಕೇಂದ್ರ ಸಚಿವ ಸಂಪುಟವು ಅನುಮೋದನೆ ನೀಡಿದೆ.

ಮಣಿಪುರ: 718 ಜನರ ಅಕ್ರಮ ಪ್ರವೇಶ

ಇಂಫಾಲ್ (ಪಿಟಿಐ): ಕಳೆದ ವಾರದಲ್ಲಿ ಮ್ಯಾನ್ಮಾರ್‌ನಿಂದ 301 ಮಕ್ಕಳು ಸೇರಿದಂತೆ 718 ಜನರು ರಾಜ್ಯಕ್ಕೆ ಅಕ್ರಮವಾಗಿ ಪ್ರವೇಶಿಸಿದ್ದಾರೆ ಎಂದು ಮಣಿಪುರ ಸರ್ಕಾರ ತಿಳಿಸಿದೆ.

ಚಂದೇಲ್ ಜಿಲ್ಲೆಯ ಮೂಲಕ ಇವರು ಜುಲೈ 22, 23ರಂದು ಅಕ್ರಮವಾಗಿ ದೇಶ ಪ್ರವೇಶಿಸಿದ್ದಾರೆ ಎಂದು ಭಾರತ–ಮ್ಯಾನ್ಮಾರ್ ಗಡಿಯಲ್ಲಿ ಕಾವಲು ಕಾಯುವ ಅಸ್ಸಾಂ ರೈಫಲ್ಸ್ ವರದಿ ಮಾಡಿದೆ ಎಂದು ಗೃಹ ಸಚಿವಾಲಯ ಹೇಳಿದೆ.

'ಯಾವೊಂದು ದಾಖಲೆಗಳಿಲ್ಲದೆ ಮ್ಯಾನ್ಮಾರ್‌ನಿಂದ ಹೇಗೆ ದೇಶವನ್ನು ಪ್ರವೇಶಿಸಿದ್ದಾರೆ. ಅವರನ್ನು ತಕ್ಷಣವೇ ವಾಪಸ್ ಕಳುಹಿಸಿ' ಎಂದು ಮುಖ್ಯ ಕಾರ್ಯದರ್ಶಿ ವಿನೀತ್ ಜೋಶಿ ಹೇಳಿದ್ದಾರೆ.

'ಕೇಂದ್ರ ಗೃಹ ಸಚಿವಾಲಯದ ಸೂಚನೆಯನುಸಾರ ಸೂಕ್ತ ದಾಖಲೆಗಳಿಲ್ಲದೇ ಮ್ಯಾನ್ಮಾರ್ ಪ್ರಜೆಗಳು ಗಡಿ ದಾಟದಂತೆ ಕಠಿಣ ಕ್ರಮ ತೆಗೆದುಕೊಳ್ಳಬೇಕು ಎಂದು ಅಸ್ಸಾಂ ರೈಫಲ್ಸ್‌ಗೆ ಮಣಿಪುರ ಸರ್ಕಾರ ಈ ಹಿಂದೆಯೇ ತಿಳಿಸಿದೆ. ಇದನ್ನು ಗಂಭೀರವಾಗಿ ಪರಿಗಣಿಸಿದ್ದು, ಅಕ್ರಮವಾಗಿ ದೇಶ ಪ್ರವೇಶಿಸಿರುವ ವಲಸಿಗರ ವಾಪಸಾತಿ ಮೇಲ್ವಿಚಾರಣೆಗಾಗಿ ಅವರೆಲ್ಲರ ಬಯೊಮೆಟ್ರಿಕ್ ಹಾಗೂ ಛಾಯಾಚಿತ್ರ ಪಡೆಯುವಂತೆ ಚಂದೇಲ್ ಜಿಲ್ಲಾಡಳಿತಕ್ಕೆ ಸೂಚಿಸಲಾಗಿದೆ' ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹಿಂಸಾಚಾರ ಖಂಡಿಸಿ ಮಿಜೋರಾಂನಲ್ಲಿ ರ‍್ಯಾಲಿ

ಐಜ್ವಾಲ್ (ಮಿಜೋರಾಂ)(ಪಿಟಿಐ): ಜನಾಂಗೀಯ ಸಂಘರ್ಷಕ್ಕೆ ನಲುಗಿರುವ ಮಣಿಪುರದ ಝೋ ಜನರಿಗೆ ಬೆಂಬಲ ಸೂಚಿಸಿ ಮಿಜೋರಾಂನಲ್ಲಿ ಸಮುದಾಯದ ಜನರು ಮಂಗಳವಾರ ಮತಪ್ರದರ್ಶನ ನಡೆಸಿದರು.

ಸಿವೈಎಂಎ, ಎಂಝುಪ್ ಸೇರಿದಂತೆ ಐದು ಸಂಘಟನೆಗಳನ್ನು ಒಳಗೊಂಡ ಎನ್‌ಜಿಒ ಸಮನ್ವಯ ಸಮಿತಿಯು ರಾಜಧಾನಿ ಐಜ್ವಾಲ್ ಸೇರಿದಂತೆ ರಾಜ್ಯದ ವಿವಿಧೆಡೆ ರ‍್ಯಾಲಿಗಳನ್ನು ಆಯೋಜಿಸಿತ್ತು. ಸಮಿತಿ ಮುಖ್ಯಸ್ಥ ಆರ್.ಲಾಲನ್‌ಘೇತಾ ಮಾತನಾಡಿ, 'ಮಣಿಪುರದಲ್ಲಿ ಹಿಂಸಾಚಾರ ನಿಲ್ಲಿಸಲು ಕೇಂದ್ರ ತ್ವರಿತ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು. ಝುಡ್‌ಪಿಎಂ ನಾಯಕ ಲಾಲ್ದುಹೋಮಾ,'ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಗೊಳಿಸಬೇಕು' ಎಂದು ಒತ್ತಾಯಿಸಿದರು.



ಮಿಜೋರಾಂ ರಾಜಧಾನಿ ಐಜ್ವಾಲ್‌ನಲ್ಲಿ ನಡೆದ ರ‍್ಯಾಲಿಯಲ್ಲಿ ಭಾರಿ ಸಂಖ್ಯೆಯಲ್ಲಿ ಜನರು ಸೇರಿದ್ದರು –ಪಿಟಿಐ ಚಿತ್ರ

ಸಂತ್ರಸ್ತೆಯರಿಗೆ ಇನ್ನೂ ಸಿಗದ ಆಪ್ತಸಲಹೆ, ಪರಿಹಾರ

ನವದೆಹಲಿ (ಪಿಟಿಐ): ಮಣಿಪುರದಲ್ಲಿ ಬೆತ್ತಲೆ ಮೆರವಣಿಗೆಯ ಹೀನಕೃತ್ಯಕ್ಕೆ ಗುರಿಯಾಗಿದ್ದ ಇಬ್ಬರು ಮಹಿಳೆಯರು ತೀವ್ರ ಮಾನಸಿಕ ಆಘಾತಕ್ಕೆ ಒಳಗಾಗಿದ್ದು, ಇಬ್ಬರಿಗೂ ಇದುವರೆಗೆ ಆಪ್ತ ಸಮಾಲೋಚನೆ ಸೇವೆ ಅಥವಾ ಸೂಕ್ತ ಪರಿಹಾರ ದೊರೆತಿಲ್ಲ.

ಮಣಿಪುರದಲ್ಲಿ ನತದೃಷ್ಟ ಮಹಿಳೆಯರು ಮತ್ತು ಅವರ ಕುಟುಂಬ ಸದಸ್ಯರನ್ನು ಭೇಟಿಯಾಗಿದ್ದ ದೆಹಲಿ ಮಹಿಳಾ ಆಯೋಗದ (ಡಿಸಿಡಬ್ಲ್ಯು) ಅಧ್ಯಕ್ಷೆ ಸ್ವಾತಿ ಮಾಲೀವಾಲ್ ಅವರು ಹೇಳಿಕೆಯಲ್ಲಿ ಈ ವಿಷಯ ತಿಳಿಸಿದ್ದಾರೆ. ರಾಜ್ಯ ಸರ್ಕಾರದ ವಿರುದ್ಧ ಹರಿಹಾಯ್ದ ಅವರು, ಮುಖ್ಯಮಂತ್ರಿ ಅಥವಾ ಅವರ ಸಚಿವ ಸಂಪುಟದ ಸದಸ್ಯರು ಈವರೆಗೂ ಸಂತ್ರಸ್ತೆಯರನ್ನು ಭೇಟಿಯಾಗಿಲ್ಲ ಎಂದೂ ಟೀಕಿಸಿದ್ದಾರೆ.

> **ಸಂತ್ರಸ್ತ ಇಬ್ಬರು ಮಹಿಳೆಯರನ್ನು ಮುಖ್ಯಮಂತ್ರಿ ಬಿರೇನ್ ಸಿಂಗ್ ಈವರೆಗೆ ಭೇಟಿ ಮಾಡಿಲ್ಲ. ಅವರು ತಮ್ಮ ಹುದ್ದೆಗೆ ರಾಜೀನಾಮೆ ನೀಡಲಿ**
> **ಸ್ವಾತಿ ಮಾಲೀವಾಲ್,** ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ

ಬೆತ್ತಲೆ ಮೆರವಣಿಗೆ ಮತ್ತೊಬ್ಬನ ಸೆರೆ

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಇಬ್ಬರು ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೊಬ್ಬ ವ್ಯಕ್ತಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಸೋಮವಾರ ಸಂಜೆ ಥೌಬಲ್ ಜಿಲ್ಲೆಯಲ್ಲಿ ಬಂಧಿಸಲಾಗಿದೆ. ಇದರೊಂದಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ಏಳು ಜನರನ್ನು ಬಂಧಿಸಿದಂತಾಗಿದೆ ಎಂದು ತಿಳಿಸಿದ್ದಾರೆ.

ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಮೇ 4ರಂದು ನಡೆದಿದ್ದ ಈ ಕೃತ್ಯದ ವಿಡಿಯೊ ಜಾಲತಾಣದಲ್ಲಿ ಸಾಕಷ್ಟು ಹಂಚಿಕೆಯಾಗಿ, ದೇಶದಾದ್ಯಂತ ಖಂಡನೆ ವ್ಯಕ್ತವಾಗಿತ್ತು.

ಷರತ್ತುಬದ್ಧ ಇಂಟರ್‌ನೆಟ್!

ಇಂಫಾಲ್ (ಪಿಟಿಐ): ಮಣಿಪುರದಲ್ಲಿ ಇಂಟರ್‌ನೆಟ್ ಸೇವೆಗೆ ವಿಧಿಸಿದ್ದ ನಿರ್ಬಂಧವನ್ನು ಮಂಗಳವಾರ ಭಾಗಶಃ ತೆರವು ಮಾಡಲಾಗಿದೆ. ಆದರೆ, ಮೊಬೈಲ್ ಇಂಟರ್‌ನೆಟ್ ಮೇಲಿನ ನಿರ್ಬಂಧ ಮುಂದುವರಿದಿದೆ ಎಂದು ಗೃಹ ಇಲಾಖೆ ತಿಳಿಸಿದೆ.

ಕೇಂದ್ರ ಸರ್ಕಾರಕ್ಕೆ ಚಾಟಿ ಬೀಸಿದ ಸುಪ್ರೀಂ ಕೋರ್ಟ್

'ವಿಧೇಯವಾಗಿರದ ರಾಜ್ಯಗಳ ವಿರುದ್ಧ ನಿಮ್ಮದು ಕಠಿಣ ನಿಲುವು'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಿಮಗೆ ವಿಧೇಯವಾಗಿರದ ರಾಜ್ಯ ಸರ್ಕಾರಗಳ ವಿರುದ್ಧ ತೀವ್ರಸ್ವರೂಪದ ನಿಲುವುಗಳನ್ನು ಹೊಂದುವ ನೀವು, ನಿಮಗೆ ಬಾಗುವ ರಾಜ್ಯಗಳ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ' ಎಂದು ಕೇಂದ್ರ ಸರ್ಕಾರದ ವಿರುದ್ಧ ಸುಪ್ರೀಂಕೋರ್ಟ್ ಮಂಗಳವಾರ ಚಾಟಿ ಬೀಸಿದೆ.

ನಾಗಾಲ್ಯಾಂಡ್‌ನ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಜಾರಿಗೆ ಸಂಬಂಧಿಸಿದ ಅರ್ಜಿ ವಿಚಾರಣೆ ವೇಳೆ ಸುಪ್ರೀಂಕೋರ್ಟ್ ಈ ಮಾತು ಹೇಳಿದೆ.

ನ್ಯಾಯಮೂರ್ತಿಗಳಾದ ಸಂಜಯಕಿಶನ್ ಕೌಲ್, ಸುಧಾಂಶು ಧುಲಿಯಾ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

'ನಾಗಾಲ್ಯಾಂಡ್‌ನಲ್ಲಿ ಮಹಿಳೆಯರಿಗೆ ಮೀಸಲಾತಿ ಒದಗಿಸುವ ವಿಷಯಕ್ಕೆ ಸಂಬಂಧಿಸಿ ಕೇಂದ್ರ ಸರ್ಕಾರ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ' ಎಂದು ನ್ಯಾಯಪೀಠ ಹೇಳಿತು.

ಆಗ, ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ.ನಟರಾಜ್, ಈಶಾನ್ಯ ರಾಜ್ಯಗಳಲ್ಲಿನ ಪರಿಸ್ಥಿತಿಯನ್ನು ನ್ಯಾಯಪೀಠದ ಗಮನಕ್ಕೆ ತಂದರು.

'ರಾಜಕೀಯ ದೃಷ್ಟಿಯಿಂದ ಈ ವಿಷಯದಲ್ಲಿ ಸಹಮತ ಇಲ್ಲ ಎಂದು ನೀವು ಹೇಳುವಂತಿಲ್ಲ. ಅಲ್ಲಿಯೂ ನಿಮ್ಮದೇ ಸರ್ಕಾರ ಇರುವ ಕಾರಣ ಹೊಣೆಗಾರಿಕೆಯಿಂದ ತಪ್ಪಿಸಿಕೊಳ್ಳುವಂತಿಲ್ಲ' ಎಂದು ನ್ಯಾಯಪೀಠ ಹೇಳಿತು.

'ಸಂವಿಧಾನ ನೀಡಿರುವ ಮೀಸಲಾತಿಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರಕ್ಕೆ ಇಚ್ಛಾಶಕ್ತಿ ಇಲ್ಲ ಎಂಬುದಾಗಿ ನಾವು ಹೇಳುವಂತಹ ಪರಿಸ್ಥಿತಿ ನಿರ್ಮಿಸಬೇಡಿ. ಹಾಗೆ ಹೇಳುವುದು ಕಷ್ಟವೇನಲ್ಲ. ಸಂದರ್ಭ ಬಂದಲ್ಲಿ ಹೇಳುತ್ತೇವೆ' ಎಂದು ನ್ಯಾಯಪೀಠ ಹೇಳಿತು.

ಆಗ ನಟರಾಜ್ ಅವರು ಕೇಂದ್ರದ ನಿಲುವನ್ನು ಪುನಃ ಸಮರ್ಥಿಸಿಕೊಂಡರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ನಿಮಗೆ ವಿಧೇಯವಾಗಿರದ ರಾಜ್ಯ ಸರ್ಕಾರಗಳ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳುತ್ತೀರಿ. ಆದರೆ, ನಾಗಾಲ್ಯಾಂಡ್ ವಿಷಯದಲ್ಲಿ ನಿಮ್ಮ ಜವಾಬ್ದಾರಿಯಿಂದ ಜಾರಿಕೊಳ್ಳುವಂತಿಲ್ಲ' ಎಂದು ನ್ಯಾಯಪೀಠ ಹೇಳಿತು. ಮಹಿಳಾ ಮೀಸಲಾತಿ ಜಾರಿಗೆ ಸಂಬಂಧಿಸಿ ನಾಗಾಲ್ಯಾಂಡ್ ಸರ್ಕಾರಕ್ಕೆ ಮತ್ತಷ್ಟು ಅವಕಾಶ ನೀಡುವಂತೆ ನಟರಾಜ್ ಮನವಿ ಮಾಡಿದರು. ಮನವಿಯನ್ನು ಪುರಸ್ಕರಿಸಿದ ನ್ಯಾಯಪೀಠ, ಸೆಪ್ಟೆಂಬರ್ ಅಂತ್ಯಕ್ಕೆ ವಿಚಾರಣೆ ಮುಂದೂಡಿತು.

ಕಾಶಿ–ಜ್ಞಾನವಾಪಿ ಮಾಲೀಕತ್ವ: 28ಕ್ಕೆ ತೀರ್ಪು

ಪ್ರಜಾವಾಣಿ ವಾರ್ತೆ

ಲಖನೌ: ಕಾಶಿ ವಿಶ್ವನಾಥ ದೇವಸ್ಥಾನ –ಜ್ಞಾನವಾಪಿ ಮಸೀದಿ ಆವರಣದ ಭೂಮಿಯ ಸಂಪೂರ್ಣ ಮಾಲೀಕತ್ವ ಕೋರಿ ಸಲ್ಲಿಸಿದ್ದ ಸಿವಿಲ್ ವ್ಯಾಜ್ಯದ ಕ್ರಮಬದ್ಧತೆಯನ್ನು ಪ್ರಶ್ನಿಸಿದ್ದ ಅರ್ಜಿಗೆ ಸಂಬಂಧಿಸಿದ ತೀರ್ಪನ್ನು ಅಲಹಾಬಾದ್ ಹೈಕೋರ್ಟ್ ಕಾಯ್ದಿರಿಸಿದೆ.

ದೇವಸ್ಥಾನ ಮತ್ತು ಮಸೀದಿ ಆವರಣದ ಸಂಪೂರ್ಣ ಮಾಲೀಕತ್ವ ಕೋರಿ ಹಿಂದೂ ಅರ್ಜಿದಾರರು ಕೆಲವು ತಿಂಗಳ ಹಿಂದೆ ವಾರಾಣಸಿ ಜಿಲ್ಲಾ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಇದನ್ನು ಅಂಗೀಕರಿಸಿದ ಕ್ರಮಬದ್ಧತೆಯನ್ನು ಪ್ರಶ್ನಿಸಿ ಜ್ಞಾನವಾಪಿ ಮಸೀದಿಯ ನಿರ್ವಹಣೆ ಉಸ್ತುವಾರಿ ಹೊಂದಿರುವ ಅಂಜುಮನ್ ಇಂತೆಜಾಮೀಯ ಮಸೀದಿ ಸಮಿತಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು.

ಸಮೀಕ್ಷೆಗೆ ತಡೆ ಕೋರಿ ಮೇಲ್ಮನವಿ: ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆಗೆ ಆದೇಶಿಸಿದ್ದ ವಾರಾಣಸಿ ಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ಕೋರಿ ಮುಸ್ಲಿಂ ಅರ್ಜಿದಾರರು ಅಲಹಾಬಾದ್ ಹೈಕೋರ್ಟ್‌ಗೆ ಮೇಲ್ಮನವಿಯನ್ನು ಸಲ್ಲಿಸಿದರು. ಅಲ್ಲದೆ, ವುಜುಖಾನಾ ಪ್ರದೇಶ ಬಿಟ್ಟು ಮಸೀದಿ ಆವರಣದ ವೈಜ್ಞಾನಿಕ ಸಮೀಕ್ಷೆ ನಡೆಸಲು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಗೆ ಕೋರ್ಟ್ ಆದೇಶಿಸಿತ್ತು. ಇದಕ್ಕೆ ಸುಪ್ರೀಂ ಕೋರ್ಟ್ ಬುಧವಾರದವರೆಗೂ ತಡೆಯಾಜ್ಞೆ ನೀಡಿದೆ.

ಸಚಿವರ ಸುಳ್ಳು ಪತ್ತೆ ಪರೀಕ್ಷೆ ನಡೆಯಲಿ: ಗುಧಾ

ಜೈಪುರ (ಪಿಟಿಐ): ಹಣ ವರ್ಗಾವಣೆ ಅವ್ಯವಹಾರದ 'ರಹಸ್ಯ' ಒಳಗೊಂಡ 'ಕೆಂಪು ಡೈರಿ' ವಿಚಾರವಾಗಿ ಸೋಮವಾರ ರಾಜಸ್ಥಾನ ವಿಧಾನಸಭೆಯಲ್ಲಿ ಗದ್ದಲ ಸೃಷ್ಟಿಸಿದ್ದ ಕಾಂಗ್ರೆಸ್ ಶಾಸಕ ರಾಜೇಂದ್ರ ಗುಧಾ, ಮಂಗಳವಾರವೂ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ವಿರುದ್ಧ ವಾಗ್ದಾಳಿ ಮುಂದುವರಿಸಿದರು. ರಾಜ್ಯದ ಎಲ್ಲ ಸಚಿವರು ಸುಳ್ಳು ಪತ್ತೆ ಪರೀಕ್ಷೆಗೆ ಒಳಗಾಗಲಿ ಎಂದು ಆಗ್ರಹಿಸಿದರು.

ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿದ ಅವರು, 'ನನ್ನನ್ನೂ ಸೇರಿ ಸಂಪುಟದ ಎಲ್ಲ ಸಚಿವರ ಪರೀಕ್ಷೆ ನಡೆಯಲಿ. ಆಗ ಅತ್ಯಾಚಾರ ಮತ್ತು ಭ್ರಷ್ಟಾಚಾರದ ಸತ್ಯ ಹೊರಗೆ ಬರಲಿದೆ. ಯಾರು ಸತ್ಯ ನುಡಿಯುತ್ತಿದ್ದಾರೆ, ಯಾರು ಸುಳ್ಳು ಹೇಳುತ್ತಿದ್ದಾರೆ ಎಂಬುದೂ ಜಗಜ್ಜಾಹೀರಾಗಲಿದೆ' ಎಂದರು.

ಡೈರಿಯಲ್ಲಿ ಒಬ್ಬರು ಅಥವಾ ಹಲವು ಸಚಿವರ ಬಗ್ಗೆ ಉಲ್ಲೇಖವಿದೆಯೇ ಎಂಬ ಪ್ರಶ್ನೆಗೆ, 'ನಮ್ಮಲ್ಲಿ ಕಾಂಗ್ರೆಸ್ ಸರ್ಕಾರ ಇಲ್ಲ. ಗೆಹಲೋತ್ ಸರ್ಕಾರವಿದೆ. ಅವರೇ ಗೃಹ ಸಚಿವರು, ಹಣಕಾಸು ಸಚಿವರು ಮತ್ತು ಮುಖ್ಯಮಂತ್ರಿ. ರಾಜ್ಯ ಕಾಂಗ್ರೆಸ್ ಉಸ್ತುವಾರಿ ಹುದ್ದೆಯೂ ಅವರ ಬಳಿಯೇ ಇದೆ. ಒಬ್ಬ ವ್ಯಕ್ತಿಯೇ ಇಡೀ ವ್ಯವಸ್ಥೆ. ಕೆಂಪು ಡೈರಿ ಅವರಿಗೆ ಬಹುದೊಡ್ಡ ಕುತ್ತು ತರಲಿದೆ' ಎಂದು ಹೇಳಿದರು. ಇದೇ ವೇಳೆ, ಗೆಹಲೋತ್ ವಿರುದ್ಧ ಅಸಮಾಧಾನ ಹೊಂದಿರುವ ಮಾಜಿ ಉಪ ಮುಖ್ಯಮಂತ್ರಿ ಸಚಿನ್ ಪೈಲಟ್ ಪರ ಮಾತನಾಡಿದರು.

ಗುಧಾಚೆಗೆ ಸಚಿವ ಸ್ಥಾನದಿಂದ ವಜಾಗೊಳಿಸಲಾಗಿತ್ತು. ಸೋಮವಾರ ವಿಧಾನಸಭೆ ಕಲಾಪದ ವೇಳೆ 'ಕೆಂಪು ಡೈರಿ' ವಿಚಾರವಾಗಿ ನಡೆದ ಗದ್ದಲದಲ್ಲಿ ಅಶಿಸ್ತಿನ ವರ್ತನೆ ತೋರಿದ ಆರೋಪದ ಮೇಲೆ ಕಲಾಪದ ಮುಂದಿನ ಅವಧಿಗೆ ಅಮಾನತು ಮಾಡಲಾಗಿದೆ.

ಎಲ್‌ಎಸ್‌ಡಿ: ಚಿಕಿತ್ಸೆ ಮುಂದುವರಿಕೆಗೆ ಪಾಲಕರ ಮನವಿ

ಕೋಲ್ಕತ್ತ: ಅನುದಾನ ಲಭ್ಯವಿರದ ಕಾರಣ, ಲೈಸೊಸೋಮಲ್ ಸ್ಟೋರೇಜ್ ಡಿಸಾರ್ಡರ್' (ಎಲ್‌ಎಸ್‌ಡಿ) ಎಂಬ ಆನುವಂಶಿಕ ಕಾಯಿಲೆಯಿಂದ ಬಳಲುತ್ತಿರುವ ಪಶ್ಚಿಮ ಬಂಗಾಳದ ನಾಲ್ಕು ಮಕ್ಕಳು ಸಂಕಷ್ಟ ಎದುರಿಸುವಂತಾಗಿದೆ.

ತಮ್ಮ ಮಕ್ಕಳ ಜೀವಕ್ಕೆ ಅಪಾಯ ಬಂದೊಗಲಿದೆ ಎಂದು ಆತಂಕ ವ್ಯಕ್ತಪಡಿಸಿರುವ ಪಾಲಕರು, ಚಿಕಿತ್ಸೆಯನ್ನು ಮುಂದುವರಿಸುವಂತೆ ಮನವಿ ಮಾಡಿದ್ದಾರೆ. ಈ ಬಗ್ಗೆ ಪಾಲಕರು ಕೋಲ್ಕತ್ತದ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಎಸ್.ಎಸ್. ಕೆ.ಎಂ ಆಸ್ಪತ್ರೆಯ ನಿರ್ದೇಶಕರಿಗೆ ಪತ್ರ ಬರೆದಿದ್ದಾರೆ.

'ಈ ಚಿಕಿತ್ಸೆಗಾಗಿ ಕೇಂದ್ರ ಆರೋಗ್ಯ ಸಚಿವಾಲಯ ನೀಡುತ್ತಿದ್ದ ₹ 50 ಲಕ್ಷ ಸೇರಿದಂತೆ ಒಟ್ಟಾರೆ ಅನುದಾನ ಸಿಗುತ್ತಿಲ್ಲ ಎಂದು ತಿಳಿಸಿರುವ ಕೋಲ್ಕತ್ತದ ಎಸ್‌ಎಸ್‌ಕೆಎಂ ಆಸ್ಪತ್ರೆ, ಚಿಕಿತ್ಸೆಯನ್ನು ನಿಲ್ಲಿಸಿದೆ. ಮಕ್ಕಳನ್ನು ಈಗ ಕೋಲ್ಕತ್ತ ಪೊಲೀಸ್ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ' ಎಂದು ಪತ್ರದಲ್ಲಿ ಪಾಲಕರು ವಿವರಿಸಿದ್ದಾರೆ.

ಬಾಂಬೆ ಹೈಕೋರ್ಟ್‌ನ ಗೋವಾ ಪೀಠ ಆದೇಶ

ಹುಲಿ ಸಂರಕ್ಷಣಾ ಅರಣ್ಯವಾಗಿ ಮಹದಾಯಿ ಧಾಮ

ಪಣಜಿ (ಪಿಟಿಐ): 'ಮಹದಾಯಿ ವನ್ಯಜೀವಿ ಧಾಮ, ಆಸುಪಾಸಿನ ಪ್ರದೇಶಗಳನ್ನು 'ಹುಲಿ ಸಂರಕ್ಷಣಾ ಮೀಸಲು ಅರಣ್ಯ'ವೆಂದು ಘೋಷಿಸಿ, 3 ತಿಂಗಳಲ್ಲಿ ಅಧಿಸೂಚನೆ ಹೊರಡಿಸಬೇಕು' ಎಂದು ಬಾಂಬೆ ಹೈಕೋರ್ಟ್‌ನ ಗೋವಾ ಪೀಠ ಗೋವಾ ಸರ್ಕಾರಕ್ಕೆ ಆದೇಶಿಸಿದೆ.

ನ್ಯಾಯಮೂರ್ತಿಗಳಾದ ಎಂ.ಎಸ್. ಸೋನಕ್, ಭರತ್ ದೇಶಪಾಂಡೆ ಅವರಿದ್ದ ಪೀಠ ಸೋಮವಾರ ಈ ಆದೇಶ ನೀಡಿತು. 90 ಪುಟಗಳ ಆದೇಶದಲ್ಲಿ ಹುಲಿ ಸಂರಕ್ಷಣೆಯ ಮಹತ್ವ ಕುರಿತಂತೆ ಮಹಾಭಾರತದಲ್ಲಿನ ಸಂಸ್ಕೃತ ಶ್ಲೋಕಗಳನ್ನೂ ಉಲ್ಲೇಖಿಸಿದೆ.

ಹೈಕೋರ್ಟ್ ಆದೇಶವನ್ನು ಪ್ರಶ್ನಿಸಿ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿಯನ್ನು ಸಲ್ಲಿಸಲಿದೆ ಎಂದು ಗೋವಾದ ಅರಣ್ಯ ಸಚಿವ ವಿಶ್ವಜಿತ್ ರಾಣೆ ಅವರು ಮಂಗಳವಾರ ಪ್ರತಿಕ್ರಿಯಿಸಿದ್ದಾರೆ.

ವನ್ಯಜೀವಿ ಧಾಮ, ಸಮೀಪದ ಅರಣ್ಯ ಭಾಗದಲ್ಲಿ ಜನವಸತಿಗಳಿವೆ ಹಾಗೂ ಹುಲಿ ಗೋವಾದ ಸ್ಥಳೀಯ ವನ್ಯಜೀವಿಯಲ್ಲ ಎಂಬ ಕಾರಣ ನೀಡಿ ಮೀಸಲು ಅರಣ್ಯವಾಗಿ ಘೋಷಿಸಲು ಗೋವಾ ಸರ್ಕಾರ ಈ ಹಿಂದೆ ವಿರೋಧ ವ್ಯಕ್ತಪಡಿಸಿತ್ತು.

ರಾಷ್ಟ್ರೀಯ ಹುಲಿ ಸಂರಕ್ಷಣಾ ಪ್ರಾಧಿಕಾರದ (ಎನ್‌ಟಿಸಿಎ) ಮನವಿಯಂತೆ ಹುಲಿ ಮೀಸಲು ಅರಣ್ಯವಾಗಿ ಘೋಷಿಸಲು ಸರ್ಕಾರಕ್ಕೆ ಸೂಚಿಸಬೇಕು ಎಂದು ಕೋರಿ ಸ್ಥಳೀಯ ಎನ್‌ಜಿಒ ಗೋವಾ ಫೌಂಡೇಷನ್ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿತ್ತು.

ವನ್ಯಜೀವಿ (ಸಂರಕ್ಷಣಾ) ಕಾಯ್ದೆಯ ಅನುಸಾರ ಮಹದಾಯಿ ಹುಲಿ ಮೀಸಲು ಅರಣ್ಯವಾಗಿ ಘೋಷಿಸಲು ಕ್ರಮ ಕೈಗೊಳ್ಳಬೇಕು, ಮೂರು ತಿಂಗಳಲ್ಲಿ ಅಧಿಸೂಚನೆ ಹೊರಡಿಸಿ ಮಾಹಿತಿಯನ್ನು ಎನ್‌ಟಿಸಿಎಗೆ ಸಲ್ಲಿಸಬೇಕು ಎಂದು ನ್ಯಾಯಪೀಠ ಆದೇಶಿಸಿದೆ.

ಮೀಸಲು ಧಾಮದ ಆಯಕಟ್ಟಿನ ಸ್ಥಳಗಳಲ್ಲಿ ಬೇಟೆ ತಡೆ ಕ್ಯಾಂಪ್‌ಗಳನ್ನು ಆರು ತಿಂಗಳಲ್ಲಿ ಸ್ಥಾಪಿಸಬೇಕು ಹಾಗೂ ಅರಣ್ಯರಕ್ಷಕರು, ಕಾವಲುಗಾರರನ್ನು ನೇಮಿಸಬೇಕು. ಮೀಸಲು ಅರಣ್ಯ ಒತ್ತುವರಿ ತಡೆಗೆ ಕ್ರಮವಹಿಸಬೇಕು ಎಂದು ಅರಣ್ಯ ಇಲಾಖೆಗೆ ನಿರ್ದೇಶಿಸಿದೆ.

ಮೀಸಲು ಅರಣ್ಯವಾಗಿ ಘೋಷಿಸಿದಲ್ಲಿ ದೊಡ್ಡ ಪ್ರಮಾಣದಲ್ಲಿ ಜನರ ಒಕ್ಕಲೆಬ್ಬಿಸಬೇಕಾದಿತು, ಹೆಚ್ಚಿನವರ ಹಕ್ಕುಗಳಿಗೆ ಧಕ್ಕೆ ಆಗಲಿದೆ ಎಂಬ ಗ್ರಹಿಕೆ ಇದೆ. ಇದನ್ನು ಸರಿಪಡಿಸಬೇಕು. ಅರಣ್ಯವಾಸಿಗಳ ಹಕ್ಕು ರಕ್ಷಣೆಗೆ ವರ್ಷದಲ್ಲಿ ಕ್ರಮವಹಿಸಬೇಕು ಎಂದು ಹೇಳಿದೆ.

ಕರ್ನಾಟಕ, ಮಹಾರಾಷ್ಟ್ರ ಹಾಗೂ ಪಶ್ಚಿಮಘಟ್ಟದ ಅರಣ್ಯ ಭಾಗಗಳ ಜೊತೆಗೆ ಭೌಗೋಳಿಕವಾಗಿ ಬೆಸೆದುಕೊಂಡಿರುವ ಮಹದಾಯಿ ವನ್ಯಜೀವಿ ಧಾಮದ ಅರಣ್ಯ ಭಾಗದಲ್ಲಿ ಕೆಲವು ಹುಲಿಗಳು ಕಾಣಿಸಿಕೊಂಡಿದ್ದವು. ಬಳಿಕ ಹುಲಿ ಮೀಸಲು ಪ್ರದೇಶವಾಗಿ ಘೋಷಿಸಬೇಕು ಎಂಬ ಬೇಡಿಕೆ ಎದ್ದಿತ್ತು. ಕಳೆದ ಮೂರು ವರ್ಷಗಳಲ್ಲಿ ಮಹದಾಯಿ ವನ್ಯಜೀವಿ ವಲಯದಲ್ಲಿ ನಾಲ್ಕು ಹುಲಿಗಳ ಹತ್ಯೆಯಾಗಿತ್ತು.

ಹುಲಿಗಳ ಹತ್ಯೆ ಹಿಂದೆಯೇ ವರದಿ ನೀಡಿದ್ದ ಎನ್‌ಟಿಸಿಎ, ಕರ್ನಾಟಕ ಮತ್ತು ಗೋವಾದಲ್ಲಿ ವ್ಯಾಪಿಸಿರುವ ಪಶ್ಚಿಮ ಘಟ್ಟ ಪ್ರದೇಶವು ಹುಲಿ ಸಂತತಿ ವೃದ್ಧಿಗೆ ಸೂಕ್ತವಾದ ಪ್ರದೇಶವಾಗಿದೆ. ಇದನ್ನು ಮೀಸಲು ಅರಣ್ಯವಾಗಿ ಘೋಷಿಸಬೇಕು ಎಂದು ಸಲಹೆ ಮಾಡಿತ್ತು.

ಉತ್ತರ ಗೋವಾದಲ್ಲಿರುವ ಮಹದಾಯಿ ವನ್ಯಜೀವಿ ಧಾಮವು ಕಾಳಿ ಹುಲಿ ಮೀಸಲು ಪ್ರದೇಶ, ಭೀಮಾಘಡ್ ವನ್ಯಜೀವಿ ಧಾಮ ಮತ್ತು ಭಗವಾನ್ ಮಹಾವೀರ ರಾಷ್ಟ್ರೀಯ ಉದ್ಯಾನ ಒಳಗೊಂಡಂತೆ ಭೌಗೋಳಿಕವಾಗಿ ಕರ್ನಾಟಕದ ಜೊತೆಗೆ ಬೆಸೆದುಕೊಂಡಿದೆ.

ಆದೇಶ ಪ್ರಶ್ನಿಸಿ 'ಸುಪ್ರೀಂ'ಗೆ ಮೇಲ್ಮನವಿ: ಗೋವಾ ಸರ್ಕಾರ

ಹೈಕೋರ್ಟ್‌ನ ಆದೇಶ ಕುರಿತು ಗೌರವವಿದೆ. ಆದರೆ, ಇದನ್ನು ನಾವು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸುತ್ತೇವೆ ಎಂದು ಅರಣ್ಯ ಸಚಿವ ವಿಶ್ವಜಿತ್ ರಾಣೆ ಪ್ರತಿಕ್ರಿಯಿಸಿದ್ದಾರೆ.

ಆದೇಶದ ಪರಿಣಾಮಗಳನ್ನು ಕುರಿತಂತೆ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಮತ್ತು ಅಡ್ವೊಕೇಟ್ ಜನರಲ್ ದೇವಿದಾಸ್ ಪಂಗಂ ಅವರೊಂದಿಗೆ ಚರ್ಚಿಸಲಾಗಿದೆ ಎಂದು ರಾಣೆ ಟ್ವೀಟ್ ಮಾಡಿದ್ದಾರೆ. ಹೈಕೋರ್ಟ್ ಆದೇಶದ ಅಧ್ಯಯನದ ಬಳಿಕ, ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಹೋಗುವ ಮೊದಲು ಇತರ ಎಲ್ಲ ಆಯಾಮಗಳ ಕುರಿತು ಚರ್ಚಿಸಲಿದ್ದೇವೆ. ಈ ಬಗ್ಗೆ ರಾಜ್ಯ ವನ್ಯಜೀವಿ ಮಂಡಳಿ ಕೈಗೊಂಡಿರುವ ನಿರ್ಧಾರಕ್ಕೆ ಸರ್ಕಾರ ಬದ್ಧವಿದೆ ಎಂದು ತಿಳಿಸಿದ್ದಾರೆ. ಹುಲಿ ಮೀಸಲು ಪ್ರದೇಶ ಘೋಷಿಸಬೇಕು ಎಂಬ ಎನ್‌ಟಿಸಿಎ ಪ್ರಸ್ತಾವವನ್ನು ರಾಜ್ಯ ವನ್ಯಜೀವಿ ಮಂಡಳಿಯು ಈ ತಿಂಗಳ ಆರಂಭದಲ್ಲಿ ತಿರಸ್ಕರಿಸಿತ್ತು. ಗೋವಾದ ಸಣ್ಣದಾದ ವನ್ಯಜೀವಿ ಧಾಮಗಳು ಇದಕ್ಕೆ ಸೂಕ್ತವಾಗಿಲ್ಲ ಎಂದು ಮುಖ್ಯಮಂತ್ರಿ ಪ್ರತಿಪಾದಿಸಿದ್ದರು.

ಜಪಾನ್ ಓಪನ್ ಬ್ಯಾಡ್ಮಿಂಟನ್: ಪ್ರಣಯ್‌ಗೆ ಗೆಲುವು, ಆಕರ್ಷಿಗೆ ನಿರಾಸೆ

ಪ್ರಿ ಕ್ವಾರ್ಟರ್‌ಗೆ ಶ್ರೀಕಾಂತ್



ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ ಕಿದಂಬಿ ಶ್ರೀಕಾಂತ್

ಟೋಕಿಯೊ (ಪಿಟಿಐ): ಭಾರತದ ಕಿದಂಬಿ ಶ್ರೀಕಾಂತ್ ಮತ್ತು ಎಚ್.ಎಸ್. ಪ್ರಣಯ್ ಅವರು ಜಪಾನ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮೊದಲ ಸುತ್ತಿನ ಪಂದ್ಯ ಗೆದ್ದು ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ ಆಕರ್ಷಿ ಕಶ್ಯಪ್‌ಗೆ ಮೊದಲ ಸುತ್ತಿನಲ್ಲಿ ನಿರಾಸೆ ಎದುರಾಯಿತು.

ಯೊಯೊಗಿ ನ್ಯಾಷನಲ್ ಜಿಮ್ನೇಶಿಯಂನಲ್ಲಿ ಮಂಗಳವಾರ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಪಂದ್ಯದಲ್ಲಿ ಶ್ರೀಕಾಂತ್ 21–13, 21–13 ರಿಂದ ತೈವಾನ್‌ನ ಚೌ ತಿಯೆನ್‌-ಚೆನ್ ವಿರುದ್ಧ ಗೆದ್ದರು.

ಪ್ರಣಯ್ 21–17, 21–13 ರಿಂದ ಚೀನಾದ ಲಿ ಶಿಫೆಂಗ್ ಅವರನ್ನು ಮಣಿಸಿದರು. ಆದರೆ ಮುಂದಿನ ಸುತ್ತಿನಲ್ಲಿ ಇವರಿಬ್ಬರು ಪರಸ್ಪರ ಎದುರಾಗಲಿದ್ದು, ಒಬ್ಬರು ಕ್ವಾರ್ಟರ್ ಫೈನಲ್‌ಗೆ ಮೊದಲೇ ಹೊರಬೀಳಲಿದ್ದಾರೆ.

ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ಜಪಾನ್‌ನ ಅಕಾನೆ ಯಮಗುಚಿ ಅವರ ಸವಾಲು ಮೀರಿನಿಲ್ಲಲು ವಿಫಲವಾದ ಆಕರ್ಷಿ 17–21, 17–21 ರಿಂದ ಸೋತರು.

ಮಹಿಳೆಯರ ಡಬಲ್ಸ್ ವಿಭಾಗದಲ್ಲಿ ಟ್ರೀಸಾ ಜೋಳಿ– ಗಾಯತ್ರಿ ಗೋಪಿಚಂದ್ ಜೋಡಿ, ಜಪಾನ್‌ನ ಸಯಕಾ ಹೊಬರ–ಸುಯಿಜು ಅವರನ್ನು ಪರಾಭವಗೊಳಿಸಿತು. ಭಾರತದ ಜೋಡಿ ಮೊದಲ ಗೇಮ್‌ಅನ್ನು 11–21 ರಿಂದ ಸೋತರೂ ಮುಂದಿನ ಎರಡು ಗೇಮ್‌ಗಳನ್ನು 21–15, 21–14 ರಿಂದ ಗೆದ್ದು 16ರ ಘಟ್ಟಕ್ಕೆ ಮುನ್ನಡೆಯಿತು.

ಮಿಶ್ರ ಡಬಲ್ಸ್‌ನಲ್ಲಿ ಮೊದಲ ಗೇಮ್ ಗೆದ್ದರೂ, ಅದರ ಲಾಭ ತಮ್ಮದಾಗಿಸಿಕೊಳ್ಳಲು ವಿಫಲವಾದ ರೋಹನ್ ಕಪೂರ್– ಸಿಕ್ಕಿ ರೆಡ್ಡಿ ಅವರು 21–18, 9–21, 18–21 ರಿಂದ ತೈವಾನ್‌ನ ಯೆ ಹಾಂಗ್ ವೀ– ಲೀ ಚಿಯಾ ಸಿನ್ ಎದುರು ಮಣಿದರು.

ಎರಡನೇ ಸ್ಥಾನಕ್ಕೇರಿದ ಸಾತ್ವಿಕ್–ಚಿರಾಗ್

ನವದೆಹಲಿ (ಪಿಟಿಐ): ಡಬಲ್ಸ್ ವಿಭಾಗದಲ್ಲಿ ಮಿಂಚುತ್ತಿರುವ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಜೋಡಿ, ಬಿಡಬ್ಲ್ಯುಎಫ್ ರ್‍ಯಾಂಕಿಂಗ್‌ನಲ್ಲಿ ಎರಡನೇ ಸ್ಥಾನಕ್ಕೇರಿದೆ. ಇದು ಅವರ ವೃತ್ತಿಜೀವನದ ಶ್ರೇಷ್ಠ ರ್‍ಯಾಂಕ್ ಆಗಿದೆ.

ಭಾರತದ ಜೋಡಿ, ಚೀನಾದ ಲಿಯಾಂಗ್ ವೀ ಕೆಂಗ್–ವಾಂಗ್ ಚಾಂಗ್ ಅವರನ್ನು ಮೂರನೇ ಸ್ಥಾನಕ್ಕೆ ತಳ್ಳಿತು. ಇಂಡೊನೇಷ್ಯಾದ ಫಜರ್ ಅಲ್‌ಫಿಯಾನ್– ಮುಹಮ್ಮದ್ ರಿಯಾನ್ ಅರ್ಡಿಯಾಂತೊ ಅವರು ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಬಿಎಫ್‌ಸಿ ಸೇರಿದ ಕಾರ್ನಿರೊ, ಶಂಕರ್

ಬೆಂಗಳೂರು: ಫುಲ್‌ಬ್ಯಾಕ್ ಆಟಗಾರ ಜೆಸೆಲ್ ಕಾರ್ನಿರೊ ಮತ್ತು ಮಿಡ್‌ಫೀಲ್ಡರ್ ಶಂಕರ್ ಸಂಪಂಗಿರಾಜ್ ಅವರು ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವನ್ನು ಸೇರಿಕೊಂಡಿದ್ದಾರೆ.

ಕಳೆದ ಋತುವಿನಲ್ಲಿ ಕೇರಳ ಬ್ಲಾಸ್ಟರ್ಸ್ ಪರ ಆಡಿದ್ದ ಗೋವಾದ ಕಾರ್ನಿರೊ ಅವರು ಎರಡು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡರೆ, ಶಂಕರ್, ಒಂದು ವರ್ಷದ ಅವಧಿಗೆ ತಂಡವನ್ನು ಸೇರಿಕೊಂಡಿದ್ದಾರೆ.

ಡೆಂಪೊ ತಂಡದ ಪರ ವೃತ್ತಿಜೀವನ ಆರಂಭಿಸಿದ್ದ ಕಾರ್ನಿರೊ, ಆ ಬಳಿಕ ಪುಣೆ ಎಫ್‌ಸಿ ಮತ್ತು ಗೋವಾದ ಎಫ್‌ಸಿ ಬಾರ್ದೆಜ್ ಪರ ಆಡಿದ್ದರು. 2019 ರಲ್ಲಿ ಅವರು ಕೇರಳ ಬ್ಲಾಸ್ಟರ್ಸ್ ಪರ ಒಪ್ಪಂದ ಮಾಡಿಕೊಂಡಿದ್ದರು. ಐಎಸ್‌ಎಲ್‌ನ ನಾಲ್ಕು ಋತುಗಳಲ್ಲಿ 63 ಪಂದ್ಯಗಳನ್ನು ಆಡಿದ್ದಾರೆ.

ಬೆಂಗಳೂರಿನ ಆಟಗಾರ ಶಂಕರ್ ಅವರು ಈ ಹಿಂದೆ 2013 ರಿಂದ 2016ರ ವರೆಗೆ ಬಿಎಫ್‌ಸಿ ಪರ ಆಡಿದ್ದು, ಇದೀಗ ತಂಡಕ್ಕೆ ವಾಪಸಾಗಿದ್ದಾರೆ.

28 ವರ್ಷದ ಅವರು ಕೇರಳ ಬ್ಲಾಸ್ಟರ್ಸ್, ಎಟಿಕೆ, ಎಫ್‌ಸಿ ಪುಣೆ ಸಿಟಿ, ಹೈದರಾಬಾದ್ ಎಫ್‌ಸಿ ಹಾಗೂ ರೌಂಡ್‌ಗ್ಲಾಸ್ ಪಂಜಾಬ್ ಎಫ್‌ಸಿ ತಂಡಗಳ ಪರ ಆಡಿದ್ದಾರೆ.

ಡಬ್ಲ್ಯುಟಿಸಿ ಅಂಕಪಟ್ಟಿ: ಅಗ್ರಸ್ಥಾನಕ್ಕೇರಿದ ಪಾಕ್

ಎರಡನೇ ಸ್ಥಾನಕ್ಕೆ ಭಾರತ

ದುಬೈ (ಪಿಟಿಐ): ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್ ಪಟ್ಟಿಯಲ್ಲಿ ಭಾರತ ತಂಡವು ಎರಡನೇ ಸ್ಥಾನಕ್ಕೆ ಇಳಿದಿದೆ.

ವೆಸ್ಟ್ ಇಂಡೀಸ್ ತಂಡದ ಎದುರಿನ ಎರಡು ಪಂದ್ಯಗಳ ಸರಣಿಯಲ್ಲಿ 1–0ಯಿಂದ ಗೆದ್ದಿತು. ಆದರೆ ಎರಡನೇ ಪಂದ್ಯದಲ್ಲಿ ಮಳೆಯಿಂದಾಗಿ ಭಾರತಕ್ಕೆ ಜಯದ ಅವಕಾಶ ಕೈತಪ್ಪಿತು. ಪಂದ್ಯ ಡ್ರಾ ಆಯಿತು. ಪಂದ್ಯದ ಕೊನೆಯ ದಿನವಾದ ಸೋಮವಾರದ ಆಟ ಮಳೆಯಿಂದಾಗಿ ಸಂಪೂರ್ಣ ಸ್ಥಗಿತವಾಯಿತು.

ಅದರಿಂದಾಗಿ ಈ ಪಂದ್ಯದ ಪೂರ್ಣ ಪಾಯಿಂಟ್‌ಗಳು ತಂಡಕ್ಕೆ ಲಭಿಸಲಿಲ್ಲ. ಭಾರತವು ಒಟ್ಟು 16 ಅಂಕಗಳನ್ನು ಗಳಿಸಿದೆ. ಆದರೆ ಜಯದ ಶೇಕಡಾವಾರು ಲೆಕ್ಕದಲ್ಲಿ 66.67 ಗಳಿಸಿದೆ. ವಿಂಡೀಸ್ ವಿರುದ್ಧದ ಮೊದಲ ಪಂದ್ಯ ಗೆದ್ದಾಗ ಶೇ 100ರಷ್ಟು ಜಯದೊಂದಿಗೆ ಮೊದಲ ಸ್ಥಾನದಲ್ಲಿತ್ತು.

ಎರಡನೇ ಟೆಸ್ಟ್ ಡ್ರಾದಲ್ಲಿ ಕೊನೆಗೊಂಡ ಕಾರಣ ವಿಂಡೀಸ್ ತಂಡಕ್ಕೆ ನಾಲ್ಕು ಅಂಕಗಳ ಲಾಭವಾಯಿತು. ಅದರಿಂದಾಗಿ ಐದನೇ ಸ್ಥಾನಕ್ಕೇರಿದೆ.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಅಂಕಪಟ್ಟಿ

ತಂಡ	ಶೇಕಡಾ	ಪಾಯಿಂಟ್	ಜಯ	ಸೋಲು	ಡ್ರಾ	ಸರಣಿ	ದಂಡ
ಪಾಕಿಸ್ತಾನ	100	12	1	0	0	1	0
ಭಾರತ	66.67	16	1	0	1	1	0
ಆಸ್ಟ್ರೇಲಿಯಾ	54.17	26	2	1	1	1	-2
ಇಂಗ್ಲೆಂಡ್	29.17	14	1	2	1	1	-2
ವೆಸ್ಟ್‌ಇಂಡೀಸ್	16.67	4	0	1	1	1	0



ವಿಂಡೀಸ್ ಎದುರಿನ ಟೆಸ್ಟ್ ಸರಣಿ ಗೆದ್ದ ಭಾರತ ತಂಡದ ನಾಯಕ ರೋಹಿತ್ ಟ್ರೋಫಿಯೊಂದಿಗೆ –ಎಎಫ್‌ಪಿ ಚಿತ್ರ

ಹೋದ ವಾರ ಗಾಲ್‌ನಲ್ಲಿ ನಡೆದಿದ್ದ ಪಂದ್ಯದಲ್ಲಿ ಪಾಕಿಸ್ತಾನ ತಂಡವು ಶ್ರೀಲಂಕಾ ವಿರುದ್ಧ ನಾಲ್ಕು ವಿಕೆಟ್‌ಗಳಿಂದ ಗೆದ್ದಿತ್ತು. ಇದರಿಂದಾಗಿ ಶೇ 100ರಷ್ಟು ಶೇಕಡಾವಾರು ಲೆಕ್ಕದೊಂದಿಗೆ ಅಗ್ರಸ್ಥಾನಕ್ಕೇರಿದೆ.

ಹಾಲಿ ಚಾಂಪಿಯನ್ ಆಸ್ಟ್ರೇಲಿಯಾ (54.17) ಮತ್ತು ಇಂಗ್ಲೆಂಡ್ (29.17) ಕ್ರಮವಾಗಿ ಮೂರು ಹಾಗೂ ನಾಲ್ಕನೇ ಸ್ಥಾನದಲ್ಲಿವೆ.

ಮೂರನೇ ಆವೃತ್ತಿಯ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನಲ್ಲಿ ನ್ಯೂಜಿಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಬಾಂಗ್ಲಾದೇಶ ತಂಡಗಳು ಇನ್ನಷ್ಟೇ ತಮ್ಮ ಸರಣಿಗಳನ್ನು ಆಡಬೇಕಿದೆ.

ಮಹಿಳಾ ವಿಶ್ವಕಪ್ ಫುಟ್‌ಬಾಲ್: ಸ್ವಿಟ್ಜರ್‌ಲೆಂಡ್ ಜತೆ ಡ್ರಾ

ನಾರ್ವೆಗೆ ಹೊರಬೀಳುವ ಆತಂಕ



ಫಿಲಿಪ್ಪೀನ್ಸ್‌ನ ಬೋಲ್ಡನ್ ಅವರ ಸಂಭ್ರಮ –ಎಎಫ್‌ಪಿ ಚಿತ್ರ

ಹ್ಯಾಮಿಲ್ಟನ್ (ರಾಯಿಟರ್ಸ್): ಸ್ವಿಜರ್ಲೆಂಡ್ ಸಂಗಡ ಗೋಲಿಲ್ಲದೇ 'ಡ್ರಾ' ಮಾಡಿಕೊಂಡ ನಾರ್ವೆ, ಈಗ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಿಂದ ಹೊರಬೀಳುವ ಅಪಾಯದಲ್ಲಿದೆ. ವಿಶ್ವದ ಕೆಲವು ಅತ್ಯುತ್ತಮ ಆಟಗಾರರನ್ನು ಹೊಂದಿದ್ದರೂ, ಆಟ ಕಾಣುತ್ತಿರುವ ವೇಗದ ಜೊತೆಗೆ ಹೆಜ್ಜೆಹಾಕಲು ಒಂದು ಕಾಲದ ಸೂಪರ್ ಪವರ್ ತಂಡ ನಾರ್ವೆ ತಂಡ ವಿಫಲವಾಗುತ್ತಿದೆ.

ಅದಾ ಹೆಜೆರ್‌ಬರ್ಗ್, ಕರೋಲಿನ್ ಗ್ರಹಾಂ ಹಾನ್ಸೆನ್ ಮತ್ತು ಗುರೊ ರೀಟೆನ್ ಎಲ್ಲರೂ ಫಿಟ್ ಆಗಿ ತಂಡಕ್ಕೆ ಲಭ್ಯರಿದ್ದು ಉತ್ತಮ ಪ್ರದರ್ಶನ ನಿರೀಕ್ಷಿಸಲಾಗಿತ್ತು. ಆದರೆ ಆ ನಿರೀಕ್ಷೆ ಸುಳ್ಳಾಯಿತು. 1995ರ ಚಾಂಪಿಯನ್ ತಂಡ ಮೊದಲ ಪಂದ್ಯದಲ್ಲೇ ಜಂಟಿ ಆತಿಥೇಯ ನ್ಯೂಜಿಲೆಂಡ್ ತಂಡಕ್ಕೆ 0–1 ಗೋಲುಗಳಿಂದ ತಲೆಬಾಗಿತು. ಈಗ ಸ್ವಿಸ್ ತಂಡದ ಜೊತೆ ಗೋಲಿಲ್ಲದೇ ಡ್ರಾ ಮಾಡಿಕೊಂಡ ಪರಿಣಾಮ, ನಾರ್ವೆ ಭವಿಷ್ಯ ಇತರ ತಂಡಗಳ ಪ್ರದರ್ಶನ ಅವಲಂಬಿಸಿದೆ.

ಗುಂಪಿನಲ್ಲಿ ತನ್ನ ಅಂತಿಮ ಪಂದ್ಯವನ್ನು ನಾರ್ವೆ ಜುಲೈ 30ರಂದು ಫಿಲಿಪ್ಪೀನ್ಸ್ ವಿರುದ್ಧ ಆಡಲಿದೆ. ಅದೇ ದಿನ ಸ್ವಿಟ್ಜರ್ಲೆಂಡ್ (4 ಪಾಯಿಂಟ್), ನ್ಯೂಜಿಲೆಂಡ್ (3 ಪಾಯಿಂಟ್) ತಂಡದ ಎದುರು ಆಡಲಿದೆ.

ಫಿಲಿಪ್ಪೀನ್ಸ್‌ಗೆ ಮಣಿದ ಕಿವೀಸ್: ವೆಲಿಂಗ್ಟನ್‌ನಲ್ಲಿ ಮಂಗಳವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಫಿಲಿಪ್ಪೀನ್ಸ್ ತಂಡ 1–0 ಗೋಲಿನಿಂದ ಜಂಟಿ ಆತಿಥೇಯ ನ್ಯೂಜಿಲೆಂಡ್ ತಂಡವನ್ನು ಅಚ್ಚರಿಯ ರೀತಿ ಸೋಲಿಸಿತು.

24ನೇ ನಿಮಿಷ ಸರಿನಾ ಬೋಲ್ಡನ್ ಅವರು ಹೆಡ್ ಮಾಡಿ ಗಳಿಸಿದ ಗೋಲು ನ್ಯೂಜಿಲೆಂಡ್ ತಂಡದ ಪಾಲಿಗೆ ಮುಳುವಾಯಿತು.

ವಿಶ್ವ ಚಾಂಪಿಯನ್‌ಷಿಪ್ ಟ್ರಯಲ್ಸ್: ಸೋತರೆ ವಿನೇಶಾ, ಬಜರಂಗ್‌ಗೆ ಸಮಸ್ಯೆ?



ವಿನೇಶಾ ಮತ್ತು ಬಜರಂಗ್

ನವದೆಹಲಿ (ಪಿಟಿಐ): ಮುಂಬರುವ ವಿಶ್ವ ಚಾಂಪಿಯನ್‌ಷಿಪ್‌ನ ಟ್ರಯಲ್ಸ್‌ನಲ್ಲಿ ಸೋತರೆ, ಬಜರಂಗ್ ಪೂನಿಯಾ ಮತ್ತು ವಿನೇಶಾ ಫೋಗಟ್ ಅವರನ್ನು ಏಷ್ಯನ್ ಕ್ರೀಡಾಕೂಟದ ಕುಸ್ತಿ ತಂಡದಿಂದ ಕೈಬಿಡಬೇಕು ಎಂಬ ಪ್ರಸ್ತಾವವನ್ನು ಭಾರತ ಒಲಿಂಪಿಕ್ ಸಂಸ್ಥೆಯ ಅಡಹಾಕ್ ಸಮಿತಿ ಮುಂದಿಡಲಾಗುವುದು ಎಂದು ಸಮಿತಿ ಸದಸ್ಯರೊಬ್ಬರು ಮಂಗಳವಾರ ತಿಳಿಸಿದ್ದಾರೆ.

ಪೂನಿಯಾ (ಪುರುಷರ 65 ಕೆ.ಜಿ. ಫ್ರೀಸ್ಟೈಲ್) ಮತ್ತು ವಿನೇಶಾ ಫೋಗಟ್ (ಮಹಿಳೆಯರ 53 ಕೆ.ಜಿ) ಅವರಿಗೆ ಏಷ್ಯನ್ ಗೇಮ್ಸ್ ತಂಡಕ್ಕೆ ಈಗ ನೇರ ಪ್ರವೇಶ ನೀಡಲಾಗಿದೆ. ಇತರ 16 ತೂಕ ವಿಭಾಗಗಳಲ್ಲಿ ಪೈಲ್ವಾನರನ್ನು ಜುಲೈ 22, 23ರಂದು ಟ್ರಯಲ್ಸ್ ಮೂಲಕ ಆಯ್ಕೆ ಮಾಡಲಾಗಿತ್ತು. ಏಷ್ಯನ್ ಕ್ರೀಡಾಕೂಟ ಸೆಪ್ಟೆಂಬರ್ 23ರಂದು ಚೀನಾದ ಹಾಂಗ್‌ಝೌನಲ್ಲಿ ಆರಂಭವಾಗಲಿದೆ.

ಪೂನಿಯಾ, ಫೋಗಟ್ ಮತ್ತು ಇತರ ನಾಲ್ವರು ಕುಸ್ತಿಪಟುಗಳು ದೆಹಲಿಯ ಜಂತರ್ ಮಂಥರ್‌ನಲ್ಲಿ ಮೇ–ಜೂನ್‌ನಲ್ಲಿ ನಡೆದಿದ್ದ ಧರಣಿಯ ನೇತೃತ್ವ ವಹಿಸಿದ್ದರು. ತಮಗೆ ಟ್ರಯಲ್ಸ್‌ಗೆ ಸಜ್ಜಾಗಲು ಆ. 10ರವರೆಗೆ ಕಾಲಾವಕಾಶ ಬೇಕು ಎಂದು ಮನವಿ ಮಾಡಿದ್ದರು. ಆದರೆ, ಆಯ್ಕೆಯಾದ ಕುಸ್ತಿಪಟುಗಳ ಹೆಸರುಗಳನ್ನು ಕಳುಹಿಸಲು ನಿಗದಿಪಡಿಸಿದ ಜುಲೈ 23ರ ಗಡುವನ್ನು ವಿಸ್ತರಿಸಲು ಏಷ್ಯ ಒಲಿಂಪಿಕ್ ಕೌನ್ಸಿಲ್ (ಒಸಿಎ) ಒಪ್ಪಿರಲಿಲ್ಲ.

ಬಳಿಕ, ಪೂನಿಯಾ ಮತ್ತು ಫೋಗಟ್ ಅವರಿಗೆ ಟ್ರಯಲ್ಸ್‌ನಿಂದ ವಿನಾಯಿತಿ ನೀಡುವ ಅಡ್‌ಹಾಕ್ ಸಮಿತಿ ನಿರ್ಧಾರಕ್ಕೆ ಕುಸ್ತಿಪಟುಗಳ ವಲಯದಿಂದ ಆಕ್ರೋಶ ವ್ಯಕ್ತವಾಗಿತ್ತು.

ಬಜರಂಗ್ ಮತ್ತು ವಿನೇಶಾ ಅವರು ವಿಶ್ವಚಾಂಪಿಯನ್‌ಷಿಪ್ ಟ್ರಯಲ್ಸ್‌ನಲ್ಲಿ ಗೆದ್ದರೆ ಮಾತ್ರ ಅವರನ್ನು ಏಷ್ಯನ್ ಗೇಮ್ಸ್‌ಗೆ ಕಳುಹಿಸಬೇಕು. ಇಲ್ಲವಾದರೆ ಬೇಡ. ಬಜರಂಗ್ ಸೋತರೆ ಆ ವಿಭಾಗದಲ್ಲಿ ಈಗ ಏಷ್ಯನ್ ಗೇಮ್ಸ್ ಟ್ರಯಲ್ಸ್‌ನಲ್ಲಿ ಸ್ಟ್ಯಾಂಡ್‌ಬೈ ಆಗಿರುವ ವಿಶಾಲ್ ಕಾಳಿರಾಮನ್ ಅವರಿಗೆ ಅವಕಾಶ ಕೊಡಬೇಕು ಎಂದು ಸಮಿತಿಗೆ ಶಿಫಾರಸು ಮಾಡುತ್ತೇವೆ ಎಂದು ಸದಸ್ಯ ಗ್ಯಾನ್ ಸಿಂಗ್ ತಿಳಿಸಿದರು. ಮಹಿಳೆಯರ ವಿಭಾಗದ 53 ಕೆ.ಜಿ. ತೂಕ ಕ್ಲಾಸ್‌ನಲ್ಲಿ ಅಂತಿಮ್ ಪಂಘಲ್ ಅವರು ಸ್ಟ್ಯಾಂಡ್‌ಬೈ ಆಗಿದ್ದಾರೆ.

ನಿರೀಕ್ಷೆಗಳ ಒತ್ತಡ ಮೀರಿದರೆ ವಿಶ್ವಕಪ್ ಜಯ ಸಾಧ್ಯ: ಕಪಿಲ್

ಬೆಂಗಳೂರು: ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯು ಈ ಬಾರಿ ಭಾರತದ ಆತಿಥ್ಯದಲ್ಲಿ ನಡೆಯಲಿದೆ. ಅದರಿಂದಾಗಿ ತಂಡದ ಮೇಲೆ ಅಪಾರ ನಿರೀಕ್ಷೆಗಳ ಒತ್ತಡ ಇರುತ್ತದೆ. ಇದನ್ನು ಮೀರಿ ನಿಂತರೆ ವಿಶ್ವಕಪ್ ಜಯಿಸುವುದು ಸಾಧ್ಯವಾಗಲಿದೆ ಎಂದು ಕ್ರಿಕೆಟ್ ದಂತಕಥೆ ಕಪಿಲ್ ದೇವ್ ಹೇಳಿದರು.

'ಕಳೆದ ಹಲವಾರು ವರ್ಷಗಳಿಂದ ಎಲ್ಲ ವಿಶ್ವಕಪ್ ಟೂರ್ನಿಗಳಲ್ಲಿಯೂ ಭಾರತ ತಂಡವು ಪ್ರಶಸ್ತಿ ಗೆಲ್ಲುವ ನೆಚ್ಚಿನ ತಂಡವಾಗಿ ಕಣಕ್ಕಿಳಿಯುತ್ತದೆ. ಭಾರತ ತಂಡವು ಸದ್ಯ ಯಾವ ರೀತಿಯಲ್ಲಿ ಸಿದ್ಧತೆಗಳನ್ನು ಆರಂಭಿಸಿದೆ ಎಂಬುದರ ಬಗ್ಗೆ ನನಗೆ ಅರಿವಿಲ್ಲ. ವಿಶ್ವಕಪ್ ಟೂರ್ನಿಯಲ್ಲಿ ಆಡುವ ತಂಡವನ್ನು ಇನ್ನಷ್ಟೇ ಪ್ರಕಟಿಸಬೇಕಿದೆ' ಎಂದು ಮಂಗಳವಾರ ಕರ್ನಾಟಕ ಗಾಲ್ಫ್ ಸಂಸ್ಥೆ (ಕೆಜಿಎ)ಯಲ್ಲಿ ಕಾಲ್‌ವೇ ಗಾಲ್ಫ್ ಇಂಡಿಯಾದ ಫಿಟ್ಟಿಂಗ್ ಸೆಂಟರ್ ಉದ್ಘಾಟಿಸಿದ ಅವರು ಮಾತನಾಡಿದರು.

ಬೆಂಗಳೂರಿನಲ್ಲಿ ಭಾರತ–ಅಫ್ಗನ್ ಟಿ20 ಪಂದ್ಯ



ಚಿನ್ನಸ್ವಾಮಿ ಕ್ರೀಡಾಂಗಣ

ನವದೆಹಲಿ (ಪಿಟಿಐ): ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಮುಂದಿನ ವರ್ಷದ ಜನವರಿ 17ರಂದು ಭಾರತ ಮತ್ತು ಅಫ್ಗಾನಿಸ್ತಾನ ತಂಡಗಳ ನಡುವಣ ಟಿ20 ಪಂದ್ಯ ನಡೆಯಲಿದೆ.

ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) 2023–24ರ ಸಾಲಿನಲ್ಲಿ ತವರಿನಲ್ಲಿ ನಡೆಯಲಿರುವ ಸರಣಿಗಳ ವೇಳಾಪಟ್ಟಿಯನ್ನು ಬಿಡುಗಡೆ ಮಾಡಿದೆ. ಇದೇ ಸೆಪ್ಟೆಂಬರ್‌ನಿಂದ ಮುಂದಿನ ವರ್ಷದ ಮಾರ್ಚ್‌ವರೆಗೆ ಆಸ್ಟ್ರೇಲಿಯಾ, ಅಫ್ಗಾನಿಸ್ತಾನ ಹಾಗೂ ಇಂಗ್ಲೆಂಡ್ ತಂಡಗಳು ಭಾರತದಲ್ಲಿ ಸರಣಿಗಳನ್ನು ಆಡಲಿವೆ.ಅಕ್ಟೋಬರ್–ನವೆಂಬರ್‌ನಲ್ಲಿ ಏಕದಿನ ವಿಶ್ವಕಪ್ ಟೂರ್ನಿ ಕೂಡ ನಡೆಯಲಿದೆ.

ಸೆಪ್ಟೆಂಬರ್ 22 ರಿಂದ 27ರವರೆಗೆ ಮೂರು ಏಕದಿನ ಪಂದ್ಯಗಳು ಕ್ರಮವಾಗಿ ಮೊಹಾಲಿ, ಇಂದೋರ್ ಹಾಗೂ ರಾಜ್‌ಕೋಟ್‌ನಲ್ಲಿ ನಡೆಯಲಿವೆ. ನವೆಂಬರ್ 23 ರಿಂದ ಡಿಸೆಂಬರ್ ಮೂರರವರೆಗೆ ಭಾರತ–ಆಸ್ಟ್ರೇಲಿಯಾ ತಂಡಗಳು ಐದು ಟಿ20 ಪಂದ್ಯಗಳನ್ನು ವಿಶಾಖಪಟ್ಟಣ, ತಿರುವನಂತಪುರ, ಗುವಾಹಟಿ, ನಾಗ್ಪುರ ಮತ್ತು ಹೈದರಾಬಾದ್‌ನಲ್ಲಿ ಆಡಲಿವೆ.

ಮುಂದಿನ ವರ್ಷ ಜನವರಿ 11 ರಿಂದ 17 ರವರೆಗೆ ಅಫ್ಗಾನಿಸ್ತಾನ ಎದುರು ಮೂರು ಟಿ20 ಪಂದ್ಯಗಳು ನಡೆಯಲಿವೆ. ಮೊಹಾಲಿ, ಇಂದೋರ್ ಮತ್ತು ಬೆಂಗಳೂರಿನಲ್ಲಿ ಆಯೋಜನೆಗೊಳ್ಳಲಿವೆ.

ಜನವರಿ ಕೊನೆಯ ವಾರದಲ್ಲಿ ಭಾರತ ಪ್ರವಾಸ ಕೈಗೊಳ್ಳಲ್ಲಿರುವ ಇಂಗ್ಲೆಂಡ್ ತಂಡವು ಐದು ಟೆಸ್ಟ್ ಪಂದ್ಯಗಳನ್ನು ಆಡಲಿದೆ. ಹೈದರಾಬಾದ್ (ಜ 25–29), ವಿಶಾಖಪಟ್ಟಣ (ಫೆ. 2–6), ರಾಜ್‌ಕೋಟ್ (ಫೆ 15–19), ರಾಂಚಿ (ಫೆ 23–27) ಮತ್ತು ಧರ್ಮಶಾಲಾ (ಮಾ.3ರಿಂದ 7) ನಗರಗಳಲ್ಲಿ ಪಂದ್ಯಗಳು ನಡೆಯಲಿವೆ.

ಅದ್ವೈತ್ ದಾಖಲೆ ಸರಿಗಟ್ಟಿದ ಆರ್ಯನ್

ಫುಕುವೊಕಾ (ಜಪಾನ್): ಉದಯೋನ್ಮುಖ ಈಜುಪಟು ಆರ್ಯನ್ ನೆಹ್ರಾ, ವಿಶ್ವ ಈಜು ಚಾಂಪಿಯನ್‌ಷಿಪ್‌ನ 800 ಮೀ. ಫ್ರೀಸ್ಟೈಲ್ ಸ್ಪರ್ಧೆಯಲ್ಲಿ 'ಭಾರತೀಯ ಈಜುಪಟುವೊಬ್ಬರ ಶ್ರೇಷ್ಠ ಕಾಲಾವಧಿ'ಯನ್ನು ಮಂಗಳವಾರ ಸರಿಗಟ್ಟಿದರು. ಅವರು ಒಟ್ಟಾರೆ 27ನೇ ಸ್ಥಾನ ಪಡೆದರು.

ಮಂಗಳವಾರ ನಡೆದ ಹೀಟ್ಸ್‌ನಲ್ಲಿ, 19 ವರ್ಷದ ಆರ್ಯನ್ ಈ ಸ್ಪರ್ಧೆಯನ್ನು 8ನಿ.00.76 ಸೆ.ಗಳಲ್ಲಿ ಮುಗಿಸಿ, ಮಧ್ಯಪ್ರದೇಶದ ಅದ್ವೈತ್ ಪಾಗೆ ಅವರ ದಾಖಲೆಯನ್ನು ಸರಿಗಟ್ಟಿದರು. ಜೊತೆಗೆ, ತಮ್ಮ ಹಿಂದಿನ ವೈಯಕ್ತಿಕ ಶ್ರೇಷ್ಠ ಸಾಧನೆಯನ್ನು (8:01.81) ಉತ್ತಮಪಡಿಸಿದರು.

ಡಬ್ಲ್ಯುಎಫ್‌ಐ ಮತಪಟ್ಟಿ ಬ್ರಿಜ್‌ಭೂಷಣ್ ಹೆಸರು ಇಲ್ಲ

ನವದೆಹಲಿ (ಪಿಟಿಐ): ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪ ಎದುರಿಸುತ್ತಿರುವ ಭಾರತ ಕುಸ್ತಿ ಫೆಡರೇಷನ್ ಮಾಜಿ ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಮತ್ತು ಅವರ ಮಗ ಕರಣ್ ಅವರ ಹೆಸರು, ಫೆಡರೇಷನ್‌ಗೆ ನಡೆಯಲಿರುವ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಇಲ್ಲ. ಸಿಂಗ್ ಅವರ ಅಳಿಯ ವಿಶಾಲ್ ಸಿಂಗ್ ಅವರು ಬಿಹಾರ ಪ್ರತಿನಿಧಿಯಾಗಿ ಮತದಾನ ಮಾಡಲಿದ್ದಾರೆ.

ಆದರೆ, ಸದ್ಯ ಇರುವ ರಾಜ್ಯ ಕುಸ್ತಿ ಸಂಸ್ಥೆಗಳಲ್ಲಿರದವರ ಹೆಸರುಗಳು ಈ ಪಟ್ಟಿಯಲ್ಲಿರುವುದು ಅಚ್ಚರಿ ಮೂಡಿಸಿದೆ.

ಡಬ್ಲ್ಯುಎಫ್‌ಐ ನಿಯಮದ ಪ್ರಕಾರ ರಾಜ್ಯ ಕಾರ್ಯಕಾರಿ ಸದಸ್ಯರಿಗೆ ಮಾತ್ರ ಮತದಾನ ಪಟ್ಟಿಯಲ್ಲಿ ಸೇರಿಸಲಾಗಿರುತ್ತದೆ. ಮಾನ್ಯತೆ ಪಡೆದ ರಾಜ್ಯಸಂಸ್ಥೆಗಳು ಅವರನ್ನು ನಾಮನಿರ್ದೇಶನ ಮಾಡುತ್ತವೆ.

ಸಿಂಗ್ ವಿರುದ್ಧದ ಲೈಂಗಿಕ ದೌರ್ಜನ್ಯದ ಆರೋಪಕ್ಕೆ ಇರುವ ಸಾಕ್ಷಿಗಳಲ್ಲಿ ಒಬ್ಬರಾಗಿರುವ ಅನಿತಾ ಶೆರೋಣ್ ಅವರು ಒಡಿಶಾ ಪ್ರತಿನಿಧಿಯಾಗಿ ಆಗಸ್ಟ್ 12ರಂದುನಡೆಯುವ ಚುನಾವಣೆಯಲ್ಲಿ ಭಾಗವಹಿಸುವರು. 2010ರ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಅವರು ಚಿನ್ನದ ಪದಕ ಜಯಿಸಿದ್ದರು.

ಚೆಸ್ ವಿಶ್ವಕಪ್: ಯುವ ಆಟಗಾರರಿಗೆ ಮಿಂಚಲು ಅವಕಾಶ

ಬಾಕು (ಅಜರ್‌ಬೈಜಾನ್): ಗ್ರ್ಯಾಂಡ್‌ಮಾಸ್ಟರ್‌ಗಳಾದ ಡಿ.ಗುಕೇಶ್, ಆರ್. ಪ್ರಗ್ನಾನಂದ ಸೇರಿದಂತೆ ಭಾರತದ ಪ್ರತಿಭಾನ್ವಿತ ಯುವ ಆಟಗಾರರ ದಂಡು, ಇಲ್ಲಿ ಜುಲೈ 30 ರಿಂದ ಆಗಸ್ಟ್ 24ರವರೆಗೆ ನಡೆಯಲಿರುವ ಚೆಸ್ ವಿಶ್ವಕಪ್‌ನಲ್ಲಿ ಪಾಲ್ಗೊಳ್ಳಲಿದೆ.

2024ರ ಕ್ಯಾಂಡಿಡೇಟ್ಸ್ ಅರ್ಹತೆ ಪಡೆಯಲು, ಪುರುಷರ ಮತ್ತು ಮಹಿಳೆಯರ ಈ ಟೂರ್ನಿಯಲ್ಲಿ ಅವಕಾಶ ಇದೆ. ವಿಶ್ವ ಚಾಂಪಿಯನ್‌ಗೆ ಸವಾಲು ಹಾಕುವ ಆಟಗಾರನನ್ನು ಕ್ಯಾಂಡಿಡೇಟ್ಸ್ ಟೂರ್ನಿ ನಿರ್ಧರಿಸುತ್ತದೆ.

17 ವರ್ಷ ವಯಸ್ಸಿನ ಗುಕೇಶ್ ಮತ್ತು ಪ್ರಜ್ಞಾನಂದ ಅವರಿಗೆ ಮೊದಲ ಸುತ್ತಿಗೆ ಬೈ ನೀಡಲಾಗಿದೆ.

ವೇಗವಾಗಿ ಸುಧಾರಣೆ ಕಾಣುತ್ತಿರುವ ಅರ್ಜುನ್ ಎರಿಗೈಸಿ, ವಿದಿತ್ ಸಂತೋಷ್ ಗುಜರಾತಿ, ನಿಹಾಲ್ ಸರಿನ್, ಬಿ.ಅಧಿಬನ್, ಅಭಿಮನ್ಯ ಪುರಾಣಿಕ್ ಮತ್ತು ಹರ್ಷ ಭರತ್‌ಕೋಟಿ ಕಣದಲ್ಲಿರುವ ಭಾರತೀಯ ಆಟಗಾರರ ಪೈಕಿ ಪ್ರಮುಖರು.

ಮಹಿಳೆಯರ ವಿಭಾಗದಲ್ಲಿ ಕೊನೆರು ಹಂಪಿ, ದ್ರೋಣವಲ್ಲಿ ಹಾರಿಕ ಅವರು ಎರಡನೇ ಸುತ್ತಿಗೆ ಬೈ ಪಡೆದಿದ್ದಾರೆ. ಪ್ರಗ್ನಾನಂದ ಸೋದರಿ ಆರ್.ವೈಶಾಲಿ, ಮೇರಿ ಆ್ಯನ್ ಗೋಮ್ಸ್, ಪಿ.ವಿ. ನಂದಿದಾ, ದಿವ್ಯಾ ದೇಶಮುಖ್ ಕೂಡ ಈ ಟೂರ್ನಿಯಲ್ಲಿ ಆಡಲಿದ್ದಾರೆ.

ಪುರುಷರ ತಂಡಕ್ಕೆ 'ವನಿತಾ' ಕೋಚ್

ಪ್ರಜಾವಾಣಿ ವಾರ್ತೆ



ವಿ.ಆರ್‌.ವನಿತಾ

ಬೆಂಗಳೂರು: ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ಆಟಗಾರ್ತಿ ವಿ.ಆರ್. ವನಿತಾ ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಶಿವಮೊಗ್ಗ ಲಯನ್ಸ್ ತಂಡಕ್ಕೆ ಮುಖ್ಯ ಕೋಚ್ ಆಗಿ ಕಾರ್ಯನಿರ್ವಹಿಸಲಿದ್ದಾರೆ.

ಭಾರತದ ಕ್ರಿಕೆಟ್ ರಂಗದಲ್ಲಿ ಪುರುಷರ ತಂಡವೊಂದಕ್ಕೆ ಮುಖ್ಯ ಕೋಚ್ ಆಗಿ ನೇಮಕವಾದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಬೆಂಗಳೂರಿನ ವನಿತಾ ಪಾತ್ರರಾಗಿದ್ದಾರೆ.

ವನಿತಾ ಅವರು ಭಾರತ ತಂಡವನ್ನು ಆರು ಅಂತರರಾಷ್ಟ್ರೀಯ ಏಕದಿನ ಮತ್ತು 16 ಟಿ20 ಪಂದ್ಯಗಳಲ್ಲಿ ಪ್ರತಿನಿಧಿಸಿದ್ದಾರೆ. ಮಧ್ಯಮ ಕ್ರಮಾಂಕದ ಬ್ಯಾಟರ್ ಆಗಿದ್ದರು.

ಇತ್ತೀಚೆಗೆ ನಡೆದ ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಫೀಲ್ಡಿಂಗ್ ಕೋಚ್ ಆಗಿ ಕಾರ್ಯನಿರ್ವಹಿಸಿದ್ದರು.

'ಪುರುಷರ ತಂಡದಲ್ಲಿ ಮಹಿಳೆಯರು ಮುಖ್ಯ ಕೋಚ್ ಆಗಬಾರದು ಎಂದು ಎಲ್ಲಿಯೂ ನಿಯಮವಿಲ್ಲ. ಆದರೆ ತಪ್ಪೇನು. ವನಿತಾ ಕ್ರಿಕೆಟ್ ಆಟಗಾರ್ತಿಯಾಗಿ ಉತ್ತಮ ಅನುಭವ ಇದ್ದವರು. ಅಲ್ಲದೇ ಡಬ್ಲ್ಯುಪಿಎಲ್‌ನಲ್ಲಿಯೂ ಕಾರ್ಯನಿರ್ವಹಿಸಿದ್ದಾರೆ. ಅವರು ನಮ್ಮ ತಂಡದ ಮುಖ್ಯ ಕೋಚ್ ಆಗಿ ನೇಮಕವಾಗಬೇಕೆಂಬ ನಮ್ಮ ಉದ್ದೇಶ ಈಡೇರಿದೆ. ಮಹಿಳೆ ಮತ್ತು ಪುರುಷ ಎಂಬ ತಾರತಮ್ಯ ಹೋಗಲಾಡಿಸುವ ನಿಟ್ಟಿನಲ್ಲಿ ಇದೊಂದು ಮಹತ್ವದ ಹೆಜ್ಜೆಯಾಗಿದೆ. ನಮ್ಮ ತಂಡದಲ್ಲಿರುವ ಬಹುತೇಕ ಆಟಗಾರರು ಮತ್ತು ವನಿತಾ ಅವರಿಗೆ ಚಿರಪರಿಚಿತರು. ಆದ್ದರಿಂದ ಮಾರ್ಗದರ್ಶನ ನೀಡುವುದು ಅವರಿಗೆ ಕಷ್ಟವಾಗುವುದಿಲ್ಲ. ಇದರಿಂದ ತಂಡವು ಉತ್ತಮವಾಗಿ ರೂಪುಗೊಳ್ಳುವುದು' ಎಂದು ಶಿವಮೊಗ್ಗ ಲಯನ್ಸ್ ಫ್ರ್ಯಾಂಚೈಸಿ ಮಾಲೀಕ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ವನಿತಾ ಅವರೊಂದಿಗೆ ನುರಿತ ನೆರವು ಸಿಬ್ಬಂದಿ ಇದ್ದಾರೆ. ಎಂ.ಪಿ. ವಿನಯಕುಮಾರ್, ಟ್ರೇನರ್ ಕಿರಣ್, ವಿಡಿಯೊ ವಿಶ್ಲೇಷಕ ಕಿರಣ್, ಫಿಸಿಯೊ ಗೌತಮ್ ಮತ್ತು ಮ್ಯಾನೇಜರ್ ಮಹಾಲಿಂಗ ಅವರಿದ್ದಾರೆ' ಎಂದೂ ಅವರು ಹೇಳಿದರು.

ಶಾಂತಾ ರಂಗಸ್ವಾಮಿ, ಡಯಾನಾ ಎಡುಲ್ಜಿ ಅಸಮಾಧಾನ

ಹರ್ಮನ್ ನಡವಳಿಕೆ ನಾಯಕಿಗೆ ತಕ್ಕುದಲ್ಲ



ಶಾಂತಾ



ಡಯಾನಾ

ನವದೆಹಲಿ (ಪಿಟಿಐ): ಬಾಂಗ್ಲಾದೇಶ ವಿರುದ್ಧದ ಮೂರನೇ ಏಕದಿನ ಪಂದ್ಯದ ನಂತರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ತೋರಿದ ನಡವಳಿಕೆಯನ್ನು ಹಲವು ದಿಗ್ಗಜ ಕ್ರಿಕೆಟಿಗರು ಟೀಕಿಸಿದ್ದಾರೆ.

'ಆಕೆಯ (ಹರ್ಮನ್) ನಡವಳಿಕೆ ವಿಷಾದನೀಯ. ತಾವು ಔಟಾದ ಹೊತ್ತಿನಲ್ಲಿ ಅವರು ವಿರೋಧದ ನಡವಳಿಕೆ ತೋರಿದ್ದರೆ ಅದನ್ನು ಒಂದು ಹಂತದವರೆಗೆ ಒಪ್ಪಬಹುದಿತ್ತು. ಆದರೆ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಈ ರೀತಿ ನಡೆದುಕೊಂಡಿದ್ದು ಕ್ರೀಡೆಯ ದೃಷ್ಟಿಯಿಂದ ಖಂಡಿತವಾಗಿಯೂ ಒಳ್ಳೆಯದಲ್ಲ. ಅವರದ್ದು ಒರಟು ವರ್ತನೆ' ಎಂದು ಭಾರತ ಮಹಿಳಾ ತಂಡದ ಮಾಜಿ ನಾಯಕಿ ಶಾಂತಾ ರಂಗಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಹರ್ಮನ್ ನಮ್ಮ ಉತ್ತಮ ಬ್ಯಾಟರ್ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಈ ರೀತಿಯ ವರ್ತನೆಯನ್ನು ಒಪ್ಪಲಾಗದು. ಇಂತಹ ನಡವಳಿಕೆಯಿಂದಾಗಿ ಕ್ರಿಕೆಟ್ ಮಂಡಳಿಗಳು ಮಾಡಿದ ಉತ್ತಮ ಕಾರ್ಯಗಳಿಗೆ ಹಿನ್ನಡೆಯಾಗುತ್ತದೆ. ಈ ವಲಯದಲ್ಲಿ ಭಾರತವು ಅಗ್ರಮಾನ್ಯ ದೇಶವಾಗಿದೆ. ಬೇರೆ ದೇಶಗಳ ಮಂಡಳಿಗಳ ಬೆಂಬಲವನ್ನೂ ಗಳಿಸುವುದು ಮುಖ್ಯ. ಹರ್ಮನ್ ಅವರು ನಮ್ಮ ದೇಶದ ರಾಯಭಾರಿಯೂ ಹೌದು. ಅದಕ್ಕೆ ತಕ್ಕಂತೆ ಉತ್ತಮವಾಗಿ ನಡೆದುಕೊಳ್ಳಬೇಕಿತ್ತು' ಎಂದು ಶಾಂತಾ ಹೇಳಿದ್ದಾರೆ.

ಮಾಜಿ ಆಟಗಾರ್ತಿ ಡಯಾನಾ ಎಡುಲ್ಜಿ ಅವರು ಕೌರ್ ನಡವಳಿಕೆಯನ್ನು ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿ ತಾವು ಬರೆದ ಅಂಕಣದಲ್ಲಿ ಕಟುವಾಗಿ ಟೀಕಿಸಿದ್ದಾರೆ.

'ಸುದೀರ್ಘ ಕಾಲದಿಂದ ಕ್ರಿಕೆಟ್ ನೋಡುತ್ತಿದ್ದೇನೆ. ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಂತೆ ಯಾರೂ ಪಂದ್ಯದ ನಂತರ ಈ ರೀತಿಯ ವರ್ತನೆ ತೋರಿರಲಿಲ್ಲ. ಜೂನಿಯರ್ ಆಟಗಾರರಿಗೆ ಒಂದು ಕೆಟ್ಟ ಉದಾಹರಣೆಯನ್ನು ಪರಿಚಯಿಸಿದ್ದಾರೆ. ಇಂತಹ ನಡವಳಿಕೆಗಳು ಕೆಲವು ಕಾಲದ ನಂತರ ತಂಡದ ಸಂಸ್ಕೃತಿಯನ್ನು ಹದಗೆಡಿಸುತ್ತವೆ' ಎಂದು ಡಯಾನಾ ಬರೆದಿದ್ದಾರೆ.

ಎರಡು ಪಂದ್ಯ ಅಮಾನತು

ದುಬೈ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಅವರಿಗೆ ಎರಡು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡದಂತೆ ಅಮಾನತು ಮಾಡಲಾಗಿದೆ.

ಢಾಕಾದಲ್ಲಿ ಈಚೆಗೆ ನಡೆದ ಬಾಂಗ್ಲಾದೇಶ ವಿರುದ್ಧದ ಪಂದ್ಯದ ನಂತರ ಪ್ರಶಸ್ತಿ ಪ್ರದಾನ ವೇದಿಕೆಯಲ್ಲಿ ಹರ್ಮನ್‌ಪ್ರೀತ್ ದುರ್ವರ್ತನೆ ತೋರಿದ್ದರು. ಅಂಪೈರ್ ತೀರ್ಮಾನದ ಕುರಿತು ಟೀಕಿಸಿದ್ದರು. ಇದರಿಂದಾಗಿ ಹರ್ಮನ್‌ಪ್ರೀತ್ ಕ್ರಿಕೆಟ್ ಮತ್ತು ಸಾರ್ವಜನಿಕ ವಲಯದಿಂದ ಅಪಾರ ಟೀಕೆಗೊಳಗಾಗಿದ್ದಾರೆ.

'ಹರ್ಮನ್ ಅವರು ತಮ್ಮಕೆಟ್ಟ ನಡವಳಿಕೆಯಿಂದ ಐಸಿಸಿ ನಿಯಮವನ್ನು ಉಲ್ಲಂಘನೆ ಮಾಡಿದ್ದಾರೆ. ಆದ್ದರಿಂದ ಅವರು ಮುಂದಿನ ಎರಡು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಆಡದಂತೆ ಅಮಾನತು ಮಾಡಲಾಗಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ. ಸೆಪ್ಟೆಂಬರ್ –ಅಕ್ಟೋಬರ್‌ನಲ್ಲಿ ಚೀನಾದಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಮಹಿಳಾ ತಂಡವು ಆಡಲಿದೆ. ಆ ಸಂದರ್ಭದಲ್ಲಿ ಎರಡು ಪಂದ್ಯಗಳಲ್ಲಿ ಅವರು ಆಡುವುದಿಲ್ಲ.